"ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನ"

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಆರ್.ಆರ್.ಅರಿಷಿನಗೋಡಿ
ನೋಂದಣಿ ಸಂಖ್ಯೆ : BVVBHS-0173

ಮಾರ್ಗದರ್ಶಕರು
ಡಾ. [illegible]
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನ ಕೇಂದ್ರ, ಬಾಗಲಕೋಟ

ಸಮಾಜ ವಿಜ್ಞಾನಗಳ ನಿಕಾಯ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಮಾನ್ಯತಾ ಸಂಸ್ಥೆ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ
ಸಂಶೋಧನಾ ಕೇಂದ್ರ, ಬಾಗಲಕೋಟ
೨೦೧೮

962

"ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನ"

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು

ಆರ್.ಆರ್.ಅರಿಷಿನಗೋಡಿ

ನೋಂದಣಿ ಸಂಖ್ಯೆ : BVVBHS-0173

ಮಾರ್ಗದರ್ಶಕರು

ಡಾ.ಜಿ.ಬಿ.ಕುಲಕರ್ಣಿ

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನ ಕೇಂದ್ರ,
ಬಾಗಲಕೋಟ

ಸಮಾಜ ವಿಜ್ಞಾನಗಳ ನಿಕಾಯ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಮಾನ್ಯತಾ ಸಂಸ್ಥೆ

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ, ಬಾಗಲಕೋಟ

೨೦೧೮

ಪ್ರಮಾಣ ಪತ್ರ

'ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನ' ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು **ಡಾ. ಜಿ.ಬಿ.ಕುಲಕರ್ಣಿ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಬಾಗಲಕೋಟ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ, ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬಾಗಲಕೋಟ
ದಿನಾಂಕ : 31 -8 -೨೦೧೮

ಆರ್.ಆರ್.ಅರಿಷಿನಗೋಡಿ
ಸಂಶೋಧಕರು
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನಾ ಕೇಂದ್ರ,
ಬಾಗಲಕೋಟ

ದೃಢೀಕರಣ ಪತ್ರ

ಆರ್.ಆರ್.ಅರಿಷಿನಗೋಡಿ ಇವರು **ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನ** ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. **ಬಾಗಲಕೋಟ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾಹಿತ್ಯ ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾ ಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಬಾಗಲಕೋಟ
ದಿನಾಂಕ : - -೨೦೧೮

ಡಾ. ಜಿ.ಬಿ.ಕುಲಕರ್ಣಿ
ಮಾರ್ಗದರ್ಶಕರು,
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನಾ ಕೇಂದ್ರ,
ಬಾಗಲಕೋಟ

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಸಮೀಕ್ಷೆ ಹಾಗೂ ಸ್ವರೂಪ

ಅಧ್ಯಾಯ ೧

ಪೀಠಿಕೆ, ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ಅಧ್ಯಯನದ ಸಮೀಕ್ಷೆ ಹಾಗೂ ಸ್ವರೂಪ

೧.೧ ಪೀಠಿಕೆ

ಕೆಱೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ।
ಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ।
ರ್ಗ್ಗೆಱೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಯೆಂತೆಲ್ಲವಂ ಪಿಂದೆ ತಾ।
ಯೆಱೆದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ಂ ಲಕ್ಷ್ಮೀಧರಾಮಾತ್ಯನಾ॥

ಈ ಮೇಲೆ ಉಲ್ಲೇಖಿಸಿದ ಪದ್ಯವನ್ನು ವಿಜಯನಗರದ ಅರಸ ಪ್ರೌಢ ಪ್ರತಾಪ ದೇವರಾಯನ (ಕ್ರಿ.ಶ.೧೪೦೬–೨೨) ಮಂತ್ರಿ ಲಕ್ಷ್ಮೀಧರನು ಕೂಸಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಿದ್ದಳೆಂದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂದಿನ ಅಗಸೆಯಲ್ಲಿರುವ ಕ್ರಿ.ಶ.೧೪೧೧ರ ಶಾಸನವು ತಿಳಿಸುತ್ತದೆ.[೧] ಇದೇ ಶಾಸನವು ದೇವರಾಯನ ಮಂತ್ರಿಗಳಾದ ಮಾದರಸ ಮತ್ತು ಸಾಯಣ್ಣರ ಬಗೆಗೆ ಈ ಕೆಳಕಂಡಂತೆ ಉಲ್ಲೇಖಿಸುತ್ತದೆ.

ತೋಡಿದ ಬಾವಿಯಿಲ್ಲ ಮರಕಟ್ಟಿದ ಪೇರ್ಗ್ಗೆರೆಯಿಲ್ಲ ಲೀಲೆಯಂ ।
ಮಾಡದ ದೇವತಾಭವನಮಿಲ್ಲೊಲಪಿಂ ಬಿಡದಗ್ರಹಾರಮಿ।
ಲ್ಲಾಡಲದೇನೋ ಭೂ ಭುವನಭುಭುಕಮಾದುದು ಕೀರ್ತಿಂಬಾಪು ನಾ।
ಪಾಡಿಯೆ ಸೈಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ॥

ಈ ಮೇಲೆ ಉಲ್ಲೇಖಿಸಿದ ಎರಡು ಪದ್ಯಗಳಿಂದ ಭಾರತದಲ್ಲಿ, ಮುಖ್ಯವಾಗಿ ಮಧ್ಯಕಾಲಿನ ಭಾರತದಲ್ಲಿ, ನೀರಾವರಿ ವ್ಯವಸ್ಥೆ, ಕೆರೆಯನ್ನು ಕಟ್ಟಿಸುವುದು ಮತ್ತು ಬಾವಿಗಳನ್ನು ತೋಡಿಸುವುದು ಅತಿ ಮುಖ್ಯವಾದ ಕೆಲಸವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಕೆಲಸವನ್ನು ಮಾಡುವುದು ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯಾಗಿತ್ತೆಂದೂ ಸಹ ತಿಳಿಯಬಹುದು. ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಕಂಡುಬರುವ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಘಟ್ಟದಿಂದ ಕೆರೆಯನ್ನು ಕಟ್ಟಿಸಿ ಜಲವನ್ನು ಸಂಗ್ರಹಿಸಿ ಬಳಸಿಕೊಳ್ಳುತ್ತಿದ್ದರೆಂಬುದು ಪುರಾತತ್ವ ಶೋಧನೆಗಳಿಂದ ತಿಳಿದು ಬಂದಿದೆ. ಆದಿ ಇತಿಹಾಸ ಕಾಲದಿಂದಲೂ ಈ ಕೆಲಸವನ್ನು ಆಸ್ಥೆಯಿಂದ ನಡೆಯಿಸಿಕೊಂಡು ಬಂದಿರುವುದು ಗಮನಾರ್ಹ.[೨]

ನಮ್ಮ ದೇಶ ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಹಾಗಾಗಿ ಕೃಷಿ ನಮ್ಮ ಹಳ್ಳಿಗಳ ಪ್ರಮುಖ ವೃತ್ತಿಯಾಗಿರುವುದರಿಂದ ಜಲವೇ ಅದರ ಮೂಲ ಜೀವಾಳವಾಗಿದೆ. ದೇಶದ ಚರಿತ್ರೆಯಲ್ಲಿ "ಕೆರೆಗಳಿಲ್ಲದ ಹಳ್ಳಿಗಳಿಲ್ಲ, ಅದರಂತೆ ಪುಷ್ಕರಣಿಗಳು ಇಲ್ಲದ ದೇವಾಲಯಗಳಿಲ್ಲ"

ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ನಮ್ಮ ಚರಿತ್ರೆಯ ಇನ್ನೊಂದು ರೂಪವೇ ಈ ಜಲ ಮೂಲವೆಂದು ತಿಳಿದು ಬರುತ್ತದೆ.

ಬೇಟೆಯಾಡಿ ಪ್ರಾಣಿ–ಪಕ್ಷಿಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುತ್ತಾ ಆದಿ ಮಾನವ ವನ್ಯಜೀವಿಯಾಗಿ ಗುಹಾವಾಸಿಯಾಗಿ ಬದುಕುತ್ತಿದ್ದ; ಆದಿಮಾನವ ಎಷ್ಟೋ ಶತಮಾನಗಳ ಅವಧಿಯಲ್ಲಿ ನಾಗರಿಕತೆಯತ್ತ ಹೆಜ್ಜೆ ಇಡುತ್ತ ಬಂದ ಹಾಗೆ ಅವನ ಬದುಕಿನ ಶೈಲಿಯಲ್ಲಿ ಮಹತ್ತರ ಬದಲಾವಣೆಗಳಾದವು.[೧] ಹಲವಾರು ಶತಮಾನಗಳ ತರುವಾಯ ಕೃಷಿ ಜೀವನಕ್ಕೆ ಬಂದಿದ್ದು ಇತಿಹಾಸದ ಒಂದು ಮಹತ್ವದ ಮೈಲುಗಲ್ಲಾಗಿದೆ.[೨]

ಇದರಲ್ಲಿಯೂ ಕೂಡಾ ನಿಸರ್ಗದ ಏರು–ಪೇರುಗಳನ್ನು ಎದುರಿಸಬೇಕಾಯಿತು. ಇಂತಹ ಸಂದರ್ಭದಲ್ಲಿ ನೀರಿನ ಅವಶ್ಯಕತೆ ತಲೆದೋರಿತು. ಮಳೆಗಾಲದಲ್ಲಿ ಹರಿದು ಹೋಗುವ ನೀರನ್ನು ಸಂಗ್ರಹಿಸುವ ಅವಶ್ಯಕತೆ ಉಂಟಾಯಿತು. ಆಗ ನೀರಿಗಾಗಿ ನಿಸರ್ಗದತ್ತವಾದ, ಸಹಜವಾದ ಪ್ರದೇಶಗಳಲ್ಲಿ ನೀರನ್ನು ಶೇಖರಿಸುವ ವಿಧಾನವನ್ನು ಕಾಲಾಂತರದಲ್ಲಿ ಕಲಿತನು. ಇದರ ಮೂಲಕ ನೈಸರ್ಗಿಕ ವಿಪತ್ತುಗಳ ಪರ್ಯಾಯವಾಗಿ ಕೃಷಿಕಾರ್ಯಕ್ಕಾಗಿ ನೀರನ್ನು ಬಳಸಿಕೊಂಡು ಬೆಳೆ ಬೆಳೆಯುವ ಪದ್ಧತಿ ಪ್ರಾಚೀನ ಕಾಲದಿಂದಲೂ ಮಾಡಿಕೊಂಡು ಬಂದಿರುವುದು ಕಂಡುಬರುತ್ತದೆ. ಇಲ್ಲಿಂದಲೇ ಮಾನವನ ಬೆಟ್ಟ ಪ್ರದೇಶಗಳ ಸಂದುಗಳಿಂದ ಹರಿದು ಬರುವ ನೀರನ್ನು ಒಂದು ತಗ್ಗು ಪ್ರದೇಶದಲ್ಲಿ ಸಂಗ್ರಹಿಸಿ ಅದನ್ನು ತನ್ನ ಅವಶ್ಯಕತೆಗನುಗುಣವಾಗಿ ಬಳಸಿಕೊಂಡನು. ಇಲ್ಲಿಂದಲೇ ನೀರನ್ನು ಸಂಗ್ರಹಿಸುವ ವಿಧಾನವು ಕೆರೆ–ಕಟ್ಟೆ–ತಟಾಕ ನಿರ್ಮಾಣಕ್ಕೆ ನಾಂದಿಯಾಯಿತು.

ಒಂದು ನಾಗರಿಕತೆಯ ಉಗಮ ಮತ್ತು ಬೆಳವಣಿಗೆಗೆ ನದಿಗಳು ಎಷ್ಟು ಮುಖ್ಯವಾಗಿವೆಯೋ ಅಷ್ಟೇ ಪ್ರಮಾಣದಲ್ಲಿ ಗ್ರಾಮೀಣ ಬದುಕಿಗೆ ನೀರಾವರಿ ಕೆರೆಗಳು ಅವಶ್ಯಕವಾಗಿವೆ. ಜಗತ್ತಿನ ಪ್ರತಿಯೊಂದು ನಾಗರಿಕತೆಯೂ ನದಿ ಪಾತ್ರದಲ್ಲಿ ಉಗಮಗೊಂಡ ಬೆಳೆದು ಬಂದಿರುವುದಕ್ಕೆ ಚರಿತ್ರೆಯಲ್ಲಿ ಸಾಕಷ್ಟು ನಿರ್ದಶನಗಳಿವೆ. ಅದರಂತೆ ನಮ್ಮ ದೇಶವೂ ಕೂಡಾ ವಿಶಾಲವಾದ ಹಳ್ಳಿ ಪ್ರದೇಶಗಳಿಂದ ಕೂಡಿದ್ದರೂ ಇಲ್ಲಿನ ನಾಗರಿಕತೆ ನದಿ ದಂಡೆಗಳ ಮೇಲೆ ಹುಟ್ಟಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ.

ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲ, ಬೃಹತ್ ಶಿಲಾಯುಗದ ಸಂಸ್ಕೃತಿಯ ಕಾಲಘಟ್ಟದಿಂದಲೂ ಕೆರೆಗಳನ್ನು ಕಟ್ಟಿಸಿ, ಜಲವನ್ನು ಸಂಗ್ರಹಿಸಿ ಬಳಸಿಕೊಳ್ಳುತ್ತಿದ್ದರೆಂದು ಪುರಾತತ್ವ ಶೋಧನೆಗಳಿಂದ ತಿಳಿದುಬರುತ್ತದೆ.[೩] ಆದಿ ಇತಿಹಾಸದ ಕಾಲದಿಂದಲೂ ಈ ಕಾರ್ಯವನ್ನು ಆಸ್ತೆಯಿಂದ ನಡೆಸಿಕೊಂಡು ಬಂದಿರುವುದು ಗಮನಾರ್ಹವಾಗಿದೆ. ಈ ಕಾರ್ಯವು ಶತಮಾನಗಳಿಂದ ಸತತವಾಗಿ ಸಾಗುತ್ತಲೇ ಬಂದಿದ್ದು, ಮಧ್ಯಕಾಲಿನ ಭಾರತದಲ್ಲಿ ಅದು ತನ್ನ ಗರಿಷ್ಠ ಮಟ್ಟವನ್ನು ತಲುಪಿತು ಎಂದರೆ ತಪ್ಪಾಗಲಾರದು. ಹೀಗಾಗಿ ಅನೇಕ

ಪ್ರಾಚೀನ ಕೆರೆಗಳು ಇಂದಿಗೂ ಸಹ ಸಮರ್ಪಕವಾಗಿ ಬಳಕೆಯಾಗುತ್ತಿವೆ.

ಬಾಗಲಕೋಟೆ ಘಟಪ್ರಭಾ ನದಿಯ ಹರಿವಿಗೆ ಸಮೀಪವಿದ್ದು ಹುಬ್ಬಳ್ಳಿ-ಸೊಲ್ಲಾಪುರ ರೈಲು ಮಾರ್ಗದಲ್ಲಿರುವ ಪ್ರಮುಖ ನಗರವಾಗಿದೆ. ಶಾಸನಗಳಲ್ಲಿ ಉಕ್ತವಾಗಿರುವ 'ಬಾಂಗಡಿ' ಇಂದಿನ ಬಾಗಲಕೋಟೆಯಾಗಿದೆ ಎಂಬುದು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ಈ ಊರಿಗೆ ಸಮೀಪದಲ್ಲಿರುವ ಭೈರನಮಟ್ಟಿಯ ಹನುಮಂತ ದೇವರ ಗುಡಿಯ ಬಳಿ ದೊರೆತಿರುವ ಚಾಳುಕ್ಯ ಮೊದಲನೇ ಸೋಮೇಶ್ವರನ ಶಾಸನದಲ್ಲಿ ಉಕ್ತವಾಗಿರುವ ಬಾಗಡಿಗೆ-೭೦ ಸಿಂಧ ವಂಶದ ಮಾಂಡಳೀಕರ ಕೇಂದ್ರವಾಗಿದ್ದು, ಬಾಗಲಕೋಟೆ ಹೆಸರಿಗೆ ಮೂಲವಿರಬಹುದೆಂಬ ಅಸ್ಪಷ್ಟ ಅಭಿಪ್ರಾಯವಿದೆ.[೪] ಬಾಗಲಕೋಟೆಯು ಬದಾಮಿ ಚಾಳುಕ್ಯರ ವಿನಯಾದಿತ್ಯನ ಕಾಲಕ್ಕೆ ಸೇರಿದ್ದು ಎಂಬ ಅಂಶ ಬಾಗಲಕೋಟೆಯ ಮುರಿಗಯ್ಯ ಜಂಗಿನ ಅವರ ವಶದಲ್ಲಿದ್ದ ತಾಮ್ರ ಪಟವು ದೃಢೀಕರಿಸುತ್ತದೆ. ವಿನಯಾದಿತ್ಯನು "ಕುಂಕುಮ ಮಹಾದೇವಿಯ" ವಿನಂತಿ ಮೇರೆಗೆ ಹಾರಿತಿ ಗೋತ್ರದ ಭೀಮಶರ್ಮನ ಮೊಮ್ಮಗನೂ ದೇಶವರ್ಮನ ಮಗನೂ ಆದ ಸೋಮಶರ್ಮನಿಗೆ ಮಲ್ಲಗ್ರಾಮ-೩೦ (ಬಾಗಲಕೋಟೆಯಿಂದ ಎರಡು ಕಿ.ಮೀ. ಸಮೀಪದಲ್ಲಿರುವ ಮಲ್ಲಾಪುರವೆಂದು ಗುರುತಿಸಲಾಗಿದೆ) ರಲ್ಲಿಯ ಲೋಹಂಜವಾಟಕ ಗ್ರಾಮವನ್ನು ದಾನ ನೀಡಿದ ಬಗೆಗೆ ಉಲ್ಲೇಖಿಸುತ್ತದೆ. ಲೋಹಂಜವಾಟಕ ಎಂಬ ಗ್ರಾಮ ಯಾವುದೆಂದು ಸ್ಪಷ್ಟವಾಗಿ ಗುರುತಿಸಲಾಗಿಲ್ಲವಾದರೂ ಬಾಗಲಕೋಟೆ-ಬಿಜಾಪೂರ ರಸ್ತೆಯಲ್ಲಿರುವ 'ಲೋಹಗಾಂವ್' ಇರಬಹುದೆಂಬ ಅಸ್ಪಷ್ಟ ಅಭಿಪ್ರಾಯವಿದೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯ ನಂತರ ಬಾಗಲಕೋಟೆಯು ಬಾದಾಮಿಯಂತೆಯೇ ೧೩೫೦ ರಿಂದ ೧೬೫೫ ರವರೆಗೆ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತು. ಏಕೆಂದರೆ, ಈ ಭಾಗದ ದೇಸಾಯಿಗಳು ಮತ್ತು ದೇಶಪಾಂಡೆಗಳು ವಿಜಯನಗರ ಅರಸರಿಂದಲೂ ದತ್ತಿದಾನಗಳನ್ನು ಸ್ವೀಕರಿಸಿರುವುದು ತಿಳಿದುಬರುತ್ತದೆ.

ಸ್ಥಳೀಯ ಸಂಪ್ರದಾಯದಂತೆ ಒಬ್ಬ ಮುಸಲ್ಮಾನ ವೀರನು ಈ ಜಾಗದಲ್ಲಿ ಹುಲಿಯನ್ನು ಕೊಂದ ಕಾರಣ ಅದರ ನೆನಪಿಗಾಗಿ ಈ ಊರನ್ನು 'ಭಾಗನೂರು' (ಹುಲಿಯ ನಗರ) ಎಂದು ಕರೆದನೆಂದು ಹೇಳಲಾಗುತ್ತದೆ. ಇಬ್ರಾಹಿಂ ಆದಿಲ್‌ಷಾನ (೧೫೮೦-೧೬೨೬) ಕಾಲದಲ್ಲಿ ಆಸಫ್‌ಖಾನ್ ಎಂಬ ಸೇನಾಧಿಪತಿ ದಕ್ಷಿಣದ ಸಾಮ್ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದು ಬಾಗಲಕೋಟೆಯಲ್ಲಿ ನೆಲೆಸಿದ್ದನು. ಆನಂತರ ಬಾಗಲಕೋಟೆಗೆ ವಿಜಾಪುರದ ಮಂತ್ರಿಯಾಗಿದ್ದ ಸವಣೂರಿನ ನವಾಬ ಬಹಿಲಾಲ್ ಖಾನನು ಆಡಳಿತ ನೋಡಿಕೊಳ್ಳಲು ನೇಮಕಗೊಂಡನು. ಇದೇ ಸಮಯದಲ್ಲಿ ವಿಜಾಪುರದ ಸುಲ್ತಾನನು ಬಾಗಲಕೋಟೆ ನಗರವನ್ನು ತನ್ನ ಮಗಳಾದ 'ಬಲೀಮ್ ಷಾ ಬೀಬಿಗೆ' ಉಡುಗೊರೆಯಾಗಿ ನೀಡಿದನೆಂಬ ಅಂಶ ತಿಳಿದುಬರುತ್ತದೆ. ಈ ಉಡುಗೊರೆಯು ತನ್ನ ಮಗಳಿಗೆ ಬಳೆಯ

ವೆಚ್ಚಕ್ಕಾಗಿ ಕೊಟ್ಟನೆಂಬ ಕಾರಣದಿಂದ ಇದಕ್ಕೆ 'ಬಾಂಗಡಿಕೋಟಾ' ಎಂದು ಕರೆದನೆಂದು ಪ್ರತೀತಿಯಿದೆ.[೬] ಈ ಬಾಂಗಡಿಕೋಟೆಯು ಕ್ರಮೇಣ 'ಬಾಗಲಕೋಟೆ' ಎಂದು ಬಳಕೆಗೆ ಬಂದಿತೆಂದು ಹೇಳಲಾಗುತ್ತದೆ. ವಿಜಾಪುರದ ಆಡಳಿತದ ತರುವಾಯ ಮರಾಠ ಪೇಶ್ವೆ ಬಾಲಾಜಿ ಬಾಜಿರಾಯನು ಈ ಪ್ರದೇಶವನ್ನು ತನ್ನ ಹತೋಟಿಗೆ ತೆಗೆದುಕೊಂಡನು. ಪೇಶ್ವೆಯು ಬಾಗಲಕೋಟೆಯ ಆಡಳಿತವನ್ನು ಗಜೇಂದ್ರಗಡದಲ್ಲಿದ್ದ ಘೋರ್ಪಡೆಗೆ ವಹಿಸಿಕೊಟ್ಟನು. ತರುವಾಯ ೧೭೭೮ ರಲ್ಲಿ ಬಾಗಲಕೋಟೆಯು ಹೈದರಾಲಿ ಪ್ರಾಂತ್ಯವಾಗಿ ಸವಣೂರ ನವಾಬನ ಹತೋಟಿಗೆ ವಹಿಸಿಕೊಡಲಾಯಿತು. ಆನಂತರ ೧೮೦೦ ರಲ್ಲಿ ಈ ಪ್ರದೇಶವನ್ನು ಸುರ್‌ಸುಭಾ ಪ್ರಾಂತ್ಯವನ್ನಾಗಿ, ಪರಿವರ್ತಿಸಿ ಆಡಳಿತವನ್ನು ನೋಡಿಕೊಳ್ಳಲು ನೇಮಕಗೊಂಡ ರಾಸ್ತಿಯಾ ಕುಟುಂಬಕ್ಕೆ ಸೇರಿದ ಆನಂದರಾವ್ ಭಿಕಾಜಿಯು ಬಾಗಲಕೋಟೆಯಲ್ಲಿ ನೆಲಸಿ ಒಂದು ಸುಂದರ ಅರಮನೆಯನ್ನು ನಿರ್ಮಿಸಿಕೊಂಡಿದ್ದನೆಂದು ಐತಿಹ್ಯವಿದೆ. ಸವಣೂರಿನ ನವಾಬನ ಹತೋಟಿಯಲ್ಲಿದ್ದಾಗ ಹಳೇಪೇಟೆಯನ್ನೂ ರಚಿಸಲಾಯಿತು. ಪೇಶ್ವೆಗಳ ಕಾಲದಲ್ಲಿ ಬಾಗಲಕೋಟೆಯಲ್ಲಿ 'ಟಂಕಸಾಲೆ'ಯೊಂದನ್ನು ಸ್ಥಾಪಿಸಲಾಯಿತೆಂದೂ ಹಾಗೂ ಆದು ೧೮೩೫ ರವರೆಗೆ ಚಾಲ್ತಿಯಲ್ಲಿತ್ತೆಂದು ತಿಳಿದು ಬರುತ್ತದೆ. ಈಗಲೂ ಬಾಗಲಕೋಟೆಯಲ್ಲಿ ಮರಾಠರ ಕಾಲದ ಕೋಟೆ ಮತ್ತು ಸೈನಿಕ ಶಿಬಿರಗಳಿದ್ದ ಅವಶೇಷಗಳು ಊರಿನ ಸುತ್ತಲೂ ಕಂಡು ಬರುತ್ತವೆ. ಬಾಗಲಕೋಟೆಯನ್ನು ೧೮೧೮ ರಲ್ಲಿ ಸರ್ ಥಾಮಸ್ ಮುನ್ರೋ ತನ್ನ ವಶಕ್ಕೆ ತೆಗೆದುಕೊಂಡನು.[೭] ಬಾಗಲಕೋಟೆಯಿಂದ ೪ ಕಿ.ಮೀ ದೂರದಲ್ಲಿರುವ ಚಿಕ್ಕಗ್ರಾಮವು ಹಿಂದೆ ಗೋಪಾಳಪುರವೆಂದು ಕರೆಯಲ್ಪಡುತ್ತಿತ್ತು. ನಂತರ ಹವೇಲಿ ಎಂದು ಕರೆಯಲ್ಪಟ್ಟಿತು. 'ಹವೇಲಿ' ಎಂದರೆ ಬೃಹತ್ ಕಟ್ಟಡ ಅಥವಾ ಮಹಡಿ ಮನೆ ಎಂದು ಅರ್ಥೈಸಲಾಗಿದೆ. ಬ್ರಿಟಿಷರ ಕಾಲದಲ್ಲಿ ಅಧಿಕಾರಿಗಳಿಗೆ ತಂಗಲು ಬಂಗಲೆಗಳನ್ನು ಇಲ್ಲಿ ಕಟ್ಟಲಾಗಿದ್ದುದರಿಂದ ಈ ಸ್ಥಳಕ್ಕೆ ಹವೇಲಿ ಎಂಬ ಹೆಸರು ರೂಢಿಗೆ ಬಂದಿರಬೇಕು. ಇಲ್ಲಿ ಹನಮಂತ ದೇವರಗುಡಿ ಎದುರಿನಲ್ಲಿರುವ ೧೮೨೨ ರ ಶಾಸನವು ಈಸ್ಟ್ ಇಂಡಿಯಾ ಕಂಪನಿ ಸರಕಾರದ ಸುಭೇದಾರ ಅಪ್ಪೂರಾಯನಿಂದ ಹನಮಂತ ದೇವರಗುಡಿಯ ನಿರ್ಮಾಣ ಮತ್ತು ನೀಡಿದ ದಾನದ ಬಗೆಗೆ ಉಲ್ಲೇಖಿಸುತ್ತದೆ.[೮]

೧.೨ ಉದ್ದೇಶ :

ಈ ಅಧ್ಯಯನದ ಮುಖ್ಯ ಉದ್ದೇಶ, ಸಣ್ಣ ಜಲಾಶಯಗಳು ಅಥವಾ ಕೆರೆಗಳ ಕುರಿತು ಮಹತ್ವದ ಅಂಶಗಳನ್ನು ವಿಶ್ಲೇಷಿಸಿ ಸ್ಥಳೀಯ ಚರಿತ್ರೆಯ ಸಾಂಸ್ಕೃತಿಕ ಆಯಾಮಗಳನ್ನು ಸ್ಪಷ್ಟಪಡಿಸುವ ಕ್ರಮವಾಗಿದೆ. ಭಾರಿ ಜಲಾಶಯ ಅಥವಾ ಆಣೆಕಟ್ಟು, ಬಾವಿಗಳ ಬಗ್ಗೆಯಾಗಲಿ ಇಲ್ಲವೇ ಭೂಗರ್ಭ ಕುರಿತಾಗಿ ಅಷ್ಟಾಗಿ ನಾವು ಪರಿಶೀಲಿಸಿಲ್ಲ. ಕರ್ನಾಟಕ, ಆಂಧ್ರಪ್ರದೇಶ

ಮತ್ತು ತಮಿಳುನಾಡುಗಳಲ್ಲಿ ಈ ತರಹದ ಅಧ್ಯಯನಕ್ಕೆ ಸಾಕ್ಷಿಯಾಗಿ ಈಗಲೂ ಸಾವಿರಾರು ಕೆರೆಗಳಿವೆ. ಆದರೆ ಅವು ಪರಿಣಾಮರಹಿತವಾಗಿಬಿಟ್ಟವೆ. ಅವುಗಳ ಸಂರಕ್ಷಣೆಯ ಸಾಂಪ್ರದಾಯಿಕ ವಿಧಾನಗಳು ಶಿಥಿಲವಾಗಿರುವುದೇ ಇದಕ್ಕೆ ಕಾರಣ. ಇತ್ತೀಚೆಗೆ ಸರ್ಕಾರಗಳು ಹೊಸ ಕೆರೆಗಳನ್ನು ಕಟ್ಟಲು ಹಾಗೂ ಹಳೆ ಕೆರೆಯನ್ನು ಜೀರ್ಣೋದ್ಧಾರ ಮಾಡಲು ಪ್ರಯತ್ನಿಸಿವೆ. ಆದರೆ ಆ ಪ್ರಯತ್ನಗಳು ಸಾಲದಾಗಿವೆ. ಹಿಂದೆ ಕೆರೆ ನಿರ್ಮಾಣ ಬಹುತೇಕ ಖಾಸಗಿ ಉದ್ಯಮವಾಗಿತ್ತು. ಗ್ರಾಮ ಸಮುದಾಯದ ಮೇಲುಸ್ತುವಾರಿಯಲ್ಲಿ ನಡೆಯುವ ಉದ್ಯಮವಾಗಿತ್ತು. ಅದರಿಂದ ಉದ್ಯಮದಾರನಿಗೆ ಕರೆಯ ಆಯಕಟ್ಟಿನಲ್ಲಿ ಭೂಮಿ ಪ್ರತಿಫಲವಾಗಿ ಸಿಗುತ್ತಿತ್ತು. ಉದ್ಯಮದಾರನಿಗೆ ತನ್ನ ಸ್ವಂತಕ್ಕೆ ಹಾಗೂ ತನ್ನ ವಂಶಕ್ಕೆ ಸಿಗುವ ಲಾಭದ ಪ್ರೇರಣೆಯೂ ಇತ್ತು. ಪರಹಿತ ಚಿಂತನೆಯ ಪ್ರೇರಣೆಯೂ ಇತ್ತು. ಫಲಾನುಭವಿಗಳಿಗೆ ತೃಪ್ತಿಕರವಾಗುವಂತೆ ಗ್ರಾಮ ಸಮುದಾಯ ತನ್ನ ಅಧಿಕಾರಗಳ ಮೂಲಕ ನೀರನ್ನು ಹಂಚುತ್ತಿತ್ತು. ಇಂದು ಈ ಎಲ್ಲ ಹಳೆಯ ಪದ್ಧತಿಗಳನ್ನು ಅಧ್ಯಯನ ಮಾಡಬೇಕಾಗಿದೆ. ಈ ತರಹದ ಒಂದು ಪ್ರಯತ್ನ ಅಧ್ಯಯನದ್ದಾಗಿದೆ. ನಾವು ಇತಿಹಾಸಪೂರ್ವದಿಂದ ನಮ್ಮ ಕಾಲದವರೆಗಿನ ಕೆರೆ ನೀರಾವರಿಯ ಚರಿತ್ರೆಯನ್ನು ಗುರುತಿಸುತ್ತಿದ್ದೇವೆ. ಕರ್ನಾಟಕದಲ್ಲಿ ಕೆರೆಗಳ ಬೆಳವಣಿಗೆ ಹಾಗೂ ಅವನತಿಗಳನ್ನು ಗುರುತಿಸುವುದು ಮಾತ್ರವಲ್ಲ ಕೆರೆಗಳ ರಚನೆ, ಜೀರ್ಣೋದ್ಧಾರ, ಜಲ ನಿರ್ವಹಣೆ ಹಾಗೂ ಹಣಕಾಸು ಪರಿಸ್ಥಿತಿಗಳ ಸಮಸ್ಯೆಗಳನ್ನು ನಮ್ಮ ಹಿಂದಿನವರು ಹೇಗೆ ಎದುರಿಸಿದ್ದರು ಎನ್ನುವುದನ್ನು ತಿಳಿಯಲು ಯತ್ನಿಸಿದ್ದೇವೆ. ಕೆರೆಗಳ ಇತಿಹಾಸದಿಂದ ನಾವು ಕಲಿಯಬೇಕಾದ ಪಾಠ ಇದು. ಕೆರೆಗಳ ರಚನೆ ಹಾಗೂ ಜೀರ್ಣೋದ್ಧಾರದಲ್ಲಿ ಫಲಾನುಭವಿಗಳನ್ನು, ಪಂಚಾಯಿತಿಗಳನ್ನು ಸೇರಿಸಿಕೊಳ್ಳದೆ ಹೋದಲ್ಲಿ ಸಮಸ್ಯೆಯನ್ನು ಬಿಡಿಸುವುದು ಅಸಾಧ್ಯ. ಈ ಹಿನ್ನೆಲೆಯಲ್ಲಿ ಕೆರೆಗಳ ಉಳಿವಿಗಾಗಿ ಜನ ಸಮೂಹದಲ್ಲಿ ಜಾಗೃತಿ ಮೂಡಿಸಿ ಕೆರೆಗಳ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯ ಮತ್ತು ಅನಿವಾರ್ಯವಾಗಿದೆ.

ಈ ಬೆಳವಣಿಗೆಯಿಂದಾಗಿ ಹಣವಂತರು ಮಾತ್ರ ಜಲ ಸೌಲಭ್ಯವನ್ನು ಉಪಯೋಗಿಸ ಬಹುದಾಗಿದೆ. ತಮಿಳುನಾಡಿನಲ್ಲಿ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಲಾಗಿದೆ. ಇವುಗಳಿಗೆ ಅನುಗುಣವಾಗಿ ಕೊಳಗಳ ಮೂಲಕ ಭೂಮಿಗೆ ಮತ್ತೆ ನೀರನ್ನು ಇಂಗಿಸಬಹುದು– ಎಂದು ಆ ರಾಜ್ಯ ಕಂಡು ಹಿಡಿದಿದೆ. ಭೂಮಿಯೊಳಕ್ಕೆ ನೀರನ್ನು ಮತ್ತೆ ಸೇರಿಸುವ ಒಂದೇ ಒಂದು ಉದ್ದೇಶದ ಕೊಳಗಳನ್ನು ಹೊಸದಾಗಿ ಕಟ್ಟುವುದಕ್ಕೆ ಬದಲಾಗಿ, ಹಳೆಯ ಕೆರೆಗಳನ್ನೇ ಜೀರ್ಣೋದ್ಧಾರ ಮಾಡಿದರೆ, ಜಲಮಟ್ಟವೂ ಏರುತ್ತದೆ, ನೀರಾವರಿಗೂ ಅನುಕೂಲ ಆಗಬಹುದು.

ಬದುಕಿಗೆ ಅಗತ್ಯವಾದ ನೀರಾವರಿ ಹಾಗೂ ಕುಡಿಯಲು ನೀರು ಒದಗಿಸುವಲ್ಲಿ

ಕೆರೆಗಳ ಪಾತ್ರ ಗಣನೀಯವಾದುದು. ಇದರ ಜೊತೆಗೆ ಕೆರೆಗಳು ಇನ್ನೂ ಅನೇಕ ಅತ್ಯವಶ್ಯಕ ಸೇವೆಗಳನ್ನು ಮಾಡುತ್ತವೆ. ಅವುಗಳೆಂದರೆ ಪ್ರವಾಹ ನಿಯಂತ್ರಣ, ಬರಪರಿಸ್ಥಿತಿ ಹತೋಟಿ, ಭೂಮಿಯೊಳಗಿನ ನೀರಿನ ಹೆಚ್ಚಳ, ಮೀನುಗಾರಿಕೆಗೆ ನೆರವು, ಹಾಗೂ ಕೊನೆಯದಾಗಿ ಪರಿಸರದ ಅಂದ ಚೆಂದ ಮತ್ತು ಶುಚಿತ್ವವನ್ನು ಕಾಪಾಡುವುದು.

ಕೆರೆಗಳ ಎರಡನೆಯ ಮತ್ತು ಮೂರನೆಯ ಸೇವೆ ಎಂದರೆ ಬರಗಾಲದಲ್ಲಿ ನೆರವು ಹಾಗೂ ಅಂತರ್ಜಲ ಮಟ್ಟವನ್ನು ಏರಿಸುವುದು.

ಜನ, ಜಾನುವಾರುಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ಕೆರೆಗಳ ಪಾತ್ರ ಮಹತ್ವ ವಾದದ್ದು. ಮಳೆಯ ಅಭಾವ ಉಂಟಾದಾಗ ಕೆರೆಗಳು ಅಂತರ್ಜಲದ ಮಟ್ಟ ಉಳಿಸಲು ನೆರವಾಗುತ್ತವೆ. ಮುಕ್ಕಾಲು ಭಾಗ ಭಾವಿಗಳೆಲ್ಲ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕೆರೆಗಳನ್ನೇ ಅವಲಂಬಿಸಿವೆ.

ಮೀನುಗಾರಿಕೆ:

ಕೆರೆಗಳು ನೀಡುವ ಇನ್ನೊಂದು ಫಲವೆಂದರೆ, ಅವು ಮೀನುಗಾರಿಕೆಯ ಅಭಿವೃದ್ಧಿಗೆ ಒದಗಿಸುವ ಅವಕಾಶ. ನಮ್ಮ ದೇಶದಲ್ಲಿ ಜಲಚರ ಕೃಷಿಯನ್ನು ಯಶಸ್ವಿಯಾಗಿ ನಡೆಸಲು ಸಾಧ್ಯತೆಯುಳ್ಳ ವಿಶಾಲ ಪ್ರದೇಶವಿದೆ. ಆದರೆ ಈ ಕೃಷಿಗೆ ಅಗತ್ಯವಾದ ಸಂಶೋಧನ ಯತ್ನವಾಗಲಿ, ಸರ್ಕಾರಿ ಬೆಂಬಲವಾಗಲಿ ಬೇಸಾಯಕ್ಕೆ ದೊರೆತ ಹಾಗೆ ಇದಕ್ಕೆ ಸಿಕ್ಕಿಲ್ಲ. ಭಾರತ ಅರ್ಥವ್ಯವಸ್ಥೆಯ ಅಂಗವಾಗಿ, ಆಹಾರ ಉತ್ಪಾದನೆ ಹೆಚ್ಚಳ, ಉದ್ಯೋಗ ಸೃಷ್ಟಿ ಹಾಗೂ ಆಹಾರ ಪೌಷ್ಠಿಕತೆ ಮಟ್ಟದ ಏರಿಕೆ ಇವುಗಳಲ್ಲಿ ಒಳನಾಡು ಮೀನುಗಾರಿಕೆಯ ಪಾತ್ರ ಪ್ರಮುಖವಾಗಿದೆ. ಈ ಮೂಲದಿಂದ ಬರುವ ಆದಾಯವು ಜಿಲ್ಲಾ ಪರಿಷತ್ತಿಗೆ ಲಾಭದಾಯಕವಾಗಿರುವುದರ ಜೊತೆಗೆ ಕೆರೆಗಳನ್ನು ಸುಸ್ಥಿತಿಯಲ್ಲಿ ಇರಿಸುವುದಕ್ಕೂ ಬಳಕೆಯಾಗಿದೆ.

ಹಸಿರು ವಲಯ :

ಕೆರೆ ಮತ್ತು ಅದರ ಪರಿಸರ ಮಾಡುವ ಇತರ ಸೇವೆಗಳನ್ನೂ ಕಡೆಗಣಿಸುವಂತಿಲ್ಲ. ಉದಾಹರಣೆಗೆ ಕೆರೆಯ ನೀರನ್ನುಂಡು ಸಮೃದ್ಧವಾಗಿ ಬೆಳೆಯುವ ಸಸ್ಯಸಂಪತ್ತು, ಕೆರೆಗಳ ಸುತ್ತ ಮುತ್ತಲ ಪ್ರದೇಶಗಳ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಪರಿಸರದ ಅಂದವನ್ನು ಹೆಚ್ಚಿಸುತ್ತವೆ. ಅವು ಪ್ರಕೃತಿಯ ಹಸಿರು ವಲಯ. ಕೆರೆಯ ಸುತ್ತ ಎಲ್ಲೆಲ್ಲೂ ಹಬ್ಬಿದ ಹಸಿರು, ದಂಡೆಯ ಮೇಲೆಯೂ ತುಂಬಿದ ಹಸಿರು ಅಪಾರ ಪರಿಸರ ಮೌಲ್ಯವುಳ್ಳದ್ದು. ಆ ಹುಲ್ಲು ಮಣ್ಣನ್ನು ಹಿಡಿದಿಡುತ್ತದೆ. ಜೊತೆಗೆ ಜೈವಿಕ ಪದಾರ್ಥವನ್ನೂ ಒದಗಿಸುತ್ತದೆ. ಗಾಳಿ ಮತ್ತು ನೀರಿನಿಂದ ಮಣ್ಣು ಕೊಚ್ಚಿ ಹೋಗದಂತೆ ಅತ್ಯಂತ ಶೀಘ್ರವಾಗಿ, ಸೊಗಸಾಗಿ ಹಿಡಿದಿಡುವಂಥದ್ದು ಹುಲ್ಲು. ಅದು ಅತ್ಯಂತ ದಕ್ಷವಾಗಿ ಮಳೆ ನೀರನ್ನು ಹಿಡಿದಿಡುವುದೂ

ಹೌದು. ಹೂಳನ್ನು ತಡೆಹಿಡಿದು. ಅದು ಕೊಚ್ಚಿ ಹೋಗದಂತೆ ಮಾಡಬಲ್ಲದು. ವೆಟಿವರ್ ಎನ್ನುವಂಥ ಕೆಲವು ಜಾತಿಯ ಹುಲ್ಲನ್ನು ಕಟ್ಟೆಗಳ ಸುತ್ತ ನೆಟ್ಟುಬಿಟ್ಟರೆ ಸಾಕು, ಅದು ಬೇಲಿಯಾಗಿ ಬೆಳೆದು, ನೀರು ಭೂಮಿಯ ಒಳಕ್ಕೆ ಹೋಗುವಂತೆ ಮಾಡುತ್ತದೆ. ಹೊಳೆಗಳಿಗ, ನದಿಗಳಿಗೆ ಇಳಿಜಾರಿನಲ್ಲಿ ಹರಿದು ಹೋಗದಂತೆ ನಡೆಯುತ್ತದೆ. ಅಂಥ ಬೇಲಿಗಳನ್ನು ಬೆಳೆಸುವುದು ತುಂಬ ಅಗ್ಗ.

ಕೆರೆಗಳು– ಜನತೆಯ ಜೀವ :

ಹತ್ತೊಂಭತ್ತನೆಯ ಶತಮಾನದ ಕೊನೆಯವರೆಗೂ, ಕೆರೆಗಳು ಜನ ಹಾಗೂ ದನಕರುಗಳ ಆಹಾರದ ವಿಷಯದಲ್ಲಿ ಹಳ್ಳಿಗಳನ್ನು ಸ್ವಯಂಪೂರ್ಣವಾಗಿ ಮಾಡಿದ್ದವು. ರಾಜ್ಯದ ಬಹುಪಾಲು ಸಂಪತ್ತನ್ನು ಉತ್ಪತ್ತಿ ಮಾಡಿದ್ದವು. ಅಭಾವ ಹಾಗೂ ಪ್ರವಾಹಗಳ ವಿರುದ್ಧ ರಕ್ಷಣೆ ಒದಗಿಸಿದ್ದವು. ಬಾವಿಗಳಲ್ಲಿ ನೆಲಮಟ್ಟಕ್ಕೆ ಹತ್ತಿರದಲ್ಲೆ ನೀರು ಸಿಗುವಂತೆ ಅಂತರ್ಜಲಮಟ್ಟ ಮೇಲುಗಡೆ ಇರುವಂತೆ ಮಾಡಿದ್ದವು. ಮಣ್ಣು ಕೊಚ್ಚಿ ಹೋಗುವುದನ್ನು ತಡೆದಿದ್ದವು. ಸುತ್ತಲ ಪ್ರದೇಶವನ್ನು ತಂಪಾಗಿ ಚೆಂದವಾಗಿ ಹಾಗೂ ಪರಿಸರ ಸಮಸ್ಯೆಗಳಿಂದ ಮುಕ್ತವಾಗಿ ಇರಿಸಿದ್ದವು. ಕೆರೆಗಳು ಜನತೆಯ ಜೀವದ ಒಂದು ಭಾಗವಾಗಿದ್ದವು. ಇದು ಕನಸಿನ ಆದರ್ಶ ಎನಿಸಬಹುದು. ಭಾರತದ ಪರಿಸ್ಥಿತಿಗಳನ್ನು ಚೆನ್ನಾಗಿ ಅರಿತಿದ್ದ ಬ್ರಿಟಿಷ್ ಇಂಜನೀಯರುಗಳು, ಕೃಷಿ ತಜ್ಞರು, ರೆವಿನ್ಯೂ ಅಧಿಕಾರಿಗಳು ಹಾಗೂ ಸಾರ್ವಜನಿಕ ಕಾರ್ಯಕರ್ತರ ಅನುಭವಗಳ ಆಧಾರ ಉಳ್ಳದ್ದು,

೧.೩. ಅಧ್ಯಯನದ ವ್ಯಾಪ್ತಿ :

ಕರ್ನಾಟಕದಲ್ಲಿ ಇಂದು ಸಾವಿರಾರು ಕೆರೆಗಳು ಕಂಡು ಬರುತ್ತವೆ. ಆದರೆ ಅಧ್ಯಯನದ ವ್ಯಾಪ್ತಿ ವಿಸ್ತೃತವಾಗುವ ಕಾರಣಕ್ಕಾಗಿ ನನ್ನ ಸಂಶೋಧನೆಯನ್ನು ಬಾಗಲಕೋಟೆಗೆ ಸೀಮಿತಗೊಳಿಸಿಕೊಂಡು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ. ನನ್ನ ಮಹಾ ಪ್ರಬಂಧದ ವಿಷಯ “ಬಾಗಲಕೋಟೆ ಜಿಲ್ಲೆಯ ಕೆರೆಗೆಳ ಚಾರಿತ್ರಿಕ ಅಧ್ಯಯನ”ವಾಗಿದೆ. ಈ ಪ್ರದೇಶವು ಅಖಂಡ ವಿಜಾಪೂರ ಜಿಲ್ಲೆಯಿಂದ ೧೯೯೭ ರಲ್ಲಿ ಇಬ್ಭಾಗವಾಗಿ ಬಾಗಲಕೋಟೆ ಜಿಲ್ಲಾ ರಚನೆ ಹೊಂದಿದೆ. ೬ ತಾಲೂಕುಗಳನ್ನು ಒಳಗೊಂಡಿದ್ದು (ಬೀಳಗಿ, ಜಮಖಂಡಿ, ಹುನಗುಂದ, ಬಾದಾಮಿ, ಮುಧೋಳ) ೬೦೦ ಕ್ಕೂ ಹೆಚ್ಚು ಗ್ರಾಮಗಳನ್ನು ಹೊಂದಿದೆ. ಈ ಜಿಲ್ಲೆಯ ಕೆರೆಗಳನ್ನು ಅದರಲ್ಲೂ ನೀರಾವರಿ ಹಾಗೂ ಗೃಹಬಳಕೆ ಕೆರೆಗಳೆಂದು ಎರಡು ವಿಧ ಮಾಡಲಾಗಿದೆ.

ಈ ಪ್ರದೇಶದಲ್ಲಿ ಅಸಂಖ್ಯಾತ ಕೆರೆಗಳು ಇದ್ದರೂ ಅಧ್ಯಯನಕ್ಕಾಗಿ ಪ್ರಮುಖ ೬೦ ಕೆರೆಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಇತ್ತೀಚಿನ ದಿನಗಳಲ್ಲಿ ನದಿಗಳಿಂದ, ಕಾಲುವೆಗಳಿಂದ ಕೆರೆಯ ನೀರಾವರಿ ಪ್ರದೇಶವು ಇಳಿಮುಖವಾಗುತ್ತಿದೆ. ಇದರಿಂದ ಕೆರೆಗಳ

ನಿರ್ಮಾಣ ಸಂಖ್ಯೆಯೂ ಜಾಗತೀಕರಣ, ನಗರೀಕರಣ. ಖಾಸಗಿಕರಣದ ಫಲವಾಗಿ ಕಡಿಮೆಯಾಗುತ್ತಿದೆ. ಈ ಭಾಗದ ಜೀವನದಿಯಾದ ಕೃಷ್ಣಾ ಹಾಗೂ ಅದರ ಉಪ ನದಿಗಳಾದ ಘಟಪ್ರಭಾ, ಮಲಪ್ರಭಾ ಹರಿಯುತ್ತಿದ್ದರೂ ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಕೆರೆಗಳು ನಿರ್ಮಾಣಗೊಂಡಿವೆ. ಇದು ಅಧ್ಯಯನಕ್ಕೆ ಇನ್ನಷ್ಟು ಅವಕಾಶ ಮಾಡಿದೆ.

ಈ ನನ್ನ ಅಧ್ಯಯನದ ಅವಧಿಯನ್ನು ಬಾದಾಮಿ ಚಾಲುಕ್ಯರಿಂದ ಅಂದರೆ ಕ್ರಿ.ಶ. ೬ನೇ ಶತಮಾನದಿಂದ ಆರಂಭಗೊಂಡು ನಂತರ ಬಂದ ರಾಜಮನೆತನಗಳಾದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ದೇವಗಿರಿಯ ಯಾದವರು, ಬಿಜಾಪುರದ ಆದಿಲ್‌ಷಾಹಿಗಳು, ಬಹಮನಿ ಸುಲ್ತಾನರು, ದಕ್ಷಿಣ ಭಾರತದ ಹಿಂದೂ ಸಾಮ್ರಾಜ್ಯವಾದ ವಿಜಯನಗರ ಇವರ ಅವನತಿಯ ನಂತರದಲ್ಲಿ ಅಧಿಕಾರಕ್ಕೆ ಬಂದ ಮರಾಠರು, ಅನೇಕ ಸಂಸ್ಥಾನಿಕರು ಅದರಲ್ಲಿ ಜಮಖಂಡಿಯ ಪಟವರ್ಧನ, ಮುಧೋಳದ ಘೋರ್ಪಡೆ ಇದರ ಜೊತೆಗೆ ನಾಡಗೌಡರು, ದೇಸಾಯಿಗಳು, ಶಾನಭೋಗರು ಹಾಗೂ ಬ್ರಿಟಿಷರ ಕಾಲದವರೆಗೂ ನಿರ್ಮಾಣಗೊಂಡ ಅಂದರೆ ೧೮ನೇ ಶತಮಾನದ ಮಧ್ಯದವರೆಗೂ ನಿರ್ಮಾಣಗೊಂಡ ವಿವಿಧ ರೀತಿಯ ಕೆರೆಗಳ ಅಧ್ಯಯನ ಮಾಡಲಾಗಿದೆ.

ಕೆರೆಗಳಲ್ಲಿ ಶಾಸನೋಕ್ತ ಕೆರೆಗಳು, ಇವುಗಳ ಸಾಂಸ್ಕೃತಿಕ ಆಚರಣೆಗಳು, ವಿವಿಧ ಆಯಾಮಗಳು, ಕೆರೆ ಮತ್ತು ವಿವಿಧ ಜನತೆಯ ಸಂಬಂಧಗಳು, ಕೆರೆಗಳ ಮೂಲಕ ತಲೆತಲಾಂತರವರೆಗೂ ಬೆಳೆದು ಬಂದ ಆಚರಣೆಗಳು. ಮೌಖಿಕ ನೀತಿ ಕಥೆಗಳು ಕೆರೆಯ ಅಂಗಳದಲ್ಲಿ ವರ್ಷದುದ್ದಕ್ಕೂ ನಡೆಯುತ್ತಿರುವ ಹಬ್ಬ-ಹರಿದಿನಗಳು, ಕೆರೆ ನಿರ್ಮಾಣಕ್ಕಾಗಿ ಹಲವು ಜನರು ತಮ್ಮನ್ನು ತಾವು ಅರ್ಪಣೆ ಮಾಡಿಕೊಂಡು ಬರುತ್ತಿರುವ ಘಟನೆಗಳು ಇದೂ ಅಲ್ಲದೇ ಕೆರೆ ತುಂಬಿದಾಗ ಪಕ್ಕದಲ್ಲಿಯ ಜನರು ವಿವಿಧ ಬಲಿ ನೀಡುವ ಪದ್ಧತಿಗಳು ಇದರ ಜೊತೆಗೆ ಇಂದಿನ ವೇಗದ ಜಗತ್ತಿನಲ್ಲಿ ಕೈಗಾರಿಕರಣ, ಖಾಸಗೀಕರಣ, ಜಾಗತೀಕರಣದ ಫಲವಾಗಿ ಕೆರೆಗಳ ಮೇಲಾಗುವ ಪರಿಣಾಮಗಳನ್ನು ವಿವರಿಸುವುದರ ಮೂಲಕ ಕೆರೆಯ ನೈಜ ಅಸ್ತಿತ್ವಕ್ಕಾಗಿ ನನ್ನ ಈ ಮಹಾಪ್ರಬಂಧದಲ್ಲಿ ಒಂದು ಕಿರು ಪ್ರಯತ್ನ ಮಾಡಲಾಗಿದೆ.

೧.೪. ಅಧ್ಯಯನದ ಸ್ವರೂಪ:

ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನ ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಮಹಾಪ್ರಬಂಧದಲ್ಲಿ ಆರು ಆಧ್ಯಾಯಗಳಾಗಿ ವಿಂಗಡಿಸಿ ಸಮಗ್ರವಾಗಿ ಅಧ್ಯಯನ ನಡೆಸಲಾಗಿದೆ.

೧ನೇ ಅಧ್ಯಾಯದಲ್ಲಿ ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನ, ಇದರಲ್ಲಿ ಪೀಠಿಕೆ, ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಮಹತ್ವ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ ಬಾದಾಮಿ ಚಾಲುಕ್ಯರಿಂದ-ಬ್ರಿಟಿಷರ ಆಡಳಿತದವರೆಗೂ ಅವಲೋಕಿಸಲಾಗಿದೆ. ಇಲ್ಲಿಯವರೆಗೆ ಅಧ್ಯಯನದ ಹಿನ್ನೋಟವನ್ನು ಅವಲೋಕನ ಮಾಡಿದ್ದೇನೆ. ಜೊತೆಗೆ ಜಿಲ್ಲೆಯ ಭೌಗೋಳಿಕ ಚರಿತ್ರೆಯ ಲಕ್ಷಣಗಳು ಕೆರೆಗಳ ನಿರ್ಮಾಣಕ್ಕೆ ಹೇಗೆ ಪೂರಕವಾಗಿವೆ ಎಂಬುದನ್ನು ಅವಲೋಕನ ಮಾಡಲಾಗಿದೆ.

ಅಧ್ಯಾಯ-೨

ಈ ಅಧ್ಯಾಯದಲ್ಲಿ ಕೆರೆಗಳ ಉಗಮ, ಬೆಳವಣಿಗೆ ಕುರಿತು ವಿವರಿಸಲಾಗಿದ್ದು, ಇದರಲ್ಲಿ ದಕ್ಷಿಣಭಾರತ ಅದರಲ್ಲೂ ಕರ್ನಾಟಕ, ಬಾಗಲಕೋಟ ಜಿಲ್ಲಾ ಪರಿಸರದಲ್ಲಿ ಕೆರೆಗಳ ಉಗಮ ಅದರ ಆರಂಭದ ಲಕ್ಷಣಗಳು, ಇದಕ್ಕೆ ಕಾರಣಗಳು ಇತರೆ ಮಹತ್ವವಾದ ವಿಚಾರಗಳನ್ನು ಅವಲೋಕನ ಮಾಡಲಾಗಿದೆ. ಮುಂದುವರೆದು ವಿವಿಧ ರಾಜಮನೆತನಗಳಲ್ಲಿ ಕೆರೆಗಳಿಗೆ ಯಾವ ಯಾವ ರಾಜರು ಯಾವ ರೀತಿ ದಾನ ದತ್ತಿಗಳ ಮೂಲಕ ಪ್ರೋತ್ಸಾಹ ನೀಡಿದ್ದರೆಂಬ ಸಂಗತಿಗಳನ್ನು ಅವಲೋಕನ ಮಾಡಲಾಗಿದೆ.

ಅಧ್ಯಾಯ-೩

ಅಧ್ಯಾಯ-೩ ರಲ್ಲಿ ಜಿಲ್ಲೆಯ ಪ್ರಮುಖ ೬೦ ಐತಿಹಾಸಿಕ ಕೆರೆಗಳ ಚಾರಿತ್ರಿಕ ಸಂಗತಿಗಳನ್ನು ಅವಲೋಕನ ಮಾಡಲಾಗಿದೆ. ಇದರಲ್ಲಿ ಮುಂದುವರೆದು ಯಾವ ಯಾವ ರಾಜಮನೆತನಗಳು ಸಾಮ್ರಾಜ್ಯಗಳ ಅವಧಿಯಲ್ಲಿ ಯಾವ ಯಾವ ಕೆರೆಗಳನ್ನು ಎಲ್ಲೆಲ್ಲಿ, ಎಷ್ಟೆಷ್ಟು ನಿರ್ಮಾಣ ಮಾಡಿದರೆಂಬ ಸಂಗತಿಗಳನ್ನು ಅಧ್ಯಯನ ಮಾಡಲಾಗಿದೆ.

ಈ ಪ್ರದೇಶವನ್ನಾಳಿದ ನಾನಾ ಅರಸು ಮನೆತನಗಳು ಕೆರೆ ಕಟ್ಟಿಸಿದ ಮಾಹಿತಿಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅಂತಹ ಶಾಸನೋಕ್ತ ಕೆರೆಗಳನ್ನು ವಿಭಾಗಿಸಿ ವಿಶ್ಲೇಸಿದ್ದೇನೆ. ಇದರ ಜೊತೆಗೆ ಕೆರೆ ನೀರಾವರಿ, ಭೂಹಿಡುವಳಿ ವ್ಯವಸ್ಥೆ, ಮತ್ತು ಕೆರೆಗಳ ಸಂರಕ್ಷಣಾ ಮಾನದಂಡಗಳ ಬಗ್ಗೆ ಅವಲೋಕನ ಮಾಡಲಾಗಿದೆ.

ಅಧ್ಯಾಯ-೪

ಇದರಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲದ ಕೆರೆಗಳು ಮತ್ತು ವಿಜಯನಗರ ಸಾಮ್ರಾಜ್ಯ ಪೂರ್ವದ ಹಾಗೂ ನಂತರದ ಕೆರೆಗಳ ವಿವರಣೆ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಚಾರಿತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

ಅಧ್ಯಾಯ -೫

ಈ ಅಧ್ಯಾಯದಲ್ಲಿ ಕೆರೆಗಳ ವಿವಿಧ ಅಂಗಗಳಾದ ಏರಿ, ಕಾಲುವೆ, ಜಲಾಯನ ಪ್ರದೇಶ, ಅಚ್ಚುಕಟ್ಟು ಪ್ರದೇಶ, ನೀರು ಬರುವ ಪ್ರದೇಶಗಳ ಅಧ್ಯಯನ ಮಾಡಲಾಗಿದೆ. ಇದು ಅಲ್ಲದೇ ಕೆರೆಗಳ ಇತರ ಮಾಹಿತಿಯೊಂದಿಗೆ ಕೆರೆಗಳು ಮತ್ತು ವಿವಿಧ ಜನಾಂಗಗಳ

ನಡುವೆ ಇರುವ ಸಂಬಂಧಗಳು ಅವಲೋಕನವನ್ನು ಜೊತೆಗೆ ಕೆರೆಗಳ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳ ಅವಲೋಕನ ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ –೬

ಈ ಅಧ್ಯಾಯದಲ್ಲಿ ಉಪಸಂಹಾರದೊಂದಿಗೆ ಕೆರೆಗಳ ವಿವಿಧ ಆಯಾಮಗಳು, ಸಂಸ್ಕೃತಿ, ಆಚರಣೆಗಳು, ಅಂತರಜಲಮಟ್ಟದ ವಿವರಣೆ, ಕೆರೆಗಳ ಸಂರಕ್ಷಣೆ, ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಬರವನ್ನು ಹೋಗಲಾಡಿಸುವ ಪ್ರಯತ್ನ ಮಾಡುವ ಸಲುವಾಗಿ ಜಿಲ್ಲೆಯ ಸಮಗ್ರ ಕೆರೆಗಳ ವಿವರಣೆ ಕೊಡುವ ಒಂದು ಕಿರು ಪ್ರಯತ್ನ ಮಾಡಲಾಗಿದೆ. ಇದರಲ್ಲಿ ಫಲಿತಗಳು, ಪರಾಮರ್ಶನ ಗ್ರಂಥಗಳು, ಲೇಖನಗಳು, ಎಂ.ಫಿಲ್, ಪಿಎಚ್.ಡಿ ಮಹಾ ಪ್ರಬಂಧಗಳು, ಇಂಗ್ಲಿಷ ಪುಸ್ತಕಗಳ ಅವಲೋಕನ ಮಾಡಿದ್ದೇನೆ. ಅಲ್ಲದೇ ಅಧ್ಯಾಯಕ್ಕೆ ಸಂಬಂಧಿಸಿದ ಕೆರೆಗಳ ಅಂತರಜಾಲದ ಛಾಯಾಚಿತ್ರ, ಜಿಲ್ಲೆಯ ಭೌಗೋಳಿಕ ನಕ್ಷೆಗಳನ್ನು ಮತ್ತು ಪ್ರಮುಖ ಕೆರೆಗಳ ಕೋಷ್ಟಕಗಳನ್ನು ಹಾಗೂ ಸಾಮಾನ್ಯ ಛಾಯಾಚಿತ್ರಗಳನ್ನು ಅವಲೋಕನ ಮಾಡಲಾಗಿದೆ.

೧.೫ ಮಹತ್ವ :

ಕೆರೆಗಳು ದಕ್ಷಿಣ ಪರ್ಯಾಯ ಪ್ರದೇಶದ ವಿಶಿಷ್ಟ ಲಕ್ಷಣ. ಉತ್ತರ ಭಾರತದ ಭೌಗೋಳಿಕ ಪರಿಸ್ಥಿತಿ ದಕ್ಷಿಣ ಭಾರತದ ಸ್ಥಿತಿಗಿಂತ ಬೇರೆ. ಉತ್ತರ ಭಾರತದ ವಿಶಾಲ ಪ್ರದೇಶಗಳು ನಿರಂತರ ಹರಿಯುವ ನದಿಗಳಿಂದ ಆವೃತವಾಗಿದೆ. ಮಳೆಗಾಲದಲ್ಲಿ ಮಳೆಯ ನೀರು ಮತ್ತು ಬೇಸಿಗೆಯಲ್ಲಿ ಹಿಮ ಕರಗಿದ ನೀರು ಅವುಗಳಲ್ಲಿ ಹರಿದು ಬರುತ್ತವೆ. ಆ ನದಿಗಳು ಫಲವತ್ತಾದ ಮೆಕ್ಕಲು ಮಣ್ಣಿನ ಬಯಲುಗಳಲ್ಲಿ ಹರಿಯುತ್ತವೆ. ಅಲ್ಲಿ ನೀರಾವರಿಗಾಗಿ ಕೆರೆಗಳನ್ನು ಅಥವಾ ಜಲಾಶಯಗಳನ್ನು ಕಟ್ಟುವ ಅಗತ್ಯ ಬರಲಿಲ್ಲ. ನದಿಯಿಂದಲೇ ನೇರವಾಗಿ ನೀರು ಹಾಯುವ ಕಾಲುವೆಗಳ ನಿರ್ಮಾಣವೇ ನೀರಾವರಿ ಯೋಜನೆಯ ಮುಖ್ಯ ಅಂಗವಾಯಿತು. ಅಲ್ಲದೆ ಅಲ್ಲಿ ಬಾವಿ ತೋಡುವುದು ಸುಲಭ. ಆದ್ದರಿಂದಲೇ ವೇದಕಾಲದಿಂದಲೂ ಬಾವಿ ಅಥವಾ ಕೂಪಗಳ ಪ್ರಸ್ತಾಪ ನಮಗೆ ಸಿಗುತ್ತದೆ.

ಪಶ್ಚಿಮ ಮತ್ತು ಮಧ್ಯ ಭಾರತದ ಅರೆ ಒಣಕಲು ಪ್ರದೇಶಗಳಲ್ಲಿ, ಅಂದರೆ ರಾಜಸ್ತಾನ ಮತ್ತು ಮಾಳ್ವ ಪ್ರದೇಶಗಳಲ್ಲಿ ಹಾಗೂ ಇಡೀ ದಕ್ಷಿಣ ಭಾರತದಲ್ಲಿ ಕೆರೆ ನೀರಾವರಿ ಪ್ರಮುಖವಾಗಿವೆ. ಈ ಶತಮಾನದ ಆದಿಯ ವರೆಗೆ ಹಾಗೂ ೧೯೫೧ ರಲ್ಲಿ ಪಂಚವಾರ್ಷಿಕ ಯೋಜನೆಗಳ ಪ್ರಕಾರ ಅಭಿವೃದ್ಧಿ ಕಾರ್ಯ ಆರಂಭವಾಗುವವರೆಗೆ ದಕ್ಷಿಣ ಭಾರತದಲ್ಲಿ ನೀರಾವರಿ ಬಹುತೇಕ ಕೆರೆಗಳದೇ ಆಗಿತ್ತು. ಆಂಧ್ರಪ್ರದೇಶದ ತೆಲಂಗಾಣ ಪ್ರದೇಶ, ಕರ್ನಾಟಕದ ಹಳೆ ಮೈಸೂರು ಪ್ರದೇಶ ಹಾಗೂ ತಮಿಳುನಾಡಿನ ಪೂರ್ವಭಾಗಗಳಲ್ಲಿ

ಕೆರೆಗಳು ನಿಬಿಡವಾಗಿವೆ. ದಕ್ಷಿಣ ಭಾರತದಲ್ಲಿ ಗಟ್ಟಿಯಾದ ಬೆಣಚುಕಲ್ಲು ಮತ್ತು ಗ್ನೇಸ್ ಕಲ್ಲು ಇರುವುದರಿಂದ ಅಲ್ಲಿ ಬಾವಿ ನೀರಾವರಿಯ ಅಭಿವೃದ್ಧಿಗೆ ಅವಕಾಶ ಸೀಮಿತವಾಗಿದೆ. ಇತ್ತೀಚಿನವರೆಗೂ ಕರ್ನಾಟಕದ ನೀರಾವರಿ ಪ್ರದೇಶದ ಶೇಕಡಾ ೮೦ ಕ್ಕಿಂತ ಹೆಚ್ಚು ಭಾಗ ಕೆರೆ ನೀರಾವರಿಯದೇ ಆಗಿತ್ತು.

೧.೫ ಅಧ್ಯಯನದ ಸಮೀಕ್ಷೆ :

ಕೆರೆ ನೀರಾವರಿಯ ಚರಿತ್ರೆ ಕೇವಲ ಜ್ಞಾನ ಕುತೂಹಲ ಮಾತ್ರವಲ್ಲ, ಇದೊಂದು ವರ್ತಮಾನದ ಅಗತ್ಯಕ್ಕೆ ಸ್ಪಂದಿಸಿ ಇಂದು ಬೆಳೆಯುತ್ತಿರುವ ಅಧ್ಯಯನವಾಗಿದೆ. ಕರ್ನಾಟಕದ ಕೆರೆ ನೀರಾವರಿಯ ಅಧ್ಯಯನದ ತೀರ ಪ್ರಾರಂಭ ವ್ಯವಸ್ಥೆಯಲ್ಲೇ 'ಜಿ.ಎಸ್.ದೀಕ್ಷಿತರು' ಇಂದು ಅಳಿದು ಹೋಗುತ್ತಿರುವ ಕೆರೆಗಳನ್ನು ಉಳಿಸಿಕೊಳ್ಳಬೇಕೆಂಬ ಕಾಳಜಿಯಿಂದ ಇದಕ್ಕೊಂದು ಸಂಶೋಧನಾ ಕಾರ್ಯಕ್ರಮವನ್ನು ಹಾಕಿಕೊಂಡರು. ಈ ಸಂಶೋಧನೆಯಲ್ಲಿ ಕೇವಲ ಇತಿಹಾಸಕಾರರು ಮಾತ್ರವಲ್ಲ ಇಂದಿನ ತಂತ್ರಜ್ಞರು, ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳು ಕೂಡ ಮಹತ್ವದ ಪಾತ್ರ ವಹಿಸಿದ್ದಾರೆ. ಇವರೆಲ್ಲರ ಉದ್ದೇಶ ಎಂದರೆ ಕೆರೆ ನೀರಾವರಿಯ ಕುರಿತ ನಮ್ಮ ತಿಳುವಳಿಕೆಯನ್ನು ವಿಸ್ತರಿಸಿ ಅದನ್ನು ಸಫಲವಾಗಿ ಇಂದು ಹೇಗೆ ಅಳವಡಿಸಿಕೊಂಡು, ಉಳಿಸಿಕೊಂಡು ಬರುವ ಜರೂರತೆಯಿದೆ. ಇಂದು ಅನೇಕ ಸ್ವಯಂಸೇವಾ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಕೆರೆಗಳ ಅಭಿವೃದ್ಧಿಗಾಗಿ ಪರಿಶ್ರಮಿಸುತ್ತಿವೆ.

ಮೂಲ ಕಾರಣವೆಂದರೆ ವರ್ತಮಾನದಲ್ಲಿ ನಾವು ಎದುರಿಸುತ್ತಿರುವ ನೀರಿನ ಸಮಸ್ಯೆಗಳು ಹಾಗೂ ಪರಿಸರ ಸಮಸ್ಯೆಗಳು. ಆಧುನಿಕ ಭಾರತೀಯ ಸರ್ಕಾರಗಳು ಒಂದು ಹಂತದಲ್ಲಿ ಈ ಸಣ್ಣ ಕೆರೆಗಳು ರಾಜ್ಯಕ್ಕೆ ಹೊರೆಯಲ್ಲದೇ ಮತ್ತೇನಲ್ಲವೆಂದು ದೊಡ್ಡ ಕೆರೆಗಳಿಗೆ ಹಾಗೂ ಬೃಹತ್ ನೀರಾವರಿಗೆ ಒತ್ತು ನೀಡುತ್ತ ಬಂದವು. ೧೯ ನೇ ಶತಮಾನದಲ್ಲಿ ಕೆರೆ ನಿರ್ವಹಣೆಯನ್ನು ಸ್ಥಾನಿಕ ವ್ಯಕ್ತಿ ಮತ್ತು ಸಮುದಾಯಗಳ ಹಿಡಿತದಿಂದ ತಪ್ಪಿಸಿ ಅವುಗಳ ಪೂರ್ಣ ಪ್ರಯೋಜನವನ್ನು ಪಡೆಯುವ ಉದ್ದೇಶದಿಂದ ರಾಜ್ಯವೇ ಅಧಿಕಾರ ಶಾಹಿಯಿಂದ ಅವುಗಳನ್ನು ನಿರ್ವಹಿಸಲು ತೊಡಗಿತು. ಆದರೆ ಈ ಕೆರೆಗಳನ್ನೆಲ್ಲ ರಿಪೇರಿ ಮಾಡಿ ನಿರ್ವಹಿಸುವ ಕೆಲಸ ರಾಜ್ಯಕ್ಕೆ ಹೊರೆಯಾಗುವುದು ಎಂಬುದೂ ಸ್ಪಷ್ಟವಾಗಿತ್ತು. ತದನಂತರ ೨೦ನೇ ಶತಮಾನದಲ್ಲಿ ಲಾಭವನ್ನು ತರದ ಸಣ್ಣ ಕೆರೆಗಳನ್ನು ಸರ್ಕಾರ ನಿರ್ಲಕ್ಷಿಸಿತು. ಅಷ್ಟಾಗಿಯೂ ೧೯-೨೦ ನೆ ಶತಮಾನದಲ್ಲಿ ಆಧುನಿಕ ರಾಜ್ಯವು ಕೆರೆಗಳ ಅಭಿವೃದ್ಧಿಗಾಗಿ ಅಪಾರ ಶ್ರಮವನ್ನಂತೂ ವಹಿಸಿದೆ. ಕೆರೆಗಳ ಸಂಖ್ಯೆಯನ್ನು ೨೦ನೇ ಶತಮಾನದಲ್ಲಿ ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಲಾಯಿತು. ಆದರೆ ಕೆರೆಗಳ ಸಂಖ್ಯೆಯ ಹೆಚ್ಚಳವೊಂದೇ ಅಭಿವೃದ್ಧಿಯ ಮಾನದಂಡವಲ್ಲ. ಈ ಕೆರೆಗಳನ್ನು ನಿರ್ವಹಿಸಿಕೊಂಡು ಅದರ ಉಪಯೋಗವನ್ನು ಪಡೆಯುವಲ್ಲಿ ಸಮುದಾಯಗಳು ವಿಫಲವಾಗುತ್ತಿವೆ. ಹಾಗಾಗಿ

ಎಲ್ಲ ಭಾರವೂ ಸರ್ಕಾರದ ಮೇಲೆ ಬೀಳುತ್ತಿದೆ. ಹೀಗಾಗಿ ಹಾಳಾದ ಕೆರೆಗಳು ಹಾಗೆ ಉಳಿದವು. ಹೂಳು ತುಂಬಿದ ಕೆರೆಗಳು ನೀರನ್ನು ಕಳೆದುಕೊಂಡವು. ಕೆರೆಗೆ ಬರುವ ನೀರಿನ ಸೆಲೆಗಳನ್ನು ಸರಿಯಾಗಿ ತಿದ್ದದೇ ಅವೂ ಕಡಿಮೆಯಾದವು.

ಕೆರೆಯಂಗಳದ ಒತ್ತುವರಿ, ಪಟ್ಟಣ ಪ್ರದೇಶಗಳಲ್ಲಿ ಅವುಗಳನ್ನು ಸೈಟುಗಳನ್ನಾಗಿ ಪರಿವರ್ತಿಸುವುದು ಮುಂತಾದ ಸಮಸ್ಯೆಗಳೂ ಗಂಭೀರವಾಗಿವೆ. ಒಂದು ಕಾಲದಲ್ಲಿ ಬಹುತೇಕ ಹಳ್ಳಿಗಳಿಗೆ ಸಣ್ಣಪುಟ್ಟ ಕೆರೆಗಳಾದರೂ ಕುಡಿಯುವ ನೀರಿಗಾಗಿ ಅಗತ್ಯವಿದ್ದವು. ಇಂದು ಕೊಳವೆ ಬಾವಿಗಳ ಉಪಯೋಗದಿಂದ ಇಂಥ ಕೆರೆಗಳು ಮಹತ್ವ ಕಳೆದುಕೊಂಡು ನಶಿಸುತ್ತಿವೆ. ಅಷ್ಟೇ ಅಲ್ಲದೇ ಭೂಮಿಯ ಅಂತರ್ಜಲವು ಇಂದು ಕೊಳವೆ ಬಾವಿಗಳಿಗೂ ಸಿಗದ ರೀತಿಯಲ್ಲಿ ಬತ್ತುತ್ತಿದೆ. ಇದಕ್ಕೆ ಕಾರಣವೆಂದರೆ,

೧. ನೀರಾವರಿಗಾಗಿ ಎಲ್ಲೆಂದರಲ್ಲಿ ಕೊಳವೆ ಬಾವಿಗಳನ್ನು ಅನಿರ್ಬಂಧಿತವಾಗಿ ತೆಗೆಯಲಾಗುತ್ತಿದೆ.
೨. ಅಂತರ್ಜಲದ ಅಭಿವೃದ್ಧಿಗೆ ಪರಿಣಾಮಕಾರಿಯಾದ ಕಾರ್ಯಕ್ರಮಗಳೇನೂ ರೂಪಿತವಾಗುತ್ತಿಲ್ಲ.

ಹೀಗಾಗಿ ಕೊಳವೆ ಬಾವಿ ಕೆರೆಗಳಿಗೆ ಪರ್ಯಾಯವಾಗಲಾರದು ಎಂಬುದು ಸಾಬೀತಾಗುತ್ತಿದೆ. ಅಷ್ಟೇ ಅಲ್ಲ ಕೆರೆಗಳನ್ನು ಅಭಿವೃದ್ಧಿಪಡಿಸುವದೊಂದೇ ಇದಕ್ಕೆ ಸದ್ಯದ ಪರ್ಯಾಯ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಈ ಕುರಿತು ಗಂಭೀರವಾಗಿ ಸರ್ಕಾರ ಮತ್ತು ಸಮುದಾಯಗಳು ಕಾರ್ಯಪ್ರವೃತ್ತವಾಗದಿದ್ದರೆ ಕೆಲ ಪ್ರದೇಶಗಳ ಪರಿಸ್ಥಿತಿ ಭೀಕರವಾಗಬಹುದು.

ಅದೇ ರೀತಿ ಬೃಹತ್ ನೀರಾವರಿಯೂ ಕೆರೆಗಳಿಗೆ ಸೂಕ್ತ ಪರ್ಯಾಯವಾಗಲಾರದು. ಕೆಲ ಪ್ರಾಕೃತಿಕ ಅನುಕೂಲ ಅಂಶಗಳು ಇದ್ದಲ್ಲಿ ಮಾತ್ರ ಬೃಹತ್ ನೀರಾವರಿ ಸಾಧ್ಯವಾಗಬಹುದು. ರಾಜ್ಯದ ಬಹುತೇಕ ಭಾಗವು ಇಂಥ ಅದೃಷ್ಟವನ್ನು ಹೊಂದಿಲ್ಲ. ಕೇವಲ ಮಳೆಯ ನೀರನ್ನೇ ನೆಚ್ಚಿಕೊಂಡಿರುವ ಭಾಗಗಳಲ್ಲಿ ಬೇಸಿಗೆಯಲ್ಲಿ ನೀರಿನ ಏಕೈಕ ಆಸರೆಗಳು ಈ ಕೆರೆಗಳಾಗಿವೆ. ಹಾಗಾಗಿ ಅಂಥ ಭಾಗಗಳಲ್ಲಿ ವಿವೇಕಯುತವಾದ ನೀರಾವರಿ ಎಂದರೆ ಕೆರೆಗಳದೇ. ಇದರ ಜೊತೆಗೆ ಬೃಹತ್ ನೀರಾವರಿ, ಯೋಜನೆಗಳು ಪರಿಸರದ ಮೇಲೆ, ಸಮುದಾಯಗಳ ಸಂಸ್ಕೃತಿಯ ಮೇಲೆ ತರಬಹುದಾದ ಆಘಾತಗಳನ್ನು ಕುರಿತು ತಜ್ಞರು ಈಗಾಗಲೇ ಎಚ್ಚರಿಸಿದ್ದಾರೆ. ಹಾಗಾಗಿ ಒಂದು ಮಿತಿಯನ್ನು ಮೀರಿ ಈ ಬೃಹತ್ ಯೋಜನೆಗಳನ್ನು ಹಮ್ಮಿಕೊಳ್ಳುವುದು ಸಾಧ್ಯವಿಲ್ಲ. ಹೀಗೆ ಈ ಮೇಲಿನ ಎಲ್ಲ ಕಾರಣಗಳಿಂದಾಗಿ ನಮ್ಮ ಪೂರ್ವಜರು ಸಾವಿರಾರು ವರ್ಷಗಳಿಂದ ಉಳಿಸಿ–ಬೆಳೆಸಿಕೊಂಡು ಬಂದ ಕೆರೆಗಳ ಬಗ್ಗೆ ನಮ್ಮ ಗಮನವನ್ನು ಹರಿಸುವುದು ವರ್ತಮಾನದ ಒಂದು ಅನಿವಾರ್ಯತೆಯೇ

ಆಗಿದೆ. ಇಂದು ನಮ್ಮ ತಂತ್ರಜ್ಞಾನವು ಅಪೂರ್ವವಾಗಿ ಬೆಳೆದಿದೆ. ಹಾಗೂ ನಮ್ಮ ಸಾಮಾಜಿಕ ನ್ಯಾಯದ ಕಲ್ಪನೆಗಳೂ ಬದಲಾಗಿವೆ. ಹಾಗಾಗಿ ಈ ಹಳೆಯ ಸಂಗತಿಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ. ಅದು ಮತ್ತೆ ಹಳಿಯ ಸಾಮಾಜಿಕ ವ್ಯವಸ್ಥೆಗಳ ವೈಭವೀಕರಣವಾಗುವುದಿಲ್ಲವೇ? ಎಂದು ಕೇಳಿದವರಿದ್ದಾರೆ. ತಂತ್ರಜ್ಞಾನಕ್ಕೂ ಸಾಮಾಜಿಕ ವ್ಯವಸ್ಥೆಯ ಸ್ವರೂಪಕ್ಕೂ ಕಾರಣ ಸಂಬಂಧಗಳಿವೆ ಎಂಬ ಗ್ರಹಿಕೆಯಿಂದ ಇಂಥ ಪ್ರಶ್ನೆಗಳು ಏಳುತ್ತವೆ ಹಾಗೂ ಐತಿಹಾಸಿಕ ಸಾಮಾಜಿಕ ವ್ಯವಸ್ಥೆಗಳ ಕುರಿತ ಅಗಾಧ ಅಜ್ಞಾನದಿಂದಲೂ ಇಂಥ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಈ ಅಜ್ಞಾನವನ್ನು ಭೇದಿಸಲಿಕ್ಕೆ ನಮಗೆ ಆಕರ ಹಾಗೂ ಮಾಹಿತಿಗಳ ಅಭಾವವಿದೆ. ಚಾರಿತ್ರಿಕ ಸಂಗತಿಗಳ ಕುರಿತು ಹೆಚ್ಚು ಹೆಚ್ಚು ಮಾಹಿತಿಯನ್ನು ಸಂಗ್ರಹಿಸಿದಂತೆಲ್ಲ ನಮ್ಮ ಗ್ರಹಿಕೆಗಳಿಗೆ ಸ್ಪಷ್ಟತೆ ಬರಬಹುದು.

ಕರ್ನಾಟಕದಲ್ಲಿ ಚಾರಿತ್ರಿಕ ಕೆರೆ ನೀರಾವರಿಯ ಕುರಿತು ಈಗಾಗಲೇ ಅನೇಕ ಅಧ್ಯಯನಗಳು ಬಂದಿವೆ. ಜಿ.ಎಸ್.ದೀಕ್ಷಿತ್, ಜಿ.ಆರ್.ಕುಪ್ಪುಸ್ವಾಮಿ, ಎಸ್.ಕೆ.ಮೋಹನ ಇವರ Tank Irrigation in Karnataka ಇಂಥದೊಂದು ಸಮಗ್ರ ಗ್ರಂಥವಾಗಿದೆ. ಸಿ.ಟಿ.ಎಂ. ಕೊಟ್ರಯ್ಯನವರ Irrigation systems under Vijayanagara Empire ಗ್ರಂಥವೂ ಹೊರ ಬಂದಿದೆ. ಇವೆರಡೂ ಕನ್ನಡ ವಿಶ್ವವಿದ್ಯಾಲಯದಿಂದ ಅನುವಾದಿತಗೊಂಡು ಪ್ರಕಟವಾಗಿವೆ. ಜಿ.ಆರ್.ಕುಪ್ಪುಸ್ವಾಮಿಯವರು ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಮೌಲಿಕವಾದ ಲೇಖನಗಳನ್ನು ಪ್ರಕಟಿಸಿದ್ದಾರೆ. ಚಾರಿತ್ರಿಕ ರಾಜಮನೆಗಳ ಕಾಲದ ನೀರಾವರಿ ಕುರಿತು ಬಿಡಿ ಲೇಖನಗಳೂ ಪ್ರಕಟವಾಗಿವೆ. ವಾಸುದೇವನ್ ಅವರು ಹಂಪಿಯ ಸುತ್ತ ಮುತ್ತಲಿನ ಕೆರೆಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಹಂಪಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗ ಚರಿತ್ರೆ ಸಂಪುಟಗಳು ಅಧ್ಯಯನದ ದೃಷ್ಟಿಯಿಂದ ಮಹತ್ವ ಆಕರಗಳನ್ನು ಒದಗಿಸಿದೆ. ಈ ಗ್ರಂಥದಲ್ಲಿನ ಲೇಖನಗಳು ಇಂಥ ಸಂಶೋಧನೆಗಳಿಗೆ ಹೊಸ ಸೇರ್ಪಡೆಗಳು ಹಾಗೂ ಆದಷ್ಟೂ ಹೊಸ ಮಾಹಿತಿಗಳನ್ನು ಉದ್ದೇಶವಾಗಿಟ್ಟುಕೊಂಡು ಇವುಗಳನ್ನು ಆಯೋಜಿಸಲಾಗಿದೆ. ಈ ಲೇಖನಗಳಿಗೆಲ್ಲ ಪ್ರಾಸ್ತಾವಿಕವಾಗಿ ಜಿ.ಎಸ್. ದೀಕ್ಷಿತರ 'ಕೆರೆಗಳ ಚಾರಿತ್ರಿಕ ಅಂಶಗಳು' ಲೇಖನ ಕೂಡ ಇಲ್ಲಿದೆ. ಎಸ್.ಎಂ.ಬಡಿಗೇರ ಅವರ ಗದಗ **ಜಿಲ್ಲೆಯ ಕೆರೆ–ಬಾವಿಗಳ ಚಾರಿತ್ರಿಕ ಅಧ್ಯಯನ**, ಪದ್ಮ ಬಿ.ಎಸ್ ಅವರ **ತುರುವೆ ತಾಲೂಕಿನ ಸಾಂಸ್ಕೃತಿಕ ಅಧ್ಯಯನ**, ಧನಂಜಯ ಸಿ ಅವರ ಪಾವಗಡ ತಾಲೂಕಿನ ಕೆರೆಗಳ ಅಧ್ಯಯನ, ಮುಂದಿನ ಹಂತವಾಗಿ ಬಾಗಲಕೋಟ ಜಿಲ್ಲೆಯ ಕೆರೆಗಳ ಚಾರಿತ್ರಿಕ ಅಧ್ಯಯನವನ್ನು ವಿವಿಧ ಆಕರಗಳೊಂದಿಗೆ ಬಹು ಶಿಸ್ತಿನ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಆಕರಗಳು :

ಪ್ರಾಚ್ಯ ಸಂಶೋಧನಶಾಸ್ತ್ರ ಪ್ರಾಗೈತಿಹಾಸಿಕ ಸಂಶೋಧನೆಗಳು ಹಾಗೂ ಉತ್ಖನನಗಳು, ಶಾಸನಗಳು, ಸಾಹಿತ್ಯ ಕೃತಿಗಳು, ವಿದೇಶಿ ಪ್ರವಾಸಿಗಳ ಬರಹಗಳು ಹಾಗೂ ಸರ್ಕಾರಿ ಅಥವಾ ಪ್ರಭುತ್ವದ ದಾಖಲೆಗಳು– ಇವು ಕರ್ನಾಟಕದಲ್ಲಿನ ಕೆರೆಗಳ ಐತಿಹಾಸಿಕ ಆಕರಗಳಾಗಿವೆ. ಇತಿಹಾಸ ಪೂರ್ವಯುಗದಲ್ಲಿ ದಕ್ಷಿಣ ಭಾರತದಲ್ಲಿ ಜಲಾಶಯಗಳನ್ನು ಕಟ್ಟಿದವರಲ್ಲಿ ತಾಮ್ರಯುಗ ಹಾಗೂ ಬೃಹತ್ ಶಿಲಾಯುಗದ ಜನರೇ ಮೊಟ್ಟಮೊದಲಿಗರು ಎನ್ನುವುದನ್ನು ಸಿದ್ಧಮಾಡಿ ತೋರಿಸಿವೆ. ಪ್ರಾಗೈತಿಹಾಸಿಕ ಸಂಶೋಧನೆ ಹಾಗೂ ಉತ್ಖನನಗಳಿಂದ ಪುಣೆಗೆ ಹತ್ತಿರದ ಇನಾಂಗಾಂವ್ ನಲ್ಲಿ ತಾಮ್ರಯುಗದ ಜನ ಕಟ್ಟಿದ ಜಲಾಶಯ ಪತ್ತೆಯಾಗಿದೆ. ಅವರಾದ ಮೇಲೆ ಬೃಹತ್ ಶಿಲಾಯುಗದ ಜನ ಬೆಟ್ಟಗಳ ಬಳಿ ಇದ್ದರು. ಬೆಟ್ಟಗಳ ಇಳಿಜಾರಿನಿಂದ ಇಳಿದು ಬರುತ್ತಿದ್ದ ಮಳೆ ನೀರನ್ನು ಜಲಾಶಯಗಳಲ್ಲಿ ಸಂಗ್ರಹಿಸುತ್ತಿದ್ದರು. ಬೃಹತ್ ಶಿಲಾಯುಗದ ಜನ ದಕ್ಷಿಣ ಭಾರತವನ್ನು ಆಕ್ರಮಿಸಿಕೊಳ್ಳಲು ಬಂದುದು ಕ್ರಿ.ಪೂ. ೧೦೦೦ದ ತರುಣದಲ್ಲಿ. ಆಂಧ್ರ, ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಈಗ ಕಾಣಸಿಗುವ ಅನೇಕ ಕೊಳಗಳು ಅವರ ರಚನೆಯೆ ಆಗಿದ್ದುದು ಸಾಧ್ಯ.

ಶಾಸನಗಳು :

ಸಾವಿರಗಟ್ಟಲೆ ಸಿಗುವ ಶಾಸನಗಳು ಕ್ರಿ.ಪೂ.೩೦೦ ರಿಂದ ಕ್ರಿ.ಶ.೧೮೦೦ರವರೆಗೆ ಅಸಂಖ್ಯಾತ ಕೆರೆಗಳು ಇದ್ದುದರ ಬಗ್ಗೆ ಬೆಳಕು ಚೆಲ್ಲುತ್ತದೆ. ನಮ್ಮ ಕೆರೆಗಳ ಇತಿಹಾಸದ ಪುನರ್ ರಚನೆಗೆ ಶಾಸನಗಳು ಎಷ್ಟು ಉಪಯುಕ್ತ ಎನ್ನುವುದನ್ನು ಮುಂದೆ ಕೊಡಲಾದ ಕೆಲವು ಉದಾಹರಣೆಗಳಿಂದ ಸುಲಭವಾಗಿ ಗಮನಿಸಬಹುದು. ಕೆಲವು ಶಾಸನಗಳು ದೊರೆತಿರುವುದು ಕರ್ನಾಟಕದ ಹೊರಗೆ ಆದರೂ ಅವುಗಳನ್ನು ನಮ್ಮ ಕೆಲಸದಲ್ಲಿ ಬಳಸಿಕೊಳ್ಳಲಾಗಿದೆ. ಏಕೆಂದರೆ ಅವು ನಮ್ಮ ರಾಜ್ಯಕ್ಕೆ ಅಪ್ರತ್ಯಕ್ಷವಾಗಿ ಸಂಬಂಧಿಸಿವೆ. ಉದಾಹರಣೆಗೆ ಕ್ರಿ.ಶ.೧೫೦ ರಿಂದ ರುದ್ರದಾಮನನ ಜುನಾಘಡ ಶಾಸನ ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದ ಜಲಾಶಯವೊಂದರ ಇತಿಹಾಸದ ಬಗ್ಗೆ ಪೂರ್ಣ ವಿವರಗಳನ್ನು ಕೊಡುತ್ತದೆ. ಅದು ಭಾರತೀಯ ಇತಿಹಾಸದ ಅತಿ ಪ್ರಾಚೀನ ಶಾಸನ. ಚಂಡಮಾರುತವೊಂದು ಹೇಗೆ ಒಂದು ಜಲಾಶಯವನ್ನು ನಾಶಮಾಡಿತು ಎಂಬುದು ಆ ಶಾಸನದ ಚಿತ್ರಣ. ಅತ್ಯಂತ ಶ್ರೇಷ್ಠವಾದದು. ಆ ಜಲಾಶಯವನ್ನು ಮೊದಲು ಕಟ್ಟಿದ್ದು ಮೌರ್ಯರು, ಸುಮಾರು ಕ್ರಿ.ಪೂ.೩೨೦ರಲ್ಲಿ ಅವರು ಮಧ್ಯ ಕರ್ನಾಟಕವನ್ನು ಒಂದು ಶತಮಾನಕ್ಕೂ ಹೆಚ್ಚು ಕಾಲ ಆಳಿದರು. ಜಲಾಶಯಗಳ ನಿರ್ಮಾಣ ಹಾಗೂ ಸಂರಕ್ಷಣೆ ಬಗೆಗಿನ ತಮ್ಮ ತಿಳುವಳಿಕೆಯನ್ನು ಕರ್ನಾಟಕ ಜನ ಮೌರ್ಯರಿಂದ ಕಲಿತಿರುವ ಅಥವಾ ಉತ್ತಮಪಡಿಸಿಕೊಂಡಿರುವ ಸಾಧ್ಯತೆಯಿದೆ.

ಕೆರೆಯನ್ನು ನಿರ್ಮಿಸುವವರಿಗೆ ಕೈಪಿಡಿಯಂತೆ ಇರುವ ಏಕೈಕ ಶಾಸನ ಆಂಧ್ರಪ್ರದೇಶದ ಕಡಪಾ ಜಿಲ್ಲೆಯಲ್ಲಿರುವ ಕ್ರಿ.ಶ.೧೩೬೯ರ ಪೋರುಮಾಮಿಲ್ಲ ಶಾಸನ. ಆ ಕೆರೆ ನಿರ್ಮಿತವಾದದ್ದು ವಿಜಯನಗರದ ಎರಡನೇ ದೊರೆ ಬುಕ್ಕನ ಆಳ್ವಿಕೆಯಲ್ಲಿ. ಆತನ ಉತ್ತರಾಧಿಕಾರಿಗಳು ತಮ್ಮ ರಾಜ್ಯದ ಕರ್ನಾಟಕ ಭಾಗದಲ್ಲಿ ಕೆರೆ ಕಟ್ಟಲು ಇದೇ ಸೂತ್ರಗಳನ್ನೇ ಅನುಸರಿಸಿದರು. ಅಂತೆಯೇ ಈ ಶಾಸನ ದಕ್ಷಿಣ ಭಾರತದ ಇತರ ಪ್ರದೇಶಗಳ ನೀರಾವರಿ ಕುರಿತು ಎಷ್ಟು ಪ್ರಸ್ತುತವೋ ನಮ್ಮ ಅಧ್ಯಯನಕ್ಕೂ ಅಷ್ಟೇ ಪ್ರಸ್ತುತ.

ಕರ್ನಾಟಕದ ಒಳಗಿನ ಶಾಸನಗಳಿಗೆ ಬಂದರೆ ಬನವಾಸಿ, ಚಂದ್ರವಳ್ಳಿ ಮತ್ತು ತಾಳಗುಂದ ಐಹೊಳೆ, ಸೂಳಿಭಾವಿ, ಕೇಸರಬಾವಿ, ಶಿರೂರ, ಗದ್ದನಕೇರಿ, ಕೆಲವಡಿಗಳಲ್ಲಿ ಸಿಕ್ಕಿರುವುದು. ಈ ರಾಜ್ಯದ ಇತಿಹಾಸದಲ್ಲಿ ಜಲಾಶಯಗಳ ಪ್ರಾಚೀನತೆಯನ್ನು ಗೊತ್ತು ಮಾಡಲು ಇವು ಉಪಯುಕ್ತವಾಗಿವೆ. ಮುನಿರಾಬಾದಿನ ಒಂದು ಶಾಸನ, ಹೊಸಪೇಟೆಯ ಬಳಿ ತುಂಗಭದ್ರಾ ನದಿಯಿಂದ ಹೊರಟ ನಾಲೆಗಳನ್ನು ಕಾವ್ಯಮಯವಾಗಿ ವರ್ಣಿಸುತ್ತದೆ. ಕೆಳನಾಲೆ ಮೇಲು ನಾಲೆಗಳನ್ನು ಪ್ರಸ್ತಾಪಿಸುತ್ತದೆ. ಕೋಲಾರದ ಬಳಿಯ ಬೇತಮಂಗಲದ ಎರಡು ಶಾಸನಗಳು, ಸಾವಿರ ವರ್ಷಕ್ಕೂ ಹಿಂದಿನಿಂದ ಅಲ್ಲಿ ಇರುವ ಪ್ರಖ್ಯಾತ ಕೆರೆಯ ಚರಿತ್ರೆಯನ್ನು ಕೊಡುತ್ತವೆ. ಹೊಳೆನರಸೀಪೂರದ ಕ್ರಿ.ಶ.೧೩೧೦ರ ಒಂದು ಶಾಸನವು ಒಂದು ಕೆರೆಯನ್ನು ಕಟ್ಟಲು ಆದ ಒಟ್ಟು ವೆಚ್ಚವನ್ನು ಸೂಚಿಸುತ್ತದೆ. ಬೋಳಕ್ಯಾತನಹಳ್ಳಿಯ ಒಂದು ಶಾಸನ ಕೆರೆಯ ಹೂಳು ತೆಗೆಯಲು ಏನು ಮಾಡಬೇಕು ಎಂಬುದನ್ನು ತಿಳಿಸುತ್ತದೆ. ಕೋಲಾರ ಜಿಲ್ಲೆಯ ರಾಜಗುಂಡ್ಲಹಳ್ಳಿ ಶಾಸನ ಕೆರೆ ನಿರ್ಮಾಣದಲ್ಲಿ ಅನುಸರಿಸಿದ ತಂತ್ರವನ್ನು ಬಳಸಿದ ವಸ್ತುಗಳನ್ನು ವಿವರಿಸುತ್ತದೆ. ಲಕ್ಷ್ಮೀಧರಾಮಾತ್ಯನ ಹಂಪಿ ಶಾಸನ, ತಾಯಿ ತನಗೆ ಹಾಲುಡಿಸುವಾಗ ಹಾಡುತ್ತಿದ್ದ ಜೋಗುಳಗಳಿಂದ ಆತನು ಕೆರೆ ಕಟ್ಟಿಸಲು, ಭಾವಿ ತೋಡಿಸಲು ಹೇಗೆ ಪ್ರೇರಣೆ ಹೊಂದಿದ ಎಂಬುದನ್ನು ವರ್ಣಿಸುತ್ತದೆ. ತಿಮ್ಮಾಲಾಪುರ ಕೆರೆಯ ಅಂಗಳದಲ್ಲಿ ಸಿಕ್ಕಿದ ಒಂದು ಶಾಸನದಲ್ಲಿ ಆ ಕೆರೆಯಲ್ಲಿ ನೀರು ಒಂದು ಆಳ ಪ್ರಮಾಣದಷ್ಟು ಇರಬೇಕು ಎಂದು ಹೇಳಿದೆ. ಪ್ರಾಯಶ: ನೀರು ಆ ಮಿತಿಗೆ ಮೀರಿದರೆ, ಆ ಕೆರೆಗೆ ಸಂಬಂಧಪಟ್ಟ ಇತರ ಕೆರೆಗಳಿಗೆ ಅಪಾಯ ಆದೀತು ಎಂದೂ ಅಥವಾ ಆ ಕೆರೆಗೆ ಆಪಾಯ ಆಗಬಹುದು ಎಂದು ಇರಬೇಕು. ಈ ರೀತಿ ಕರ್ನಾಟಕದಲ್ಲಿ ದೊರೆತಿರುವ ನೂರಾರು ಶಾಸನಗಳಲ್ಲಿ ಇರುವ ವಿವರಗಳನ್ನು ಜೋಡಿಸಿದರೆ, ಕೆರೆಗಳ ರಚನೆ ಹಾಗೂ ಸಂರಕ್ಷಣೆಗೆ ಸಂಬಂಧಪಟ್ಟ ಎಲ್ಲವೂ ತಿಳಿದು ಬರುತ್ತದೆ. ಕೆರೆಗಳ ವಿವಿಧ ಅಂಗಗಳಾದ ಏರಿ, ಅದರ ಆಕಾರ, ಕಟ್ಟಡದಲ್ಲಿ ಬಳಸಲಾದ ಸಾಮಗ್ರಿ, ತೂಬು, ಕೋಡಿ, ಕೆರೆಯಲ್ಲಿ ನಿಲ್ಲಬೇಕಾದ ನೀರಿನ ಆಳ, ನಿರ್ಮಾಣದ ಉದ್ದೇಶ, ನಿರ್ಮಾಣಕ್ಕೆ ಬೇಕಾದ ಹಣಕಾಸು, ಸಂರಕ್ಷಣೆಗೆ ಬೇಕಾದ ಅಗತ್ಯಗಳು ಎಲ್ಲವೂ ತಿಳಿದುಬರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಬಹುಪಾಲು ಶಾಸನಗಳು

ಕೆರೆ ನಿರ್ಮಾಣ ಅಥವಾ ಜೀರ್ಣೋದ್ಧಾರದ ನಿಖರವಾದ ದಿನವನ್ನು ಸೂಚಿಸುತ್ತವೆ.

ಬಾಗಲಕೋಟೆ ಜಿಲ್ಲೆಯ ಕೆರೆಗಳ ಮಾಹಿತಿ ನೀಡುವ ಐತಿಹಾಸಿಕ ಶಾಸನಗಳಾದ ಬಾಗಲಕೋಟ ಜಿಲ್ಲೆಯ ಶಿರೂರ ಒಂದು ಶಾಸನದಲ್ಲಿ ಕೆರೆ ಕಟ್ಟಿಸಿದವರು ಮತ್ತು ಅವರಿಗೆ 'ಮತ್ತರು' ಭೂಮಿ ನೀಡಿದ ಉಲ್ಲೇಖವಿದೆ. ಅದೇ ರೀತಿ ಗದ್ದನಕೇರಿ ಹಾಗೂ ತುಳಸಿಗೇರಿಯ ಶಾಸನಗಳು ಗ್ರಾಮದ ಕೆರೆ ಚಿತ್ರಣ ನೀಡುತ್ತವೆ. ಬಾದಾಮಿ ತಾಲೂಕಿನ ಕೆಲವಡಿ ಶಾಸನ, ಹುನಗುಂದ ತಾಲೂಕಿನ ನಂದವಾಡಗಿ, ಕೇಸರಭಾವಿ, ಸೂಳಿಭಾವಿ, ಮುಧೋಳ ತಾಲೂಕಿನ ಮಂಟೂರ ಶಾಸನ ಅದೇ ರೀತಿ ಐತಿಹಾಸಿಕ ಸಾಮ್ರಾಜ್ಯವಾದ ಬಾದಾಮಿ ಚಾಲುಕ್ಯರು ತಮ್ಮ ಸಾಮ್ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ಅಂದರೆ ಗಡಿಭಾಗಗಳಲ್ಲಿ ಕೆರೆಗಳು, ತಟಾಕ, ಸರೋವರಗಳನ್ನು ನಿರ್ಮಾಣ ಮಾಡಿದರ ಬಗ್ಗೆ ಶಾಸನಗಳು ಮಾಹಿತಿ ನೀಡುತ್ತವೆ. ಬಾದಾಮಿ ಚಾಲುಕ್ಯರು ತಮ್ಮ ಗಡಿಭಾಗದ ಸುತ್ತಲೂ ಕೆರೆಗಳ ನಿರ್ಮಾಣ ಮಾಡಿದರ ಬಗ್ಗೆ ಐಹೊಳೆ ಶಾಸನದಲ್ಲಿ ಉಲ್ಲೇಖವಿದೆ. ಕಲ್ಯಾಣಿ ಚಾಲುಕ್ಯರ ಕಾಲದಿಂದ ಕೆರೆಗಳ ನಿರ್ಮಾಣ ಕಾರ್ಯವು ಹೊಸದೊಂದು ಚೈತನ್ಯವೇ ಪಡೆದುಕೊಂಡಿತು. ಈ ಕಾಲವನ್ನು ಕೆರೆಗಳ ಸುವರ್ಣಯುಗವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೧೦]

ಸಾಹಿತ್ಯ ಮೂಲಗಳು :

ಸಾಹಿತ್ಯ ಮೂಲಗಳ ಬಗ್ಗೆ ನೋಡುವುದಾದರೆ, ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತದಲ್ಲಿ ವೃಕ್ಷಾಯುರ್ವೇದ ಎಂಬ ಹೆಸರಿನ ಒಂದು ಗ್ರಂಥವೇ ಇತ್ತು. ಸಸ್ಯಗಳು ಅವುಗಳ ರೋಗ ಹಾಗೂ ಪರಿಹಾರಗಳಿಗೆ ಸಂಬಂಧಿಸಿದ್ದು ಅದು ಜಲಾಶಯಗಳನ್ನು ಪ್ರಸ್ತಾಪಿಸುತ್ತದೆ. ಈ ಪಂಥವನ್ನು ಒಳಗೊಂಡ ಒಂದು ಅತ್ಯಂತ ಪ್ರಮುಖ ಕೃತಿ ಪರಾಶರನ ಕೃಷಿಸೂಕ್ತಿ. ಅದರ ಕಾಲ ಕ್ರಿ.ಶ.೧೦೦೦ ಎನ್ನಲಾಗುತ್ತದೆ. ಲಾಲಂಜಿ ಗೋಪಾಲ್, ಕನ್ನಡದ ಲೋಕೋಪಕಾರ (ಕ್ರೀ.ಶ.೧೦೨೫) ಹಾಗೂ 'ರಟ್ಟಮತ' (ಕ್ರಿ.ಶ.೧೩೦೦) ಸಹ ಅದೇ ಪಂಥದ ವಿಷಯಗಳನ್ನು ಒಳಗೊಂಡಿವೆ.

ಪೊರುಮಾಮಿಳ ಕೆರೆ ಶಾಸನದಲ್ಲಿ ಹಾಗೂ ಕೃಷಿಸೂಕ್ತಿಯಲ್ಲಿ ಇರುವ ಸೂಚನೆಗಳು ಪರಸ್ಪರ ಸಮರ್ಥಕ ಹಾಗೂ ಪರಸ್ಪರ ಪೂರಕವಾಗಿವೆ. ಕೆರೆ ನಿರ್ಮಾಣದ ಬಗ್ಗೆ ನಮ್ಮ ಹಿರಿಯರು ಪಡೆದಿದ್ದ ಜ್ಞಾನ ಅವರೆಡರಲ್ಲಿ ತುಂಬಿದೆ.

ನಮ್ಮ ವಿಷಯದ ಮೇಲೆ ಕಚಿತ್ತಾಗಿ ಬೆಳಕು ಚೆಲ್ಲುವ, ಪ್ರಾಚೀನ ಭಾರತೀಯ ಸಾಹಿತ್ಯದ ಇನ್ನಿತರ ಪ್ರಕಾರಗಳೂ ಉಂಟು. ಉದಾಹರಣೆಗೆ ಕೌಟಿಲ್ಯನ ಅರ್ಥಶಾಸ್ತ್ರ (ಕ್ರಿ.ಪೂ.೩೦೦) ಹೇಳುತ್ತದೆ, ನಿರಂತರವಾದ ಅಥವಾ ಇತರ ಯಾವುದಾದರೂ ಮೂಲಗಳಿಂದ ನೀರು ತುಂಬುವಂಥ ಆಣೆಕಟ್ಟು ಅಥವಾ ಜಲಾಶಯಗಳನ್ನು ದೊರೆ ಕಟ್ಟಿಸಬೇಕು, ಇಲ್ಲವೆ ಯಾರು ತಾವಾಗಿಯೆ ಜಲಾಶಯಗಳನ್ನು ಕಟ್ಟುತ್ತಾರೆಯೋ ಅವರಿಗೆ

ಬೇಕಾದ ಸ್ಥಳ, ರಸ್ತೆ, ಮರಮುಟ್ಟು ಇತ್ಯಾದಿ ಆಗತ್ಯಗಳನ್ನು ಒದಗಿಸಬೇಕು. ಕೌಟಿಲ್ಯ ಮಳೆಯ ಮಾಪಕವನ್ನು ತಿಳಿದಿದ್ದ ಎನ್ನುವುದು ಗಮನಾರ್ಹ. ನಿರ್ದಿಷ್ಟ ಅಳತೆಗಳ ವಿಶೇಷ ಕುಂಡವನ್ನು ನಿರ್ಮಿಸಬೇಕು, ಅದರ ನಡುವೆ ಆಕಾಶದತ್ತ ಬಾಯಿ ಉಳ್ಳಂತೆ ಒಂದು ಮೊಳ ಅಳತೆಯ ರಂಧ್ರ ಇರಬೇಕು, ಅದೇ ಮಳೆ ನೀರಿನ ಮಾಪಕ ಅಥವಾ ವರ್ಷಮಾನ ಎಂದು ಬರೆಯುತ್ತಾನೆ ಕೌಟಿಲ್ಯ.

ಇಡೀ ಸಮಾಜದ ಅಭ್ಯುದಯಕ್ಕೆ ಮೂಲಭೂತ ಪ್ರಾಮುಖ್ಯತೆ ಉಳ್ಳದ್ದು ಕೆರೆಯ ನಿರ್ಮಾಣ ಎನ್ನುವದು ಮಿತಾಕ್ಷರಕಾರನಾದ ವಿಜ್ಞಾನೇಶ್ವರ (ಕ್ರಿ.ಶ.೧೧೦೦) ನೆಂದು ನಿಚ್ಚಳವಾಗಿ ತಿಳಿದು ಬರುತ್ತದೆ. ಆತ ಹೇಳುತ್ತಾನೆ " ಒಂದು ಹೊಳೆಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಿಸುವುದರಿಂದ ಒಬ್ಬನ ಭೂಮಿ ನಾಶವಾದರೂ ಸರಿಯೆ, ಅದು ಉಂಟುಮಾಡುವ ನಾಶ ಅಲ್ಪವಾಗಿದ್ದು ಅನೇಕರಿಗೆ ಲಾಭದಾಯಕವಾಗುವಂತಿದ್ದರೆ ಆ ಭೂಮಿಯ ಒಡೆಯ ನಿರ್ಮಾಣವನ್ನು ನಿಲ್ಲಿಸಕೂಡದು". ಈ ರೀತಿ ಕೃಷಿ ಹಾಗೂ ಅರ್ಥಶಾಸ್ತ್ರಕಾರರು ಹಾಗೂ ನ್ಯಾಯಶಾಸ್ತ್ರಕಾರರು ನೀರಾವರಿಯ ಪ್ರಾಮುಖ್ಯತೆ ಅರಿತುಕೊಂಡು ಜನತೆಗೆ ತಿಳಿಸಿದರು. ನಾಗವರ್ಮನ (೧೨ ನೇ ಶತಮಾನ) 'ಅಭಿದಾನ ವಸ್ತುಕೋಶ' ಹಾಗೂ ಮಂಗರಾಜನ (೧೫ ನೇ ಶತಮಾನ ಪೂರ್ವಾರ್ಧ) 'ಅಭಿನವಾಭಿದಾನ' ಎಂಬ ಎರಡು ಕನ್ನಡ ವಸ್ತು ಕೋಶಗಳಲ್ಲಿ ಜಲ ಸಂಗ್ರಹಣೆಯ ನಾನಾರೀತಿಗಳನ್ನು ವರ್ಣಿಸಲು ಬಳಸುವ ಶಬ್ದಗಳನ್ನು ಒಳಗೊಂಡ ಪದ್ಯಗಳಿವೆ. ಇವು ಸಮಕಾಲೀನ ಶಾಸನಗಳಲ್ಲಿ ಬಳಕೆಯಾಗಿರುವ ಶಬ್ದಗಳ ಅರ್ಥವನ್ನೆ ವಿವರಿಸುತ್ತವೆ. ಆದ್ದರಿಂದ ಇವು ನಮ್ಮ ಗ್ರಹಿಕೆಗೆ ಅಮೂಲ್ಯ ಸಹಾಯಕವಾದಂಥವು. ಕೃಷ್ಣದೇವರಾಯನ ತೆಲಗು ಕೃತಿ 'ಅಮುಕ್ತಮಾಲ್ಯ'ದ ನೀರಾವರಿಯ ಪ್ರಾಮುಖ್ಯತೆಯನ್ನು ಈ ರೀತಿ ಒತ್ತಿ ಹೇಳುತ್ತದೆ. "ರಾಜ್ಯ ಕಿರಿದಾಗಿದ್ದಲ್ಲಿ ಅದರ ಧರ್ಮ ಹಾಗೂ ಅರ್ಥ ಎರಡೂ ಹೆಚ್ಚುವುದು, ಕೆರೆಗಳನ್ನು ನೀರಾವರಿ ಕಾಲುವೆಗಳನ್ನು ನಿರ್ಮಿಸಿದಾಗ ಮಾತ್ರ" ಎಂದು ಹೇಳಿದ್ದಾನೆ.

ಪೌರಾಣಿಕ ಸಾಹಿತ್ಯ :

ಈ ಪೌರಾಣಿಕ ಸಾಹಿತ್ಯವು ಜಿಲ್ಲೆಯ ಹಲವಾರು ಕೆರೆಗಳ ಮಾಹಿತಿ ನೀಡುತ್ತದೆ. ಇದರಲ್ಲಿ ಜಾನಪದ ಸಾಹಿತ್ಯವಾದ ಹೋಳಿಹುಣ್ಣಿಮೆ ಹಾಡುಗಳಲ್ಲಿ ಶಿರೂರಿನ ಕೆರೆಗಳ ಬಗ್ಗೆ ತಿಮ್ಮಸಾಗರ ಕೆರೆ, ನೀರಬೂದಿಹಾಳ, ಕೆಂಧೂರ, ಬಾದಾಮಿ ಅಗಸ್ತ್ಯತೀರ್ಥ, ರಾಮಾಯಣದ ಸಾಹಿತ್ಯದ ಬಗ್ಗೆ ಉಲ್ಲೇಖಿಸಿದ ಬಿಲ್‌ಕೆರೂರ (ಬಿಲ್‌ಕೇರಿ), ಭಗವತಿ, ಬೆನಕಟ್ಟಿ ಕೆರೆಗಳು ಶ್ರೀರಾಮನ ಬಿಲ್ಲಿನಂತೆ ಕೆರೆಗಳು ಬಿಲ್ಲಿನಿಂದಲೇ ರಾಮ ನೀರನ್ನು ತೆಗೆದಿದ್ದಾನೆಂದು ತಿಳಿದುಬರುತ್ತದೆ.

ವಿದೇಶಿ ಪ್ರವಾಸಿಗರು :

ಪ್ರಾಚೀನ ಹಾಗೂ ಮಧ್ಯಯುಗದಲ್ಲಿ ಬಹುಸಂಖ್ಯೆ ವಿದೇಶಿ ಪ್ರವಾಸಿಗರು ದಕ್ಷಿಣ ಭಾರತಕ್ಕೂ, ಕರ್ನಾಟಕಕ್ಕೂ ಬಂದಿದ್ದರು. ಆದರೂ ನೀರಾವರಿಯ ಮೇಲೆ ಬರೆದಿರುವವರು ಇಬ್ಬರು ಮಾತ್ರ. ಅವರ ಪೈಕಿ ಡಾಮಿಂಗೊ ಪಾಯೋಸ್ ೧೫೨೦ ರಲ್ಲಿ ಬರೆದ. ಫರ್ನಾವ್ ನ್ಯೂನಿಜ್ ೧೫೩೫ರಲ್ಲಿ ವಿಜಯ ನಗರದ ಚರಿತ್ರೆಯನ್ನು ರಚಿಸಿದ. ಇಬ್ಬರೂ ಕೃಷ್ಣದೇವರಾಯ ತನ್ನ ಹೊಸ ರಾಜಧಾನಿಯಲ್ಲಿ ಕೆರೆ ಕಟ್ಟಿಸಿದ್ದನ್ನು ವರ್ಣಿಸುತ್ತಾರೆ. ಅದರ ಈಗಿನ ಹೆಸರು 'ರಾಯರ ಕೆರೆ' ಎಂದೆ. ಆ ವರ್ಣನೆ ಇಲ್ಲದೆ ಹೋಗಿದ್ದರೆ ಕೆರೆ ಕಟ್ಟಿಸಲು ಕೃಷ್ಣದೇವರಾಯ ಮಾಡಿದ ಅಪಾರ ಪ್ರಯತ್ನಗಳು ನಮಗೆ ತಿಳಿಯುತ್ತಲೇ ಇರಲಿಲ್ಲ. ಅದರಂತೆ ಬಾಗಲಕೋಟ ಜಿಲ್ಲೆಯ ಕೆರೆಗಳ ಬಗ್ಗೆ ಯಾವುದೇ ವಿದೇಶಿ ಪ್ರವಾಸಿಗರು ಉಲ್ಲೇಖ ದೊರೆಯುವುದಿಲ್ಲ. ಇದರ ಬಗ್ಗೆ ಹೆಚ್ಚು ಸಂಶೋಧನೆಗಳು ನಡೆಯಬೇಕಾಗಿರುವುದು ಅನಿವಾರ್ಯವಿದೆ.

ಸರ್ಕಾರಿ ದಾಖಲೆಗಳು :

ಪ್ರಾಚೀನ ಹಾಗೂ ಮಧ್ಯಕಾಲೀನ ಯುಗದ ಕೆರೆಗಳ ಅಧ್ಯಯನಕ್ಕೆ ಶಾಸನಗಳು ನಮಗೆ ಮುಖ್ಯ ಆಧಾರ ಮೂಲಗಳಾದರೆ, ಆಧುನಿಕ ಕಾಲಕ್ಕೆ ಸರ್ಕಾರಿ ದಾಖಲೆಗಳು ಅವುಗಳ ಸ್ಥಾನವನ್ನು ಪಡೆಯುತ್ತವೆ. ಆ ಪೈಕಿ ಅತ್ಯಂತ ಅಮೂಲ್ಯವಾದದು ಬುಕಾನನ್ನನ ದಿನಚರಿ. ಮದರಾಸಿನಿಂದ ಮೈಸೂರು ಕನ್ನಡ ಜಿಲ್ಲೆಗಳು ಹಾಗೂ ಮಲಬಾರಿನಲ್ಲಿ ಕೃಷಿ ನೀರಾವರಿಗಳ ಸ್ಥಿತಿಗತಿಗಳ ಮತ್ತು ಅಲ್ಲಿನ ಪುರಾತನ ವಸ್ತುಗಳ ಬಗ್ಗೆ ಆಗಿನ ಭಾರತದ ಗವರ್ನರ್ ಜನರಲ್ ಮಾರ್ಕ್ವಿಸ್ ಆಫ್ ವೆಲ್‌ಸ್ಲಿಗೆ ಒಪ್ಪಿಸಿದ ವರದಿಯಿದು. ಬುಕಾನನ್ನನ ಮೈಸೂರು, ಕನ್ನಡ ಜಿಲ್ಲೆಗಳ ಪ್ರವಾಸ ನಡೆದದ್ದು ಅವನ ದಿನಚರಿ ಆಗ ಇದ್ದ ಕೆರೆಗಳು, ಅವುಗಳ ಸಂರಕ್ಷಣೆ, ಕೃಷಿ ಮತ್ತು ನೀರಾವರಿ ಪದ್ಧತಿಗಳನ್ನು ಕುರಿತು ತುಂಬ ಬೆಲೆಯುಳ್ಳ ಮಾಹಿತಿಯನ್ನು ಒಳಗೊಂಡಿದೆ. ಇತರೆ ವಿವರಗಳ ಜೊತೆಗೆ, ಮೈಸೂರಿನಲ್ಲಿ ಬೇಸಾಯದಲ್ಲಿದ್ದ ಹಾಗೂ ನೀರಾವರಿಗೆ ಒಳಪಟ್ಟಿದ್ದ ಭೂ ವಿಸ್ತಾರವನ್ನು ತಿಳಿಸುತ್ತದೆ, ಆ ವರದಿ. ಕೆರೆಗಳ ಸಂಖ್ಯೆ, ನಿರ್ಮಾಣ ಕ್ರಮದ ಕೆಲವು ವಿವರಗಳು, ಆಗ ಇದ್ದ ಕೆರೆಗಳ ಸ್ಥಿತಿ, ಅವುಗಳಿಂದ ಆಗುತ್ತಿದ್ದ ನೀರಾವರಿ ಇವುಗಳನ್ನು ಕುರಿತ ಮಾಹಿತಿಯ ಅತ್ಯಂತ ಅಮೂಲ್ಯ ಆಧಾರ, ಮೈಸೂರು ಮುಖ್ಯ ಇಂಜನೀಯರ್ ಆಗಿದ್ದ ಮೇಜರ್ ಸ್ಯಾಂಕಿಯ ಹೇಳಿಕೆ.

ಇತರ ಮಾಹಿತಿ ಮೂಲಗಳೆಂದರೆ ಮೈಸೂರು ರಾಜ್ಯದ ಬಿಜಾಪುರ ಜಿಲ್ಲಾ ಗೆಜೆಟಿಯರುಗಳು ಬಿಜಾಪುರ ಹಾಗೂ ಬಾಗಲಕೋಟ ಜಿಲ್ಲಾ ಗೆಜೆಟಿಯರ್ ಹಾಗೂ ಮುಂಬೈ ಮತ್ತು ಮದರಾಸು ಪ್ರಾಂತ್ಯದಲ್ಲಿ ಪ್ರಕಟವಾಗಿದ್ದ ಗೆಜೆಟಿಯರುಗಳು. ಅವುಗಳಲ್ಲಿ ಲೂಯಿ ರೈಸ್‌ನ ಮೈಸೂರು ಮತ್ತು ಕೊಡಗಿನ ಗೆಜೆಟಿಯರ್ ಅಮೋಘವಾದ ಮಾಹಿತಿಯ

ಮೂಲ. ಹತ್ತೊಂಭತ್ತನೆಯ ಶತಮಾನದಲ್ಲಿ ಕರ್ನಾಟಕದಲ್ಲಿನ ನೀರಾವರಿ ಸ್ಥಿತಿಯನ್ನು ಅರಿಯಲು ಗೆಜಿಟಿಯರುಗಳು ಸಪ್ರಮಾಣದ ಮೂಲಗಳಾಗಿವೆ.

ಮೈಸೂರು, ಮುಂಬೈ, ಮದರಾಸು ಮತ್ತು ಹೈದರಾಬಾದು ಸರ್ಕಾರಗಳ ಆಡಳಿತ ವರದಿಗಳು ಇನ್ನೊಂದು ಮುಖ್ಯ ಮೂಲ. ಮೈಸೂರಿಗೆ ಸಂಬಂಧಿಸಿದಂತೆ ೧೮೬೨ ರಿಂದ ಮೊದಲಾಗಿ ಈ ವರದಿಗಳು ಸಿಗುತ್ತವೆ. ಆದರೆ ಇತರ ಪ್ರದೇಶಗಳ ಬಗ್ಗೆ ಹಾಗೆ ಇಲ್ಲ. ಅಷ್ಟೇ ಪ್ರಮುಖವಾದುವೆಂದರೆ ಈ ಎಲ್ಲ ನಾಲ್ಕು ಸರ್ಕಾರಗಳು ಪ್ರಕಟಿಸಿದ ವಾರ್ಷಿಕ ಋತು ಹಾಗೂ ಬೆಳೆಯ ವರದಿಗಳು, ಜನಗಣತಿ ವರದಿಗಳು ಮತ್ತು ಸರ್ವೇಸೆಟಲ್‌ಮೆಂಟ್ ವರದಿಗಳು ಭಾರತೀಯ ಪುರಾತತ್ವ ಇಲಾಖೆಯ ವಾರ್ಷಿಕ ವರದಿ.

ಮೈಸೂರು ರೆವಿನ್ಯೂ ಕೈಪಿಡಿ, ಮೈಸೂರು ಕೆರೆಗಳ ರಿಜಿಸ್ಟರ ಪುಸ್ತಕಗಳು, ಮೈಸೂರು ಮುಂಬೈ ಹೈದರಾಬಾದುಗಳ ವಿವಿಧ ಕೆರೆಗಳ ಕಾನೂನುಗಳು, ನಿಯಮಗಳು, ಇವೆಲ್ಲ ಇನ್ನಿತರೆ ಮುಖ್ಯ ಆಧಾರ ಮೂಲಗಳು.

ಈ ವರೆಗೆ ನಾವು ಪರಿಶೀಲಿಸಿದ ಎಲ್ಲ ಬಗೆಯ ಮೂಲಗಳಲ್ಲಿ ಶಾಸನಗಳು ಹಾಗೂ ಸರ್ಕಾರಿ ದಾಖಲೆಗಳು ಮುಖ್ಯವಾದವು. ಶಾಸನಗಳು ಸಾವಿರಾರು ಸಂಖ್ಯೆಯಲ್ಲಿವೆ. ಅವುಗಳಿಂದ ನಮಗೆ ಬೇಕಾದ ವಿಷಯಗಳನ್ನು ಹೆಕ್ಕಿ ತೆಗೆದು ಜೋಡಿಸಿಕೊಳ್ಳಬೇಕು. ಸರ್ಕಾರಿ ದಾಖಲೆಗಳು ಸಾವಿರಾರು ಪುಟ ಇವೆ, ಮತ್ತು ಸುಲಭವಾಗಿ ಸಿಗುತ್ತವೆ. ಅವುಗಳಲ್ಲಿ ಬುಕಾನನ್ನನ ಪ್ರವಾಸ ಕಥನ, ಸ್ಯಾಂಕಿಯ ವರದಿಗಳು, ರೈಸನ್ ಗೆಜಿಟಿಯರ್, ನೀರಾವರಿ ಆಯೋಗದ ವರದಿ– ಇವು ಶಾಸನಗಳಲ್ಲಿ ಅಪೂರ್ಣವಾಗಿ ಅಥವಾ ತುಣುಕು ತುಣುಕಾಗಿ ಕಾಣಸಿಗುವ ಮಾಹಿತಿಯ ಮೇಲೆ ಬೆಳಕು ಚೆಲ್ಲುತ್ತವೆ.

ಬಾಗಲಕೋಟ ಜಿಲ್ಲೆಯ ಕೆರೆಗಳ ಅಧ್ಯಯನ ಎಂಬ ವಿಷಯವನ್ನು ಇಲ್ಲಿಯವರೆಗೂ ಜಿಲ್ಲಾ ಪರಿಸರ ಕೆರೆಗಳ ಅಧ್ಯಯನವು ಬೇರೆ ಬೇರೆ ದೃಷ್ಟಿಕೋನಗಳಿಂದ ನಡೆದಿದ್ದರೂ ನನ್ನ ಮಹಾಪ್ರಬಂಧದಲ್ಲಿ ಅದರ ಮುಂದುವರೆದ ಭಾಗವನ್ನು ಅಧ್ಯಯನಿಸಿದ್ದೇನೆ. ಈ ವಿಷಯದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನವನ್ನು ನೋಡಿದಾಗ ಪ್ರಮುಖವಾಗಿ ರಾಜರಾಮ ಹೆಗಡೆಯವರು ಬರೆದಿರುವ "ಕೆರೆ ನೀರಾವರಿ ನಿರ್ವಹಣೆಯ ಚಾರಿತ್ರಿಕ ಅಧ್ಯಯನ" ಇದಲ್ಲದೇ ಶ್ರೀ ಜಿ.ಎಎಸ್.ದೀಕ್ಷಿತರು ಬರೆದಿರುವ "ಕರ್ನಾಟಕದಲ್ಲಿ ಕೆರೆ ನೀರಾವರಿ" ಇದರ ಜೊತೆಗೆ ಉಮಾದೇವಿ ಹಂಚಿನಮನಿಯವರು ಜಿಲ್ಲೆಯ ಜಮಖಂಡಿ ಕೆರೆಗಳ ಮೇಲೆ "ಜಮಖಂಡಿ ಕೆರೆಗಳು" ಎಂಬ ವಿಷಯದ ಮೇಲೆ ಎಂಫಿಲ್ ಪದವಿಯನ್ನು ಪಡೆದಿದ್ದಾರೆ. ಇವಿಷ್ಟು ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳಾಗಿವೆ. ಇದರಲ್ಲಿ ಬಾಗಲಕೋಟೆಯ ಜಿಲ್ಲೆಯ ಕೆರೆಗಳ ಬಗ್ಗೆ ಸಮಗ್ರವಾದ ಅಧ್ಯಯನ ಇಲ್ಲಿಯವರೆಗೂ ನಡೆದು ಬಂದಿಲ್ಲ. ಇದರಲ್ಲಿ ಶ್ರೀಮತಿ ಉಮಾದೇವಿ ಹಂಚಿನಮನಿಯವರು ಜಮಖಂಡಿ

ತಾಲೂಕಿನ ಕೆರೆಗಳ ಕುರಿತು ಸೀಮಿತ ಅಧ್ಯಯನ ನಡೆಸಿದ್ದಾರೆ. ಇದುವರೆಗೂ ಸಮಗ್ರ ಬಾಗಲಕೋಟೆಯ ಜಿಲ್ಲೆಯ ಕೆರೆಗಳ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ನಾನು ನನ್ನ ಅಧ್ಯಯನದಲ್ಲಿ ಬಾಗಲಕೋಟ ಜಿಲ್ಲೆಯ ಪ್ರಮುಖ ೬೦ ಕೆರೆಗಳ ಅಧ್ಯಯನ ಮತ್ತು ಅದರ ಸಾಂಸ್ಕೃತಿಕ ಆಯಾಮಗಳ ಮೇಲೆ ಹೊಸ ಬೆಳಕನ್ನು ಚೆಲ್ಲುವ ಪ್ರಯತ್ನ ಮಾಡಿದ್ದೇನೆ.

೧.೬ ಸ್ವರೂಪ :

ಕರ್ನಾಟಕ ರಾಜ್ಯದ ಒಂದು ಜಿಲ್ಲೆ, ತಾಲ್ಲೂಕು ಮತ್ತು ಜಿಲ್ಲೆಯ ಆಡಳಿತದ ಕೇಂದ್ರ ಪಟ್ಟಣ. ರಾಜ್ಯದ ಉತ್ತರ ಭಾಗದಲ್ಲಿರುವ ಈ ಜಿಲ್ಲೆಯನ್ನು ಪೂರ್ವದಲ್ಲಿ ರಾಯಚೂರು, ವಾಯುವ್ಯ ಮತ್ತು ಪಶ್ಚಿಮದಲ್ಲಿ ಬೆಳಗಾವಿ, ಉತ್ತರದಲ್ಲಿ ಬಿಜಾಪುರ, ದಕ್ಷಿಣದಲ್ಲಿ ಗದಗ ಮತ್ತು ಕೊಪ್ಪಳ ಜಿಲ್ಲೆಗಳು ಸುತ್ತುವರೆದಿವೆ. ಸಮುದ್ರ ಮಟ್ಟದಿಂದ ೪೫೦ ಮೀ. ನಿಂದ ೮೦೦ ಮೀ. ಎತ್ತರದಲ್ಲಿರುವ ಈ ಜಿಲ್ಲೆ ೬ ತಾಲೂಕು, ೧೮ ಹೋಬಳಿಗಳು, ೬೦೮ ಗ್ರಾಮಗಳಿಂದ ಕೂಡಿದೆ. ಜಿಲ್ಲಾ ವಿಸ್ತೀರ್ಣ ೬,೫೯೪ ಚ.ಕಿ.ಮೀ.

ಬಾಗಲಕೋಟೆ ಹಿಂದೆ ಒಂದು ತಾಲೂಕಾಗಿದ್ದು ಬಿಜಾಪುರ ಜಿಲ್ಲೆಯ ಒಂದು ಭಾಗವಾಗಿತ್ತು. ಭಾರತದ ಸ್ವಾತಂತ್ರ್ಯೋತ್ಸವದ ಸುವರ್ಣ ಮಹೋತ್ಸವ ದಿನವಾದ ೧೯೯೭ ಅಗಸ್ಟ್ ೧೫ ರಂದು ಕೆಲವು ಹೊಸ ಜಿಲ್ಲೆಗಳನ್ನು ರಚಿಸಲಾಯಿತು. ಅದರಂತೆ ಬಾಗಲಕೋಟೆ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ ಮತ್ತು ಮುಧೋಳ ತಾಲೂಕುಗಳನ್ನು ಸೇರಿಸಿ ಬಾಗಲಕೋಟ ಜಿಲ್ಲೆ ಅಸ್ತಿತ್ವಕ್ಕೆ ಬಂದಿತು.[೧೧] ಆಗ ಜಿಲ್ಲೆಯ ಒಟ್ಟು ಜನಸಂಖ್ಯೆ ೧೬,೫೧,೮೯೨, ಜನಸಾಂದ್ರತೆ ಚ. ಕಿ.ಮೀ. ೨೫೧ ಇರುವುದನ್ನು ಗಮನಿಸಬಹುದು.

ಭೂ ವಿವರಣೆ :

ಈ ಜಿಲ್ಲೆ ಒಣ ಹವೆಯ ಬಯಲು ಸೀಮೆ. ಹೆಚ್ಚು ಭೂ ಪ್ರದೇಶ ಕರಿ ಎರಿ ಮಣ್ಣಿನಿಂದ ಕೂಡಿದ್ದು ಉಳಿದ ಕಡೆ ಮರಳು ಮಿಶ್ರಿತ ಕಂಪು ಮಣ್ಣಿನಿಂದ ಕೂಡಿದೆ. ಇಲ್ಲಿ ಪ್ರಾಕೃತಿಕ ಸಂಪತ್ತು ಸಮೃದ್ಧವಾಗಿದೆ. ಇಲ್ಲಿ ದೊರೆಯುವ ಅಪೂರ್ವ ಶಿಲೆಗಳಿಂದಾಗಿ ಗಣಿಗಾರಿಕೆ ಇಲ್ಲಿನ ಪ್ರಮುಖ ಉದ್ಯಮಗಳಲ್ಲೊಂದಾಗಿದೆ.

ಆದಿ ಜೀವಿಕಲ್ಪದ ಶಿಲಾ ಸಮುದಾಯಗಳು ಬೆಳಗಾವಿ ಸಮೀಪದಿಂದ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯವರೆಗೂ ಕಿರಿದಾದ ಪ್ರದೇಶದಲ್ಲಿ ಹೊರ ಹೊಮ್ಮಿವೆ. ಈ ಜಿಲ್ಲೆಯ ಕಲಾದಗಿಯ ಅಕ್ಕ-ಪಕ್ಕದಲ್ಲಿ ರೂಪಗೊಂಡಿರುವುದರಿಂದ ಇದನ್ನು ಕಲಾದಗಿ ಶಿಲಾಸ್ತೋಮ ಎಂದು ಕರೆಯುತ್ತಾರೆ. ಈ ಶಿಲಾಸ್ತೋಮ ಪೆಂಟ್‌ಕಲ್ಲು, ಮರಳುಶಿಲೆ, ಸುಣ್ಣಶಿಲೆ ಇತ್ಯಾದಿಗಳಿಂದ ರಚಿತವಾದ ಜಲಶಿಲೆಯಾಗಿದೆ. ಈ ಶಿಲಾಸ್ತೋಮಕ್ಕೆ ಸಂಬಂಧಿಸಿದ ಮೂರು ಬೆಟ್ಟದ ಸಾಲುಗಳನ್ನು ಜಿಲ್ಲೆಯಲ್ಲಿ ಕಾಣಬಹುದು. ಕಲಾದಗಿಯ ಆಗ್ನೇಯಕ್ಕೆ

ತುಳಸಿಗೇರಿಯ ಬೆಟ್ಟ ೬೨೦ ಮೀ. ಎತ್ತರವಿದ್ದು, ಮಚಖಂಡಿ ಮತ್ತು ಶಿರೂರಿನ ಬಳಿ ಇರುವ ಬೆಟ್ಟಗಳು ಅನುಕ್ರಮವಾಗಿ ೬೩೦ ಮೀ. ಮತ್ತು ೫೯೦ ಮೀ. ಎತ್ತರವಾಗಿವೆ. ಕಲಾದಗಿಯ ಈಶಾನ್ಯಕ್ಕೆ ಕೆಲವು ಗುಡ್ಡಗಳು ಎರಡು ಕವಲುಗಳಾಗಿ ತಾಲೂಕಿನ ಉದ್ದಕ್ಕೂ ಹಬ್ಬಿವೆ. ಮೊದಲನೆಯ ಕವಲಿನಲ್ಲಿರುವ ಬೆನಕಟ್ಟಿಯ ಬೆಟ್ಟದ ಎತ್ತರ ೫೮ ಮೀ. ಎರಡನೆಯ ಕವಲಿನಲ್ಲಿ ಘಟಪ್ರಭಾ ನದಿಯ ಸನಗೊಂದಿಯ ಸಮೀಪ ೬೨೨ ಮೀ. ಎತ್ತರ ಹಾಗೂ ರಾಂಪುರದ ಬಳಿ ೬೧೩ ಮೀ. ಎತ್ತರದ ಬೆಟ್ಟಗಳಿವೆ. ಹಿಂದೆ ಕಲಾದಗಿಯ ಶಿಲೆಗಳಿಗೆ 'ಪುರಾಣ' ಎಂಬ ಹೆಸರಿದ್ದು ಈಗ ಅದು ಬಳಕೆಯಲ್ಲಿಲ್ಲ. ಕಲಾದಗಿಯ ಶಿಲಾ ಸಮುದಾಯ ಆರ್ಷೆಯ ನೈಸ್ ಶಿಲೆಗಳು ಮತ್ತು ಧಾರವಾಡ ಪದರು ಶಿಲೆಗಳ ಮೇಲೆ ಹೊಂದಿಕೆ ಇಲ್ಲದ ಹರಡಿರುವ ಕಬ್ಬಿಣ ಮಿಶ್ರಿತ ಪಳೆಯುಳಿಕೆಗಳಿಲ್ಲದ ಗುಂಪು. ಇದರ ಮೇಲೆ ಪಶ್ಚಿಮ ಮತ್ತು ಉತ್ತರದಲ್ಲಿ ದಖ್ಖನ್ ಪದರು ಕಲ್ಲುಗಳು ಮುಚ್ಚಿಕೊಂಡಿವೆ. ಕಲಾದಗಿಯ ಶಿಲಾಸ್ತೋಮಗಳ ಈಶಾನ್ಯಕ್ಕೆ ಕೆಲವು ಪ್ರದೇಶಗಳಲ್ಲಿ ಭೀಮ ಶಿಲಾಸ್ತೋಮಗಳೆಂಬ ಮತ್ತೊಂದು ಹಿರಿಯ ಶಿಲಾ ಸಮುದಾಯ ಕಂಡು ಬರುತ್ತದೆ. ಇವುಗಳನ್ನು ಆದಿ ಜೀವಿಕಲ್ಪದ ಕೊನೆಯ ಹಂತದಲ್ಲಿ ರೂಪುಗೊಂಡ ಪುರಾತನ ಶಿಲೆಗಳೆಂದು ಪರಿಗಣಿಸಲಾಗಿದೆ. ಕಲಾದಗಿಯ ವರ್ಗ ಜಲ ಶಿಲೆಗಳನ್ನು ಎರಡು ಗಂಪುಗಳಾಗಿ ವಿಂಗಡಿಸಲಾಗಿದೆ.

ಬಾದಾಮಿ ವರ್ಗ

೧. ಕಟಗೇರಿ ರಚನೆ : ಅರ್ಜಿಲೈಟುಗಳು ಮತ್ತು ಡೋಲೊಮೈಟುಗಳು

೨. ರಾಮದುರ್ಗ ರಚನೆ : ಗುಂಡು ಶಿಲೆಗಳು ಮತ್ತು ಕ್ವಾರ್ಟ್ಸ್ ಅರೆನೈಟುಗಳು

೩. ಮುಧೋಳ ರಚನೆ : ಕ್ವಾರ್ಟ್ಸ್ ಅರೆನೈಟುಗಳು, ಡೋಲೊಮೈಟುಗಳು ಮತ್ತು ಅರ್ಜಿಲೈಟುಗಳು

ಕಲಾದಗಿ ವರ್ಗ

೧. ಲೋಕಾಪುರ ರಚನೆ : ಡೋಲೊಮೈಟುಗಳು ಮತ್ತು ಸುಣ್ಣಕಲ್ಲುಗಳು

೨. ಬಾಗಲಕೋಟೆ ರಚನೆ : ಗುಂಡು ಶಿಲೆ, ಬೆಣಚುಕಲ್ಲುಗಳು ಮತ್ತು ಬ್ರೆಷಿಯಾ

ಸುಣ್ಣಕಲ್ಲಿನ ಸಂಗ್ರಹ ಬಹು ಹೆಚ್ಚಾಗಿರುವುದರಿಂದ ಕಲಾದಗಿ ವರ್ಗವು ಆರ್ಥಿಕವಾಗಿ ಉಪಯುಕ್ತವಾಗಿದ್ದು, ಈ ಪ್ರದೇಶದಲ್ಲಿ ಸುಣ್ಣ ಮತ್ತು ಸುಣ್ಣ ಆಧಾರಿತ ಕೈಗಾರಿಕೆಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ.

ದಖನ್ ಪದರುಗಲ್ಲು :

ಭೀಮಾ ಕಾಲ ಮುಗಿದ ನಂತರ ಕರ್ನಾಟಕದ ಭೂ ಶಿಲಾ ಇತಿಹಾಸದಲ್ಲಿ ಒಂದು ದೊಡ್ಡ ನಿಷ್ಕ್ರಿಯತೆಯ ಕಾಲ ಕಂಡುಬರುತ್ತದೆ. ಕಲಾದಗಿ ಮತ್ತು ಭೀಮಾ ಶಿಲಾಸ್ತೋಮಗಳು ಉದ್ಭವವಾದ ಕೋಟಿ ವರ್ಷಗಳು ಕಳೆದ ಮೇಲೆ, ಮಧ್ಯ ಜೀವ

ಕಲ್ಪದ ಅಂತ್ಯ ಭಾಗದಲ್ಲಿ ಸಂಭವಿಸಿದ ಭೂ ಚಾಲನೆ ಮತ್ತು ಜ್ವಾಲಾಮುಖಿಯ ಪರಿಮಾಣದಿಂದಾಗಿ ಭೂಮಿಯ ಮೇಲ್ಭಾಗವನ್ನು ಭೇದಿಸಿಕೊಂಡು ಶಿಲಾರಸವು ಹೊರಹೊಮ್ಮಿತು. ಈ ರೀತಿ ಘನೀಕರಿಸಿದ ಶಿಲಾರಸವನ್ನು ದಖ್ಖನ್ ಪದರುಗಲ್ಲು ಎಂದು ಕರೆಯುತ್ತಾರೆ. ದಖನ್ ಮತ್ತು ಗಟ್ಟಿಯಾಗಿರುವ ಬೆಸಾಲ್ಟ್ ಶಿಲೆಯಾಗಿದೆ. ಈ ಅತ್ಯಂತ ಗಣನೀಯವಾದ ಲಕ್ಷಣವೆಂದರೆ ಇವುಗಳ ಪರಿಪೂರ್ಣವಾದ ಮಟ್ಟದ ರಚನೆ. ಶಿಲಾರಸದ ಬೃಹತ್ ಗುಡ್ಡೆಗಳ ತಳಭಾಗವನ್ನು ಪ್ರತಿನಿಧಿಸುವ ದಕ್ಷಿಣದ ಅಂಚನ್ನು ಈ ಜಿಲ್ಲೆಯಲ್ಲಿ ಕಾಣಬಹುದು.

ಪದರುಗಳು ವಾತಾವರಣದ ಹೊಡೆತದಿಂದ ವರ್ತುಲ ಶಿಥಿಲೀಕರಣಗೊಂಡಿವೆ ಮತ್ತು ಎಲ್ಲಾ ಆಕಾರ ಮತ್ತು ಗಾತ್ರದ ಕಪ್ಪು ಬಂಡೆಗಳು ಇವುಗಳನ್ನು ವಲಯದಲ್ಲಿ ಹರಡಿಕೊಂಡಿವೆ. ಮುಚ್ಚಿರುವ ಮಣ್ಣಿನ ಬಣ್ಣವು ಕಪ್ಪು ಹಾಗೂ ಗಾಢ ಕಂದು ಬಣ್ಣದ್ದಾಗಿವೆ. ಈ ಮಣ್ಣಿಗೆ ಒದ್ದೆಯಾದಾಗ ಉಬ್ಬಿಕೊಳ್ಳುವ ವಿಶೇಷ ಲಕ್ಷಣವಿದೆ. ದಖ್ಖನ್ ಪದರಗಲ್ಲುಗಳಿಗೆ ಗಟ್ಟಿತನ, ಭಾರ ಮತ್ತು ಬಾಳಿಕೆ ಬರುವ ಲಕ್ಷಣವಿರುವುದರಿಂದ ಕಟ್ಟಡಕ್ಕೆ ಉತ್ತಮ ಕಲ್ಲುಗಳಾಗಿವೆ. ಕಾಂಕ್ರೀಟು ಹಾಕಲು ಮತ್ತು ರಸ್ತೆಯ ಮೇಲ್ಭಾಗಕ್ಕೆ ಹಾಸಲು ಇವುಗಳ ಖಡಿಗಳೂ ಉತ್ಕೃಷ್ಟವಾಗಿವೆ. ದಖ್ಖನ್ ಪದರಗಲ್ಲು ರೂಪುಗೊಂಡ ನಂತರ ಕರ್ನಾಟಕದ ಯಾವ ಪ್ರದೇಶದಲ್ಲಿಯೂ ಯಾವುದೇ ಹೊಸ ಶಿಲಾ ಸಮುದಾಯವು ಉದ್ಭವಿಸಲಿಲ್ಲ. ಜಿಲ್ಲೆಯಲ್ಲಿ ಇಂದು ನಮಗೆ ಕಂಡುಬರುವ ಶಿಲಾ ಸಮೂಹಗಳು ಆದಿ ಜೀವಿಕಲ್ಪದ ಅಂತ್ಯದಲ್ಲಿ ಇದ್ದಂತೆಯೇ ಭೂ ಭಾಗವಾಗಿಯೇ ಉಳಿದಿವೆ.

ಖನಿಜ ಸಂಪತ್ತು :

ಸುಣ್ಣ ಶಿಲೆ :

ಸುಣ್ಣ ಶಿಲೆಗಳು ಜೈವಿಕ ಅಥವಾ ಅಜೈವಿಕ ವಿಧಾನಗಳಿಂದ ರೂಪುಗೊಂಡ ಕಾರ್ಬೋನೇಟ್ ಶಿಲೆಗಳಾಗಿವೆ. ಇದು ಕ್ಯಾಲ್ಸಿಯಂ ಖನಿಜ ರೂಪದಲ್ಲಿರುತ್ತದೆ. ಸುಣ್ಣಶಿಲೆಗಳ ಬಣ್ಣಗಳು ಅದರಲ್ಲಿರುವ ಕಲ್ಮಶಗಳನ್ನು ಅವಲಂಬಿಸಿರುತ್ತವೆ. ತೆಳುವಾದ ನೀಲಿ, ಬೂದಿ, ಹಳದಿ, ನಸುಗೆಂಪು, ಕೆಂಪು ಮತ್ತು ಕಂದುಬಣ್ಣಗಳು ಸಾಧಾರಣವಾಗಿ ಅದರಲ್ಲಿರುವ ಆಕ್ಸೈಡುಗಳು ಪ್ರಮಾಣಗಳ ಆಧಾರದ ಮೇಲೆ ಅವಲಂಬಿಸಿರುತ್ತವೆ.[೧೨] ಬಾಗಲಕೋಟೆ ಜಿಲ್ಲೆಯಲ್ಲಿ ಕಲಾದಗಿ, ಖಜ್ಜಿಡೋಣಿ, ದೇವನಾಳ, ಬಾಗಲಕೋಟೆ ಮತ್ತು ಗದ್ದನಕೇರಿ ಸುಣ್ಣಶಿಲೆ ನಿಕ್ಷೇಪಗಳು ಬಹಳ ಮುಖ್ಯವಾದುವುಗಳಾಗಿವೆ. ೧೮೭೬ರಲ್ಲಿ ಬ್ರೂಸ್‌ಪೂಟರು ಕಲಾದಗಿ ಹತ್ತಿರ ಸುಣ್ಣದ ಶಿಲೆಯನ್ನು ಕಂಡು ಹಿಡಿದು ಅದಕ್ಕೆ 'ಕಲಾದಗಿ ವರ್ಗ' ಎಂದು ಹೆಸರಿಟ್ಟರು.[೧೩]

ಕಲಾದಗಿ ಪ್ರದೇಶದಲ್ಲಿ ಸುಣ್ಣ ಶಿಲಾ ನಿಕ್ಷೇಪವು ಹಿರೇಶೆಲ್ಲಿಕೇರಿಯಿಂದ

ಯಂಡಿಗೇರಿಯವರೆಗ ಸುಮಾರು ಮೂರರಿಂದ ನಾಲ್ಕು ಕಿಲೋಮೀಟರುಗಳ ದೂರ ಹರಡಿದೆ. ಇದು ಸುಮಾರು ೫೦೦ ಮೀಟರುಗಳಷ್ಟು ಅಗಲವಿದೆ. ಈ ಪ್ರದೇಶದಲ್ಲಿ ತೆಗೆದ ಮಾದರಿಗಳ ರಾಸಾಯನಿಕ ವಿಶ್ಲೇಷಣೆಗಳಿಂದ, ಈ ನಿಕ್ಷೇಪವು ಶೇಕಡಾ ೪೮ ರಿಂದ ೫೨ ಭಾಗ ಕ್ಯಾಲ್ಸಿಯಂ, ಶೇಕಡ ಎರಡರಿಂದ ಮೂರು ಭಾಗ ಮೆಗ್ನೇಷಿಯಂ ಮತ್ತು ಶೇಕಡ ಎರಡರಿಂದ ನಾಲ್ಕು ಭಾಗ ಕರಗದ ಶೇಷ ವಸ್ತುಗಳಿಂದ ಕೂಡಿರುವುದಾಗಿ ಕಂಡು ಬಂದಿದೆ. ಖಜ್ಜಿಡೋಣಿ ಪ್ರದೇಶದಲ್ಲಿ ಸುಣ್ಣಶಿಲಾ ಸಂಸ್ಕರಣ ಕೇಂದ್ರ ವಿಶಾಲವಾಗಿ ಹರಡಿದೆ. ಈ ಪ್ರದೇಶದಿಂದ ತೆಗೆದು ರಾಸಾಯನಿಕ ವಿಶ್ಲೇಷಣೆ ನಡೆಸಿದ ನಮೂನೆಗಳಲ್ಲಿ ಶೇಕಡ ೫೦ ರಿಂದ ೫೪ ಭಾಗ ಕ್ಯಾಲ್ಸಿಯಂ, ಶೇಕಡ ೦.೧ ಭಾಗ ಮೆಗ್ನೇಸಿಯಂ ಮತ್ತು ಶೇಕಡ ೧.೬ ರಿಂದ ಮೂರರವರೆಗೆ ಕರಗದ ಶೇಷ ವಸ್ತುಗಳಿರುವುದಾಗಿ ಕಂಡು ಬಂದಿದೆ. ಖಜ್ಜಿಡೋಣಿ ಪ್ರದೇಶದಲ್ಲಿ ಅಪರಿಮಿತ ಸುಣ್ಣಶಿಲೆ ನಿಕ್ಷೇಪ ಇವೆಯೆಂದು ಅಂದಾಜು ಮಾಡಲಾಗಿದೆ.

ದೇವನಾಳ ಪ್ರದೇಶದಲ್ಲಿ ಸುಣ್ಣಶಿಲಾ ಸಂಸ್ಕರಣ ಕೇಂದ್ರ ವಿಶಾಲವಾಗಿ ಹರಡಿದ್ದು, ಈ ಪ್ರದೇಶದಲ್ಲಿ ಅಧಿಕ ಮೊತ್ತದ ನಿಕ್ಷೇಪಗಳು ಇರಬಹುದೆಂದು ಊಹಿಸಲಾಗಿದೆ. ಆದರೆ ಈ ನಿಕ್ಷೇಪವು ದಕ್ಷಿಣಕ್ಕೆ ಹೋದಂತೆ ಡೋಲೊಮೈಟಿಕ್ ಸುಣ್ಣ ಶಿಲೆಯಾಗಿ ಮಾರ್ಪಡುತ್ತಿರುವ ಹಾಗೆ ಕಂಡುಬರುತ್ತದೆ. ಬಾಗಲಕೋಟೆ ಪ್ರದೇಶದಲ್ಲಿ, ಬಾಗಲಕೋಟೆ ರೇಲ್ವೆ ನಿಲ್ದಾಣದಿಂದ ಸುಮಾರು ಐದು ಕಿಲೋಮೀಟರ್‌ಗಳ ದೂರಕ್ಕೆ ಹರಡಿರುವ ಸುಣ್ಣಶಿಲಾ ಹರವಿನಲ್ಲಿ ಶೇಕಡ ೪೮ ರಿಂದ ೪೯ ಭಾಗ ಕ್ಯಾಲ್ಸಿಯಂ, ಶೇಕಡ ಒಂದರಿಂದ ೧.೬ ಭಾಗ ಮೆಗ್ನೇಸಿಯಂ, ಶೇಕಡ ಒಂಭತ್ತರಿಂದ ೧೪ ಭಾಗದಷ್ಟು ಕರಗದ ಶೇಷ ವಸ್ತುಗಳಿರುವುದು ಕಂಡು ಬಂದಿದೆ. ಈ ಪ್ರದೇಶದಲ್ಲಿ ಹೇರಳವಾಗಿ ನಿಕ್ಷೇಪಗಳಿರುವುದೆಂದು ಊಹಿಸಲಾಗಿದೆ.

ಗದ್ದನಕೇರಿ ಪ್ರದೇಶದಲ್ಲಿಯ ಸುಣ್ಣದ ಸಂಸ್ಕರಣ ಕೇಂದ್ರ ಹವೇಲಿಯಿಂದ ಸುಮಾರು ಐದು ಕಿಲೋಮೀಟರ್‌ಗಳ ದೂರಕ್ಕೆ ಘಟಪ್ರಭಾ ನದಿ ದಂಡೆಯವರೆಗೂ ಹರಡಿದೆ. ಇದರಲ್ಲಿ ಶೇಕಡ ೪೮ ರಿಂದ ೫೦ ಭಾಗ ಕ್ಯಾಲ್ಸಿಯಂ, ಶೇಕಡ ಒಂದರಿಂದ ೧.೬ ಭಾಗ ಮೆಗ್ನೇಶಿಯಂ, ಶೇಕಡ ಒಂಭತ್ತರಿಂದ ೧೪ ಭಾಗದಷ್ಟು ಕರಗದ ಶೇಷ ವಸ್ತುಗಳಿರುವುದು ಕಂಡು ಬಂದಿದೆ. ಈ ಪ್ರದೇಶದಲ್ಲಿ ಹೇರಳವಾಗಿ ನಿಕ್ಷೇಪಗಳಿರುವುದೆಂದು ಊಹಿಸಲಾಗಿದೆ. ಗದ್ದನಕೇರಿ ಪ್ರದೇಶದಲ್ಲಿಯ ಸುಣ್ಣದ ಸಂಸ್ಕರಣ ಕೇಂದ್ರ ಹವೇಲಿಯಿಂದ ಸುಮಾರು ಐದು ಕಿಲೋಮೀಟರ್‌ಗಳ ದೂರಕ್ಕೆ ಘಟಪ್ರಭಾ ನದಿ ದಂಡೆಯವರೆಗೂ ಹರಡಿದೆ. ಇದರಲ್ಲಿ ಶೇಕಡ ೪೮ ರಿಂದ ೫೦ ಭಾಗ ಕ್ಯಾಲ್ಸಿಯಂ, ಶೇಕಡ ೦.೭ ರಿಂದ ೩.೫ ಭಾಗ ಮೆಗ್ನೇಸಿಯಂ ಮತ್ತು ಶೇಕಡ ನಾಲ್ಕರಿಂದ ಆರು ಭಾಗ ಕರಗದ ಕಲ್ಮಶ ವಸ್ತುಗಳಿರುವುದು ತಿಳಿದು ಬಂದಿದೆ. ಮುಧೋಳ ತಾಲೂಕುಗಳ ಹಲವು ಪ್ರದೇಶಗಳಲ್ಲಿ ಅಧಿಕ ಕ್ಯಾಲ್ಸಿಯಂ

ಸುಣ್ಣದ ನಿಕ್ಷೇಪಗಳು ವಿಸ್ತಾರವಾಗಿ ದೊರೆಯುತ್ತವೆ. ಅವುಗಳ ಮಧ್ಯೆ ಅಲ್ಲಲ್ಲಿ ಡೋಲೊಮೈಟ್ ನಿಕ್ಷೇಪಗಳು ಇರುವುದು ಕಂಡುಬಂದಿದೆ.

ಬಿಜ್ಜಿಡೋಣಿಯಿಂದ ಕಗಲಗೊಂಬದವರೆಗೆ ಹರಡಿರುವ ಅಧಿಕ ಕ್ಯಾಲ್ಸಿಯಂ ಸುಣ್ಣದ ನಿಕ್ಷೇಪವು ಅಪರಿಮಿತವಾದ ಸಂಗ್ರಹಗಳನ್ನು ಹೊಂದಿದೆಯೆಂದು ಅಭಿಪ್ರಾಯ ಪಡಲಾಗಿದೆ. ಇದರಲ್ಲಿ ಶೇಕಡ ೪೫.೪೫ ಭಾಗ ಕ್ಯಾಲ್ಸಿಯಂ, ಶೇಕಡ ೧.೮ ಭಾಗ ಮೆಗ್ನೇಸಿಯಂ, ಶೇಕಡ ೦.೯೪ ಭಾಗ ಅಲ್ಯೂಮಿನಿಯಂ, ಶೇಕಡ ೦.೯೬ ಭಾಗ ಕಬ್ಬಿಣ, ಶೇಕಡ ೧೨.೭೯ ಭಾಗ ಸಿಲಿಕ ಮತ್ತು ಶೇಕಡ ೩೪.೪೫ ಭಾಗ ಕರಗದ ಶೇಷ ಪದಾರ್ಥಗಳಿರುವುದಾಗಿ ಕಂಡು ಬಂದಿದೆ.

ಮುಧೋಳ ತಾಲೂಕಿನ ಚೌದರಿ ಮಾನ್ಯ ಮತ್ತು ಲೋಕಾಪುರ ಪ್ರದೇಶಗಳಲ್ಲಿ ಹರಡಿರುವ ಅಧಿಕ ಕ್ಯಾಲ್ಸಿಯಂ ಸುಣ್ಣ ಶಿಲಾಸ್ತರವು ಸುಮಾರು ಎಂಟು ಕಿಲೋಮೀಟರ್‌ಗಳ ಉದ್ದ ಮತ್ತು ೨೮ ಕಿಲೋಮೀಟರ್‌ಗಳ ಅಗಲದ ಪ್ರದೇಶವನ್ನು ಆಕ್ರಮಿಸಿದೆ. ಈ ಪ್ರದೇಶದಲ್ಲಿ ತೆಗೆದ ಮಾದರಿಗಳ ರಾಸಾಯನಿಕ ವಿಶ್ಲೇಷಣೆಯಿಂದ ಶೇಕಡ ೪೮.೮೫ ರಿಂದ ೫೪ ಭಾಗ ಕ್ಯಾಲ್ಸಿಯಂ, ಶೇಕಡ ೧.೦೮ ಭಾಗ ಮೆಗ್ನೇಸಿಯಂ, ಶೇಕಡ ೦.೩೨ ಭಾಗ ಕಬ್ಬಿಣ, ಶೇಕಡ ೮.೯೮ ಭಾಗ ಸಿಲಿಕ ಮತ್ತು ಶೇಕಡ ೩೦.೮೫ ಭಾಗ ಕರಗದ ಕಲ್ಮಶ ವಸ್ತುಗಳಿರುವುದು ಕಂಡುಬರುತ್ತದೆ. ಈ ನಿಕ್ಷೇಪದಲ್ಲಿ ಸುಮಾರು ೨೦೦ ದಶಲಕ್ಷ ಟನ್ನು ಅಧಿಕ ಕ್ಯಾಲ್ಸಿಯಂ ಸುಣ್ಣದ ಶಿಲೆ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಇದೇ ತಾಲೂಕಿನ ಮುದ್ದಾಪುರ, ತಿಮ್ಮಾಪುರ ಪ್ರದೇಶದಲ್ಲಿ ಸುಮಾರು ೪೫ ದಶಲಕ್ಷ ಟನ್ ಸುಣ್ಣಶಿಲೆ ನಿಕ್ಷೇಪಗಳು ದೊರೆಯುತ್ತವೆ ಎಂದು ಅಂದಾಜು ಮಾಡಲಾಗಿದೆ. ಈ ನಿಕ್ಷೇಪದ ಕೆಲವು ಕಡೆ ಮೆಗ್ನೇಸಿಯಂ ಸುಣ್ಣಶಿಲೆಯ ಮಡಿಗಳಿರುವುದು ತಿಳಿದು ಬಂದಿದೆ. ಶೇಕಡ ೩೩.೨ ರಿಂದ ೪೨.೬೫ ಭಾಗ ಕ್ಯಾಲ್ಸಿಯಂ, ಶೇಕಡ ೧.೯ ರಿಂದ ೭.೫೭ ಭಾಗ ಮೆಗ್ನೇಸಿಯಂ, ಶೇಕಡ ೧.೨೯ ರಿಂದ ೧.೫೭ ಭಾಗ ಅಲ್ಯೂಮಿನಿಯಂ, ಶೇಕಡ ೧.೬೮ ರಿಂದ ೧.೭೯ ಭಾಗ ಕಬ್ಬಿಣ, ಶೇಕಡ ೧೬.೪೨ ರಿಂದ ೨೦.೯೭ ಭಾಗ ಸಿಲಿಕಾ ಮತ್ತು ಶೇಕಡ ೩೪.೪೫ ರಿಂದ ೩೫.೦೫ ಭಾಗ ಕರಗಿಸಲಾಗದ ಶೇಷ ನಿಕ್ಷೇಪಗಳಿರುವುದಾಗಿ ಈ ಪ್ರದೇಶಗಳಲ್ಲಿನ ಸುಣ್ಣದ ಶಿಲಾಸ್ತರಗಳಿಂದ ತೆಗೆದ ನಮೂನೆಗಳ ವಿಶ್ಲೇಷಣೆಯಿಂದ ಕಂಡುಬಂದಿದೆ. ಚಿಂಚಖಂಡಿ ಬುದ್ರಕ್ ಪ್ರದೇಶದಲ್ಲಿ ಸುಮಾರು ಒಂದು ಚದುರ ಕಿಲೋಮೀಟರ್‌ಗಳ ಪ್ರದೇಶದಲ್ಲಿ ಸುಣ್ಣಶಿಲಾಸ್ತರವು ಹರಡಿದೆ. ಈ ನಿಕ್ಷೇಪದ ಮೇಲ್ಪದರದಲ್ಲಿಯೇ ಒಂದು ಮೀಟರ್ ಆಳಕ್ಕೆ ಸುಮಾರು ೪೫ ದಶಲಕ್ಷ ಟನ್ನುಗಳಷ್ಟು ಸುಣ್ಣದ ಶಿಲೆಯು ದೊರಕಬಹುದೆಂದು ಅಂದಾಜು ಮಾಡಲಾಗಿದೆ.

ಮುಧೋಳ ತಾಲೂಕಿನ ಪೆಟ್ಲೂರು ಪ್ರದೇಶದಲ್ಲಿ ಹರಡಿರುವ ಸುಣ್ಣದ ಶಿಲಾ

ಭಾಗದಲ್ಲಿ ಸುಮಾರು ೯೦ ದಶಲಕ್ಷ ಟನ್ನುಗಳಷ್ಟು ಸುಣ್ಣಶಿಲೆ ದೊರೆಯಬಹುದೆಂದು ತಿಳಿದು ಬಂದಿದೆ. ಬುದ್ನಿ, ಚಿತ್ರಭಾನುಕೋಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಣ್ಣದ ಶಿಲಾ ಸಂಸ್ತರಗಳು ವಿಶಾಲವಾಗಿ ಹರಡಿವೆ. ಇದೇ ತಾಲೂಕಿನ ವರಚಗಾಲ ಪ್ರದೇಶದಲ್ಲಿ ಸುಣ್ಣ ಶಿಲೆಯು ಸುಮಾರು ಎರಡು ಕಿಲೋಮೀಟರುಗಳಷ್ಟು ಉದ್ದ, ಒಂದು ಕಿಲೋಮೀಟರ್‌ಗಳಷ್ಟು ಅಗಲದ ಪ್ರದೇಶದಲ್ಲಿ ಜೇಡು ಶಿಲೆಯೊಂದಿಗೆ ದೊರೆಯುತ್ತದೆ. ಈ ನಿಕ್ಷೇಪದ ಒಟ್ಟು ಮೊತ್ತ ಸುಮಾರು ೪೫ ದಶಲಕ್ಷ ಟನ್ನುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಮಲ್ಲಾಪುರ ನಿಕ್ಷೇಪವು ಬೆಳಗಾವಿ ಲೋಕಾಪುರ ರಸ್ತೆಯಲ್ಲಿವೆ. ಇದರ ಒಟ್ಟು ಮೊತ್ತ ಸುಮಾರು ೪೫ ದಶಲಕ್ಷ ಟನ್ನುಗಳು. ಇದರಲ್ಲಿ ಶೇಕಡ ೫೨ ಭಾಗ ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಶೇಕಡ ೨.೪ ಭಾಗ ಮೆಗ್ನೇಸಿಯಂ ಭಾಗವಿರುವುದು ವ್ಯಕ್ತವಾಗುತ್ತದೆ. ಬಾಗಲಕೋಟೆ ತಾಲೂಕಿನ ಹಿರೇಶೆಲ್ಲಿಕೇರಿ ಮತ್ತು ಚಿಕ್ಕಶೆಲ್ಲಕೇರಿ ಪ್ರದೇಶದಲ್ಲಿ ಸುಮಾರು ೫೬ ದಶಲಕ್ಷ ಟನ್ನುಗಳಷ್ಟು ಅಧಿಕ ಕ್ಯಾಲ್ಸಿಯಂ ಸುಣ್ಣದ ಶಿಲೆ ಸಿಗಬಹುದೆಂದು ಅಂದಾಜು ಮಾಡಲಾಗಿದೆ. ಈ ನಕ್ಷೇಪಗಳಲ್ಲಿ ಶೇಕಡ ೫೪.೬೯ ಭಾಗ ಕ್ಯಾಲ್ಸಿಯಂ, ಶೇಕಡ ೩.೬೨ ಭಾಗ ಮೆಗ್ನೇಷಿಯಂ ಮತ್ತು ಶೇಕಡ ೧೦.೨ ಭಾಗ ಕರಗದ ಶೇಷ ವಸ್ತುಗಳಿರುವುದಾಗಿ ಕಂಡು ಬಂದಿದೆ.

ಕಬ್ಬಿಣದ ಅದಿರು :

ಹುನಗುಂದ ತಾಲೂಕಿನ ರಾಮಥಾಳದಲ್ಲಿ ಒಂದು ಕಬ್ಬಿಣದ ಗಣಿ ಪರವಾನಿಗೆ ಇದ್ದು ೧೯೬೦ ರಲ್ಲಿ ಸುಮಾರು ೧೦ ಸಾವಿರ ಟನ್ನುಗಳಷ್ಟು ಅದಿರನ್ನು ಉತ್ಪಾದಿಸಿದ ದಾಖಲೆಗಳಿವೆ. [೧೪] ಅದರಲ್ಲಿ ಶೇಕಡ ೬೪.೩೩ ಕಬ್ಬಿಣಾಂಶ, ಶೇಕಡ ೬.೩೯ ಭಾಗ ಸಿಲಿಕ ಮತ್ತು ಅಲ್ಯೂಮಿನಿಯಂ, ಶೇಕಡ ೦.೦೧೬ ಭಾಗ ಗಂಧಕ ಮತ್ತು ಶೇಕಡ ೦.೦೦೬ ಭಾಗ ರಂಜಕವಿರುವ ದಾಖಲೆಗಳಿವೆ. ಈ ನಿಕ್ಷೇಪವು ಬಾಗಲಕೋಟೆ ರೈಲು ನಿಲ್ದಾಣಕ್ಕೆ ಸುಮಾರು ೩೬ ಕಿಲೋಮೀಟರ್‌ಗಳ ದೂರದಲ್ಲಿದೆ.

ಈ ಸಂಗ್ರಹದ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಾಗಿಲ್ಲ. ಬಾದಾಮಿ ತಾಲೂಕಿನ ಮಹಾಕೂಟ ಪ್ರದೇಶದಲ್ಲಿ ಹೆಮಟೈಟ್ ಅದಿರಿನ ಸಂಗ್ರಹವಿದೆ. ಇಲ್ಲಿಯ ಅದಿರಿನಲ್ಲಿ ಕಬ್ಬಿಣ ಅಂಶವು ಶೇಕಡ ೬೦ ರಿಂದ ೬೪ ಇರುವುದಾಗಿ ಕಂಡು ಬಂದಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಶೇಕಡ ೬೦ ಭಾಗ ಮ್ಯಾಂಗನೀಸ್ ಅಂಶವುಳ್ಳ ಪೈರೋಲೂಸೈಟ್ ಮತ್ತು ಮ್ಯಾಂಗನೀಸ್ ಡೈ ಆಕ್ಸೈಡುಗಳನ್ನು ಸೂಕ್ತ ವಿಧಾನಗಳಿಂದ ಪರಿಷ್ಕರಿಸಿ ಮ್ಯಾಂಗನೀಸ್ ಡೈ ಆಕ್ಸೈಡು ಪ್ರಮಾಣವನ್ನು ಉತ್ತಮಪಡಿಸುವ ಸಾಧ್ಯತೆ ಇದೆ.

ತಾಮ್ರ :

ಜಿಲ್ಲೆಯ ಖಜ್ಜಿಡೋಣಿ ಎಂಬಲ್ಲಿ ಸುಣ್ಣದ ಶಿಲೆಯ ಪದರಗಳಲ್ಲಿ ತಾಮ್ರದ ಅದಿರಿನ ಗುರುತುಗಳಿವೆ. ಗದ್ದನಕೇರಿ ಗ್ರಾಮದ ಸಮೀಪದಲ್ಲಿ ಹಬ್ಬಿರುವ ಕಲಾದಗಿ ಸುಣ್ಣದ ಶಿಲೆಗಳಲ್ಲಿ ಮ್ಯಾಲಕೈಟ್ ಖನಿಜದ ಪ್ರಕಾಶಮಾನವಾದ ಹಸಿರು ಕಲೆಗಳು ಮತ್ತು ಕೆಲವು ಕಡೆ ಚಾಲ್ಕೋಪೈರೈಟ್ ಖನಿಜದ ಮಚ್ಚೆಗಳಿರುವುದು ಕಂಡು ಬರುತ್ತದೆ.[೧೫]

ಸಿಲಿಕ :

ಬಾದಾಮಿ ತಾಲೂಕಿನ ಗುಳೇದಗುಡ್ಡಕ್ಕೆ ಸುಮಾರು ೮ ಕಿಲೋಮೀಟರು ದಕ್ಷಿಣದಲ್ಲಿರುವ ಪಾರ್ವತಿಗುಡ್ಡ ಮತ್ತು ಮರಡಿಗುಡ್ಡಗಳ ಪ್ರದೇಶದಲ್ಲಿ ಸಿಲಿಕಾ ಅಥವಾ ಮರಳುಗಲ್ಲು ನಿಕ್ಷೇಪಗಳಿವೆ. ಇವು ಸುಮಾರು ೧೫ ಕಿ.ಮೀ. ಆಳದವರೆಗೂ ವ್ಯಾಪಿಸಿವೆ. ಎರಡು ಪ್ರದೇಶಗಳಲ್ಲಿ ಸುಮಾರು ೨೨ ದಶಲಕ್ಷ ಟನ್ನು ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಈ ಪ್ರದೇಶದ ಮರಳುಗಲ್ಲಿನಲ್ಲಿ ಶೇಕಡ ೬೫ ರಿಂದ ೬೮ ಭಾಗ ಸಿಲಿಕಾ, ಶೇಕಡ ೧.೫ ರಿಂದ ಮೂರು ಭಾಗ ಅಲ್ಯೂಮಿನ ಆಕ್ಸೈಡ್, ಶೇಕಡ ೦.೨೯ ರಿಂದ ೦.೭೩ ಭಾಗ ಕಬ್ಬಿಣದ ಆಕ್ಸೈಡ್ ಇವೆ.

ಅಭ್ರಕ :

ಜಿಲ್ಲೆಯ ಇಲ್ಲಾಳ ಪ್ರದೇಶದಲ್ಲಿ ಮೆಸ್ಕೊವೈಟು ಅಭ್ರಕ ದೊರೆಯುವ ಸೂಚನೆಗಳಿರುವುದಾಗಿ ತಿಳಿದು ಬಂದಿದೆ.

ಕಲ್ನಾರು :

ಆಂಫಿಬೋಲ್ ಗುಂಪಿನ ಕಲ್ನಾರು ಖನಿಜಗಳು ಬಾಗಲಕೋಟೆ ತಾಲೂಕಿನ ಯಲ್ಲನಹಟ್ಟಿ ಗ್ರಾಮಕ್ಕೆ ಎರಡು ಕಿ.ಮೀ. ಆಗ್ನೇಯ ದಿಕ್ಕಿನಲ್ಲಿರುವ ಪ್ರದೇಶದಲ್ಲಿ ಕೆಲವು ಬಿರುಸಾದ ಎಳೆಗಳುಳ್ಳ ಕಲ್ನಾರಿನ ಶಿಲೆಗಳಿರುವುದಾಗಿ ತಿಳಿದುಬಂದಿದೆ.

ಡೋಲೋಮೈಟು :

ಜಿಲ್ಲೆಯಲ್ಲಿ ಡೋಲೋಮೈಟು ಮತ್ತು ಡೋಲೋಮೈಟಿಕ್ ಸುಣ್ಣದ ಶಿಲೆಗಳು ಭಾಮನ್ ಬುದ್ನಿ, ಹಾಲ್ಕಿ, ಪೆಟ್ಲೂರು, ಕಾಟಗಿರಿ ಮೊದಲಾದ ಕಡೆ ಹರಡಿವೆ. ಅವುಗಳಲ್ಲಿ ಭಾಮನ್ ಬುದ್ನಿ, ಪೆಟ್ಲೂರು, ಪರವಾರ್, ನೊವೆಲಿಕೆರೆ ಮತ್ತು ಸೊಲಿಕಾರ್ ನಿಕ್ಷೇಪಗಳು ಬಹುಮುಖ್ಯವಾದವು. ಈ ಪ್ರದೇಶದಲ್ಲಿ ದೊರೆಯುವ ಡಾಲೋಮೈಟಿನ ಮೊತ್ತ ಸುಮಾರು ೮೫,೬೮೫,೦೦೦ ಟನ್ನುಗಳಾಗಿವೆ. ಭಾಮನ್ ಬುದ್ನಿ ನಿಕ್ಷೇಪವು ಸುಮಾರು ೧೩೮ ಮೀಟರು ಉದ್ದ ಮತ್ತು ೧೦೦ ರಿಂದ ೧೫೦ ಮೀಟರು ಅಗಲದ ಪ್ರದೇಶವನ್ನು ಆವರಿಸಿದೆ.[೧೬] ಈ ಪ್ರದೇಶದಲ್ಲಿ ಸುಮಾರು ೨೫,೮೩,೦೦೦ ಟನ್ನುಗಳಷ್ಟು ಬಿ.ಎಫ್.ದರ್ಜೆ ಡೋಲೋಮೈಟ್ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ನೊವೆಲಿಕೆರೆ

ನಿಕ್ಷೇಪದಲ್ಲಿ ಶೇಕಡ ೨೮.೬೪ ಭಾಗ ಕ್ಯಾಲ್ಸಿಯಂ, ಶೇಕಡ ೧೮.೮೯ ರಿಂದ ೨೦.೩೬ ಭಾಗ ಮೆಗ್ನೇಸಿಯಂ ಮತ್ತು ಶೇಕಡ ೪೬ ರಿಂದ ೪೮ ಭಾಗ ಎಲ್.ಒ.ಐ. ಇರುವುದಾಗಿ ತಿಳಿದು ಬಂದಿದೆ. ಈ ನಿಕ್ಷೇಪದ ಒಟ್ಟು ಮೊತ್ತ ಸುಮಾರು ೧೬,೯೧೧,೦೦೦ ಟನ್ನುಗಳಷ್ಟಿರಬಹುದೆಂದು ಅಂದಾಜು ಮಾಡಲಾಗಿದ್ದು, ಇಲ್ಲಿಯ ಡೋಲೋಮೈಟು ಅಗ್ನಿ ನಿರೋಧಕ, ಬಿ.ಎಫ್ ಮತ್ತು ಗಾಜು ತಯಾರಿಕಾ ದರ್ಜೆಗಳಿರುವುದಾಗಿ ಕಂಡುಬಂದಿದೆ. ಪರ್ವಾರ್ ಮತ್ತು ವರಚಗಾಲ್ ಡೋಲೋಮೈಟು ಪಟ್ಟಿಗಳಲ್ಲಿಯ ಒಟ್ಟು ಮೊತ್ತ ಸುಮಾರು ೧೩,೫೦೦,೦೦೦ ಟನ್ನುಗಳಷ್ಟಿರಬಹುದೆಂದು ಮತ್ತು ಬಿ.ಎಫ್. ದರ್ಜೆಯದಾಗಿರುವುದೆಂದೂ ತಿಳಿದು ಬಂದಿದೆ. ಪೆಟ್ಲೂರು ಪ್ರದೇಶದಲ್ಲಿ ಮಧ್ಯೆ ಮಧ್ಯೆ ಎಡೆಯಿರುವ ಸಮಾನಾಂತರ ಡೋಲೋಮೈಟು ಅಗ್ನಿ ನಿರೋಧಕ ಬಿ.ಎಫ್ ಮತ್ತು ಗಾಜು ತಯಾರಿಕಾ ದರ್ಜೆ ಗಳಿರುವುದಾಗಿ ಕಂಡು ಬಂದಿದೆ. ಪರ್ವಾರ್ ಮತ್ತು ವರಚಗಾಲ್ ಡೋಲೋಮೈಟು ಪಟ್ಟಿಗಳಲ್ಲಿಯ ಒಟ್ಟು ಮೊತ್ತ ಸುಮಾರು ೧೩,೫೦೦,೦೦೦ ಟನ್ನುಗಳಷ್ಟಿರಬಹುದೆಂದು ಮತ್ತು ಬಿ.ಎಫ್ ದರ್ಜೆಯದಾಗಿರುವುದೆಂದೂ ತಿಳಿದುಬಂದಿದೆ. ಪೆಟ್ಲೂರು ಪ್ರದೇಶದಲ್ಲಿ ಮಧ್ಯೆ ಮಧ್ಯೆ ಎಡೆಯಿರುವ ಸಮಾನಾಂತರ ಡೋಲೋಮೈಟು ಪಟ್ಟಿಗಳು ಸುಮಾರು ೮ ರಿಂದ ೯ ಕಿ.ಮೀ. ಗಳ ದೂರ ಹರಡಿವೆ. ಬಿ.ಎಫ್. ಗ್ರೇಡಿನ ಸುಮಾರು ೧೩,೪೨೫,೦೦೦ ಟನ್ನುಗಳಷ್ಟು ಡೋಲೋಮೈಟ್ ಈ ಪ್ರದೇಶದಲ್ಲಿ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಸೋಲಿಕಾರ್ ಪ್ರದೇಶದಲ್ಲಿ ಶೇಕಡ ೨೫.೬೯ ರಿಂದ ೩೧.೧೧ ಭಾಗ ಕ್ಯಾಲ್ಸಿಯಂ ಆಕ್ಸೈಡ್, ಶೇಕಡ ೧೫ ರಿಂದ ೨೨ ಭಾಗ ಮೆಗ್ನೇಸಿಯಂ ಮತ್ತು ಶೇಕಡ ೧.೧ ರಿಂದ ೯.೪೨ ಭಾಗ ಸಿಲಿಕಾಂಶಗಳಿರುವ ಸುಮಾರು ೬,೦೦೦ ಟನ್ನುಗಳಷ್ಟು ಡೋಲೋಮೈಟ್ ದೊರೆಯಬಹುದೆಂದು ತಿಳಿದು ಬಂದಿದೆ. ಜಿಲ್ಲೆಯಲ್ಲಿ ೧.೧.೧೯೯೫ರ ಇಲಾಖಾ ಗಣತಿಯ ಪ್ರಕಾರ ಸುಮಾರು ೬೦ ದಶಲಕ್ಷ ಡೋಲೋಮೈಟ್ ನಿಕ್ಷೇಪಗಳಿರುವುದು ದೃಢಪಟ್ಟಿದೆ.

ಜಲಸಂಪತ್ತು :

ಜಿಲ್ಲೆಯು ಸಮೃದ್ಧಮಯವಾದ ಜಲಸಂಪತ್ತನ್ನು ಹೊಂದಿದ್ದು ಜಿಲ್ಲೆಯ ಪ್ರಮುಖ ನದಿಗಳಾದ ಕೃಷ್ಣಾ, ಘಟಪ್ರಭಾ, ಮಲಪ್ರಭಾ ಇವುಗಳು ಫಲವತ್ತಾದ ತೀರಗಳನ್ನು ಹೊಂದಿದ್ದು ಕೃಷಿ ಹಾಗೂ ವಾಣಿಜ್ಯ ಬೆಳೆಗಳ ಚಟುಟಿಕೆಗಳಿಗೆ ಉತ್ತೇಜನಕಾರಿಯಾಗಿವೆ. ಜಿಲ್ಲೆಯಲ್ಲಿ ಪ್ರವಹಿಸುವ ನದಿಗಳ ಬಗೆಗೆ ವಿವರವಾಗಿ ವಿವೇಚಿಸಲಾಗಿದೆ. ಬಾಗಲಕೋಟ ಜಿಲ್ಲೆಯ ಪಶ್ಚಿಮದಲ್ಲಿ ಸುಂದರ ಗಿರಿ-ಕಂದರಗಳ ಮಧ್ಯ ಸೀಳಿಕೊಂಡು ಹರಿದು ಸಂಗಮಗೊಂಡ ಪೂರ್ವದಲ್ಲಿ ವಿಶಾಲ ಬಯಲು ಸೇರುವ ಕೃಷ್ಣಾ , ಮಲಪ್ರಭಾ, ಘಟಪ್ರಭಾ ನದಿ ಕೊಳ್ಳದ ಹಾಗೂ ಕೈಗಾರಿಕೋದ್ಯಮಗಳಿಗೆ ವಿಶಿಷ್ಟ ಕೊಡುಗೆ ನೀಡಿದೆ.[೧೬]

ಕೃಷ್ಣಾ ನದಿ :

ಕೃಷ್ಣಾ ನದಿಯು ರಾಜ್ಯದ ಪ್ರಮುಖ ನದಿಗಳಲ್ಲಿ ಒಂದಾಗಿದೆ. ಸ್ಥಳೀಯವಾಗಿ ಇದಕ್ಕೆ ಹಿರೇಹೊಳೆ ಎಂಬ ಹೆಸರು ಇದೆ. ಈ ನದಿಯನ್ನು ಶಾಸನಗಳಲ್ಲಿ 'ಪೆರ್ದೊರೆ' ಹಾಗೂ ಸಂಸ್ಕೃತದಲ್ಲಿ 'ಕೃಷ್ಣವೇಣಿ' ಅಥವಾ ಕೃಷ್ಣವೆಣ್ಣಾ ಎಂದು ಕರೆಯಲಾಗಿದೆ.[೧೭] ಸಹ್ಯಾದ್ರಿ ಶ್ರೇಣಿಯಲ್ಲಿರುವ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಮಹಾಬಲೇಶ್ವರದಲ್ಲಿ ಈ ನದಿಯು ಉಗಮವಾಗಿ ಅಲ್ಲಿಂದ ಮುಂದೆ ಆ ರಾಜ್ಯದ ಸಾತಾರ, ಕೊಲ್ಲಾಪುರ ಜಿಲ್ಲೆಗಳ ಮೂಲಕ ಹರಿದು ಕರ್ನಾಟಕವನ್ನು ಪ್ರವೇಶಿಸುತ್ತದೆ. ಕರ್ನಾಟಕದಲ್ಲಿ ಬೆಳಗಾವಿ, ವಿಜಾಪುರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಈ ನದಿಯು ಹರಿಯುತ್ತದೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸೇಗುಣಸಿಯ ಬಳಿಯಿಂದ ಕೃಷ್ಣಾ ನದಿಯು ಅಥಣಿ ತಾಲೂಕು ಮತ್ತು ಜಮಖಂಡಿ ತಾಲೂಕಿನ ಗಡಿರೇಖೆಯಾಗಿ ಹರಿಯುತ್ತದೆ. ಜಮಖಂಡಿ ತಾಲೂಕಿನ ಮುತ್ತೂರಿನ ಬಳಿ ಬಿಜಾಪುರ ಜಿಲ್ಲೆಯನ್ನು ಪೂರ್ಣವಾಗಿ ಪ್ರವೇಶಿಸಿ ಮೊದಲು ಜಮಖಂಡಿ ತಾಲೂಕಿನಲ್ಲಿ ಹರಿದು ಸ್ವಲ್ಪ ದೂರ ಬೀಳಗಿ ತಾಲೂಕು ವಾಯುವ್ಯಭಾಗದಲ್ಲಿ ಸಾಗಿ, ಅಲ್ಲಿಂದ ಎಡದಂಡೆಯಲ್ಲಿ ವಿಜಾಪುರ, ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳಲ್ಲಿ ಮತ್ತು ಬಲದಂಡೆಯಲ್ಲಿನ ಬೀಳಗಿ, ಬಾಗಲಕೋಟೆ ಮತ್ತು ಹುನಗುಂದ ತಾಲೂಕುಗಳು ಇವುಗಳ ನಡುವಿನ ಗಡಿರೇಖೆಯಾಗಿ ಹರಿದು ಸ್ವಲ್ಪ ದೂರ ಮುದ್ದೇಬಿಹಾಳ ತಾಲೂಕು ಮತ್ತು ರಾಯಚೂರು ಜಿಲ್ಲೆಯ ಗಡಿಯನ್ನು ಪ್ರವಹಿಸುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ನದಿಯ ಸಾಮಾನ್ಯ ಹರಿವು ಆಗ್ನೇಯಾಭಿಮುಖವಾಗಿದ್ದು, ಈ ಜಿಲ್ಲೆಯಲ್ಲಿನ ಹರಿವು ಮೊದಲ ಸುಮಾರು ಮೂರನೆಯ ಒಂದು ಭಾಗದಲ್ಲಿ ಸುತ್ತು ಬಳಸಾಗಿ ಕ್ರಮಿಸುತ್ತದೆ. ಜಮಖಂಡಿಯ ಉತ್ತರ ಭಾಗದಲ್ಲಿರುವ ಮುತ್ತೂರಿನಿಂದ ತಾಲೂಕಿನ ಎಲ್ಲೆಯನ್ನು ತಲುಪುವ ಸಮಸ್ಥಿತಿಯಲ್ಲೇ ಸಾಗಿ, ಅಲ್ಲಿ ಇದ್ದಕ್ಕಿದ್ದಂತೆ ದಕ್ಷಿಣಕ್ಕೆ ತಿರುಗುತ್ತದೆ. ಬೀಳಗಿ ತಾಲೂಕಿನ ಗಲಗಲಿಯ ಬಳಿ ಪೂರ್ವಕ್ಕೆ ಪ್ರವಹಿಸಲಾರಂಭಿಸಿ ಮತ್ತೆ ಉತ್ತರ, ಪೂರ್ವ, ದಕ್ಷಿಣ ಹೀಗೆ ತಿರುಗುತ್ತ ಬಾಗೇವಾಡಿಯ ಅಂಚನ್ನು ಮುಟ್ಟುತ್ತದೆ. ಈ ತಾಣದಿಂದ ನದಿಯ ಹರಿವು ನೇರವಾಗಿ ಆಗ್ನೇಯಾಭಿಮುಖವಾಗಿದೆ. ಆದರೆ ಬೀಳಗಿ ತಾಲೂಕಿನ ಈಶಾನ್ಯದಲ್ಲಿ ಟಕ್ಕಳಕಿಯ ಬಳಿ ಇಬ್ಭಾಗವಾಗಿ ಮತ್ತೆ ಚಿಮ್ಮಲಗಿಯ ಬಳಿ ಒಂದಾಗಿ ಒಂದು ದೊಡ್ಡ ದ್ವೀಪವನ್ನು ನಿರ್ಮಿಸಿದೆ. ಆನಂತರ ಮುದ್ದೇಬಿಹಾಳ ತಾಲೂಕಿನ ದೇವೂರಿನ ಬಳಿ ದಕ್ಷಿಣಕ್ಕೆ ತಿರುಗಿ ಘಟಪ್ರಭಾ ನದಿ ಸಂಗಮವಾಗುವ ಸ್ಥಳದಿಂದ ಜಿಲ್ಲೆಯ ಎಲ್ಲೆಯವರೆಗೆ ಪೂರ್ವಕ್ಕೆ ಸಾಗುತ್ತದೆ. ಆ ಭಾಗದಲ್ಲಿ ಪುನಃ ಪ್ರವಹಿಸುತ್ತದೆ. ರಾಯಚೂರು ತಾಲೂಕಿನ ಈಶಾನ್ಯದಲ್ಲಿ ಬುರದಿಪಾಡು ಗ್ರಾಮದ ಬಳಿ ರಾಜ್ಯದ ಎಲ್ಲೆಯನ್ನು ಬಿಡುತ್ತದೆ. ಮುಂದೆ ಆಂಧ್ರಪ್ರದೇಶದ ಮೂಲಕವಾಗಿ ಮಚಲಿಪಟ್ಟಣದ ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ.

ಜಿಲ್ಲೆಯಲ್ಲಿ ಕೃಷ್ಣಾ ನದಿಯು ಪ್ರವಹಿಸುವ ಪ್ರದೇಶದಲ್ಲಿ ವಿಶಾಲವಾದ ಎರೆಮಣ್ಣಿನ ಹರವು ಉಂಟಾಗಿದೆ. ಬಲದಂಡೆಯಲ್ಲಿ ಎತ್ತರವಾದ ಎರೆಮಣ್ಣಿನ ಮೆಟ್ಟಲು ಮೆಟ್ಟಲಾದ ವಿಶಾಲವಾದ ಪ್ರದೇಶಗಳು ಇರುತ್ತವೆ. ಜಮಖಂಡಿ ತಾಲೂಕಿನ ಪಡಸಲಗಿ ಮುಂತಾದೆಡೆಗಳಲ್ಲಿ ಮಾತ್ರ ನದಿಯ ಪ್ರದೇಶ ಸುತ್ತಲ ಪ್ರದೇಶಗಳಿಗಿಂತ ವಿಶಿಷ್ಟ ರೀತಿಯದಾಗಿ ಎದ್ದು ಕಾಣುತ್ತದೆ. ನದಿಯ ಉತ್ತರ ಭಾಗ ಟ್ರ್ಯಾಪ್ ಶಿಲೆಯ ಪ್ರದೇಶವಾದರೆ, ದಕ್ಷಿಣ ಭಾಗ ಕಲಾದಗಿ ವ್ಯವಸ್ಥೆಯ ಮರಳುಶಿಲೆಯ ಪ್ರದೇಶವಾಗಿದೆ. ಇವೆರೆಡರ ಮಧ್ಯೆ ಪ್ರವಾಹದ ಕಾಲದಲ್ಲಿ ಬಂದು ಸೇರಿರುವ ಮೆಕ್ಕಲಿನ ಫಲವತ್ತಾದ ಭೂಮಿ ಉಂಟಾಗಿದೆ. ವಿಜಾಪುರ ಜಿಲ್ಲೆಯಲ್ಲಿ ಘಟಪ್ರಭಾ ನದಿಯು ಸೇರುವವರೆಗೆ ನದಿ ಅನೇಕ ಸೀಳುಗಳಾಗಿ ಹರಿದು ಮಧ್ಯೆ ಮಧ್ಯೆ ಮೇಲೆದ್ದ ಬಂಡೆಗಳ ಸಣ್ಣ ದ್ವೀಪಗಳನ್ನು ನಿರ್ಮಿಸಿ ಅಣತಿ ದೂರದವರೆಗೆ ಕಣಶಿಲೆಯ ಪ್ರದೇಶದ ಮೂಲಕವೂ ಸಾಗುತ್ತದೆ. ಈ ಬಂಡೆಗಳ ಕಣಿವೆಯ ಭಾಗದಲ್ಲಿ ನದಿಯ ಹರಿವಿನಲ್ಲಿ ಸಣ್ಣ ಪಾತಗಳು ಉಂಟಾಗಿವೆ. ಇದುವರೆಗಿನ ನದಿಯ ಪಾತ್ರ ಕಿರಿದಾಗಿದ್ದು ನಂತರ ಘಟಪ್ರಭಾ ನದಿ ಸಂಗಮ ಸ್ಥಾನದ ಬಳಿ ನದಿಯ ಪಾತ್ರ ಸುಮಾರು ೫೦೦ ಮೀಟರ್‌ಗಳಷ್ಟು ವಿಶಾಲವಾಗಿದೆ. ಮುಂದೆ ಮಲಪ್ರಭಾ ಸಂಗಮದ ಆನಂತರ ನದಿಯು ಸುಮಾರು ೬೦೦ ರಿಂದ ೭೦೦ ಮೀಟರಗಳಷ್ಟು ಅಗಲವಾಗಿರುತ್ತದೆ. ಜಿಲ್ಲೆಯಲ್ಲಿ ನದಿ ಹರಿಯುವಾಗ ಕಣಶಿಲೆ, ಟ್ರ್ಯಾಪ್ ಶಿಲೆ, ಮರಳು ಶಿಲೆ ಇತ್ಯಾದಿ ವಿವಿಧ ರೀತಿಯ ಶಿಲಾಪ್ರದೇಶಗಳನ್ನು ದಾಟಿ ಬರುವುದರಿಂದ ನದಿಯ ದಂಡೆಯಲ್ಲಿ ಮತ್ತು ಪಾತ್ರದಲ್ಲಿ ಅನೇಕ ಕೊರಕಲು ಕಲ್ಲು ಗುಂಡುಗಳ ಹರವುಗಳು ಕಂಡುಬರುತ್ತವೆ.

ಕೃಷ್ಣಾ ನದಿ ಪ್ರಸ್ಥಭೂಮಿಯ ಪ್ರದೇಶದ ನದಿಯಾಗಿದ್ದು, ಮುಂಗಾರು ಮಳೆಯೇ ಪ್ರಧಾನ ನೀರಿನ ಆಸರೆಯಾಗಿರುವುದರಿಂದ ಜೂನ್ ತಿಂಗಳಿನಿಂದ ಡಿಸೆಂಬರ್‌ವರೆಗೆ ನದಿಯ ಪ್ರವಾಹ ಅಧಿಕವಾಗುತ್ತದೆ. ಈ ಕಾಲದಲ್ಲಿ ಅಗಾಧ ಪ್ರಮಾಣದ ನೀರು ಹಲವು ಬಾರಿ ಎರಡು ದಂಡೆಗಳನ್ನು ಮೀರಿ ಏರಿದಂತೆ ಹರಿದು ಹೋಗುತ್ತದೆ. ಆದರೆ ಬೇಸಿಗೆಯ ದಿನಗಳಲ್ಲಿ ನದಿ ಸುಮಾರು ತಳಮಟ್ಟ ಹರಿಯುತ್ತದೆ. ಮಳೆಗಾಲದ ಭೋರ್ಗರೆತದ ತುಂಬು ಪ್ರವಾಹದ ಬದಲು ನದಿ ಸೀಳು ಸೀಳಾಗಿ ಸಣ್ಣ ಧಾರೆಗಳಾಗಿ ಹರಿಯುತ್ತಾ ನದಿಯ ಪಾತ್ರದಲ್ಲಿ ಬಂಡೆಯ ದ್ವೀಪಗಳು ಗೋಚರಿಸಿ ಕರಿಮರಳಿನ ಹರವನ್ನು ಪ್ರದರ್ಶಿಸುತ್ತದೆ.

ಘಟಪ್ರಭಾ ಮತ್ತು ಮಲಪ್ರಭಾ, ಕೃಷ್ಣಾ ನದಿಯ ಅತಿಮುಖ್ಯ ಉಪನದಿಗಳಾಗಿವೆ. ಕೃಷ್ಣಾ ನದಿಯ ಉಪನದಿಗಳಲ್ಲೊಂದಾದ ಡೋಣಿ ನದಿಯು ಬಿಜಾಪುರ ಜಿಲ್ಲೆಯ ಬಹುಭಾಗದಲ್ಲಿ ಪ್ರವಹಿಸಿ ಗುಲಬರ್ಗಾ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕೃಷ್ಣಾ ನದಿಯಲ್ಲಿ ಬೇಸಿಗೆ ಕಾಲದಲ್ಲಿ ಪ್ರವಾಹ ಕಡಿಮೆ ಇರುವುದರಿಂದ ಹಲವೆಡೆಗಳಲ್ಲಿ ನದಿಯನ್ನು ದಾಟಬಹುದು. ಕೆಲವು ಸ್ಥಳಗಳಲ್ಲಿ ಹರಿಗೋಲುಗಳಿಂದ ದಾಟುವ ಸೌಲಭ್ಯವಿದೆ. ನದಿಗೆ

ಅಡ್ಡಲಾಗಿ ಪಡಸಲಗಿ ಬಳಿ ಜಮಖಂಡಿ ವಿಜಾಪುರ ರಸ್ತೆ, ಗಲಗಲಿ ಬಳಿ ಮುಧೋಳ ಬಳಿ ಸೇತುವೆಗಳಿವೆ. ಗದಗ ಸೊಲ್ಲಾಪುರ ರೈಲು ಮಾರ್ಗವು ಜಿಲ್ಲೆಯ ಆಲಮಟ್ಟಿ ಬಳಿ ಈ ನದಿಯನ್ನು ಹಾದು ಹೋಗುತ್ತದೆ. ಜಿಲ್ಲೆಯ ಬಾಗಲಕೋಟೆ ತಾಲೂಕಿನ ಜೈನಾಪುರ, ಜಮಖಂಡಿ ತಾಲೂಕಿನ ಮುತ್ತೂರು ಮತ್ತು ಶೂರ್ಪಾಲಿ, ಬೀಳಗಿ ತಾಲೂಕಿನ ಗಲಗಲಿ, ದೇವರಗಣ್ಣೂರು ಮುಂತಾದುವುಗಳು ಈ ನದಿಯ ದಂಡೆಯಲ್ಲಿರುವ ಪುಣ್ಯಕ್ಷೇತ್ರಗಳಲ್ಲಿ ಪ್ರಮುಖವಾದವುಗಳು. ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ಈ ಮೂವರಿಗೂ ಆಲಮಟ್ಟಿ ಹತ್ತಿರ ಲಾಲ್ ಬಾಹದ್ದೂರ ಶಾಸ್ತ್ರೀ ಆಣೆಕಟ್ಟನ್ನು ನಿರ್ಮಿಸಿದ್ದಾರೆ.[೧೮]

ಘಟಪ್ರಭಾ ನದಿ :

ಬೆಳಗಾವಿ ನಗರದಿಂದ ೪೦ ಕಿ.ಮೀ.ಗಳ ಪಶ್ಚಿಮದಲ್ಲಿ ಸಹ್ಯಾದ್ರಿ ಶ್ರೇಣಿಯ ಅಂಚಿನಲ್ಲಿರುವ ರಾಮಘಟ್ಟದಲ್ಲಿ ಉಗಮಿಸುವ ಘಟಪ್ರಭಾ ನದಿಯು ಪೂರ್ವಾಭಿಮುಖವಾಗಿ ಹರಿದು, ವಿಜಾಪುರ ಜಿಲ್ಲೆಯ ಚಿಮ್ಮಲಗಿಯ ಬಳಿ ಗಿರಿಸಾಗರ ಎಂಬಲ್ಲಿ ಕೃಷ್ಣಾ ನದಿಯನ್ನು ಸಂಗಮಿಸುತ್ತದೆ. ಈ ನದಿಯ ಒಟ್ಟು ಉದ್ದ ೩೦೫ ಕಿ.ಮೀ.ಗಳಾಗಿದೆ. ಮುಧೋಳ ನಗರಕ್ಕೆ ಪಶ್ಚಿಮದಲ್ಲಿ ೧೩ ಕಿ.ಮೀ. ಗಳ ದೂರದಲ್ಲಿ ಬಾಗಲಕೋಟೆ ಜಿಲ್ಲೆಯನ್ನು ಪ್ರವೇಶಿಸುವ ಈ ನದಿಯು ಮುಧೋಳ ಮತ್ತು ಬಾಗಲಕೋಟೆ ತಾಲೂಕುಗಳ ಮೂಲಕ ಸುಮಾರು ೧೧೨ ಕಿ.ಮೀ.ಗಳ ದೂರ ಪ್ರವಹಿಸುತ್ತದೆ. ಜಿಲ್ಲೆಯ ಬಾಗಲಕೋಟೆ, ಮುಧೋಳ ಹಾಗೂ ಚಿಮ್ಮಲಗಿ ಊರುಗಳು ಈ ನದಿಯ ತೀರದಲ್ಲಿವೆ. ಬೀಳಗಿ ತಾಲೂಕಿನ ಹೆರಕಲ್ ಬಳಿ ಈ ನದಿಯಿಂದಾಗಿ ಉಂಟಾಗಿರುವ ಕೊರಕಲು ದೃಶ್ಯವು ನೋಡಲು ರಮ್ಯವಾಗಿರುತ್ತದೆ. ಘಟಪ್ರಭಾ ನದಿ ಕೃಷ್ಣಾ ನದಿಯನ್ನು ಸೇರುವೆಡೆಯಲ್ಲಿ ಅದರ ಹರಿವು ೯೦ ಮೀ. ಗಳಷ್ಟು ಅಗಲವಾಗಿದೆ. ಘಟಪ್ರಭಾ ನದಿಗೆ ಸಮೃದ್ಧವಾದ ಜಲಸಂಪನ್ಮೂಲವಿದೆ. ಇದಕ್ಕೆ ೧೨೭ ರಿಂದ ೬೩೫ ಮಿ.ಮೀ. ಗಳಷ್ಟು ಮಳೆ ಬೀಳುವ ಮಲೆನಾಡಿನ ವಿಶಾಲ ಜಲಾನಯನ ಪ್ರದೇಶವಿದೆ. ಇದರಲ್ಲಿ ವಾರ್ಷಿಕವಾಗಿ ಹರಿಯುವ ನೀರಿನ ಸರಾಸರಿ ಪ್ರಮಾಣ ೧೨,೦೦೦ ಕೋಟಿ ಘನ ಅಡಿಗಳಾಗಿರುತ್ತದೆ. ಆದರೆ ಮಳೆಗಾಲದ ತರುವಾಯ ಈ ನದಿ ಕೃಶವಾಗತೊಡಗಿ ಸಣ್ಣ ತೊರೆಯಂತಾಗಿ ಬೇಸಿಗೆಯಲ್ಲಿ ಬಹಳ ಮಟ್ಟಿಗೆ ಬತ್ತಿಯೇ ಹೋಗುತ್ತದೆ. ಈ ನದಿಯಲ್ಲಿ ದೋಣಿ ಸಂಚಾರ ಸಾಧ್ಯವಿರುವುದಿಲ್ಲ.

ಮಲಪ್ರಭಾ ನದಿ :

ಮಲಪ್ರಭಾ ನದಿಯು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಜಾಂಬೋತಿಯಿಂದ ಪಶ್ಚಿಮಕ್ಕೆ ಸುಮಾರು ೧೩ ಕಿ.ಮೀ. ದೂರದ ಕಣಕುಂಬಿಯ ಬಳಿ ಸಹ್ಯಾದ್ರಿಯ ಶಿಖರದಲ್ಲಿ ಉಗಮಿಸುತ್ತದೆ. ಈ ನದಿಯ ಒಟ್ಟು ಉದ್ದ ಸುಮಾರು ೩೩೦ ಕಿ.ಮೀ. ಗಳಾಗಿದ್ದು, ಇದರಲ್ಲಿ ಸುಮಾರು ೧೯೩ ಕಿ.ಮೀ.ಗಳ ದೂರ ಬೆಳಗಾವಿ ಜಿಲ್ಲೆಯ

ಖಾನಾಪುರ, ಬೈಲಹೊಂಗಲ, ಸವದತ್ತಿ ಮತ್ತು ರಾಮದುರ್ಗ ತಾಲೂಕುಗಳಲ್ಲಿ ಸುಮಾರು ೩೨ ಕಿ.ಮೀ.ಗಳ ದೂರ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿಯೂ. ಅನಂತರದ ಸುಮಾರು ೧೦೫ ಕಿ.ಮೀ.ಗಳ ದೂರ ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಹುನಗುಂದ ತಾಲೂಕುಗಳಲ್ಲೂ ಹರಿಯುತ್ತದೆ. ಬೆಳಗಾವಿ ಜಿಲ್ಲೆಯ ರಾಮದುರ್ಗದ ಸಮೀಪದಿಂದ ಹರಿಯುವ ಈ ನದಿಯು ಅದೇ ತಾಲೂಕಿನ ಆಗ್ನೇಯ ಅಂಚಿನಲ್ಲಿ ಹರಿದು ಬಾದಾಮಿ ತಾಲೂಕಿನ ಅಂಚಿನಿಂದ ವಿಜಾಪುರ ಜಿಲ್ಲೆಯ ಎಲ್ಲೆಯನ್ನು ಪ್ರವೇಶಿಸುತ್ತದೆ. ಮುಂದೆ ಸುಮಾರು ೩೨ ಕಿ.ಮೀ.ಗಳ ದೂರ ವಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿ ಪೂರ್ವಾಭಿಮುಖವಾಗಿ ಹರಿದು ಹೊಳೆ ಆಲೂರಿನಿಂದ ಸ್ವಲ್ಪ ಮುಂದೆ ಉತ್ತರಕ್ಕೆ ತಿರುಗಿ ಕರ್ಲಕೊಪ್ಪದ ಬಳಿ ಬಾದಾಮಿ ತಾಲೂಕನ್ನು ಪ್ರವೇಶಿಸಿ ಮುಂದೆ ಕೃಷ್ಣಾ ನದಿಯನ್ನು ಸೇರುವವರೆಗೂ ಬಾಗಲಕೋಟ ಜಿಲ್ಲೆಯಲ್ಲಿ ಮೊದಲು ಅನೇಕ ಬಳಸುಗಳೊಡನೆ ಉತ್ತರಾಭಿಮುಖವಾಗಿ ಹರಿದು, ಬಾದಾಮಿ ತಾಲೂಕಿನ ನಾಗರಾಳದ ಬಳಿ ಪೂರ್ವಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ನೆಲವಗಿಯವರೆಗೂ ಮುಂದುವರೆಯುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹರಿದು ಪಟ್ಟದಕಲ್ಲಿನ ಬಳಿ ವಾಯುವ್ಯಕ್ಕೆ ತಿರುಗಿ, ಜಾಲಿಹಾಳದ ಬಳಿ ಈಶಾನ್ಯದೆಡೆಗೆ ತಿರುಗಿ ಮುಂದೆ ಐಹೊಳೆಯ ಬಳಿ ಮತ್ತೆ ವಾಯುವ್ಯಕ್ಕೆ ತಿರುಗಿ ಕಮತಗಿಯವರೆಗೂ ಹೆಚ್ಚು ಕಡಿಮೆ ಉತ್ತರಾಭಿಮುಖವಾಗಿ ಹರಿದು ಅಲ್ಲಿಂದ ಮತ್ತೆ ಅನೇಕ ಬಳಸುಗಳೊಡನೆ ಈಶಾನ್ಯಾಭಿಮುಖವಾಗಿ ಪ್ರವಹಿಸುತ್ತದೆ. ಇಲ್ಲಿಂದ ಮುಂದೆ ಕೂಡಲಸಂಗಮದ ಬಳಿ ಕೃಷ್ಣಾನದಿಯನ್ನು ಸೇರುತ್ತದೆ. ಬೂದಿಹಾಳ, ಗಂಜಿಹಾಳ, ಕೆನಗಾಲದ ಮೂಲಕ ಹಾಯ್ದು ಆಗ್ನೇಯಕ್ಕೆ ದಿಕ್ಕು ಬದಲಿಸಿದರೂ ಮುಂದೆ ಬಹು ಬೇಗ ಪುನಃ ಈಶಾನ್ಯಕ್ಕೆ ದಿಕ್ಕು ಬದಲಿಸಿ ಪ್ರವಹಿಸುತ್ತದೆ.

ಮಲಪ್ರಭಾ ನದಿ ಹರಿಯುವ ಪ್ರದೇಶದಲ್ಲಿ ಎರಡು ಭಿನ್ನ ರೀತಿಯ ಭೌಗೋಳಿಕ ಸನ್ನಿವೇಶಗಳನ್ನು ಕಾಣಬಹುದು. ಒಟ್ಟು ಹರಿವಿನ ಮೊದಲ ಭಾಗದಲ್ಲಿ ಕಪ್ಪು, ಮಣ್ಣಿನ ಭೂಮಿಯಲ್ಲಿ ಅಷ್ಟೇನೂ ಆಳವಿಲ್ಲದೆ ಹರಿದು, ಕ್ರಮೇಣ ಕೊರೆಯುತ್ತ ಆಳವಾದ ಕಮರಿಗಳನ್ನು ನಿರ್ಮಿಸುತ್ತಾ ಸಾಗುತ್ತದೆ. ನದಿಯ ಉದ್ದಕ್ಕೂ ತಿರುವುಗಳೂ ಅಲ್ಲಲ್ಲೇ ಮಧ್ಯದಲ್ಲೇ ಚಿಕ್ಕ ಚಿಕ್ಕ ದ್ವೀಪಗಳು ನೈಸರ್ಗಿಕವಾಗಿ ಉಂಟಾಗಿವೆ. ಮಳೆಗಾಲದಲ್ಲಿ ನದಿಯಲ್ಲಿ ಭಾರಿ ಪ್ರವಾಹ ಇದ್ದು ಮಣ್ಣಿನಿಂದ ಕೂಡಿದ ಬಗ್ಗಡದ ನೀರು ಆಗ ಸಾಮಾನ್ಯ ಉಳಿದ ನದಿಗಳಲ್ಲೂ ನದಿ ಸಣ್ಣದಾಗಿ ಆದರೆ ನಿರಂತರವಾಗಿ ಹರಿಯುತ್ತಲೇ ಇರುತ್ತದೆ. ಭೂವೈಜ್ಞಾನಿಕವಾಗಿ ನೋಡಿದರೆ ಈ ನದಿಯು ಉತ್ತರದ ಕಲಾದಗಿ ಮತ್ತು ದಖನ್ ಪ್ರಸ್ಥಭೂಮಿಯ ಎಲ್ಲೆಯಾಗಿ ಹರಿಯುತ್ತದೆ. ಐಹೊಳೆಯಿಂದ ಮುಂದೆ ನದಿ ಕಲಾದಗಿ ಶ್ರೇಣಿಯ ಮೂಲಕವೇ ಗಮನಿಸುತ್ತದೆ. ಜಿಲ್ಲೆಯ ಕಮತಗಿ, ಕೂಡಲಸಂಗಮ, ತಂಗಡಗಿ ಮತ್ತು ಗಂಜಿಹಾಳ

ಇವು ನದಿ ದಂಡೆಗೆ ಇರುವ ಊರುಗಳು. ಈ ನದಿ ದಂಡೆಯ ಅನೇಕ ಕಡೆಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳನ್ನು ಗುರುತಿಸಲಾಗಿದ್ದು, ಪ್ರಸಿದ್ಧ ಐತಿಹಾಸಿಕ ನೆಲೆಯಾದ ಬಾದಾಮಿ ಇದಕ್ಕೆ ಐದು ಕಿ.ಮೀ.ಗಳ ದೂರದಲ್ಲಿದೆ. ನದಿಯ ದಂಡೆಯ ಮೇಲೆ ಇರುವ ನಂದಿಕೇಶ್ವರ, ಪಟ್ಟದಕಲ್ಲು, ಐಹೊಳೆಗಳು ಚಾಳುಕ್ಯ ವಾಸ್ತುಶಿಲ್ಪಕ್ಕೆ ಪ್ರಸಿದ್ಧವಾಗಿವೆ. ಈ ನದಿ ಕೃಷ್ಣಾ ನದಿಯನ್ನು ಸೇರುವ ಸ್ಥಳವಾದ ಕೂಡಲಸಂಗಮ ಒಂದು ಪ್ರಸಿದ್ಧ ಕ್ಷೇತ್ರವಾಗಿದೆ.

ಬಾಗಲಕೋಟ ಜಿಲ್ಲೆ ಕರ್ನಾಟಕ ರಾಜ್ಯ ಉತ್ತರ ಭಾಗದಲ್ಲಿದ್ದು, ೭೪°-೫೯° ರಿಂದ ೭೬°-೨೦° ಪೂರ್ವ ರೇಖಾಂಶ ಹಾಗೂ ೧೫°-೪೯° ರಿಂದ ೧೬°-೪೬° ಉತ್ತರ ಅಕ್ಷಾಂಶಗಳವರೆಗೆ ವ್ಯಾಪಿಸಿದೆ. ಇದು ವಿಜಯಪುರ, ಬೆಳಗಾವಿ, ಗದಗ, ಕೊಪ್ಪಳ, ರಾಯಚೂರ ಜಿಲ್ಲೆಗಳಿಂದ ಸುತ್ತುವರೆದಿದೆ.[೧೯]

ಕೋಷ್ಟಕ–೧

ಜಿಲ್ಲೆಯ ತಾಲೂಕಾವಾರು ಸಾಮಾನ್ಯ ವಿವರಗಳು

ಕ್ರ. ಸಂ	ತಾಲೂಕು	ಉತ್ತರ ಅಕ್ಷಾಂಶ (ಡಿಗ್ರಿ & ಸಿ. ನಿಮಿಷಗಳಲ್ಲಿ)		ಪೂರ್ವ ರೇಖಾಂಶ (ಡಿಗ್ರಿ & ಸಿ. ನಿಮಿಷಗಳಲ್ಲಿ)		ಸಮುದ್ರಮಟ್ಟದಿಂದ ಎತ್ತರ ಮೀ.		ವಿಸ್ತೀರ್ಣ ಹೆಕ್ಟರಗಳು
		ಇಂದ	ವರೆಗೆ	ಇಂದ	ವರೆಗೆ	ಇಂದ	ವರೆಗೆ	
೧	ಬಾಗಲಕೋಟ	೨೭೩೨೬	೭೬.೦೭	೧೬.೦೩	೧೬.೨೨	೪೫೦	೮೦೦	೯೩೫.೨೯
೨	ಬಾದಾಮಿ	೭೨.೧೮	೭೫.೫೩	೧೫.೪೮	೧೬.೦೮	೪೫೦	೮೦೦	೧೩೯೭.೧೯
೩	ಹುನಗುಂದ	೭೫೫೦	೭೬.೨೨	೧೫.೫೨	೧೬.೧೪	೪೫೦	೮೦೦	೧೩೫೪.೨೨
೪	ಮುಧೋಳ	೭೫.೦೨	೭೫.೩೦	೧೬.೦೬	೧೬.೨೬	೪೫೦	೮೦೦	೯೫೦.೩೪
೫	ಜಮಖಂಡಿ	೭೫.೦೦	೭೫.೩೪	೧೬.೨೪	೧೬.೫೩	೪೫೦	೮೦೦	೧೧೬೯.೦೯
೬	ಬೀಳಗಿ	೭೫.೨೩	೭೫.೫೦	೧೬.೧೩	೧೬.೩೧	೪೫೦	೮೦೦	೭೮೧.೭೬

ಮೂಲ ಆಧಾರ: ಬಾಗಲಕೋಟ ಜಿಲ್ಲಾ ಅಂಕಿ–ಅಂಶಗಳ ನೋಟ–೨೦೧೧–೧೨

ಅಡಿ ಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು,ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧, ಪು, ೧
೨. ಅದೇ, ಪುಟ
೩. ರಾಜಾರಾಮ ಹೆಗಡೆ, ಕೆರೆ ನೀರಾವರಿ ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨, ಪು, ೧೦೬
೪. ಅದೇ, ಪು
೫. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧
೬. ಮುನಿಸ್ವಾಮಿ ಆರ್. (ಸಂ) ಕರ್ನಾಟಕ ರಾಜ್ಯ ಗೆಜೆಟಿಯರ್,ಬಿಜಾಪುರ ಜಿಲ್ಲೆ, ಕರ್ನಾಟಕ ಸರ್ಕಾರ ೧೯೯೯ , ಪು, ೧೧೦೬
೭. ಅದೇ, ಪು, ೧೧೦೭
೮. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೧
೯. ಮುನಿಸ್ವಾಮಿ ಆರ್. (ಸಂ) ಕರ್ನಾಟಕ ರಾಜ್ಯ ಗೆಜೆಟಿಯರ್, ಬಿಜಾಪುರ ಜಿಲ್ಲೆ, ಕರ್ನಾಟಕ ಸರ್ಕಾರ, ೧೯೯೯, ಪು, ೧೮
೧೦. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೯
೧೧. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟ ಜಿಲ್ಲಾ ಸಂಸ್ಕೃತಿ, ಜಿಲ್ಲಾ ೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨೦೧೪, ಪು, ೧೬೭
೧೨. ದಯಾನಂದ ಯಾವಗಲ್, ಬಾಗಲಕೋಟ ಪರಿಸರದ ವಾಸ್ತುಶಿಲ್ಪಗಳು, ೨೦೧೩, ಬಿ.ವ್ಹಿ.ವ್ಹಿ.ಎಸ್. ಬೀಳೂರು ಗುರುಬಸವ ವಸ್ತು ಸಂಗ್ರಹಾಲಯ, ಬಾಗಲಕೋಟ, ಪು, ೫, ೨೦೧೩
೧೩. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೯
೧೪. ಅದೇ ಪುಟ ಪು. ೨೧
೧೫. ಅದೇ, ಪು
೧೬. ಸಿದ್ದಣ್ಣ ಎಚ್.ಎಲ್., ದಕ್ಷಿಣ ಪಥೇಶ್ವರ, ಚಾಲುಕ್ಯ ಉತ್ಸವ ಸಮಿತಿ, ಬಾಗಲಕೋಟ, ೨೦೦೨, ಪು,೩
೧೭. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು.೨೧
೧೮. ವಿಜಯಕುಮಾರ ಕಟಗಿಹಳ್ಳಿಮಠ, ಪೂರ್ವೋಕ್ತ, ಪು. ೧೬೯
೧೯. ಬಾಗಲಕೋಟ ಜಿಲ್ಲಾ ಅಂಕಿ, ಅಂಶಗಳ ನೋಟ, ೨೦೧೦-೧೧

ಅಧ್ಯಾಯ : ೨

ಕೆರೆಗಳ ಉಗಮ ಮತ್ತು ಬೆಳವಣಿಗೆ

ಅಧ್ಯಾಯ-೨
ಕೆರೆಗಳ ಉಗಮ ಮತ್ತು ಬೆಳವಣಿಗೆ

೨.೧ ಕೆರೆಗಳ ಉಗಮ

ಭೂಮಿ ಸೌರವ್ಯೂಹದಲ್ಲಿನ ಒಂದು ಗ್ರಹವಾಗಿದ್ದು, ಮೇಲೆ ಮಾತ್ರ ಜೀವ ವಿಕಾಸಗೊಂಡು ಸುಮಾರು ೪.೫ ಮಿಲಿಯನ್ ವರ್ಷಗಳ ಪೂರ್ವದಲ್ಲಿ ಭೂಮಿ ಉಗಮವಾಯಿತೆಂದು ಹೇಳಲಾಗಿದೆ. ಭೂಮಿಯ ಆಗಿನ ತಾಪಮಾನ ಎಷ್ಟಿತ್ತೆಂದರೆ ಅದು ಕರಗಿ ಬಂಡೆಗಳು ಉರಿಯುವ ಗೋಳಾಗಿವೆ. ಅದು ಪದೇ ಪದೇ ಜ್ವಾಲಾಮುಖಿಗಳು ಸಂಭವಿಸಿ ಹಾಗೂ ದಕ್ಕಾಮುಕ್ಕಿಗಳಾಗಿವೆ. ವಿಕಸನ ಆರಂಭಿಕ ಅವಧಿ ಅನೇಕ ಧೂಮಕೇತುಗಳು, ಉಲ್ಕೆಗಳು ಭೂಮಿಗೆ ಅಪ್ಪಳಿಸಿ ನಂತರದಲ್ಲಿ ಬೃಹತ್ ಬಂಡೆಗಳಾಗಿ ಭೂಮಿಯ ಉಗಮವಾಯಿತು. ಚಂದ್ರ ಉದಯಿಸಿದ ಹಾಗೂ ಭೂ ಹವಾಗುಣ ವಾತಾವರಣ ನಿರ್ಮಾಣವಾಯಿತು.[೧]

ಭಾರತದ ಭೂ ವಿವರಣೆಯ ಪರಿಚಯವಿಲ್ಲದೆ ಇಲ್ಲಿನ ಇತಿಹಾಸವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಭಾರತೀಯ ಉಪಖಂಡವು ರಷ್ಯವನ್ನು ಬಿಟ್ಟರೆ ಉಳಿದ ಯುರೋಪ ಖಂಡದಷ್ಟು ವಿಶಾಲ. ೪,೨೦೨,೫೦೦ ಚದರ ಕಿಲೋಮೀಟರಿನ ಈ ಭೂ ಖಂಡದಲ್ಲಿ ಭಾರತ, ಬಾಂಗ್ಲಾದೇಶ, ನೇಪಾಳ, ಭೂತಾನ ಮತ್ತು ಪಾಕಿಸ್ತಾನ-ಹೀಗೆ ಐದು ದೇಶಗಳಿವೆ. ಭಾರತದಲ್ಲಿ ಇಪ್ಪೈದು ರಾಜ್ಯಗಳು ಮತ್ತು ಏಳು ಕೇಂದ್ರಾಡಳಿತ ಪ್ರದೇಶಗಳು ಇವೆ.

ಇಡೀ ಉಪಖಂಡವು ಬಹುಮಟ್ಟಿಗೆ ಉಷ್ಣವಲಯದಲ್ಲಿದೆ. ಮುಂಗಾರು, ಹಿಂಗಾರು ಮಳೆಗಳು ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿವೆ. ಜೂನ್ ಮತ್ತು ಅಕ್ಟೋಬರಗಳ ನಡುವೆ ಬೀಸುವ ನೈಋತ್ಯ ಮಾರುತಗಳು ಮುಂಗಾರು ಮಳೆ ತರುತ್ತವೆ. ದೇಶದ ಬಹು ಭಾಗಕ್ಕೆ ನೀರುಣಿಸುವ ಈ ಮುಂಗಾರು, ಕೃಷಿಗೆ ಆಧಾರ. ನವ್ಹೆಂಬರ್‌ನಿಂದ ಮೇ ತಿಂಗಳವರೆಗೆ ಹಿಂಗಾರು ಮಳೆಯ ಕಾಲ. ಈಶಾನ್ಯ ಮಾರುತಗಳು ಬೀಸುವ ದಿಕ್ಕುಗಳನ್ನು ಕ್ರಿ.ಶ. ಒಂದನೆಯ ಶತಮಾನದಲ್ಲಿ ಕಂಡು ಹಿಡಿಯಲಾಯಿತು. ಅದಿನಿಂದ ಪಶ್ಚಿಮ ಏಷ್ಯಾ ಮತ್ತು ಮೆಡಿಟೇರಿಯನ್ ಪ್ರದೇಶಗಳಿಂದ ನೈಋತ್ಯ ಮಾರುತಗಳ ಕಾಲದಲ್ಲಿ ವರ್ತಕರು ಭಾರತ ಹಾಗೂ ಆಗ್ನೇಯ ಏಷ್ಯಾಕ್ಕೆ ಬಂದು, ಈಶಾನ್ಯ ಮಾರುತಗಳು ಆರಂಭಗೊಂಡ ನಂತರ ಹಿಂದಿರುಗುವ ರೂಢಿ ಮಾಡಿಕೊಂಡರು. ಇದರಿಂದಾಗಿ ಭಾರತಕ್ಕೆ ಆ ಪ್ರದೇಶಗಳೊಂದಿಗೆ ವಾಣಿಜ್ಯ ಸಂಬಂಧಗಳು ಮಾತ್ರವಲ್ಲದೆ ಸಾಂಸ್ಕೃತಿಕ ಸಂಬಂಧಗಳೂ ಏರ್ಪಟ್ಟವು. ಆಗ್ನೇಯ ಏಷ್ಯದೊಂದಿಗೂ ಇಂತಹ ನಂಟು ಬೆಳೆಯಿತು.[೨]

ಭಾರತವು ಉತ್ತರದಲ್ಲಿ ಹಿಮಾಲಯ ಪರ್ವತ ಶ್ರೇಣಿಯಿಂದ, ಉಳಿದ ಮೂರು

ದಿಕ್ಕುಗಳಲ್ಲಿ ಸಮುದ್ರಗಳಿಂದ ಆವೃತವಾಗಿದೆ. ಸೈಬೀರಿಯಾ ಮತ್ತು ಮಧ್ಯ ಏಷ್ಯಗಳಿಂದ ಶೀತಮಾರುತಗಳು ಬೀಸದಂತೆ ಹಿಮಾಲಯ ತಡೆದು ಉತ್ತರ ಭಾರತದ ಹವೆ ವರ್ಷವಿಡಿ ಬೆಚ್ಚಗಿರುವಂತೆ ಮಾಡಿದೆ. ಪರಕೀಯ ಆಕ್ರಮಣಗಳಿಗೂ ಅದು ತಡೆಯೊಡ್ಡಿದೆ. ಆದರೆ ಹಿಮಾಲಯದ ದಕ್ಷಿಣ ಚಾಚು, ಅಂದರೆ ಭಾರತದ ವಾಯುವ್ಯದ ಸುಲೇಮಾನ ಬೆಟ್ಟ ಸಾಲುಗಳಲ್ಲಿರುವ ಖೈಬರ್ ಮತ್ತು ಬೋಲಾನ್ ಕಣಿವೆಗಳ ಮೂಲಕವೂ ಇತಿಹಾಸ ಪೂರ್ವ ಕಾಲದಿಂದ ಜನ ಬಂದು ಹೋಗಿದ್ದಾರೆ. ಇರಾನ್, ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಗಳಿಂದ ವಲಸೆಗಾರರು ಹಾಗೂ ಅಕ್ರಮಣಕಾರರು ಬಂದು ಹೋಗಿದ್ದಾರೆ. ಹಿಂದುಕುಷ್ ಪರ್ವತಗಳು ಸಹ 'ಸಿಂಧುನದಿ' ಬಯಲು ಮತ್ತು 'ಆಕ್ಸ್‌ನದಿ' ಬಯಲುಗಳ ನಡುವೆ ದಾಟಲಾರದ ತಡೆಯಾಗಿಲ್ಲ. ಈ ಕಣಿವೆಗಳ ಮೂಲಕ ಭಾರತವು ಪಶ್ಚಿಮ ಮತ್ತು ಮಧ್ಯ ಏಷ್ಯಾ ಪ್ರದೇಶಗಳೊಂದಿಗೆ ವಾಣಿಜ್ಯ ಹಾಗೂ ಸಾಂಸ್ಕೃತಿಕ ಸಂಪರ್ಕಗಳನ್ನು ಪಡೆದುಕೊಂಡಿತ್ತು.[೩]

ಹಿಮಾಲಯದಲ್ಲಿ ಹುದುಗಿಕೊಂಡಿರುವ ಕಾಶ್ಮೀರ ಮತ್ತು ನೇಪಾಳ ಕಣಿವೆಗಳು ತಮ್ಮದೆ ಆದ ಜೀವನ ವಿಧಾನವನ್ನು ರೂಪಿಸಿಕೊಂಡಿದ್ದರೂ ಹಲವಾರು ಘಾಟುಗಳ ಮೂಲಕ ಭಾರತದೊಂದಿಗೆ ಸಂಪರ್ಕ ಪಡೆದಿವೆ. ಪಾಮಿರ್ ಪ್ರಸ್ಥಭೂಮಿಯು ಸಹ ಬೌದ್ಧ ಮತವು ಮಧ್ಯ ಏಷ್ಯವನ್ನು ಮುಟ್ಟಲು ತಡೆಯಾಗಲಿಲ್ಲ. ಕಾಶ್ಮೀರ ಹಾಗೂ ನೇಪಾಳಗಳು ಸಂಸ್ಕೃತ ವಿದ್ವತ್ ಕೇಂದ್ರಗಳಾಗಿ ರೂಪಗೊಂಡವು. ಅತಿ ಹೆಚ್ಚು ಸಂಸ್ಕೃತ ಹಸ್ತಪ್ರತಿಗಳು ದೊರೆತಿರುವುದು ಈ ಪ್ರದೇಶಗಳಿಂದಲೇ.[೪]

ಹಿಮಾಲಯದ ತಪ್ಪಲು ಪ್ರದೇಶಗಳ ಕಾಡುಗಳನ್ನು ಮೆಕ್ಕಲು ಮಣ್ಣು ಬಯಲುಗಳ ಕಾಡುಗಳಿಗಿಂತ ಸುಲಭವಾಗಿ ಕಡಿಯಬಹುದು. ಅಲ್ಲಿ ನದಿಗಳ ಪಾತ್ರ ಕಿರಿದಾಗಿದ್ದು ದಾಟುವುದು ಸುಲಭ. ಅದರಿಂದ ಈ ತಪ್ಪಲು ಪ್ರದೇಶಗಳಲ್ಲಿ ಪಶ್ಚಿಮ, ಪೂರ್ವ ರಸ್ತೆಗಳು ಸಹಜವಾಗಿ ರೂಪಗೊಂಡವು. ಕ್ರಿ.ಪೂ. ಆರನೆಯ ಶತಮಾನದಲ್ಲಿ ಅತ್ಯಂತ ಪ್ರಾಚೀನ ಕೃಷಿಕ್ಷೇತ್ರಗಳು, ರಾಜ್ಯಗಳು ತಲೆಯೆತ್ತಿದುದು ಇಲ್ಲಿಯೇ.[೫]

ಸಿಂಧು ನದಿಯ ಜಾಲ, ಗಂಗಾ, ಸಿಂಧು ಬಯಲುಗಳನ್ನು ವಿಭಜಿಸುವ ಪ್ರದೇಶ, ಗಂಗಾ ಬಯಲು, ಬ್ರಹ್ಮಪುತ್ರಾ ಬಯಲು ಇವು ಇರುವ ಪ್ರದೇಶವನ್ನು ಭಾರತೀಯ ಇತಿಹಾಸದ ಕೇಂದ್ರ ಎಂದು ಹೇಳಬಹುದು. ಈ ಪ್ರದೇಶದ ಪಶ್ಚಿಮ ಭಾಗಗಳಲ್ಲಿ ವರ್ಷಪೂರ್ತಿ ೨೫ ಸೆಂ.ಮೀ. ಮಳೆಯಾದರೆ, ಪೂರ್ವಕ್ಕೆ ಹೋಗುತ್ತ ಅದು ಏರುತ್ತ ಬಂದು, ಗಂಗಾ ಬಯಲಿನ ಕೆಳ ಹಾಗೂ ಬ್ರಹ್ಮಪುತ್ರಾ ನದಿಯ ಬಯಲಿನಲ್ಲಿ ೨೫೦ ಸೆಂ.ಮೀ. ಆಗುತ್ತದೆ. ಕಡಿಮೆ ಮಳೆಯ ಪ್ರದೇಶಗಳ ಕಾಡನ್ನು ಕಡಿಯಲು ಕಲ್ಲು ಮತ್ತು ತಾಮ್ರದ ಹತಾರಗಳೇ ಸಾಕಾದರೆ ಹೆಚ್ಚು ಮಳೆ ಪ್ರದೇಶದ ಕಾಡುಗಳಿಗೆ ಕಬ್ಬಿಣದ ಉಪಕರಣಗಳು ಅಗತ್ಯ. ಹೀಗಾಗಿ ಪಶ್ಚಿಮ ಭಾಗದಲ್ಲಿ ಪ್ರಾಕೃತಿಕ ಸಂಪತ್ತನ್ನು ಬಳಸುವುದು

ಮೊದಲು ಆರಂಭವಾಗಿ ಆನಂತರ ಅದು ಪೂರ್ವಕ್ಕೆ ಹರಡುತ್ತ ಹೋಯಿತು. [೬]

ಕೃಷಿಗೆ ಒಳಗಾದ ನಂತರ ಸಿಂಧು–ಗಂಗಾ ಬಯಲುಗಳು ಸಮೃದ್ಧವಾಗಿ ಬೆಳೆ ನೀಡಿ, ಸಂಸ್ಕೃತಿಗಳ ಸರಣಿಗೆ ಆಧಾರವಾಗಿವೆ. ಹರಪ್ಪ ಸಂಸ್ಕೃತಿಯ ಸಿಂಧು ನದಿಯ ಕೊಳ್ಳದಲ್ಲಿ ರೂಪ ತಳೆದು ಬೆಳಗಿತು. ವೈದಿಕ ಸಂಸ್ಕೃತಿಯು ಪಂಜಾಬಿನಲ್ಲಿ ರೂಪುಗೊಂಡು ಪಶ್ಚಿಮಗಂಗಾ ಮೈದಾನದಲ್ಲಿ ಅರಳಿತು. ಕಬ್ಬಿಣದ ಬಳಕೆಯ ಆಧಾರದ ಮೇಲೆ ರೂಪಿತವಾದ ವೇದೋತ್ತರ ಸಂಸ್ಕೃತಿ ಗಂಗಾ ಬಯಲಿನ ಮಧ್ಯ ಭಾಗದಲ್ಲಿ ಉಚ್ಛ್ರಾಯ ಸ್ಥಿತಿಗೆ ಬಂತು. ಗಂಗಾ ನದಿಯ ದಕ್ಷಿಣ ಬಯಲು ಗುಪ್ತರ ಕಾಲದಲ್ಲಿ ಉನ್ನತಿ ಕಂಡರೆ, ಆಸ್ಸಾಮಿನಂತಹ ಬ್ರಹ್ಮಪುತ್ರಾ ಬಯಲು ಮಧ್ಯ ಯುಗದವರೆಗೆ ಕಾಯಬೇಕಾಯಿತು. [೭]

ನದಿಗಳು ವಾಣಿಜ್ಯ ಮತ್ತು ಸಂಪರ್ಕ ಸಾಧನಗಳಾಗಿವೆ. ಅವು ಸೇನೆಗಳನ್ನು ಭಾರತದ ವಿವಿಧ ಭಾಗಗಳಿಗೆ ನದಿ ಮಾರ್ಗದಲ್ಲೇ ಒಯ್ದಿರಬೇಕು. ಈಸ್ಟ್ ಇಂಡಿಯಾ ಕಂಪನಿಯ ಕಾಲದವರೆಗೆ ಈ ಜಲ ಮಾರ್ಗಗಳು ಪ್ರಮುಖವಾದ ಸಂಪರ್ಕ ಹಾಗೂ ಸಾಗಣೆ ದಾರಿಗಳಾಗಿದ್ದವು. ನದಿಗಳಲ್ಲಿ ನೆರೆ ಬಂದಾಗ ತೀರದ ಹಳ್ಳಿಗಳು, ಊರುಗಳು ನಾಶವಾಗಿ ಹಾಗೂ ರಾಜಧಾನಿಗಳಾದ ಹಸ್ತಿನಾಪುರ, ಪ್ರಯಾಗ, ವಾರಣಾಸಿ, ಪಾಟಲೀಪುತ್ರ ಮುಂತಾದವು ನದಿ ದಂಡೆಯ ಮೇಲೆಯೇ ಬೆಳೆದವು. ಈಗ ರಸ್ತೆ ಹಾಗೂ ರೈಲು ಸೌಕರ್ಯಗಳನ್ನು ನಗರಗಳನ್ನು ಬೆಳೆಸುವಂತೆ ಹಿಂದೆ ನದಿಗಳು ಬೆಳೆಸುತ್ತಿದ್ದವು. [೮]

ಇವೆಲ್ಲಕ್ಕಿಂತ ಮಿಗಿಲಾಗಿ ನದಿಗಳು ರಾಜಕೀಯ ಹಾಗೂ ಸಂಸ್ಕೃತಿ ಗಡಿಗಳೂ ಆಗಿವೆ. ಈಗಿನ ಒರಿಸ್ಸಾದ ಕರಾವಳಿಯಲ್ಲಿದ್ದ ಕಳಿಂಗವು ಮಹಾನದಿ, ಗೋದಾವರಿಗಳ ನಡುವೆ ಇದ್ದ ಪ್ರದೇಶ. ಹೀಗೆಯೇ ಆಂಧ್ರವು ಗೋದಾವರಿಯಿಂದ ಕೃಷ್ಣಾ ನದಿಯವರೆಗೆ ಇದ್ದ ಪ್ರದೇಶ. ಶಾತವಾಹನರ ಕಾಲದಲ್ಲಿ ಇಲ್ಲಿ ನಗರಗಳು, ಬಂದರುಗಳು ತಲೆಯೆತ್ತಿದವು. ತಮಿಳುನಾಡಿನ ಬಹು ಭಾಗವು ಕೃಷ್ಣಾ ಮತ್ತು ಕಾವೇರಿ ನಡುವಿನದು. ಇಲ್ಲಿಂದ ದಕ್ಷಿಣಕ್ಕಿರುವ ಪ್ರದೇಶವು ವೈಗೈ ನದಿಯವರೆಗೆ ವ್ಯಾಪಿಸಿದ್ದು ಕ್ರಿಸ್ತಶಕದ ಆರಂಭದಲ್ಲಿ ಚೋಳರು ತಲೆಯೆತ್ತಿದ ಜಾಗ. ಬೆಟ್ಟ ಗುಡ್ಡಗಳ ಉತ್ತರ ತಮಿಳುನಾಡಿಗಿಂತ ಇದು ಬೇರೆ. ಉತ್ತರ ತಮಿಳುನಾಡು ಕ್ರಿ.ಶ. ನಾಲ್ಕು– ಆರನೆಯ ಶತಮಾನಗಳಲ್ಲಿ ಪಲ್ಲವರ ಆಳ್ವಿಕೆಯಲ್ಲಿ ಪ್ರಾಮುಖ್ಯತೆ ಗಳಿಸಿತು. ತಮಿಳುನಾಡಿನ ಕರಾವಳಿಯಿಂದ ಪಶ್ಚಿಮದಲ್ಲಿ ಪೂರ್ವ ಘಟ್ಟಗಳಿವೆಯಾದರೂ ಅವು ಎತ್ತರವಾಗಿಲ್ಲವಾದ್ದರಿಂದ ಕರಾವಳಿ ಮತ್ತು ಇತರ ಪ್ರದೇಶಗಳ ನಡುವಣ ಸಂಪರ್ಕ ಸುಲಭ. ಆಂಧ್ರದಲ್ಲೂ ಹೀಗೆಯೇ, ತಮಿಳುನಾಡಿನ ಕರಾವಳಿಯನ್ನು ಕೋರಮಂಡಲ ಎನ್ನುತ್ತಾರೆ. ಅರಿಕಮೇಡು, ಮಹಾಬಲಿಪುರ, ಕಾವೇರಿ ಪಟ್ಟಣಗಳು ಇದ್ದುದು ಅಲ್ಲಿ. [೯]

ದಕ್ಷಿಣ ಭಾರತದ ಪರ್ಯಾಯ ದ್ವೀಪದ ಪಶ್ಚಿಮ ಭಾಗದಲ್ಲಿ ಈ ಬಗೆಯ ನಿಖರವಾದ ಪ್ರಾದೇಶಿಕ ಘಟಕಗಳು ಕಂಡು ಬರುವುದಿಲ್ಲ. ಉತ್ತರ ಭಾಗದಲ್ಲಿ ತಪತಿ ಅಥವಾ

ದಾಮನ್‌ಗಂಗಾ ನದಿಯಿಂದ ದಕ್ಷಿಣದ ಭೀಮಾ ನದಿಯವರೆಗಿನ ಪ್ರದೇಶವನ್ನು ಮಹಾರಾಷ್ಟ್ರ ಎಂದೂ, ಭೀಮಾ ಮತ್ತು ಕೃಷ್ಣಾ ನದಿಗಳಿಂದ ತುಂಗಭದ್ರೆಯವರೆಗಿನ ಪ್ರದೇಶವನ್ನು ಕರ್ನಾಟಕವೆಂದೂ ಗುರುತಿಸಬಹುದು. ತುಂಗಭದ್ರಾ ನದಿ ಒಂದು ಸಹಜವಾದ ಗಡಿಯಾಗಿದ್ದು, ಉತ್ತರದ ಬಾದಾಮಿಯ ಚಾಳುಕ್ಯರು ಹಾಗೂ ರಾಷ್ಟ್ರಕೂಟರು ಅಲ್ಲಿಂದ ದಕ್ಷಿಣಕ್ಕೆ ಮತ್ತು ದಕ್ಷಿಣದ ಪಲ್ಲವರು ಹಾಗೂ ಚೋಳರು ಅದರಿಂದ ಉತ್ತರಕ್ಕೆ ತಮ್ಮ ರಾಜ್ಯವನ್ನು ವಿಸ್ತರಿಸಲು ಬಹಳ ಶ್ರಮಪಡಬೇಕಾಯಿತು. ದಕ್ಷಿಣ ಭಾರತದ ಪಶ್ಚಿಮ ಕರಾವಳಿಯು ಮಲಬಾರ್ ಎಂದು ಹೆಸರಾಗಿದೆ. ಅಲ್ಲಿ ಅಂದರೆ ಈಗಿನ ಕೇರಳದಲ್ಲಿ ಹಲವು ಸಣ್ಣ ರಾಜ್ಯಗಳು, ರೇವುಪಟ್ಟಣಗಳು ಹುಟ್ಟಿಕೊಂಡವು. ಕರ್ನಾಟಕ, ಮಹಾರಾಷ್ಟ್ರ, ಕೇರಳಗಳಲ್ಲಿ ಕರಾವಳಿಗೂ, ಮೇಲಿನ ಪ್ರಸ್ಥಭೂಮಿಗಳಿಗೂ ನಡುವೆ ಇರುವ ಪಶ್ಚಿಮ ಘಟ್ಟಗಳು ಕಡಿದಾಗಿರುವುದರಿಂದ ಅವುಗಳ ನಡುವೆ ಸಂಪರ್ಕವು ಕಷ್ಟಸಾಧ್ಯವಾಗಿದ್ದಿತು.[೧೦]

ಉತ್ತರದಲ್ಲಿ ಗಂಗಾ ಮತ್ತು ಸಿಂಧು ಬಯಲುಗಳ, ದಕ್ಷಿಣದಲ್ಲಿ ವಿಂಧ್ಯ ಪರ್ವತಗಳು ಇವುಗಳ ನಡುವಿನ ವಿಶಾಲ ಭೂ ಭಾಗವನ್ನು ಅರಾವಳಿ ಪರ್ವತಗಳು ಇಬ್ಭಾಗ ಮಾಡಿವೆ. ಅದರ ಪಶ್ಚಿಮ ಭಾಗ ಥಾರ್ ಮರುಭೂಮಿ. ಇಲ್ಲಿನ ಓಯಸಿಸ್ ಪ್ರದೇಶಗಳಲ್ಲಿ ಜನ ನೆಲೆಸಿದ್ದಾರೆ. ಒಂಟೆಗಳ ಮೇಲೆ ಮರಳುಗಾಡನ್ನು ದಾಟುವುದು ಸಾಧ್ಯ. ಇದರ ಆಗ್ನೇಯದಲ್ಲಿ ಪುರಾತನ ಕಾಲದಿಂದ ಜನವಸತಿಯಾಗಿರುವ ರಾಜಸ್ಥಾನದ ಭಾಗವಿದೆ. ಇಲ್ಲಿ ಖೇತ್ರಿಯಂತಹ ತಾಮ್ರದ ಗಣಿಗಳಿವೆ.

ರಾಜಸ್ಥಾನದ ನೆರೆಯ ಗುಜರಾತ ಫಲವತ್ತಾದ ಜಾಗ. ನರ್ಮದಾ, ತಪತಿ, ಮಾಹಿತಿ ಮತ್ತು ಸಾಬರಮತಿ ನದಿಗಳು ಈ ನೆಲಕ್ಕೆ ನೀರುಣಿಸುತ್ತವೆ. ದಖ್ಖನ್ ಪ್ರಸ್ಥಭೂಮಿಯ ವಾಯವ್ಯದಲ್ಲಿರುವ ಗುಜರಾತಿನಲ್ಲಿ ಕಾಥೇವಾಡದಂತಹ ಬಹು ಕಡಿಮೆ ಮಳೆ ಪ್ರದೇಶಗಳೂ ಇವೆ. ಇಲ್ಲಿನ ಸಮುದ್ರ ತೀರ ಅಂಕು ಡೊಂಕಾಗಿದ್ದು ಹಲವು ಬಂದರುಗಳನ್ನು ಹೊಂದಿದೆ. ಗುಜರಾತ್, ಕರಾವಳಿ ಹಾಗೂ ವಿದೇಶಿ ವ್ಯಾಪಾರಗಳಿಂದಾಗಿ ಪ್ರಸಿದ್ಧವಾಗಿದೆ. ಆ ಜನ ಸಾಹಸಿ ವಾಣಿಜ್ಯ ಪ್ರವೃತ್ತಿಯವರು. [೧೧]

ಗಂಗಾ ಯಮುನಾ ಬಯಲು ಉತ್ತರದಲ್ಲಿ, ವಿಂಧ್ಯಪರ್ವತ ಹಾಗೂ ನರ್ಮದಾ ನದಿಗಳು ದಕ್ಷಿಣದಲ್ಲಿ ಈ ನಡುವೆ ಪಶ್ಚಿಮದಲ್ಲಿ ಚಂಬಲ್ ಹಾಗೂ ಪೂರ್ವದಲ್ಲಿ ಶೋಣ ನದಿಯವರೆಗೂ ಇರುವ ಪ್ರದೇಶ ಮಧ್ಯಪ್ರದೇಶ. ಭಾರತದ ಅತ್ಯಂತ ದೊಡ್ಡದಾದ ರಾಜ್ಯ ಇದು. ಈ ರಾಜ್ಯದ ಪೂರ್ವ ಭಾಗವು ವಿಂಧ್ಯಪರ್ವತಗಳಿಂದ ಕೂಡಿದೆ. ಇದು ಕ್ರಿ.ಶ.ನಾಲ್ಕು ಐದನೆಯ ಶತಮಾನಗಳಲ್ಲಿ ಗುಪ್ತರ ಕಾಲದಲ್ಲಷ್ಟೆ ಐತಿಹಾಸಿಕ ಪ್ರಾಮುಖ್ಯತೆ ಗಳಿಸಿತು. ಆದರೆ ಆ ರಾಜ್ಯದ ಪಶ್ಚಿಮ ಭಾಗ ಮಾಳವವನ್ನೂ ಒಳಗೊಂಡಿದ್ದು, ಕ್ರಿ.ಪೂ ಆರನೆಯ ಶತಮಾನದಿಂದಲೇ ಇತಿಹಾಸದ ಹೆದ್ದಾರಿಯಲ್ಲಿದ್ದಂತಹ ಪ್ರದೇಶ. ಇದು ಗುಜರಾತಿನ

ಬಂದರುಗಳ ಹಿನ್ನಾಡು. ಮಾಳವ ಹಾಗೂ ಗುಜರಾತುಗಳ ಮೇಲೆ ಹಿಡಿತ ಸಾಧಿಸಲು ಕ್ರಿ.ಶ. ಒಂದು, ಎರಡನೆಯ ಶತಮಾನಗಳಲ್ಲಿ ಶಕರು ಮತ್ತು ಶಾತವಾಹನರ ನಡುವೆ, ಹದಿನೆಂಟನೆಯ ಶತಮಾನದಲ್ಲಿ ಮರಾಠರು ಮತ್ತು ರಜಪೂತರ ನಡುವೆ ಹಲವಾರು ಯುದ್ಧಗಳು ಜರುಗಿವೆ. [೧೨] ಮನುಷ್ಯನ ಜೀವನಕ್ಕೆ ನೀರು ಅನಿವಾರ್ಯವಾದ ವಸ್ತು.

ನದಿಗಳಿಂದ ಹಾಗೂ ಕೆಲವೊಮ್ಮೆ ಬೆಟ್ಟಗಳಿಂದ ಅವೃತವಾಗಿರುವ ನದಿ ಬಯಲುಗಳು, ಪೀಠ ಭೂಮಿಗಳು ಇಂತಹ ಪ್ರತಿಯೊಂದು ನಿರ್ದಿಷ್ಠ ಭೌಗೋಳಿಕ ಪ್ರದೇಶವೂ ಪ್ರತ್ಯೇಕವಾದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಗಳನ್ನು ರೂಪಿಸಿಕೊಂಡಿದ್ದವು. ಅಂತಹ ಪ್ರದೇಶಗಳಲ್ಲಿ ವಿವಿಧ ರಾಜ ಸಂತತಿಗಳು ಎದ್ದು ಮೆರೆದುದುಂಟು; ಬಿದ್ದು ಮಣ್ಣಾದುದುಂಟು. ಸಂಪರ್ಕ, ಸಾರಿಗೆ ವ್ಯವಸ್ಥೆಗಳು ದುಸ್ತರವಾಗಿದ್ದ ಕಾರಣ, ಒಂದು ಪ್ರದೇಶದ ರಾಜಸಂತತಿ ಇತರ ಪ್ರದೇಶಗಳ ಮೇಲೆ ಬಿಗಿ ಹಿಡಿತ ಸಾಧಿಸುವುದು ಸುಲಭವಾಗಿರಲಿಲ್ಲ. ಕ್ರಮೇಣ ಪ್ರತಿಯೊಂದು ಪ್ರದೇಶವೂ ಒಂದು ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿಕೊಂಡು, ತನ್ನದೆ ಆದ ಜೀವನವಿಧಾನ ಹಾಗೂ ಭಾಷೆಗಳನ್ನು ಮೈಗೂಡಿಸಿಕೊಂಡಿತು. ಆದರೆ ಭಾರತದ ಉತ್ತರ ಹಾಗೂ ಪಶ್ಚಿಮದ ಭಾಷೆಗಳು ಇಂಡೋ– ಆರ್ಯನ್ ಮೂಲದವು. ಮುಖ್ಯವಾಗಿ ಸಂಸ್ಕೃತವು ದೇಶದಲ್ಲೆಲ್ಲಾ ವ್ಯಾಪಿಸಿತು. ಸಂಸ್ಕೃತ ವಿದ್ವತ್ ಭಾಷೆ ಎಂದು ಎಲ್ಲೆಡೆಯೂ ಪೋಷಿಸಲ್ಪಟ್ಟಿತು.[೧೪]

ದೇಶದ ಮಧ್ಯೆ ವ್ಯಾಪಿಸಿರುವ ವಿಂಧ್ಯ ಪರ್ವತ ಪಶ್ಚಿಮದಿಂದ ಪೂರ್ವದವರೆಗೆ ನಿಂತು ಭಾರತವನ್ನು ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ವಿಭಜಿಸಿದೆ. ವಿಂಧ್ಯದ ದಕ್ಷಿಣದಲ್ಲಿ ದ್ರಾವಿಡ ಭಾಷೆಗಳನ್ನಾಡುವ ಜನ ನೆಲೆಸಿದ್ದಾರೆ. ಉತ್ತರದಲ್ಲಿ ಆರ್ಯ ಭಾಷೆಗಳನ್ನಾಡುವವರು ನೆಲೆಸಿದ್ದಾರೆ. ವಿಂಧ್ಯ ಪರ್ವತ ಪ್ರದೇಶದಲ್ಲಿ ಆದಿವಾಸಿಗಳು ನೆಲೆಸಿದ್ದಾರೆ. ಪೂರ್ವ ಹಾಗೂ ಪಶ್ಚಿಮ ಕರಾವಳಿ ಪ್ರದೇಶಗಳು ವಲಸೆಗಾರರು ಮತ್ತು ವ್ಯಾಪಾರಿಗಳ ತಾಣಗಳು. ದಕ್ಷಿಣ ಭಾರತದಲ್ಲಿ ವಿದೇಶಿ ವಾಣಿಜ್ಯವು ವಿಫುಲವಾಗಿ ಬೆಳೆಯಿತು. ವಿಂಧ್ಯ ಪರ್ವತವು ದಾಟಲು ಕಷ್ಟವಾಗುವಷ್ಟು ದುರ್ಗಮವಲ್ಲ. ಹೀಗಾಗಿ ಉತ್ತರ, ದಕ್ಷಿಣ ಭಾಗಗಳ ನಡುವೆ ನಿರಂತರವಾದ ಸಂಪರ್ಕ ಬೆಳೆದಿದೆ. ಉತ್ತರದ ರಾಜರು ದಕ್ಷಿಣಕ್ಕೆ, ದಕ್ಷಿಣದ ರಾಜರು ಉತ್ತರಕ್ಕೆ ತಮ್ಮ ಅಧಿಕಾರ ಕ್ಷೇತ್ರವನ್ನು ವ್ಯಾಪಿಸಿಕೊಳ್ಳಲು ಪ್ರಯತ್ನ ನಡೆಸಿದ್ದಾರೆ. ವ್ಯಾಪಾರಿಗಳು, ಮತ ಪ್ರಸಾರಕರು, ಸಾಂಸ್ಕೃತಿಕ ಮುಖಂಡರು ಮುಖ್ಯವಾಗಿ ಬ್ರಾಹ್ಮಣರು ಉತ್ತರದಿಂದ ದಕ್ಷಿಣಕ್ಕೆ ದಕ್ಷಿಣದಿಂದ ಉತ್ತರಕ್ಕೆ ಹೋಗಿ ಬಂದಿದ್ದಾರೆ. ಈ ರೀತಿ ಎರಡೂ ಕಡೆಯ ನಿರಂತರ ಸಂಪರ್ಕಗಳಿಂದಾಗಿ ದೇಶದಲ್ಲಿ ಒಂದು ಸಮನ್ವಯ ಸಂಸ್ಕೃತಿ ರೂಪುಗೊಂಡಿದೆ.[೧೫] (ವಾಸುದೇವನ್ ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ)

೨.೨ ಕೆರೆಗಳ ಬೆಳವಣಿಗೆ:

ನೀರು ಪಂಚಭೂತಗಳಲ್ಲಿ ಒಂದು. ಇದು ವಿಶ್ವದಲ್ಲಿರುವ ಕೋಟ್ಯಂತರ ಜೀವರಾಶಿಗಳಾದ ಸಸ್ಯ ಮತ್ತು ಪ್ರಾಣಿ ವರ್ಗಗಳಿಗೆ ಅತ್ಯಂತ ಅವಶ್ಯ.[೧೬] ಇಂದು ಕಾಣಸಿಗುವ ಅನೇಕ ಜೀವರಾಶಿಗಳು, ಪ್ರಮುಖವಾಗಿ ಪ್ರಾಣಿಗಳು ನೀರಿನಿಂದಲೇ ಉಗಮ ಹೊಂದಿವೆ. ಇದನ್ನು ಪ್ರಾಣಿ ಶಾಸ್ತ್ರಜ್ಞರೂ ಒಪ್ಪುತ್ತಾರೆ. ವಿಶ್ವದ ಬಹುತೇಕ ಪಾಲು ನೀರಿನಿಂದ ಆವೃತಗೊಂಡಿದೆಯಷ್ಟೆ, ಭೂ ಭಾಗವು ಕೇವಲ ಶೇ.೧/೩ ರಷ್ಟಿದೆ. ಅದರಂತೆಯೇ ಮಾನವನ ದೇಹದಲ್ಲಿ ಸುಮಾರು ಶೇ. ೭೦ ರಷ್ಟು ನೀರಿನಿಂದ ಕೂಡಿರುವುದು ಸಹಜ. ಇಂತಹ ವಸ್ತುವಾದ ನೀರು ಮಾನವನ ದೈನಂದಿನ ಚಟುವಟಿಕೆಗಳಲ್ಲಿ ಹಾಸುಹೊಕ್ಕಾಗಿದೆ. ನಮಗೆ ತಿಳಿದಿರುವಂತೆ ಸುಮಾರು ೫೦೦೦ ಸಾವಿರ ವರ್ಷಗಳ ಹಿಂದೆ ನಾಗರಿಕ ಸಮಾಜಗಳು ಹುಟ್ಟಿದವು[೧೭] ಮಾನವನ ಉಗಮ, ವಿಕಾಸ ಹಾಗೂ ಅಭಿವೃದ್ಧಿಯಲ್ಲಿ ಪರಿಸರ ಗಮನಾರ್ಹ ಪಾತ್ರ ವಹಿಸಿದೆ.[೧೮]

ಮಾನವನ ಉಗಮ ಮತ್ತು ವಿಕಾಸದ ಸುದೀರ್ಘ ಇತಿಹಾಸವನ್ನು ಗಮನಿಸಿದಾಗ ತಿಳಿಯುವ ವಿಷಯವೇನೆಂದರೆ, ಮಾನವ ತನ್ನ ಪೂರ್ವಜರಾದ ಮಂಗನಿಂದ ಕಾಲಕ್ರಮದಲ್ಲಿ ಸುಮಾರು ೨೦ಲಕ್ಷ ವರ್ಷಗಳಿಂದ ವಿಕಾಸ ಹೊಂದುತ್ತಾ ಬಂದಿದ್ದಾನೆ. ಅವನು ಭೌತಿಕವಾಗಿ ಹಾಗೂ ಮಾನಸಿಕವಾಗಿ ವಿಕಾಸ ಹೊಂದುವುದರೊಂದಿಗೆ ಪರಿಸರದಲ್ಲಿ ಆಗುತ್ತಿರುವ ಕಾಠಿಣ್ಯತೆಗಳನ್ನು ಸಹ ಎದುರಿಸುತ್ತಾ ಬಂದಿದ್ದಾನೆ. ಮೊದಲಿಗೆ ಮಾನವನು ಚತುಷ್ಪಾದಿಯಾಗಿದ್ದ. ಅವನಿಗೆ ಕೈಗಳು ಇರಲಿಲ್ಲ. ಅನಂತರ ತನ್ನ ಎರಡು ಮುಂಗಾಲುಗಳನ್ನು ಸತತವಾಗಿ ಉಪಯೋಗಿಸುತ್ತಾ ಇದ್ದು, ಅವು ಕೈಗಳಾಗಿ ಮಾರ್ಪಟ್ಟವು. ಅಂತೆಯೇ ಅವನು ದ್ವಿಪಾದಿಯಾದ. ತನ್ನ 'ಕೈ'ಗಳನ್ನು ಬಳಸುವಂತವನಾದ. ಈ ಮಾರ್ಪಾಡನ್ನು ಹೊಂದಲು ಅನೇಕ ಲಕ್ಷ ವರ್ಷಗಳು ಬೇಕಾದವು. ಹೀಗೆ ತನ್ನ ಕೈಗಳನ್ನು ಬಳಸಿಕೊಂಡು ವಿವಿಧ ನಮೂನೆಯ ಕಲ್ಲಿನ ಆಯುಧಗಳನ್ನು ತಯಾರಿಸಲು ಪ್ರಾರಂಭಿಸಿದನು. ಇಂತಹ ಆಯುಧಗಳಿಂದ ಪ್ರಾಣಿಗಳನ್ನು ಬೇಟೆಯಾಡಿ,ಕೊಂದು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳತೊಡಗಿದನು. ಈ ಶಿಲಾಯುಧಗಳನ್ನು ಅವುಗಳ ಗಾತ್ರ, ರಚನೆ, ವಿನ್ಯಾಸ ಮತ್ತು ಉಪಯುಕ್ತತೆಯನ್ನು ಗಮನದಲ್ಲಿರಿಸಿಕೊಂಡು ಅವುಗಳನ್ನು ಪುರಾತತ್ವ ವಿದ್ವಾಂಸರು ಆದಿ, ಮಧ್ಯ, ಅಂತ್ಯ ಹಾಗೂ ಸೂಕ್ಷ್ಮ ಶಿಲಾಯುಧಗಳೆಂದು ವರ್ಗೀಕರಿಸುತ್ತಾರೆ. ಆದಿ ಮಾನವನ ಈ ಎಲ್ಲಾ ಬಗೆಯ ಚಟುವಟಿಕೆಗಳ ಕಾರ್ಯಕ್ಷೇತ್ರವು ಸರೋವರ, ಕೆರೆ, ನದಿ, ತೊರೆಗಳ ಸಮೀಪದಲ್ಲಿಯೇ ಕೇಂದ್ರಿಕೃತವಾಗಿತ್ತು. ಇದಕ್ಕೆ ಪೂರಕವಾಗಿ ನಡೆಸಿದಂತಹ ಸಂಶೋಧನೆಗಳು ವಿಶ್ವದಾದ್ಯಂತ ನಡೆದಿದ್ದು ಅನೇಕ ಸಾಕ್ಷ್ಯಾಧಾರಗಳು ದೊರಕಿವೆ. ಇದರಿಂದ ನೀರು ಮಾನವನಿಗೆ ಎಷ್ಟು ಉಪಯೋಗವೆಂಬುದು ವೇದ್ಯವಾಗುತ್ತದೆ.[೧೯]

ಮಾನವನ ಬದುಕಿಗೆ, ಆಗು-ಹೋಗುಗಳಿಗೆ ಹವಾಗುಣ ಕಾರಣ.[೨೦] ಸುಮಾರು ಇಂದಿನಿಂದ ಏಳು ಸಾವಿರ ವರ್ಷಗಳ ಪೂರ್ವದಲ್ಲಿ ಮಾನವ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಸ್ಥಳದಲ್ಲಿ ನಿರಂತರವಾಗಿ ಇರಲು ಪ್ರಾರಂಭಿಸಿದ. ಈ ಕಾಲಘಟ್ಟವನ್ನು ಪ್ರಕ್ತಾನಕಾರರು 'ನವಶಿಲಾಯುಗ ಕ್ರಾಂತಿ' ಎಂದು ಕರೆಯುತ್ತಾರೆ. ಈ ಕ್ರಾಂತಿಯು ಮಾನವನ ಜೀವನದ ಮೇಲೆ ಅತ್ಯಂತ ಗಂಭೀರವಾದ ಪರಿಣಾಮವನ್ನು ಬೀರಿತು. ಈ ಕ್ರಾಂತಿಯ ಮುಖ್ಯ ಪರಿಣಾಮಗಳನ್ನು ಮೂರು ನೆಲೆಗಳಲ್ಲಿ ವಿವರಿಸಬಹುದು. ಮಾನವನು ಒಂದೆಡೆಯಲ್ಲಿ ನಿರಂತರವಾಗಿ ವಾಸಿಸಲು ಪ್ರಾರಂಭಿಸಿದ್ದು; ತನ್ನ ಆಯುಧಗಳಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಿದ್ದು ಕೃಷಿಕ ಜೀವನವನ್ನು ಪ್ರಾರಂಭಿಸಿದ್ದು. ಈ ಕೃಷಿಕ ಜೀವನವು ತೀರಾ ಶೈಶವಾವಸ್ಥೆಯಲ್ಲಿದ್ದು ಅದನ್ನು ಕಾಲಕ್ರಮೇಣ ಸುಧಾರಣೆಗೆ ಒಳಪಡಿಸಿದನೆಂಬುದಕ್ಕೆ ಭಾರತದಲ್ಲಿ ಹಾಗೂ ವಿಶ್ವದ ಕೆಲವೊಂದು ಪುರಾತನ ನೆಲೆಗಳಲ್ಲಿ ಪುರಾವೆಗಳು ದೊರೆಕಿವೆ.[೨೧] ದಕ್ಷಿಣ ಕರ್ನಾಟಕದ ನೆಲೆಗಳಿಗೆ ಹೋಲಿಸಿದರೆ ಉತ್ತರಕರ್ನಾಟಕದ ನೆಲೆಗಳು ಅಧ್ಯಯನಕ್ಕೆ ಆಶಾದಾಯಕವಾಗಿವೆ. [೨೨]

ಈ ರೀತಿಯಾಗಿ ಒಂದೆಡೆ ಮಾನವನು ಸ್ಥಿರವಾಗಿ ನೆಲೆ ನಿಲ್ಲುವಂತಹ ಪ್ರಯತ್ನವು ಜೀವನದಲ್ಲಿ ಬಂದುದ್ದು ವ್ಯವಸಾಯದಿಂದಲೇ. ಈ ವ್ಯವಸಾಯ ಪದ್ಧತಿಯು ಅವನ ಜೀವನದಲ್ಲಿ ಒಂದು ಕ್ರಮಬದ್ಧತೆಯನ್ನು ತಂದಿತು. ಮಾನವನ ಸರ್ವತೋಮುಖ ಅಭಿವೃದ್ಧಿ ಮತ್ತು ವಾಣಿಜ್ಯ ವ್ಯವಹಾರಗಳೆಲ್ಲವೂ ವ್ಯವಸಾಯದ ಆವಿಷ್ಕಾರದಿಂದಲೇ ಪ್ರಾರಂಭವಾಯಿತು. ಒಂದು ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ವ್ಯವಸಾಯವು ತಳಹದಿಯಾಯಿತು. ಮಾನವನು ಕೃಷಿಯನ್ನು ಅಂದಿನಿಂದ ಇಂದಿನವರೆಗೆ ತನ್ನ ಪ್ರಮುಖ ವೃತ್ತಿಯನ್ನಾಗಿಸಿಕೊಂಡು ಬಂದಿರುವುದು ಸರಿಯಷ್ಟೆ. ಭಾರತವು ಪ್ರಮುಖವಾಗಿ ಕೃಷಿಕ ರಾಷ್ಟ್ರವಾಗಿದ್ದು, ಇಂದಿಗೂ ಭಾರತೀಯರ ಪ್ರಮುಖ ವೃತ್ತಿ ವ್ಯವಸಾಯವೇ ಆಗಿದೆ. ಸತತವಾಗಿ ಏಳುಸಾವಿರ ವರ್ಷಗಳಿಂದ ಮಾನವನು ಎಡೆಬಿಡದೆ ವ್ಯವಸಾಯ ಪದ್ಧತಿಗಳನ್ನು ಸುಧಾರಿಸುತ್ತಲೇ ಬಂದಿದ್ದಾನೆ. ಈ ಪ್ರಕ್ರಿಯೆಯಲ್ಲಿ ಅವನು ಪರಿಸರದ ಎಲ್ಲಾ ಅಂಶಗಳನ್ನೂ ಗಮನಿಸಿ, ಅಭ್ಯಸಿಸಿ ವ್ಯವಸಾಯದ ಕಸುಬನ್ನು ಆತ ಕರಗತಮಾಡಿಕೊಂಡು ನಂತರ ಈ ಸ್ಥಳದಲ್ಲಿದ್ದ ಉತ್ತಮವಾದ ಭೂಮಿ ವ್ಯವಸಾಯಕ್ಕೆ ಆಸರೆಯಾಯಿತು. [೨೩]

ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಅವನು ಮಳೆಯನ್ನೇ ನಂಬಿದ್ದ. ವಿಫುಲವಾಗಿ ನೀರು ಸಿಗುವ ಜಾಗವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಮತ್ತು ಸಕಾಲದ ಮಳೆಯ ವೈಫಲ್ಯತೆಯು ಅವನನ್ನು ಆಗ್ಗಿಂದ್ದಾಗೆ ಕಷ್ಟಕ್ಕೆ ಒಳಪಡಿಸುತ್ತಿತ್ತು. ಇದರಿಂದ ಅವನು ನೀರನ್ನು ಸಂಗ್ರಹಮಾಡಿ, ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಮಳೆಗಾಲವು ವರ್ಷದಲ್ಲಿ

ಕೆಲವು ಮಾಸಗಳು ಮಾತ್ರ ಇರುತ್ತಿತ್ತು. ಅಗತ್ಯವಿದ್ದಾಗ ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳತೊಡಗಿದನು. ಇಂತಹ ಕೃತಕ ಸಂಗ್ರಾಹಕಗಳೇ ಕೆರೆಗಳು ಮತ್ತು ಕುಂಟೆಗಳು. ಕೆರೆಗಳ ನಿರ್ಮಾಣದಿಂದ ಮಾನವ ತನಗೆ ಬೇಕೆಂದಾಗ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡತೊಡಗಿದನು. ಈ ಬಗೆಯ ಕೆರೆಗಳ ನಿರ್ಮಾಣ ಕಾರ್ಯದ ಪ್ರಯತ್ನವನ್ನು ನವಶಿಲಾಯುಗ ಕಾಲದ ಆರಂಭದಿಂದ ಕಾಣಬಹುದು. ಮಳೆಯ ನೀರು ತಗ್ಗಾದ ಪ್ರದೇಶದಲ್ಲಿ ಕೂಡಿಕೊಳ್ಳುತ್ತಿತ್ತು. ಅಂತಹ ಜಾಗಗಳಲ್ಲಿ ನೀರು ಹರಿದು ಹೋಗದಂತೆ ಸಣ್ಣ ಕಟ್ಟೆಗಳನ್ನು ನಿರ್ಮಿಸಿ ಆ ಪ್ರದೇಶಗಳ ಆಸುಪಾಸಿನಲ್ಲಿ ನವಶಿಲಾಯುಗ ಕಾಲದ ಮಾನವ ವ್ಯವಸಾಯವನ್ನು ಮಾಡತೊಡಗಿದ. ಇದು ನಿಸರ್ಗವು ಮಾನವನಿಗೆ ಕಲಿಸಿದ ಪಾಠ. ಕಾಲಾನುಕ್ರಮದಲ್ಲಿ ಮಾನವನ ಸಂತಾನ ಬೆಳೆಯತೊಡಗಿತು. ಆದಿಶಿಲಾಯುಗ ಕಾಲದಲ್ಲಿದ್ದ ಜನಸಂತತಿಗಿಂತಲೂ ನವಶಿಲಾಯುಗ ಕಾಲದಲ್ಲಿ ಗಣನೀಯವಾಗಿ ಹೆಚ್ಚಿದ್ದಿರಬೇಕು. ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಪೂರೈಕೆಯಲ್ಲಿ ಯಾವುದೇ ಅಡೆತಡೆಯಿಲ್ಲದೆ ಇರಲು, ಹೆಚ್ಚುವರಿ ಭೂ ಭಾಗಗಳನ್ನು ವ್ಯವಸಾಯಕ್ಕೆ ಒಳಪಡಿಸಬೇಕಾಯಿತು. ಆ ಹೆಚ್ಚುವರಿ ವ್ಯವಸಾಯ ಕ್ಷೇತ್ರಕ್ಕೆ ನೀರನ್ನು ಕೃತಕ ಮೂಲವಾದ ಕೆರೆಗಳಿಂದ ಪೂರೈಸಿಕೊಳ್ಳುತ್ತಿದ್ದನು.

ಈ ದಿಸೆಯಲ್ಲಿ ವಿಶ್ವದಾದ್ಯಂತ ಅನೇಕ ಸಂಶೋಧನೆಗಳು ನಡೆದಿವೆ ಹಾಗೂ ನಡೆಯುತ್ತಲಿವೆ. ಕೆಲವು ಪ್ರಾಕ್ತನಾನ್ವೇಷಣೆಯಿಂದ ದೊರಕಿರುವ ಮಾಹಿತಿಗಳು ನಿಜಕ್ಕೂ ರೋಚಕವಾಗಿವೆ. ಈಜಿಪ್ಟ ದೇಶದಲ್ಲಿ ದೊರೆತಿರುವ ರೇಖಾ ಚಿತ್ರಗಳಲ್ಲಿ ಮಾನವನು ನೀರನ್ನು ಸಂಗ್ರಹಿಸಿ ಬಳಸಿಕೊಂಡಿರುವುದನ್ನು ಚಿತ್ರಿಸಲಾಗಿದೆ. ಇದರಿಂದಾಗಿ ಆ ದೇಶದಲ್ಲಿಯೇ ಮೊಟ್ಟಮೊದಲಿಗೆ ಕೆರೆಗಳ ನಿರ್ಮಾಣ ಪದ್ಧತಿಯನ್ನು ಬಳಕೆಗೆ ತಂದರೆಂದು ಪುರಾತತ್ವ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಭಾರತವು ಸಹ ಈಜಿಪ್ಟ್‌ನಷ್ಟೇ ಪ್ರಾಚೀನತೆಯನ್ನು ಹೊಂದಿರುವ ದೇಶ. ಸುಮಾರು ಆರು ಸಾವಿರ ವರ್ಷಗಳಷ್ಟು ಹಿಂದೆಯೇ ಅಂದರೆ, ಈಜಿಪ್ಟ್‌ಗೆ ಸಮಕಾಲೀನವಾಗಿ ಕೃಷಿಕ ಜೀವನದ ಕುರುಹುಗಳನ್ನು ನೋಡಬಹುದು.[೨೪] ಇಲ್ಲಿ ಪೂರ್ಣಪ್ರಮಾಣದಲ್ಲಿ ಅಧ್ಯಯನವಾಗದ ಕಾರಣ ಖಚಿತತೆಯಿಂದ ಹೇಳಲು ಸಾಧ್ಯವಾಗದಿದ್ದರೂ ಅಲ್ಲಲ್ಲಿ ದೊರೆತಿರುವ ಪುರಾವೆಗಳ ಆಧಾರದಿಂದ ಭಾರತದಲ್ಲಿ ಆರು ಸಾವಿರ ನದಿಕೊಳ್ಳದ ಸಂಸ್ಕೃತಿಯ ಜನರು ಮಾಡಿಕೊಂಡಿರುವ ನೀರಿನ ವ್ಯವಸ್ಥೆಯು ನಿಜಕ್ಕೂ ಶ್ಲಾಘನೀಯ. ಸಿಂಧೂನದಿ ಕೊಳ್ಳದ ಸಂಸ್ಕೃತಿಯ ಅನೇಕ ನೆಲೆಗಳಲ್ಲಿ ಇಂತಹ ನೀರಾವರಿ ವ್ಯವಸ್ಥೆಯ ಪುರಾವೆಗಳು ದೊರಕಿವೆ. ರಾಜಸ್ಥಾನದ ಗಂಗಾನಗರ್ ಜಿಲ್ಲೆಯಲ್ಲಿರುವ ಕಾಲಿಬಂಗಾನ್ ಎಂಬ ಸಿಂಧೂ ನದಿಕೊಳ್ಳ ಸಂಸ್ಕೃತಿಯ ನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ಉತ್ತಿರುವ ಜಮೀನು ದೊರೆತಿದೆ.

ಅತ್ಯಂತ ಸಮರ್ಪಕವಾದ ನೀರು–ಸರಬರಾಜು ಪದ್ಧತಿಯು ಉತ್ಖನನದಿಂದ ತಿಳಿದುಬಂದಿದೆ. ಇದು ಸಹ ಸಿಂಧೂ ನದಿಕೊಳ್ಳದ ಸಂಸ್ಕೃತಿಯ ಒಂದು ನೆಲೆಯೇ ಆಗಿದೆ. ಈ ಸಂಸ್ಕೃತಿಯು ಸುಮಾರು ನಾಲ್ಕುವರೆ ಸಾವಿರ ವರ್ಷಗಳಷ್ಟು ಪ್ರಾಚೀನವಾದದ್ದು. ದಕ್ಷಿಣ ಭಾರತ ಇತಿಹಾಸದ ರಚನೆಗೆ ಭೂಸಂಶೋಧನೆಗಳು ಬಹು ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ.[೨೫]

ಕ್ರಿ.ಶ ಪೂರ್ವದ ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ತಮಿಳುನಾಡಿನಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ವಾಸಿಸುತ್ತಿದ್ದರು. ಇವರ ಕಾಲಮಾನ ಕ್ರಿ.ಪೂ.೮೦೦ ರಿಂದ ಕ್ರಿ.ಶ.೨ನೇ ಶತಮಾನ. ಉತ್ತರ ತಮಿಳುನಾಡಿನಲ್ಲಿ ಸ್ವಾಭಾವಿಕವಾಗಿಯೇ ಅನೇಕ ತಗ್ಗು ಪ್ರದೇಶಗಳು ಕಂಡುಬರುತ್ತವೆ. ಈ ಪ್ರದೇಶಗಳಲ್ಲಿ ಮಳೆಯ ನೀರು ಸಂಗ್ರಹಗೊಳ್ಳುತ್ತದೆ. ಈ ಸಂಸ್ಕೃತಿಯ ಜನರು ಅಂತಹ ಸ್ವಾಭಾವಿಕವಾಗಿ ಉಂಟಾದಂತಹ ಕೆರೆಯ ನೀರನ್ನು ಬಳಸಿಕೊಂಡು ಮೊಟ್ಟಮೊದಲಿಗೆ ದಕ್ಷಿಣ ಭಾರತದಲ್ಲಿ ನೀರಾವರಿ ಕೃಷಿ ಪದ್ಧತಿಯನ್ನು ಪ್ರಾರಂಭಿಸಿದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಭಾರತದ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳ ಉತ್ಖನನ ನಡೆದಿದ್ದು ಕೆಲವು ನೆಲೆಗಳಲ್ಲಿ ಅಕ್ಕಿ, ರಾಗಿ ಮುಂತಾದ ಧಾನ್ಯಗಳು ದೊರೆತಿವೆ. ಆದ್ದರಿಂದ ಈ ಸಂಸ್ಕೃತಿಯ ಜನರು ಅಕ್ಕಿ, ರಾಗಿ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರೆಂಬುದು ಇದರಿಂದ ದೃಢವಾಗುತ್ತದೆ.[೨೬]

ಆದಿ ಇತಿಹಾಸ ಕಾಲದ ಕೆಲವು ನೆಲೆಗಳು ಭಾರತದಾದ್ಯಂತ ಪತ್ತೆಯಾಗಿವೆ. ಉತ್ತರ ಭಾರತದ ಕೆಲವು ಆದಿ ಇತಿಹಾಸ ಕಾಲದ ನೆಲೆಗಳಾದ ಶೃಂಗವೇರ್‌ಪುರ, ಬಿಸನಗರ, ಕುಮ್ರಹಾರ, ಉಜ್ಜಯಿನಿ, ಮಥುರಾ ಮೊದಲಾದೆಡೆಗಳಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಅನೇಕ ಬಗೆಯ ನಿರ್ಮಾಣಗಳನ್ನು ಮಾಡಿ ಬೇಸಾಯಕ್ಕೆ ನೀರನ್ನು ಬಳಸಿಕೊಳ್ಳುತ್ತಿದ್ದರೆಂಬುದು ಅಲ್ಲಿ ನಡೆದಂತಹ ಉತ್ಖನನಗಳಿಂದ ತಿಳಿದುಬಂದಿದೆ. ಇಂದಿನ ಆಂಧ್ರಪ್ರದೇಶದಲ್ಲಿರುವ 'ನಾಗಾರ್ಜುನಕೊಂಡ'ದಲ್ಲಿ ನಡೆದಿರುವ ಉತ್ಖನನದಲ್ಲಿಯೂ ಸಹ ಅಂದಿನ ಕಾಲದ ಜನರು ನೀರಾವರಿ ಸೌಲಭ್ಯಗಳನ್ನು ಹೊಂದಿದ್ದರು ಎಂಬುದಕ್ಕೆ ಸಾಕ್ಷ್ಯಾಧಾರಗಳು ದೊರಕಿವೆ.

ಭಾರತದ ಆದಿ ಇತಿಹಾಸದ ಕಾಲದಲ್ಲಿ ಅನೇಕ ಸಾಹಿತ್ಯ ಕೃತಿಗಳು ರಚಿತವಾದವು. ಅವುಗಳು ಧಾರ್ಮಿಕ, ಸಾಮಾಜಿಕ, ಕಥಾನಕ, ರಾಜಕೀಯ, ಪುರಾಣ, ಔಪಯೋಗಿಕ ಶಾಸ್ತ್ರ ಮುಂತಾದವು. ಈ ಕೃತಿಗಳಲ್ಲದೆ ವಿದೇಶಿಯರಿಂದ ರಚಿತವಾದ ವಿದೇಶಿ ಪ್ರವಾಸಿಗರ ಬರಹಗಳು ಪ್ರಾಚೀನ ಭಾರತದಲ್ಲಿ ಬಳಕೆಯಲ್ಲಿ ಇದ್ದಂತಹ ವ್ಯವಸಾಯ ಪದ್ಧತಿ, ನೀರಾವರಿ ವ್ಯವಸ್ಥೆ ಮುಂತಾದವುಗಳ ಬಗ್ಗೆ ತಿಳಿಸುತ್ತದೆ. ಇವುಗಳು ಕೆರೆಗಳ ನಿರ್ಮಾಣ, ಅವುಗಳ ಬಳಕೆ, ರಕ್ಷಣೆ, ಪೋಷಣೆ ಇವೇ ಮುಂತಾದ ವಿಷಯಗಳ ಕುರಿತು ಚರ್ಚಿಸಿವೆ.

ದಕ್ಷಿಣಭಾರತ ಕೆರೆ ನೀರಾವರಿಗೆ ಪ್ರಸಿದ್ಧವಾಗಿದೆ.[೨೭] ಭಾರತದ ಅತ್ಯಂತ ಪ್ರಾಚೀನ

ಸಾಹಿತ್ಯವೆನಿಸಿಕೊಳ್ಳುವ ವೇದಗಳು ಕೆರೆ, ಬೇಸಾಯ ಪದ್ಧತಿಯ ಬಗ್ಗೆ ಉಲ್ಲೇಖಿಸುತ್ತವೆ. ಋಗ್ವೇದ, ಯಜುರ್ವೇದ ಮತ್ತು ಅಥರ್ವಣ ವೇದಗಳು, ಕೂಪ, ಸರಸ್, ಕೃತಿಮ ನದಿಯಾ ಎಂದು ಉಲ್ಲೇಖಿಸುತ್ತವೆ. ಕೌಶಿಕ ಸೂತ್ರವು ಬೋಧಾಯನ ಧರ್ಮಸೂತ್ರ,[೨೮] ಧರ್ಮಪದ ಮುಂತಾದ ಧಾರ್ಮಿಕ ಕೃತಿಗಳು ನಾಲೆಗಳ ಬಳಕೆಯನ್ನು ಕುರಿತು ಮಾಹಿತಿಯನ್ನು ನೀಡುತ್ತವೆ.

ಭಾರತದ ಅತ್ಯಂತ ಪ್ರಾಚೀನ ಕೃತಿಗಳಲ್ಲಿ ಮನುಧರ್ಮಶಾಸ್ತ್ರವು ಒಂದು. ಇದನ್ನು 'ಮನು' ಎಂಬುವನು ರಚಿಸಿದ್ದಾನೆ.[೨೯] ಈ ಕೃತಿಯಲ್ಲಿ ನಾಲೆಗಳನ್ನು ಕುರಿತು ಹೇಳುವಾಗ ಇವಕ್ಕೆ ಯಾರಾದರೂ, ಯಾವುದೇ ವಿಧವಾದ, ಧಕ್ಕೆಯನ್ನು ಉಂಟುಮಾಡಿದಲ್ಲಿ ಅಂತಹವರಿಗೆ ಮರಣದಂಡಣೆಯೇ ಶಿಕ್ಷೆ ಎಂದು ಬರೆದಿದ್ದಾನೆ. ಇದರಿಂದ ಪ್ರಾಚೀನ ಭಾರತದಲ್ಲಿ ಕೃಷಿಗೆ ಮತ್ತು ನೀರಾವರಿ ವ್ಯವಸ್ಥೆಗೆ ಎಷ್ಟರ ಮಟ್ಟಿಗೆ ಮಹತ್ವವನ್ನು ನೀಡಲಾಗಿತ್ತು ಎಂಬುದು ತಿಳಿಯುತ್ತದೆ.

ಈ ದೇಶದ ಎರಡು ವಿಶಿಷ್ಟ ಮಹಾಕಾವ್ಯಗಳು ಮಹಾಭಾರತ ಮತ್ತು ರಾಮಾಯಣ. ಮಹಾಭಾರತದ ಅನುಶಾಸನಿಕ ಪರ್ವವು ಮಹಾರಾಜನಾದಂತಹವನು ಕೈಗೊಳ್ಳಬೇಕಾದ ಪ್ರಜಾಹಿತಾತ್ಮಕ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವೂ ಒಂದು ಎಂದು ತಿಳಿಸುತ್ತದೆ. ಅದಲ್ಲದೆ ನಾಲೆಗಳ ನಿರ್ಮಾಣವು ಪ್ರಜಾಹಿತಾತ್ಮಕ ಕೆಲಸವೆಂದು ವಿವರಿಸುತ್ತದೆ. ಮತ್ತೊಂದು ಸಂದರ್ಭ ಕುತೂಹಲಕಾರಿಯಾಗಿದೆ. ಇದರಲ್ಲಿ ನಾರದನು, ಧರ್ಮರಾಜನಿಗೆ ಎಚ್ಚರಿಸಿ "ಮಳೆಯನ್ನೇ ನೆಚ್ಚಿಕೊಂಡು ಬೇಸಾಯಕ್ಕೆ ತೊಡಗಬಾರದೆಂತಲೂ ಹಾಗೂ ಕೆರೆ ಮತ್ತು ಸರೋವರಗಳನ್ನು ನಿರ್ಮಿಸಿಕೊಂಡು ಬೇಸಾಯಕ್ಕೆ ತೊಡಗಬೇಕು" ಎನ್ನುತ್ತಾನೆ.[೩೦] ಪ್ರಾಚೀನ ಭಾರತದಲ್ಲಿಯೂ ಹವಾಮಾನವು ಒಂದೇ ರೀತಿಯಾಗಿ ಇರದೆ ಮಳೆಯು ಕೆಲವೊಮ್ಮೆ ಬರುತ್ತಿರಲಿಲ್ಲ. ಇದರಿಂದ ಅಂದಿನ ಪ್ರಾಚೀನ ಹವಾಮಾನವನ್ನು ಕುರಿತಂತೆ ನಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಎರಡನೆಯದಾಗಿ ಮಳೆಯ ನೀರಿನ ಪರ್ಯಾಯ ವ್ಯವಸ್ಥೆಯಾಗಿ ಕೆರೆ ಮತ್ತು ಸರೋವರಗಳ ನಿರ್ಮಾಣಗಳ ಕಾರ್ಯವನ್ನು ಅಂದಿನ ರಾಜರು ಕೈಗೊಳ್ಳುತ್ತಿದ್ದರು. ಇವುಗಳು ಪ್ರಾಚೀನ ಭಾರತದ ಕೆರೆಗಳ ನಿರ್ಮಾಣವನ್ನು ಕುರಿತಂತೆ ನಮಗೆ ಸಿಗುವ ಪುರಾತನ ದಾಖಲೆಗಳು.

ಪದ್ಮಪುರಾಣದ ಒಂದು ಅಧ್ಯಾಯವು ಕೆರೆಗಳ ನಿರ್ಮಾಣವನ್ನು ಕುರಿತಂತೆ ಇದೆ.[೩೧] ವಿಷ್ಣುಧರ್ಮೋತ್ತರ ಹಾಗೂ ದೇವಿಪುರಾಣಗಳು ನದಿವಾಹಕಗಳನ್ನು ಕುರಿತು ಉಲ್ಲೇಖಿಸುವುದರಿಂದ ಇವುಗಳ ಚಿಕ್ಕ ನೆಲೆಗಳಾಗಿರಬಹುದೆಂದು ಊಹಿಸಬಹುದು.

ಕೌಟಿಲ್ಯನ ಅರ್ಥಶಾಸ್ತ್ರವು ಅಂದು ಪ್ರಚಲಿತವಿದ್ದ ವಿವಿಧ ಬೇಸಾಯ ಪದ್ಧತಿ, ಮಾನವನ ಆಹಾರ ಪದ್ಧತಿ, ವಿವಿಧ ಪ್ರಕಾರಗಳ ಸಸ್ಯ, ಆಹಾರಕ್ಕೆ ಯೋಗ್ಯವಾದ ಸಸ್ಯ,

ಕೃತಕ ನೀರಾವರಿ ಪದ್ಧತಿಯೇ ಮುಂತಾದ ವಿಷಯಗಳನ್ನು ಗಂಭೀರವಾಗಿ ಚರ್ಚಿಸಿರುವುದು ಗಮನಾರ್ಹ.[೨೨]

ಈ ಕೃತಿಯ ಕರ್ತೃವಾದ ಕೌಟಿಲ್ಯನು, ಮಗಧ ರಾಜ್ಯದಲ್ಲಿ ವಾರ್ಷಿಕವಾಗಿ ಆಗುತ್ತಿದ್ದ ಮಳೆಯ ಪ್ರಮಾಣ, ಅಕಾಲಿಕ ಮಳೆಯನ್ನು ಕುರಿತು ತಿಳಿಸುತ್ತಾನೆ. ಅವುಗಳಿಗೆ ಅವಲಂಬಿತವಾಗದ ಕೃಷಿ ಪದ್ಧತಿಯು ತನಗೆ ತಿಳಿದಿತ್ತೆಂದು ಹೇಳಿಕೊಳ್ಳುತ್ತಾನೆ. ಅದಲ್ಲದೆ ಆ ರಾಜ್ಯದಲ್ಲಿ ಎಷ್ಟು ಕೆರೆಗಳು ಮತ್ತು ಸರೋವರಗಳು ಸುಸ್ಥಿತಿಯಲ್ಲಿವೆ, ಎಷ್ಟು ಹಳೆಯವು ಮತ್ತು ಇಂತಿಷ್ಟು, ದುರಸ್ತಿಗೊಳ್ಳಬೇಕಾದ ಕೆರೆಗಳು ಇವೆಯೆಂಬುದಲ್ಲದೇ ಪ್ರತಿ ಗ್ರಾಮದಲ್ಲಿರುವ ಕೆರೆಗಳ ಸಂಖ್ಯಾಪಟ್ಟಿಯು ತನಗೆ ತಿಳಿದಿದೆ ಎಂಬುದನ್ನು ಸಹ ತಿಳಿಸುತ್ತಾನೆ. ಆ ದೇಶದಲ್ಲಿದ್ದ ವಿವಿಧ ಅಧಿಕಾರಿಗಳ ಹುದ್ದೆಗಳನ್ನು ಕುರಿತು ಬರೆಯುತ್ತಾ, ಅವರ ಕಾರ್ಯನಿರ್ವಹಣೆಯನ್ನು ವಿವರಿಸಿದ್ದಾನೆ. ಅವುಗಳಲ್ಲಿ ಅಧಿಕಾರಿಗಳು ಜಮೀನನ್ನು ಅಳೆಯುವುದು, ಕೆರೆಯ ತೂಬುಗಳನ್ನು ಕಾಲಕಾಲಕ್ಕೆ ಪರೀಕ್ಷಿಸಿ ಅವುಗಳನ್ನು ಸುಸ್ಥಿತಿಯಲ್ಲಿಡುವುದು ಮತ್ತು ನೀರನ್ನು ಸಮರ್ಪಕವಾಗಿ ಹಂಚುವುದು ಹಾಗೂ ಇನ್ನಿತರ ಕರ್ತವ್ಯಗಳ ಬಗೆಗೆ ಈ ಗ್ರಂಥದಲ್ಲಿ ವಿವರಿಸಿರುವುದು ಗಮನೀಯವಾದ ಅಂಶ.

ಅದರಂತೆ ಒಂದು ಕೆರೆಯು ಹೊಸದಾಗಿ ನಿರ್ಮಾಣವಾದಾಗ, ಆ ಕೆರೆಯ ನೀರನ್ನು ಕೃಷಿಗೆ ಬಳಸುವವರಿಗೆ ಐದು ವರ್ಷಗಳ ಕಾಲ ತೆರಿಗೆಯಿಂದ ವಿಮುಕ್ತರನ್ನಾಗಿಸಬೇಕು ಎಂದೂ; ಕೆರೆಯು ಒಮ್ಮೆ ದುರಸ್ತಿಯಾಗಿದ್ದರೆ ಅವುಗಳ ಬಳಕೆದಾರರಿಗೆ ನಾಲ್ಕು ವರ್ಷ ತೆರಿಗೆಯಿಂದ ವಿನಾಯ್ತಿಗೊಳಿಸಬೇಕೆಂದು ತಿಳಿಸುತ್ತದೆ. ಕೆರೆಯಲ್ಲಿನ ಜೊಂಡು ಮುಂತಾದುವುಗಳನ್ನು ತೆಗೆದು ಕೆರೆಯನ್ನು ಬಲಪಡಿಸಿದವರಿಗೆ ಮೂರು ವರ್ಷವೂ; ಹೊಸ ಬಂಜರು ಭೂಮಿಯನ್ನು ಸಾಗುವಳಿಗೆ ಒಳಪಡಿಸಿದ ರೈತರಿಗೆ ಎರಡು ವರ್ಷಗಳ ತೆರಿಗೆ ವಿನಾಯ್ತಿಯನ್ನು ನೀಡಬೇಕೆಂದು ಸಾರುತ್ತದೆ. ಇವಲ್ಲದೆ ಜಮೀನಿನ ಮಾಲಿಕರು ಕೆರೆಯ ನೀರನ್ನು ಸತತವಾಗಿ ಐದು ವರ್ಷ ಬಳಸದೇ ನಿರ್ಲಕ್ಷ್ಯಕ್ಕೊಳಪಡಿಸಿದ ಪಕ್ಷದಲ್ಲಿ ಅವರ ಜಮೀನಿನ ಮಾಲಿಕತ್ವವನ್ನು ಕಳೆದುಕೊಳ್ಳುತ್ತಾರೆಂದು ತಿಳಿಸುವುದು ಗಮನಿಸಬೇಕಾದ ಸಂಗತಿ. ಇದರೊಂದಿಗೆ ರೈತರು ಕೆರೆಯ ಸುಸ್ಥಿತಿಯನ್ನು ಕಾಪಾಡುವುದು ಅವರ ಕರ್ತವ್ಯವಾಗಿತ್ತು. ಕೆರೆಯ ಸುಸ್ಥಿತಿಯನ್ನು ಕಾಪಾಡದಿದ್ದವರಿಗೆ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಇವುಗಳ ಜೊತೆಗೆ ರೈತರು ಯಾವ ವಿಧವಾಗಿ ಕೃಷಿ ಮಾಡುವರೋ ಅದಕ್ಕೆ ಅನುಗುಣವಾಗಿ ಶ್ರೇಣಿಕೃತ ತೆರಿಗೆಯನ್ನು ನೀಡಬೇಕೆಂದು ಈ ಕೃತಿಯು ನಿರೂಪಿಸುತ್ತದೆ. ಪ್ರಾಚೀನ ಭಾರತದಲ್ಲಿ ಇಂತಹ ಪದ್ಧತಿಯು ಇದ್ದು, ವಿಶ್ವದ ಬೇರೆಯೆಲ್ಲಿಯೂ ಈ ವಿಧದ ಮಾಹಿತಿಯು ದೊರೆಯುವುದಿಲ್ಲ. ಅರ್ಥಶಾಸ್ತ್ರವು ಅತ್ಯಂತ ಮಹತ್ತರವಾದ ಒಂದು ಸಂಗತಿಯನ್ನು ತಿಳಿಸುತ್ತದೆ. ಕೃಷಿ, ನೀರಾವರಿ ಮುಂತಾದವುಗಳು ಜನಹಿತಾತ್ಮಕ ಕಾರ್ಯವಾಗಿದ್ದು,

ಅವುಗಳ ರಕ್ಷಣೆಯ ಬಾಧ್ಯತೆ ರಾಜ ಮತ್ತು ಪ್ರಜೆಗಳಿಗೆ ಇತ್ತೆಂದು ವಿವರಿಸುತ್ತದೆ. ಯಾರಾದರೂ ಕೆರೆ ಕಟ್ಟೆಯನ್ನು ನಾಶಮಾಡಿದಲ್ಲಿ ಅಂತವರನ್ನು ನೀರಿನಲ್ಲಿ ಮುಳುಗಿಸಿ ಸಾಯಿಸಬೇಕೆಂದು ಮತ್ತು ಪುರಾತನ ಕೆರೆಯನ್ನು ನಿರ್ಲಕ್ಷಿಸಿ ಹಾನಿ ಮಾಡಿದವರಿಗೆ ದಂಡ ಹಾಕುವ ಮೂಲಕ ಶಿಕ್ಷೆ ನೀಡಬೇಕೆಂದು ತಿಳಿಸುತ್ತದೆ.

ಜಾತಕ ಕಥೆಗಳು ಕೆರೆ ಮತ್ತು ಬೇಸಾಯದ ಬಗೆಗೆ ಕೆಲವು ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ. ಕುಲಾಲಜಾತಕ ಕಥೆಯಲ್ಲಿ ಬರುವ ಒಂದು ಕಥೆ ಗಮನಿಸುವಂತಿದೆ. ಎರಡು ಬುಡಕಟ್ಟು ಜನಾಂಗದವು 'ಹೋಯಿನಿ' (ಹೊಯಿನಿ) ಎಂಬ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಟ್ಟೆಯಿಂದ ಕೆರೆಯ ನೀರನ್ನು ಹಂಚಿಕೊಳ್ಳುವಲ್ಲಿ ಜಗಳವಾಗುತ್ತದೆ ಎಂಬ ಅಂಶವು ಜಾತಕ ಕಥೆಯಲ್ಲಿರುವುದು ಒಂದು ವಿಶೇಷ. [೩೩]

ವಿದೇಶಿಯರ ಬರಹಗಳಲ್ಲಿ ಮೆಗಾಸ್ತನಿಸ್‌ನ ಬರಹವು ಮುಖ್ಯವಾದದು.[೩೪] ಮೆಗಾಸ್ತನಿಸ್ ಎಂಬುವವನು ಗ್ರೀಕ್ ದೇಶದ ರಾಯಭಾರಿಯಾಗಿ ಚಂದ್ರಗುಪ್ತ ಮೌರ್ಯನ ಓಲಗಕ್ಕೆ ಬಂದಿದ್ದ. ಚಂದ್ರಗುಪ್ತನ ಆಳ್ವಿಕೆಯ ಕಾಲದಲ್ಲಿ ಅನೇಕ ಅಧಿಕಾರಿಗಳಿದ್ದು, ಅವರುಗಳು ಜಮೀನನ್ನು ಅಳೆದು ಕೆರೆಯ ನೀರನ್ನು ಸಮರ್ಪಕವಾಗಿ ವಿವರಿಸುವುದು ಮತ್ತು ನಾಲೆಗಳ ತೂಬುಗಳನ್ನು ದುರಸ್ತಿ ಮಾಡಿ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುತ್ತಿದ್ದರೆಂದು ಅವನು ಬರೆದಿದ್ದಾನೆ. ಇದಲ್ಲದೇ ನೀರಿನ ವಿತರಣೆಯಲ್ಲಿ ಯಾವ ಲೋಪವೂ ಬರದಂತೆ ಎಲ್ಲರಿಗೂ ಸಮಪಾಲಾಗಿ ಹಂಚುತ್ತಿದ್ದರೆಂದೂ ತನ್ನ ಪ್ರವಾಸ ಅನುಭವಗಳನ್ನು ದಾಖಲಿಸಿದ್ದಾನೆ. ಈ ಸಂಗತಿಯು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿತವಾಗಿರುವ ವಿಷಯಕ್ಕೆ ಪೂರಕವಾಗಿದೆ.

ಶುಕ್ರನು ರಚಿಸಿದ ನೀತಿ ಗ್ರಂಥವಾದ 'ಶುಕ್ರನೀತಿ'ಯು ಕೆರೆ ಮತ್ತು ನಾಲೆಗಳ ಬಗೆಗೆ ತಿಳಿಸುತ್ತದೆ. ಜನಸಾಮಾನ್ಯರಿಗೆ ನೀರಾವರಿ ಸೌಕರ್ಯ ಒದಗಿಸಿಕೊಟ್ಟ ಪ್ರತಿಫಲವಾಗಿ ತೆರಿಗೆಯನ್ನು ವಿಧಿಸಬೇಕೆಂದು ತಿಳಿಸುವುದು ವಿಶೇಷವಾದ ಸಂಗತಿ. ಕಲ್ಪಿತ ಸೌಕರ್ಯಕ್ಕೆ ಅನುಗುಣವಾಗಿ ತೆರಿಗೆಯನ್ನು ಸಂಗ್ರಹಿಸಬೇಕು ಹಾಗೂ ಯಾವುದೇ ವ್ಯಕ್ತಿಯಾಗಲಿ ಅಥವಾ ಸಂಘ ಸಂಸ್ಥೆಗಳಾಗಲಿ, ಕೆರೆ ಮತ್ತು ನಾಲೆಗಳ ನಿರ್ಮಾಣ ಮಾಡಿದ ಪಕ್ಷದಲ್ಲಿ ಅಂತಹವರಿಗೆ ತೆರಿಗೆಯಲ್ಲಿ ವಿನಾಯ್ತಿಯನ್ನು ನೀಡಬೇಕೆಂದು ತಿಳಿಸುತ್ತದೆ.

ಅಮರಕೋಶವು (ನಾಮಲಿಂಗಾನುಶಾಸನ) ಎರಡು ಪ್ರಕಾರದ ಸಾಗುವಳಿ ಭೂಮಿಯನ್ನು ಕುರಿತು ತಿಳಿಸುತ್ತದೆ.[೩೫] ಮೊದಲನೆಯ ಪ್ರಕಾರದಲ್ಲಿ ಮಳೆಯ ನೀರನ್ನು ಅವಲಂಬಿಸಿ ಕೃಷಿ ಮಾಡುವ ಪದ್ಧತಿಗೆ 'ದೇವಮಾತ್ರಕ'ವೆಂದು, ಎರಡನೆಯ ಪ್ರಕಾರದಲ್ಲಿ 'ನದಿಮಾತ್ರಕ'ವೆಂದು ತಿಳಿಸುತ್ತದೆ. ನದಿಮಾತ್ರಿಕವೆಂದರೆ ನದಿಯ ನೀರನ್ನು ಅವಲಂಬಿಸಿ ಕೃಷಿ ಮಾಡುವುದು ಎಂದೇ ಆಗಿದೆ. ನದಿಯ ನೀರನ್ನು ಕಾಲುವೆಗಳ ಮುಖಾಂತರ

ಹಾಯಿಸಿ ಬೇಸಾಯ ಮಾಡುತ್ತಿದ್ದರು ಎಂದು ಊಹಿಸಬಹುದು.

ಶಾತವಾಹನರ ಕಾಲಕ್ಕೆ ಸೇರಿದ್ದೆಂದು ವಿದ್ವಾಂಸರಿಂದ ಪರಿಗಣಿಸಲ್ಪಟ್ಟಿರುವ ಗಾಥಾಸತ್ತಸಹಿ (ಗಾಥಾಸಪ್ತಸತಿ) ಎಂಬ ಪ್ರಾಕೃತ ಭಾಷೆಯ ಕೃತಿಯನ್ನು 'ಹಾಲ' ಎಂಬಾತನು ರಚಿಸಿದ್ದು, ಅದರಲ್ಲಿ ಕೃಷಿ, ನೀರಾವರಿ, ಏತಗಳು ಹಾಗೂ ಇವಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಒದಗಿಸುತ್ತದೆ. ಇದಲ್ಲದೆ ಬಾವಿಗಳಿಂದ ನೀರನ್ನು ರಹತ್ತಗಡಿಯ (ಕನ್ನಡದಲ್ಲಿ ರಾಟೆ–ಗಡಿಗೆ) ಮೂಲಕ ಎತ್ತುತ್ತಿದ್ದರು ಎನ್ನುವುದು ಈ ಗ್ರಂಥದಿಂದ ತಿಳಿದುಬರುವ ವಿಷಯ.

ಪ್ರಾಚೀನ ದಕ್ಷಿಣ ಭಾರತದ ತಮಿಳು ಸಾಹಿತ್ಯವನ್ನು ಸಂಗಮ್ ಸಾಹಿತ್ಯವೆಂದು ಕರೆಯುತ್ತಾರೆ. ಸಂಗಮ್ ಸಾಹಿತ್ಯವಾದ 'ಸಿಲಪ್ಪದಿಗಾರಂ' ಕೆಲವು ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ. ಕಾವೇರಿ ನದಿಗೆ ಅಡ್ಡವಾಗಿ ಒಂದು ಕಟ್ಟೆಯನ್ನು ಕಟ್ಟಿ, ಯಾವುದೇ ಪ್ರಯಾಸವಿಲ್ಲದೆ ನೀರನ್ನು ಕೃಷಿಗೆ ಬಳಸಿಕೊಂಡ ಬಗೆಗೆ ಈ ಕೃತಿಯು ತಿಳಿಸುತ್ತದೆ. ಸಂಗಮ್ ಸಾಹಿತ್ಯವು ಮತ್ತೊಂದು ಸಂದರ್ಭದಲ್ಲಿ ಚೋಳರಾಜನಾದ ಕರಿಕಾಲನು ಕ್ರಿ.ಶ.ಸು.೧ ನೇ ಶತಮಾನದಲ್ಲಿ ಕಾವೇರಿ ನದಿಗೆ ಅಡ್ಡವಾಗಿ ಕಟ್ಟೆಯನ್ನು ನಿರ್ಮಾಣ ಮಾಡಿ ಅದರ ನೀರನ್ನು ಕೃಷಿಗೆ ಮತ್ತು ಕುಡಿಯುವುದಕ್ಕೆ ಉಪಯೋಗಿಸಿದನೆಂದು ತಿಳಿಸುತ್ತದೆ. ಈ ರಾಜನು ಇಂತಹ ಜನಕಲ್ಯಾಣ ಕಾರ್ಯದಿಂದಾಗಿ ಅನೇಕ ಬಿರುದುಗಳನ್ನು ಸಹ ತನ್ನದಾಗಿಸಿಕೊಂಡಿದ್ದಾನೆ. ಮತ್ತೊಂದು ಕುತೂಹಲಕಾರಿಯಾದ ಸಂಗತಿಯೆಂದರೆ ಈ ಕಟ್ಟೆಯ ನಿರ್ಮಾಣಕ್ಕೆ ಅವನು ಗೆದ್ದು ಬಂದಂತಹ ರಾಜ್ಯಗಳ ಕೆಲಸಗಾರರನ್ನು ಮತ್ತು ಇನ್ನಿತರ ವ್ಯಕ್ತಿಗಳನ್ನು ಬಳಸಿಕೊಂಡು ಕಟ್ಟೆಯನ್ನು ನಿರ್ಮಿಸಿದನೆಂದು ಶಾಸನ ತಿಳಿಸುತ್ತದೆ.

ಆದಿ ಇತಿಹಾಸಕಾಲದ ಕೆಲವು ಮುಖ್ಯ ಶಾಸನಗಳು ಕೆರೆಗಳನ್ನು ಕುರಿತು ಉಲ್ಲೇಖಿಸುತ್ತವೆ. ಗುಜರಾತ್ ರಾಜ್ಯದಲ್ಲಿರುವ ಜುನಾಗಡ್‌ನಲ್ಲಿ ದೊರೆತಿರುವ ಮಹಾಕ್ಷತ್ರಪ ರುದ್ರದಾಮನ (ಕ್ರಿ.ಶ.೧೫೦) ಶಾಸನವು ಸುದರ್ಶನ ಕೆರೆಯನ್ನು ಉಲ್ಲೇಖಿಸುತ್ತದೆ. ಈ ಶಾಸನವು ಬಹುಶಃ ಭಾರತದಲ್ಲೇ ಇಲ್ಲಿಯವರೆಗೆ ದೊರೆತ ಶಾಸನಗಳಲ್ಲಿ ಬಹಳ ಅಪರೂಪವಾಗಿದ್ದು, ಕೆರೆಗೆ ಸಂಬಂಧಿಸಿದ ಅನೇಕ ವಿವರಗಳನ್ನು ನೀಡುತ್ತದೆ. ಒಂದು ಕೆರೆಯ ಪೂರ್ಣ ಇತಿಹಾಸವನ್ನು ನೀಡುವುದು ಈ ಶಾಸನದ ವೈಶಿಷ್ಟ್ಯ. ಶಾಸನದ ತೇದಿಯು, ಅರಸನ ೭೨ನೆಯ ವರ್ಷದಲ್ಲಿ ಹೊರಡಿಸಿದ್ದು ಕ್ರಿ.ಶ.ಸುಮಾರು ೧೫೦ ಕ್ಕೆ ಸರಿ ಹೊಂದುತ್ತದೆ.

ಕ್ರಿ.ಪೂ. ೪ನೇ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನು (ಕ್ರಿ.ಪೂ.೩೨೪–೩೦೦) ಪಶ್ಚಿಮ ಭಾರತದ ಮಾಂಡಲೀಕನಾಗಿದ್ದಾಗ ವೈಶ್ಯ ಪುಷ್ಯಗುಪ್ತನು ಆ ಕೆರೆಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಚಂದ್ರಗುಪ್ತನ ತರುವಾಯ ಅಶೋಕನ (ಕ್ರಿ.ಪೂ.೨೭೩–

೩೬) ಅಧಿಕಾರಿಯಾಗಿದ್ದ ಯುವರಾಜ ತುಷಾಸ್ಫನು ಆ ಕೆರೆಯನ್ನು ಮತ್ತಷ್ಟು ಸುಧಾರಿಸಿ. ಆ ಕೆರೆಗೆ ಬರುವ ನಾಲೆಯಲ್ಲಿ ಸೇರಿಸಿಕೊಳ್ಳುವ ಜೊಂಡು ಮತ್ತು ಇತರ ಕಲ್ಮಶಗಳನ್ನು ತೆಗೆಯಿಸಿ ಕೆರೆಯನ್ನು ದುರಸ್ತಿಗೊಳಿಸಿದನು.

ಕಾಡಿನಲ್ಲಿ ಹುಟ್ಟಿ ಹರಿದು ಬರುವ ಸರ್ವಣಸಿಕತಾ (ಇಂದಿನ ಸುರ್ವಣರೇಖಾ; ಸುವರ್ಣಸಿಕತಾ ಎಂದರೆ ಹೊಂಬಣ್ಣದ ಉಸುಕು) ನದಿಗೆ ಅಡ್ಡಕಟ್ಟೆಯನ್ನು ಕಟ್ಟಿ ಕೆರೆಯನ್ನು ನಿರ್ಮಿಸಿದ ಉಲ್ಲೇಖವು ಶಾಸನದಲ್ಲಿದೆ. ಸುರ್ವಣಸಿಕತಾ ನದಿಗೆ ಮತ್ತೆರಡು ಚಿಕ್ಕ ತೊರೆಗಳು ಸೇರುತ್ತವೆಂದು ಹಾಗೂ ಕೆರೆಯು ಬಹಳ ಸುಭದ್ರ ಸ್ಥಿತಿಯಲ್ಲಿದ್ದು ಅದನ್ನು ಒಂದು ಪರ್ವತಕ್ಕೆ ಹೋಲಿಸುತ್ತಾ ಕೆಲವು ಅಪಾಯಗಳಿಂದ ರಕ್ಷಿಸಲು ಎಲ್ಲಾ ವಿಧದ ರಕ್ಷಣಾತ್ಮಕ ಕ್ರಮಗಳನ್ನು ಸಹ ತೆಗೆದುಕೊಳ್ಳಲಾಗಿತ್ತೆಂದು ಶಾಸನವು ತಿಳಿಸುತ್ತದೆ. ಇವೆಲ್ಲವೂ ಇದ್ದಾಗ್ಯೂ ಮಹಾಕ್ಷತ್ರಪ ರುದ್ರದಾಮನ್ ಆಳ್ವಿಕೆಯ ಕಾಲದಲ್ಲಿ ಪ್ರಕೃತಿಯ ವಿಕೋಪದಿಂದ ವಿಪರೀತ ಮಳೆಯಾಗಿ ಸುವರ್ಣಸಿಕತಾ ನದಿಯಲ್ಲಿ ನೆರೆಬಂದು ಆ ನೀರು ಸುದರ್ಶನ ಕೆರೆಯ ಏರಿಯನ್ನು ಒಡೆದು ಹಾಕಿತು. ಸುಮಾರು ೪೨೦ 'ಹಸ್ತ' ಗಳಷ್ಟು ಉದ್ದವಾಗಿಯೂ ೭೫ 'ಹಸ್ತ' ಗಳಷ್ಟು ಅಗಲವಾಗಿಯು ಕೆರೆಯ ಏರಿ ಒಡೆಯಿತು ಎಂದೂ, ಸುದರ್ಶನ ಕೆರೆಯು ನೋಡಲು ದುರ್ದರ್ಶನವಾಯಿತೆಂದು ಶಾಸನವು ವರ್ಣಿಸುತ್ತದೆ. ಕೆರೆಯ ಈ ದುಸ್ಥಿತಿಯಿಂದ ಜನರಿಗೆ ಮತ್ತು ಜಾನುವಾರುಗಳಿಗೆ ಅತೀವ ಕಷ್ಟವಾಯಿತೆಂದು ಬಣ್ಣಿಸುತ್ತ ರಾಜನಾದ ರುದ್ರದಾಮನು ಮತ್ತು ಅವನ ಆಸ್ಥಾನಿಕರು ಆ ಕೆರೆಯ ದುರಸ್ತಿಗೆ ವಿಪರೀತ ವೆಚ್ಚ ತಗಲುವ ಸಂಭವವಿದೆಯೆಂದು, ಜೀರ್ಣೋದ್ಧಾರ ಕಾರ್ಯವನ್ನು ಕೈ ಬಿಡಬೇಕೆಂದು ಒತ್ತಾಯಿಸಿ ವಿರೋಧಿಸಿದಾಗ ಅವುಗಳನ್ನು ಲಕ್ಷಿಸದೆ ಬೊಕ್ಕಸದಿಂದ ಹಣವನ್ನು ವ್ಯಯಿಸಿ ಕೆರೆಯ ಜೀರ್ಣೋದ್ಧಾರ ಮಾಡಿದನೆಂದು ಶಾಸನವು ಉಲ್ಲೇಖಿಸುತ್ತದೆ. ಆ ಕೆರೆಯ ದುರಸ್ಥಿ ಕೆಲಸವನ್ನು ಅನಂತರದ ಮಾಂಡಲಿಕನಾದ 'ಸುವಿಶಾಖ'ನು ಮುಂದೆ ನಿಂತು ಪೂರೈಸಿದುದಾಗಿ ತಿಳಿದುಬರುತ್ತದೆ.

ಕೆಲವು ಶತಮಾನಗಳ ನಂತರ ಕ್ರಿ.ಶ.೫ನೆಯ ಶತಮಾನದಲ್ಲಿ ಅಂದರೆ ಗುಪ್ತರ ಕಾಲದಲ್ಲಿ ಆ ಕೆರೆಯು ಮತ್ತೊಮ್ಮೆ ಒಡೆದಾಗ ಸ್ಕಂದಗುಪ್ತನ ಮಾಂಡಲೀಕನಾದ 'ಚಪಲಿಕ'ನು ಕ್ರಿ.ಶ. ಸುಮಾರು ೪೫೬–೫೭) ರಲ್ಲಿ ಎರಡು ತಿಂಗಳ ಅವಧಿಯಲ್ಲಿ ದುರಸ್ತಿಗೊಳಿಸಿದುದಾಗಿ ಜುನಾಗಡದ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಈ ಕೆರೆಯು ಕ್ರಿ.ಪೂ. ೪ನೆಯ ಶಮಾನದಿಂದ ಸುಮಾರು ಕ್ರಿ.ಶ. ೫ನೆಯ ಶತಮಾನದವರೆಗೆ ಬಳಕೆಯಲ್ಲಿದ್ದು, ಅದು ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಮುಖ್ಯ ಪಾತ್ರವಹಿಸಿತ್ತೆಂಬುದು ನಿರ್ವಿತವಾದ ಅಂಶವಾಗಿದೆ.

ಕಳಿಂಗ ದೇಶದ ರಾಜನಾದ ಖಾರವೇಲನ 'ಹಾತಿಗುಂಪ' ಶಾಸನವು ಅವನ

ಮೊದಲ ವರ್ಷದ ಆಳ್ವಿಕೆಯಲ್ಲಿಯೇ ಒಂದು ಕೆರೆಯನ್ನು ನಿರ್ಮಿಸಿದನೆಂದು ಮತ್ತು ನಂದರು ನಿರ್ಮಿಸಿದಂತಹ ಕಾಲುವೆಗಳನ್ನು ಸಹ ದುರಸ್ಥಿಗೊಳಿಸಿದುದಾಗಿ ಉಲ್ಲೇಖಿಸುತ್ತದೆ. ಇವುಗಳಲ್ಲದೇ ರಾಜನು ರಾಜ್ಯದಲ್ಲಿರುವ ಅನೇಕ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದರೊಂದಿಗೆ ಕೆರೆಗಳನ್ನು ಸಹ ನಿರ್ಮಿಸಿದ ಎಂಬುದು ಶಾಸನೋಕ್ತ ವಿಷಯವೇ ಆಗಿದೆ. ಇವುಗಳಿಂದ ಪ್ರಾಚೀನ ಭಾರತದಲ್ಲಿ ಕೆರೆಗಳ ಮಹತ್ವವಿದ್ದುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಕೆರೆಗಳನ್ನು ನಿರ್ಮಿಸಿದ ರಾಜರ ಹೆಸರುಗಳನ್ನು ಕೆರೆಗೆ ಇಡಲಾಗುತ್ತಿತ್ತು.[೩೬] ಕರ್ನಾಟಕದ ಕೆಲವು ಪ್ರಮುಖ ರಾಜಮನೆತನಗಳಲ್ಲಿ ಕದಂಬರು, ಗಂಗರು, ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು. ಈ ಎಲ್ಲ ಅರಸು ಮನೆತನಗಳು ಹಾಗೂ ಇತರ ಅರಸು ಮನೆತನಗಳವರು ಕರ್ನಾಟಕದಲ್ಲಿ ಅನೇಕ ಕೆರೆ, ಕಾಲುವೆ, ಆಣೆಕಟ್ಟುಗಳನ್ನು ನಿರ್ಮಿಸಿರುತ್ತಾರೆ. ಈ ಕಾರ್ಯಗಳು ಕುಡಿಯುವ ನೀರಿನ ಸೌಲಭ್ಯದ ಜೊತೆಗೆ ಬೇಸಾಯಕ್ಕೆ ಸಹ ಸಹಾಯಕವಾಗಿದ್ದವು.

ಪುಲುಮಾಯಿ ಮೇಕೆದೋಣಿ ಶಾಸನವು (ಮ್ಯಾಕದೋಣಿ ಎಂದು ಸಹ ಕರೆಯುತ್ತಾರೆ). ಮೊಟ್ಟಮೊದಲ ಬಾರಿಗೆ ಕರ್ನಾಟಕದ ಕೆರೆಯ ಬಗೆಗೆ ಉಲ್ಲೇಖಿಸುತ್ತದೆ. ಅಂತೆಯೇ ತಾಳಗುಂದದಲ್ಲಿ ಲಭ್ಯವಿರುವ ಶಾಂತಿವರ್ಮನ ಶಾಸನವು ಕಾವೇರಿ ಮತ್ತು ಅದರ ಉಪನದಿಗಳಿಗೆ ಆಣೆಕಟ್ಟನ್ನು ನಿರ್ಮಿಸಿದುದಾಗಿ ತಿಳಿಸುತ್ತದೆ.

ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆಗಳ ಚಂದ್ರವಳ್ಳಿಯ ಸಮೀಪದಲ್ಲಿರುವ ಚಂದ್ರವಳ್ಳಿ ಕೆರೆಯು ಒಂದಾಗಿದೆ.[೩೭] ಈ ಕೆರೆಯನ್ನು ಕದಂಬ ರಾಜನಾದ ಮಯೂರವರ್ಮನು ನಿರ್ಮಿಸಿದನೆಂಬುದನ್ನು ಅವನ ಒಂದು ಶಾಸನವು ತಿಳಿಸುತ್ತದೆ. ಈ ಕೆರೆಯು ಹುಲೆಗುಂದಿ ಎಂಬಲ್ಲಿದ್ದು ಆ ಪ್ರದೇಶವು ಭಾರಿ ಕಣಿವೆಯಿಂದ ಕೂಡಿದ್ದು ಎರಡು ಬೆಟ್ಟಗಳ ನಡುವಿನ ಕಣಿವೆಯಲ್ಲಿ ರಾಜನು ಕೆರೆಯನ್ನು ನಿರ್ಮಿಸಿದುದನ್ನು ಶಾಸನವು ಉಲ್ಲೇಖಿಸುತ್ತದೆ. ಈ ಪ್ರದೇಶದಲ್ಲಿ ನಡೆಸಿದ ಉತ್ಖನನದಿಂದ ಸಹ ಕೆರೆಯು ಪ್ರಾಚೀನವಾಗಿದ್ದುದಾಗಿ ದೃಢಪಟ್ಟಿದೆ.[೧೮]

ತಮಿಳುನಾಡಿನಲ್ಲಿ ಪಲ್ಲವರು ಕ್ರಿ.ಶ.೫-೬ನೆಯ ಶತಮಾನದಿಂದ ಆಳ್ವಿಕೆಯನ್ನು ಪ್ರಾರಂಭಿಸಿದ್ದು, ಅವರ ಕಾಲದಲ್ಲಿಯೂ ಅನೇಕ ಕೆರೆ, ಕಾಲುವೆಗಳು ಬಳಕೆಯಲ್ಲಿ ಇದ್ದವೆಂಬುದಕ್ಕೆ ಪೂರಕವಾಗಿ ಶಾಸನಾಧಾರಗಳಿವೆ. ಈ ಶಾಸನಗಳು ಆ ಕಾಲದ ಕೆರೆಗೆ ಸಂಬಂಧಿಸಿದಂತಹ ಕೆಲವು ಪದಗಳು ಮತ್ತು ಕುತೂಹಲಕಾರಿಯಾದ ವಿಷಯಗಳನ್ನು ತಿಳಿಯಪಡಿಸುತ್ತವೆ. ಕೆಲವು ವ್ಯಕ್ತಿನಾಮಗಳ ಜೊತೆಯಲ್ಲಿ ಕೆರೆಯನ್ನು ಸೂಚಿಸುವ ಪದಗಳ ಜೋಡಣೆಗಳಿವೆ. ಅಂದರೆ ಕೆರೆಯನ್ನು ವ್ಯಕ್ತಿನಾಮಗಳ ಜೊತೆಯಲ್ಲಿ ಸೇರಿಸಿ ಸಂಭೋದಿಸ ಲಾಗುತ್ತಿತ್ತು. ಉದಾಹರಣೆಗೆ ಪರಮೇಶ್ವರ ತಟಾಕ, ಚಿತ್ರಮೇಘ ತಟಾಕ ಮುಂತಾದವುಗಳೆ

ಆಗಿವೆ. ಕೆರೆ ನಿರ್ಮಾಣ ಪಲ್ಲವರ ಕಾಲದಲ್ಲಿ ಯೋಜನಾಬದ್ಧವಾಗಿತ್ತು. [೩೮]

ಗಂಗರು ಸುಮಾರು ೫ನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೆ ಕರ್ನಾಟಕದ ಕೆಲವು ಭಾಗಗಳನ್ನು ಆಳಿದರು. ಇವರುಗಳು ಸ್ವತಂತ್ರ ವಾಗಿಯೂ, ಕೆಲವೊಮ್ಮೆ ಸಾಮಂತರಾಗಿಯೂ, ಇದ್ದು ದೀರ್ಘ ಕಾಲದವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಇವರ ಕಾಲಕ್ಕೆ ಸಂಬಂಧಿಸಿದ ಅನೇಕ ಶಿಲಾಶಾಸನಗಳು, ತಾಮ್ರಪಟ ಶಾಸನಗಳು ಅವರ ರಾಜ್ಯದಲ್ಲಿ ಪ್ರಚಲಿತವಾಗಿದ್ದ ನೀರಾವರಿ ಪದ್ಧತಿಯನ್ನು ಕುರಿತ ಮಾಹಿತಿಗಳನ್ನು ನೀಡುತ್ತವೆ. ಕೆಲವು ಶಾಸನಗಳು ಕೆರೆ, ಮಡವು, ದೋಣೆ, ಗುಂಡು, ಜಲಾಶಯ, ಕೊಳ್ಳವೆಂದು ಉಲ್ಲೇಖಿಸಿ ಕೆರೆಗೆ ಇದ್ದಂತಹ ಪರ್ಯಾಯ ಪದಕೋಶವನ್ನು ನಮ್ಮ ಮುಂದಿಡುತ್ತವೆ. ಇವಲ್ಲದೆ ಕೆರೆಯ ಆಕಾರವನ್ನು ಬಾಲಚಂದ್ರಾಕಾರ ಕೊಳವೆಂದು, ಅರ್ಧ ಚಂದ್ರಾಕಾರ ಕೊಳವೆಂದು ಪರಿಚಯಿಸುತ್ತವೆ.

ಕನ್ನಡದ ಆದಿಕವಿಯಾದ ಪಂಪನು ವಿಕ್ರಮಾರ್ಜುನ ವಿಜಯವನ್ನು ಬರೆದುದಕ್ಕೆ ತನಗೆ ಅರಿಕೇಸರಿಯು 'ಧರ್ಮಪುರ' ಎಂಬ ಅಗ್ರಹಾರವನ್ನು ದತ್ತಿಯಾಗಿ ಬಿಟ್ಟುಕೊಟ್ಟಂತೆ ತನ್ನ ಕೃತಿಯಲ್ಲಿ ಹೇಳಿಕೊಂಡಿದ್ದಾನೆ. ಈ ವಿಷಯವನ್ನು ಕುರಿಕ್ಯಾಲ ಅಥವಾ ಕುರ್ಕಿಯಾಲ ಶಾಸನವು ಹೇಳುತ್ತದೆ. ಈ ಧರ್ಮಪುರ ಯಾವುದು ಮತ್ತು ಎಲ್ಲಿತ್ತು? ಎಂಬ ಬಗೆಗೆ ವಿದ್ವಾಂಸರುಗಳು ಅನೇಕ ಚರ್ಚೆಗಳನ್ನು ನಡೆಸಿದ್ದಾರೆ. ಡಾ.ಎಂ.ಚಿದಾನಂದಮೂರ್ತಿಯವರು ಈ ಗ್ರಾಮದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಉಪಯುಕ್ತ ವಿಚಾರಗಳತ್ತ ಗಮನಹರಿಸಿ ಗುರುತಿಸಿದ್ದಾರೆ. ಜಿನವಲ್ಲಭ ತನ್ನ ಅಣ್ಣನ ಹೆಸರಿನಲ್ಲಿ 'ಕವಿತಾಗುಣಾರ್ಣವ' ಎಂಬ ಕೆರೆಯನ್ನು ಕಟ್ಟಿಸಿದನೆಂದು ಶಾಸನದಲ್ಲಿ ಉಲ್ಲೇಖಿತವಾಗಿದೆ. ಪಂಪಭಾರತದಲ್ಲಿ ವರ್ಣಿಸುವಾಗ ಅಲ್ಲಿ ಒಂದು ಕೆರೆ ಇತ್ತೆಂದು ಪಂಪಭಾರತದ ಪದ್ಯವೊಂದರಿಂದ ಚಿದಾನಂದಮೂರ್ತಿ ಯವರು ಗುರುತಿಸಿದ್ದಾರೆ. [೩೯] ಪಂಪನ ವರ್ಣನೆ ಹೀಗಿದೆ.

ಬೀರದಳವಿಯ ನನ್ನಿಯ ಚಾಗದ ಶಾಸನ ಚಂದ್ರಾರ್ಕತಾರಂಬರಂ।
ಮೇರು ನಿಲ್ವಿನಂ ನಿಲವೇರ್ಕು ಕಾವ್ಯಕ್ಕೆ ತಾನಿತ್ತಂ ಶಾಸನದಗ್ರಹಾರಂ।
ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮ ಭಂಡಾರದಂತೆ।
ಸಾರಮಾದುದು ಬಿಟ್ಟಗ್ರಹಾರಮಾ ಬಜ್ಜೆಸಾಸಿರದೊಳಂ ಧರ್ಮಪುರಂ।

ದೆಸೆ ಮುಖದೂಮದಿಂ ದ್ವಿಜರ ಹೋಮದಿನೊಳ್ಗೆರೆ ಹಂಸ ಕೋಕ ಸಾ।
ರಸ ಕಳನಾದದಿಂದೊಳಗೆ ವೇದನಿನಾದದಿನೆತ್ತ ಮೇಯ್ದೆ ಶೋ ।
ಭಿಸೆ ಸುರಮಥ್ಯಮಾನವಧಿ ಕ್ಷುಭಿತಾರ್ಣವ ಘೋಷದಂತೆ ಘೂ ।
ರ್ಣಿಸುತರಲೀ ಗುಣಾರ್ಣವನ ಧರ್ಮದ ಧರ್ಮಪುರಂ ಮನೋಹರಂಮ॥

ಪಂಪನಿಗೆ ದತ್ತಿಯಾಗಿ 'ಧರ್ಮಪುರ' ಅಗ್ರಹಾರವು ಬಂದಾಗಲೇ ಅಲ್ಲಿ ಒಂದು ದೊಡ್ಡ ಕೆರೆಯಿತ್ತು. ನಂತರ ಜಿನವಲ್ಲಭ ತನ್ನ ಅಣ್ಣನ ಹೆಸರಿನಲ್ಲಿ ಕಟ್ಟಿಸಿದ್ದು ಕವಿತಾಗುಣಾರ್ಣವ ಕೆರೆ. ಧರ್ಮಪುರದಲ್ಲಿ ಎರಡು ಕೆರೆಗಳಿದ್ದು, ಬೊಮ್ಮಲಗುಟ್ಟಕ್ಕೆ (ಶಾಸನ ದೊರೆತ ಸ್ಥಳ) ಅಂಟಿಕೊಂಡಂತೆ ದಕ್ಷಿಣದಲ್ಲಿ 'ಪಾತಚೆರುವು' (ಹಳೆಯ ಕೆರೆ) ಇದ್ದು, ಧರ್ಮಪುರದ ಜಮೀನುಗಳಿಗೆ ನೀರನ್ನು ಪೂರೈಸುತ್ತಿತ್ತು. ಗುಡ್ಡದ ಹಿಂಭಾಗದ ಕಣಿವೆಯಲ್ಲಿ ಉತ್ತರಕ್ಕೆ 'ಉಡನ್ ಚೆರವು' (ಚಿಕ್ಕ ಕೆರೆ) ಇದೆ. ಬಹುಶ: ಈ ಕೆರೆಯನ್ನು ಜಿನವಲ್ಲಭನು 'ಕವಿತಾ ಗುಣಾರ್ಣವ ಕೆರೆ' ಯೆಂದು ಹೆಸರಿಸಿ ನಿರ್ಮಿಸಿದ ಕೆರೆ ಎಂದು ಚಿದಾನಂದಮೂರ್ತಿ ಅಭಿಪ್ರಾಯ. ಎರಡು ಕೆರೆಗಳ ತಪ್ಪಲಿನ ಬಯಲೇ ಧರ್ಮಪುರದ ನಿವೇಶನ. ಎರಡೂ ಕೆರೆಗಳ ಮತ್ತು ನಿವೇಶನದಲ್ಲಿ ದೊರಕಿರುವ ಪ್ರಾಚ್ಯ ಅವಶೇಷಗಳ ಛಾಯಾಚಿತ್ರಗಳನ್ನು ತಮ್ಮ ಲೇಖನದಲ್ಲಿ ನೀಡಿದ್ದಾರೆ.

ತಮಿಳುನಾಡಿನಲ್ಲಿ ಪಲ್ಲವರ ತರುವಾಯ ಚೋಳರು ಮತ್ತು ಪಾಂಡ್ಯರು ತಮ್ಮ ಪ್ರಭುತ್ವನ್ನು ಸ್ಥಾಪಿಸಿದರು. ಇವರುಗಳು ಸಹ ತಮ್ಮ ಪೂರ್ವಜರಂತೆಯೇ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಜನಕಲ್ಯಾಣ ಕಾರ್ಯಗಳನ್ನು ಸಹ ಮಾಡುತ್ತಿದ್ದರು. ಈ ಎರಡೂ ಮನೆತನಗಳಲ್ಲಿ ಕೃಷಿಗೆ ಅಧಿಕ ಪ್ರಾಮುಖ್ಯತೆಯನ್ನು ನೀಡಿದ ಚೋಳರ ಅನೇಕ ಶಾಸನಗಳಲ್ಲಿ, ಪ್ರಮುಖವಾಗಿ ತಂಜಾವೂರಿನ ಬಳಿಯಲ್ಲಿ ದೊರೆಯುವ ಶಾಸನಗಳು, ಅಧಿಕಾಂಶವಾಗಿ ಕೃಷಿ, ಕೃಷಿಕ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಉಲ್ಲೇಖವಿರುವುದು ಗಮನಾರ್ಹ.

ರಾಜೇಂದ್ರ ಚೋಳನು (ಕ್ರಿ.ಶ.೧೦೧೨–೪೪) ಉತ್ತರ ಭಾರತದವರೆಗೆ, ಪ್ರಾಯಶ: ದಂಡೆತ್ತಿ, ಹೋಗಿ ಅಲ್ಲಿಯ ಗಂಗೆಯಿಂದ ನೀರನ್ನು ತಂದು, ಕುಂಭಕೋಣಂನ ಸಮೀಪದಲ್ಲಿ ಒಂದು ಹೊಸ ರಾಜಧಾನಿಯನ್ನು ಸ್ಥಾಪಿಸಿ, ಅಲ್ಲಿ ಕೆರೆಯನ್ನು ಕಟ್ಟಿಸಿ ಆ ಗಂಗೆಯನ್ನು ಕೆರೆಯ ನೀರಿನಲ್ಲಿ ಬೆರೆಸಿದನೆಂದು ಒಂದು ಶಾಸನವು ತಿಳಿಸುತ್ತದೆ. ಈ ಕಾರ್ಯದಿಂದ ರಾಜನು 'ಗಂಗೈಕೊಂಡಾನ್' ಎಂಬ ಬಿರುದಾಂಕಿತನಾಗುತ್ತಾನೆ. ಇದಲ್ಲದೆ ತನ್ನ ನೂತನ ರಾಜಧಾನಿಗೆ 'ಗಂಗೈಕೊಂಡ ಚೋಳಪುರಂ' ಎಂದು ಹೆಸರಿಡುತ್ತಾನೆ. ರಾಜನು ಗಂಗೆಯನ್ನು ತಂದುದು ' 'ಜಲಮ್ಯ–ಸ್ತಂಭ'[೪೦]ಎಂಬುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುವುದು ಅತ್ಯಂತ ಕುತೂಹಲಕಾರಿಯಾದ ಸಂಗತಿಯಾಗಿದೆ.

ಚೋಳರು ಆಡಳಿತಕ್ಕೆ ಬಹಳ ಹೆಸರುವಾಸಿಯಾದವರು. ಅವರು ಆಡಳಿತಾಂಗವನ್ನು ವಿಕೇಂದ್ರಿಕೃತಗೊಳಿಸಿ ಸಭೆ ಅಥವಾ ಮಹಾಸಭೆ ಎಂಬ ಸಮಿತಿಗಳನ್ನು ಆಯಾ ಗ್ರಾಮಗಳಲ್ಲಿ ರಚಿಸುತ್ತಿದ್ದರು. ಆ ಸಮಿತಿಯವರು ಉಪಸಮಿತಿಯನ್ನು ರಚಿಸಿ ಎಲ್ಲಾ ಕಾರ್ಯಭಾರಗಳನ್ನು ನಿರ್ವಹಿಸುತ್ತಿದ್ದರು. ಅಂತಹ ಹಲವು ಉಪಸಮಿತಿಗಳಲ್ಲಿ 'ಏರಿವಾರಿಯಂ' ಒಂದಾಗಿದೆ.

ತಮಿಳಿನಲ್ಲಿ 'ಏರಿ' ಎಂದರೆ ಕೆರೆ ಎಂದರ್ಥ. ಈ ಉಪಸಮಿತಿಯು ಕೆರೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದರೊಂದಿಗೆ ಅವಕ್ಕೆ ಸಂಬಂಧಿಸಿದ ತೆರಿಗೆಗಳನ್ನು ಸಹ ಸಂಗ್ರಹಿಸುತ್ತಿದ್ದರು ಎಂದು ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ತಮಿಳುನಾಡಿನ ಚೆಂಗಲ್‌ಪಟ್ಟು ಜಿಲ್ಲೆಯಲ್ಲಿರುವ ಉತ್ತರಮೇರೂರು ಗ್ರಾಮದ ಸಮೀಪವಿರುವ ವೈರಮೇಘ–ತಟಾಕವು ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ.[೪೧] ಈ ಕೆರೆಯು ಪಲ್ಲವರ ಕಾಲದಲ್ಲಿಯೇ ಕಟ್ಟಲಾಗಿದ್ದು, ಅದು ಚೋಳರ ಕಾಲದಲ್ಲಿಯೂ ಆ ನಂತರದ ಕಾಲಗಳಲ್ಲಿಯೂ ಉಪಯೋಗವಾಗುತ್ತಿತ್ತು. ಅವರ ಕಾಲದ ಶಾಸನಗಳು ಸದರಿ ಕೆರೆಯ ಬಗೆಗೆ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಈ ಕೆರೆಯ ಉಸ್ತುವಾರಿಗೆ 'ಏರಿವಾರಿಯಂ' ಎಂಬ ಸಮಿತಿಯು ರಚಿಸಲಾಗಿತ್ತೆಂದು 'ಉತ್ತರಮೇರೂರಿನ' ಚೋಳರ ಶಾಸನ ಹೇಳುತ್ತದೆ. ಕೆರೆಯ ಸುಸ್ಥಿತಿಯನ್ನು ಕಾಪಾಡುವುದು ಅವರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿತ್ತು.

ಚೋಳರ ಸಮಕಾಲೀನರಾದ ಚಾಳುಕ್ಯರು ಮತ್ತು ಹೊಯ್ಸಳರು ಸಹ ಕರ್ನಾಟಕದಲ್ಲಿ ಕೆರೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರೊಂದಿಗೆ ಪ್ರಜಾಹಿತಾತ್ಮಕ ಚಟುವಟಿಕೆಗಳನ್ನು ಮುಂದುವರೆಸುತ್ತಿದ್ದರು. ಚಾಳುಕ್ಯರು ನಿರ್ಮಿಸಿದಂತಹ ಕೆರೆಗಳು ಕರ್ನಾಟಕದ ವಾತಾಪಿ (ಬಾದಾಮಿ), ಕಲ್ಯಾಣ ಮುಂತಾದೆಡೆಗಳಿದ್ದರೆ, ಹೊಯ್ಸಳರು ಕಟ್ಟಿಸಿದ ಕೆರೆಗಳು ಕರ್ನಾಟಕದ ದಕ್ಷಿಣ ಭಾಗದ ದೋರಸಮುದ್ರ (ಹಳೆಬೀಡು), ಬೇಲೂರು ಮುಂತಾದ ಕಡೆಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಚಾಳುಕ್ಯ ರಾಜನಾದ ಮೂರನೆಯ ಸೋಮೇಶ್ವರನು (ಕ್ರಿ.ಶ.೧೧೨೬–೩೮)ರಲ್ಲಿ ರಚಿಸಿದ ಮಾನಸೋಲ್ಲಾಸ ಕೃತಿಯು ಕೆರೆ, ಕುಂಟೆ, ಕೊಳ, ಬಾವಿ ಮುಂತಾದವುಗಳನ್ನು ಹೇಗೆ ನಿರ್ಮಿಸಿದನೆಂಬುದನ್ನು ಸವಿಸ್ತಾರವಾಗಿ ತಿಳಿಸುತ್ತದೆ. ಚೋಳ ಅರಸರು ವ್ಯವಸಾಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಲು ಕೆರೆ– ಕಟ್ಟೆಗಳನ್ನು ಕಟ್ಟಿಸಿ ನೀರಾವರಿ ಸೌಲಭ್ಯಗಳನ್ನು ಒದಗಿಸುತ್ತಿದ್ದರು.

ಕೊಪ್ಪಳ ಜಿಲ್ಲೆಯಲ್ಲಿರುವ ಹುಲಿಗಿಯ ವಿಕ್ರಮಾದಿತ್ಯನ ಕಾಲದ ಶಾಸನವು ಕೆಲವು ಕುತೂಹಲಕಾರಿಯಾದ ಸಂಗತಿಗಳನ್ನು ಹೊರಗೆಡವುತ್ತದೆ. 'ಚೌವೇದಿಭಟ್ಟ' ಎಂಬುವನು ಒಂದು ಗ್ರಾಮವನ್ನು ಪ್ರಾಯಶ: ಹುಲಿಗಿಯನ್ನು ದಾನವಾಗಿ ಪಡೆಯುತ್ತಾನೆ. ಆ ಗ್ರಾಮವು ತುಂಗಭದ್ರಾ ನದಿಯ ದಡಲ್ಲಿದ್ದು ಬೇಸಾಯಕ್ಕೆ ಯೋಗ್ಯವಾಗಿರುವುದನ್ನು ಮನಗಂಡು, ಆ ಪ್ರದೇಶದಲ್ಲಿ, ಸರ್ವೇಕ್ಷಣೆಯನ್ನು ನಡೆಸಿ ತುಂಗಭದ್ರೆಗೆ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸುವದರೊಂದಿಗೆ ಕಾಲುವೆಗಳನ್ನು ಮತ್ತು ಉಪ ಕಾಲುವೆಗಳನ್ನು ತೋಡಿಸಿ ಬೇಸಾಯಕ್ಕೆ ಉಪಯೋಗಿಸಿಕೊಳ್ಳುತ್ತಾನೆ. ಇದು ತುಂಗಭದ್ರೆ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಟ್ಟೆಯನ್ನು ಕುರಿತು ಹೇಳುವ ಮೊದಲ ಶಾಸನವಾಗಿದೆ. ಈ ಶಾಸನವು ಮೇಲ್ದಂಡೆ ಮತ್ತು ಕೆಳದಂಡೆ ಕಾಲುವೆ ಎಂದು ಉಲ್ಲೇಖಿಸಿರುವುದು ಗಮನಾರ್ಹ. [೪೨]

೨.೩ ಕೆರೆಗಳ ಮಹತ್ವ

ನೀರಾವರಿಗೆ ಬಳಸುವ ಎಲ್ಲ ನೀರಿಗೂ ಆಧಾರ ಮಳೆ. ನೆಲದ ಮೇಲೆ ಬೀಳುವ ಮಳೆ ನೀರು ಒಡನೆಯೇ ಹರಿದು ಹೋಗದಂತೆ ನೆಲದಲ್ಲಿರುವ ಸಸ್ಯಗಳು ತಡೆಹಿಡಿಯುತ್ತವೆ. ಆ ನೀರಿನ ಸ್ವಲ್ಪ ಭಾಗ ನೆಲದೊಳಕ್ಕೆ ಇಂಗುತ್ತದೆ. ಅದರಲ್ಲಿ ಸ್ವಲ್ಪ ಭಾಗವನ್ನು ಗಿಡಗಳ ಬೇರುಗಳು ಹೀರಿಕೊಳ್ಳುತ್ತವೆ. ಉಳಿದ ನೀರು ನೆಲದ ಆಳದಲ್ಲಿ ಸಂಗ್ರಹವಾಗುತ್ತದೆ. ನೆಲದ ಮೇಲ್ಭಾಗದಲ್ಲಿ ಹರಿಯುವ ನೀರಿನ ಭಾಗ ಸಣ್ಣ ಕೊಳ್ಳಗಳಲ್ಲಿ ಸಾಗುತ್ತದೆ. ಅಂಥ ಸಣ್ಣ ಸಣ್ಣ ಕೊಳ್ಳಗಳ ನೀರು ಒಟ್ಟಾಗಿ ಸೇರಿ ಹೊಳೆ ಅಥವಾ ನದಿ ಆಗುತ್ತದೆ. ಅಂಥ ಹೊಳೆಗಳಿಗೆ ಅಡ್ಡಲಾಗಿ ಕಟ್ಟೆಯನ್ನೋ, ಏರಿಯನ್ನೋ ಕಟ್ಟಿ ಕೆರೆಯನ್ನು ನಿರ್ಮಿಸಲಾಗುವುದು.

ಗುಡ್ಡ ಬೆಟ್ಟಗಳ ಇಳಿಜಾರಿನಿಂದ ನೀರು ಕಣಿವೆಗಳಿಗೆ ಹರಿಯುತ್ತದೆ. ಯಾವುದೇ ಗೊತ್ತಾದ ಸ್ಥಳದಲ್ಲಿ ಹೊಳೆಗೆ ನೀರನ್ನು ಒದಗಿಸುವ ಪ್ರದೇಶವನ್ನು ಆ ಹೊಳೆಯ, ಆ ಸ್ಥಳದ ನೀರು ಬಸಿಯುವ ಪ್ರದೇಶ ಅಥವಾ ಜಲಾನಯನ ಪ್ರದೇಶ ಎನ್ನುತ್ತಾರೆ. ಕೆರೆಗೆ ಹರಿದು ಬರುವ ನೀರು ಯಾವ ಪ್ರದೇಶದ ಮಳೆಯಿಂದ ಬರುವದೊ ಆ ಪ್ರದೇಶವೇ ಕೆರೆಯ ಜಲಾನಯನ ಪ್ರದೇಶ. ಯಾವ ನೀರನ್ನು ಸಸ್ಯ ಹೀರಿಕೊಳ್ಳುವುದಿಲ್ಲವೋ ಹಾಗೂ ಯಾವ ನೀರು ನೆಲದೊಳಕ್ಕೆ ಇಂಗುವುದಿಲ್ಲವೋ, ಮಳೆ ನೀರಿನ ಆ ಉಳಿದ ಭಾಗ ಮಾತ್ರವೇ ನೆಲದ ಮೇಲೆ ಹರಿದು ಬರುತ್ತದೆ. ಕೆರೆಯನ್ನು ತಲುಪುವ ನೀರಿನ ಪ್ರಮಾಣ ಅಥವಾ ಕೆರೆಯ ನೀವೇಶನದಲ್ಲಿನ ನದಿಯ ಜಲಪ್ರಮಾಣ ಜಲಾನಯನ ಪ್ರದೇಶದ ವಿಸ್ತಾರಕ್ಕೂ ಅಲ್ಲಿ ಬೀಳುವ ಮಳೆಯ ಪ್ರಮಾಣಕ್ಕೂ ಸಂಬಂಧಪಟ್ಟಿರುತ್ತದೆ.

ಕೆರೆಗಳ ಅಂಗಳ : ಹೊಳೆಗೆ ಅಡ್ಡಲಾಗಿ ಏರಿಯನ್ನು ಕಟ್ಟಿದಾಗ ಹೊಳೆಯ ನೀರು ನಿಂತು, ಕೆರೆಯಲ್ಲಿ ಶೇಖರವಾಗುತ್ತದೆ. ಕೆರೆಯಲ್ಲಿ ನೀರನ್ನು ನಿಲ್ಲಗೊಡುವ ಅತ್ಯಧಿಕ ಮಟ್ಟವೇ ತುಂಬಿದ ಕೆರೆಯ ನೀರಿನ ಮಟ್ಟ. ಆ ನೀರು ಎಷ್ಟು ಪ್ರದೇಶದಲ್ಲಿ ನಿಲ್ಲುವುದೋ ಆ ಪ್ರದೇಶ ಕೆರೆಯ ನೀರಿನ ಹರವು. ಅದನ್ನೇ ಸಾಮಾನ್ಯವಾಗಿ ಕೆರೆಯ ಅಂಗಳ ಎನ್ನುತ್ತಾರೆ.

ಅಚ್ಚುಕಟ್ಟು ಪ್ರದೇಶ : ಕೆರೆಯ ಕಾಲುವೆ ಜಾಲಕ್ಕೂ ಕಾಲುವೆಯ ನೀರು ಗುರುತ್ವಾಕರ್ಷಣದಿಂದ ನದಿಯನ್ನೋ ಕೊಳ್ಳವನ್ನೋ ತಲುಪುವ ಸ್ಥಳಕ್ಕೂ ನಡುವೆ ಇರುವ ಭೂಪ್ರದೇಶಕ್ಕೆ ಅಚ್ಚುಕಟ್ಟು ಪ್ರದೇಶ ಎಂದು ಹೆಸರು. ಅಂಥ ಅಚ್ಚುಕಟ್ಟು ಪ್ರದೇಶದಲ್ಲಿ ರಸ್ತೆ, ಹಳ್ಳಿ ನಿವೇಶನ ದಿಬ್ಬಗಳು ಇರಬಹುದು. ಅವೆಲ್ಲವನ್ನೂ ಬಿಟ್ಟು ಉಳಿದ ಪ್ರದೇಶವೇ ಕೆರೆಯ ಅಥವಾ ನೀರಾವರಿಯ ಕಾಮಗಾರಿಯ ನೀರಾವರಿ ಪ್ರದೇಶ ಅಥವಾ ಆಯಕಟ್ಟು ಪ್ರದೇಶ, ಅಚ್ಚುಕಟ್ಟು ಪ್ರದೇಶ.

ಏರಿ :

ಕೆರೆಯ ಅಥವಾ ಜಲಾಶಯದ ಅತ್ಯಂತ ಮುಖ್ಯ ಭಾಗ ಏರಿ ಅಥವಾ ಕಟ್ಟೆ. ಸಾಮಾನ್ಯವಾಗಿ ನಮ್ಮ ಎಲ್ಲ ಕೆರೆಗಳ ಏರಿಗಳು ಮಣ್ಣಿನ ಕಟ್ಟೆಗಳು. ಏಕೆಂದರೆ ಮಣ್ಣು ಸುಲಭವಾಗಿ ಬೇಕಾದಷ್ಟು ಸಿಗುವುದು. ಹಳೆಯ ಕೆರೆಗಳ ಏರಿಗಳು ಬಹುಮಟ್ಟಿಗೆ ಸ್ಥಳದ ಪರಿಸ್ಥಿತಿ ಹಾಗೂ ಭದ್ರತೆಯ ಅಗತ್ಯಗಳಿಗೆ ಅನುಗುಣವಾಗಿರುತ್ತದೆ. ಭದ್ರತೆ ಪ್ರಾಯಶ: ಅಷ್ಟು ಸೂಕ್ಷ್ಮ ಅಂಶವಾಗಿದ್ದಿರಲಾರದು. ಏಕೆಂದರೆ ಪ್ರಾಣ ಅಥವಾ ಆಸ್ತಿ ಹಾನಿಯ ಅಪಾಯಕ್ಕೆ ಕಾರಣವಾಗುವಷ್ಟು ದೊಡ್ಡ ಕಟ್ಟೆಗಳು ವಿರಳ.

ಏರಿಯ ಸ್ಥಿರತೆಯು ಮಣ್ಣಿನ ಇಳಿಜಾರಿನ ಸ್ಥಿರತೆ ಹಾಗೂ ಅಡಿಪಾಯವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಒಳ್ಳೆ ಗಟ್ಟಿಯಾದ ಅಡಿಪಾಯವನ್ನು ಆರಿಸಿಕೊಳ್ಳಲಾಗುತ್ತಿತ್ತು. ಪಾರ್ಶ್ವದ ಇಳಿಜಾರು ಸ್ಥಳೀಯ ಅನುಭವಕ್ಕೆ ಅನುಸಾರವಾಗಿರುತ್ತಿತ್ತು. ಏರಿಯ ತಳಭಾಗದ ಅಗಲ ದೊಡ್ಡದಾಗಿದ್ದು ಪಾರ್ಶ್ವದ ಇಳಿಜಾರುಗಳಿಗೆ ಅನುಗುಣವಾಗಿರುತ್ತಿತ್ತು. ಏರಿಯ ತಲೆಭಾಗದ ಅಗಲ ಕಿರಿದಾಗಿದ್ದು ಜನ ದನ ಓಡಾಡುವಷ್ಟು ಇರುತ್ತಿತ್ತು. ಬಹಳ ಅಗಲವಾದ ತಲೆಭಾಗವುಳ್ಳ ಏರಿಗಳ ಕೆರೆಗಳು ಕೆಲವು ಉಂಟು. ಸ್ಥಿರತೆಯ ದೃಷ್ಟಿಯಿಂದ ಅಷ್ಟೊಂದು ಅಗಲ ಅಗತ್ಯವಿಲ್ಲ.

ಅಷ್ಟು ಅಗಲದ ಏರಿಯನ್ನು ಕಟ್ಟಿದ್ದು, ಬಹುಶ: ನದಿಯ ಒಂದು ದಡದಿಂದ ಇನ್ನೊಂದಕ್ಕೆ ಹೋಗಲು ಸಂಪರ್ಕ ಮಾರ್ಗವಾಗಲಿ ಎಂದಿರಬೇಕು.

ಜಲಾಶಯ ಅಥವಾ ಕೆರೆಯಲ್ಲಿನ ವಿಸ್ತಾರವಾದ ನೀರಿನ ಹರವಿನ ಮೇಲೆ ಬೀಸುವ ಗಾಳಿ ಎತ್ತರದ ಅಲೆಗಳನ್ನು ಎಬ್ಬಿಸುತ್ತದೆ. ಸೂಕ್ತ ರಕ್ಷಣೆ ಒದಗಿಸದಿದ್ದರೆ ಅಲೆಗಳು ಮಣ್ಣಿನ ಏರಿಗೆ ಅಪಾಯ ಉಂಟುಮಾಡಬಹುದು. ಅದಕ್ಕಾಗಿ ಮಣ್ಣು ಏರಿಯ ಒಳಭಾಗದ ಇಳಿಜಾರಿನ ಉದ್ದಕ್ಕೂ ದೊಡ್ಡ ದೊಡ್ಡ ಕಲ್ಲುಗಳನ್ನು ಜೋಡಿಸಿ ರಕ್ಷಣೆ ಒದಗಿಸಲಾಗುತ್ತದೆ. ಆ ಕಲ್ಲು ಕಟ್ಟಡ (ರಿವೆಟ್‌ಮೆಂಟ್) ನೀರಿನ ಅಲೆಗಳ ಹೊಡೆತದಿಂದ ಏರಿಯನ್ನು ಕಾಪಾಡುತ್ತದೆ.

ಕೆಳ ಪಾರ್ಶ್ವಕ್ಕೆ ಅಂದರೆ ಏರಿಯ ಹಿಂಬದಿಯ ಇಳಿಜಾರಿಗೆ, ಭಾರಿ ಮಳೆ ಬಿದ್ದು ಮಣ್ಣು ಕೊಚ್ಚಿ ಹೋಗದೇ ಇರುವಂತೆ ಹುಲ್ಲು ಬೆಳೆಸಿ ರಕ್ಷಣೆ ನೀಡಲಾಗುವುದು. ಕೆಲವು ಹಳೆಯ ಕೆರೆಗಳಲ್ಲಿ ಹಿಂಬದಿಯ ಇಳಿಜಾರಿನಲ್ಲೂ ಕಲ್ಲು ಕಟ್ಟೆ ಇರುವುದುಂಟು.

ಕಾಲುವೆ, ತೂಬು ಮತ್ತು ಕೋಡಿ : ಜಲಾಶಯದಲ್ಲಿ ಸಂಗ್ರವಾದ ನೀರು ಕಾಲುವೆಗಳ ಜಾಲದ ಮೂಲಕ ಜಮೀನನನ್ನು ತಲುಪುತ್ತದೆ. ಕೆರೆಯಿಂದ ನೀರನ್ನು ಒಂದು ತೂಬಿನ ಮೂಲಕ ಕಾಲುವೆಗೆ ಬಿಡಲಾಗುವುದು. ಹಿಂದೆ ಒಂದು ಮರದ ಬಿರಡೆಯನ್ನು ಉಪಯೋಗಿಸಿ ತೂಬನ್ನು ತೆರೆದು ಮುಚ್ಚಲಾಗುತ್ತಿತ್ತು. ಇಪ್ಪತ್ತನೆಯ ಶತಮಾನದಲ್ಲಿ

ಮರದ ಬಿರಡೆಯ ಜಾಗದಲ್ಲಿ ಉಕ್ಕಿನ ಬಾಗಿಲು ರೂಢಿಗೆ ಬಂದಿದೆ. ತೂಬು ಇರುವುದು ಏರಿಯ ಮೇಲು ಪಾರ್ಶ್ವದಲ್ಲಿ ಅದಕ್ಕೆ ಹೋಗಲು ಒಂದು ಕಿರಿದಾದ ಕಾಲು ಸೇತುವೆ ಇರುತ್ತದೆ. ಹಿಂದಿನ ಕಾಲದಲ್ಲಿ ಹಳೆಯ ಕೆರೆಗಳಲ್ಲಿ ನೀರಿನಲ್ಲಿ ಈಸಿಕೊಂಡು ತೂಬಿಗೂ ಹೋಗುತ್ತಿದ್ದರು. ತೂಬಿಗೆ ಹಾಗೂ ಏರಿಯ ಕೆಳ ಪಾರ್ಶ್ವದಲ್ಲಿ ಇರುವ ಕಾಲುವೆಗೂ ನಡುವೆ ಏರಿಯ ಮುಖಾಂತರ ರಚಿಸಲಾದ ಒಂದು ಸುರಂಗದ ಸಂಪರ್ಕ ಇರುತ್ತದೆ. ಹಳೆಯ ಕಟ್ಟೆಗಳಲ್ಲಿ ಸುರಂಗ ಕಲ್ಲು ಕಟ್ಟಡದ್ದಾಗಿರುತ್ತಿತ್ತು. ಈಗ ಕಟ್ಟುವ ಕಟ್ಟೆಗಳಲ್ಲಿ ಕಾಂಕ್ರೀಟು ಕೊಳಾಯಿಗಳ ಜೋಡಣೆ ಇರುತ್ತದೆ.

ನಿರ್ದಿಷ್ಟ ಪ್ರಮಾಣ ನೀರನ್ನು ಮಾತ್ರ ಹಿಡಿದಿಡುವಂತೆ ಕೆರೆ ಅಥವಾ ಜಲಾಶಯ ನಿರ್ಮಿತವಾಗಿರುತ್ತದೆ. ಮಿತಿಮೀರಿದ ಜಲ ಸಂಗ್ರಹಣೆಯಾದರೆ ಅದು ಮಣ್ಣು ಕಟ್ಟೆಯ ಮೇಲೆ ಹರಿದು ಏರಿ ಒಡೆದು ಹೋಗಬಹುದು. ಆದ್ದರಿಂದ ಹೆಚ್ಚು ಬರುವ ನೀರು ಯೋಜಿತ ಸಂಗ್ರಹಣೆಗೆ ಮೀರದಂತೆ, ಕೆಳಕ್ಕೆ ಹರಿದು ಹೋಗುವಂತೆ ಬಿಡಲು ವ್ಯವಸ್ಥೆ ಯಾವಾಗಲೂ ಇದ್ದೇ ಇರುತ್ತದೆ. ಹೆಚ್ಚುವರಿ ನೀರು ಸಲೀಸಾಗಿ ಹರಿದು ಹೋಗುವ ಏರಿಯ ಭಾಗವೇ ಕೋಡಿ. ಆ ಹೆಚ್ಚುವರಿ ನೀರು ಕೆಳಕ್ಕೆ ಹರಿದು ಕಟ್ಟೆಯ ಕೆಳಗೆ ನದಿಯ ಪಾತ್ರಕ್ಕೆ ಸೇರುತ್ತದೆ.

ಅಡಿ ಟಿಪ್ಪಣಿಗಳು

೧. ಗಾಯತ್ರಿದೇವಿ ಎಚ್.(ಸಂ). ಜಾಗತಿಕ ಇತಿಹಾಸ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೩, ಪು, ೮

೨. ಶರ್ಮಾ ಆರ್.ಎಸ್.(ಸಂ) ಎಂ.ಪಿ.ಶಂಕರನಾರಾಯಣ (ಅನು) ಪ್ರಾಚೀನ ಭಾರತ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೯೭, ಪು, ೨೮

೩. ಪಾಂಡುರಂಗರಾವ್ ದೇಸಾಯಿ, ಶ್ರೀನಿವಾಸ ರಿತ್ತಿ, ಬಾ.ರಾ.ಗೋಪಾಲ (ಸಂ) ಪ್ರಾಚಿನ ಭಾರತ ಚರಿತ್ರೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩, ಪು, ೦೨

೪. ಶರ್ಮಾ ಆರ್.ಎಸ್.(ಸಂ) ಎಂ.ಪಿ.ಶಂಕರನಾರಾಯಣರಾವ್ (ಅನು), ಪೂರ್ವೋಕ್ತ, ಪು. ೨೬

೫. ಅದೇ, ಪು

೬. ಅದೇ, ಪು

೭. ಅದೇ, ಪು

೮. ಅದೇ, ಪು, ೨೮

೯. ಅದೇ, ಪು

೧೦. ಅದೇ, ಪು

೧೧. ಅದೇ, ಪು

೧೨. ಅದೇ, ಪು ,೨೯

೧೩. ಶೇಷಗಿರಿರಾವ ಎಲ್.ಎಸ್. (ಸಂ), ವರದರಾಜ ಹುಯಿಲಗೋಳ (ಸಾ.ಸಂ.), ರಾಜ ಶೈಲೇಶ ಚಂದ್ರ ಗುಪ್ತಾ, ಸುಮಿತ್ರಾ ಎಂ.ಎನ್., ಶ್ರೀಮತಿ ಹರಿಪ್ರಸನ್ ವಿಜಯ ಭಟ್ಎಂ., ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ, ಮನುಕುಲದ ಕತೆ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦ ಪು, ४೦೫

೧४. ಶರ್ಮಾ ಆರ್.ಎಸ್.(ಸಂ) ಎಂ.ಪಿ.ಶಂಕರನಾರಾಯಣರಾವ್ (ಅನು), ಪೂರ್ವೋಕ್ತ, ಪು.೩೦

೧೫. ಅದೇ, ಪು

೧೬. ಅದೇ, ಪು, ४೦೫

೧೭. ಶೇಷಗಿರಿರಾವ ಎಲ್.ಎಸ್. (ಸಂ), ವರದರಾಜ ಹುಯಿಲಗೋಳ (ಸಾ.ಸಂ.), ರಾಜ ಶೈಲೇಶ ಚಂದ್ರ ಗುಪ್ತಾ, ಸುಮಿತ್ರಾ ಎಂ.ಎನ್., ಶ್ರೀಮತಿ ಹರಿಪ್ರಸನ್ ವಿಜಯಭಟ್ ಎಂ., ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ, ಮನುಕುಲದ ಕತೆ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು , ೧೯೭೦, ಪು .೫

೧೮. ಶ್ರೀನಿವಾಸ ಎಲ್., ಹಂಪಿ ಪರಸರಿದ ಆದಿಮಾನವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು, ೭

೧೯. ಗಾಯತ್ರಿದೇವಿ.ಎಚ್, ಪುರ್ವೋಕ್ತ ಪು. ೧೯

೨೦. ಅದೇ , ಪು

೨೧. ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧, ಪು, ೫

೨೨. ಶ್ರೀನಿವಾಸ ಎಲ್.ಪೂರ್ವೋಕ್ತ ಪು. ೩೦

೨೩. ಶ್ರೀನಿವಾಸ ಎಲ್.ಪೂರ್ವೋಕ್ತ ಪು. ೧४

೨४. ವಾಸುದೇವನ್ ಸಿ.ಎಸ್., ಪು.೬

೨೫. ಬಸವರಾಜ ಎಚ್.ಎಮ್., ದಕ್ಷಿಣ ಭಾರತದ ಇತಿಹಾಸ, ಉಮಾ ಪ್ರಕಾಶನ, ಮೈಸೂರು, ೨೦೦೫, ಪು,೨೮

೨೬. ಅದೇ, ಪು

೨೭. ಅದೇ, ಪು ,೨೩

೨೮. ವಾಸುದೇವನ್ ಸಿ.ಎಸ್., ಪು.೮

೨೯. ಅದೇ, ಪು, ೭
೩೦. ಅದೇ, ಪು. ೩೦
೩೧. ಅದೇ, ಪು
೩೨. ಅದೇ, ಪು
೩೩. ಅದೇ, ಪು
೩೪. ಅದೇ, ಪು
೩೫. ಅದೇ, ಪು. ೧೧
೩೬. ಬಸವರಾಜ ಎಚ್.ಎಂ., ಪುರ್ವೋಕ್ತ ಪು.೩೪೧
೩೭. ರಾಜಾರಾಮ ಹೆಗಡೆ (ಸಂ), ಕೆರೆನೀರಾವರಿ ಚಾರಿತ್ರಿಕ ಅಧ್ಯಯನ, ೨೦೦೨, ಪು, ೧
೩೮. ಬಸವರಾಜ ಎಚ್.ಎಂ., ಪುರ್ವೋಕ್ತ, ಪು.೩೨೮
೩೯. ವಾಸುದೇವನ್ ಸಿ.ಎಸ್., ಪು.೧೪
೪೦. ಬಸವರಾಜ ಎಚ್.ಎಂ., ಪುರ್ವೋಕ್ತ,, ಪು. ೨೭
೪೧. ಅದೇ, ಪು, ೧೫
೪೨. ಅದೇ, ಪು, ೧೫
೪೩. ಅದೇ, ಪು, ೩೪೪
೪೪. ವಾಸುದೇವನ್ ಸಿ.ಎಸ್., ಪುರ್ವೋಕ್ತ, ಪು.೧೬

ಅಧ್ಯಾಯ : ೩

ಜಿಲ್ಲೆಯ ಪ್ರಮುಖ ಕೆರೆಗಳು

ಅಧ್ಯಾಯ ೩

ಜಿಲ್ಲೆಯ ಪ್ರಮುಖ ಕೆರೆಗಳು

೩.೧ ಜಿಲ್ಲೆಯ ಪ್ರಮುಖ ಕೆರೆಗಳು

ಘಟಪ್ರಭಾ ನದಿಯ ಹರಿವಿಗೆ ಸಮೀಪವಿದ್ದು ಹುಬ್ಬಳ್ಳಿ-ಸೊಲ್ಲಾಪುರ ರೈಲು ಮಾರ್ಗದಲ್ಲಿರುವ ಪ್ರಮುಖ ನಗರವಾಗಿದೆ. ಈಶಾನ್ಯ ಪೂರ್ವ ಭಾಗದಲ್ಲಿ ಕೃಷ್ಣೆಯ ಎಡ-ಬಲದಲ್ಲಿ ಮೇಲಾದ ಎರೆಭೂಮಿಯ ಬಯಲು ಇರುತ್ತದೆ. ಆದರೂ ಈ ಪ್ರದೇಶದಲ್ಲಿ ಅಲ್ಪಸ್ವಲ್ಪ ಗುಡ್ಡಗಳಿವೆ.[೧] ಶಾಸನಗಳಲ್ಲಿ ಉಕ್ತವಾಗಿರುವ 'ಬಾಂಗಡಿಗೆ' ಇಂದಿನ ಬಾಗಲಕೋಟೆಯಾಗಿದೆ ಎಂಬ ಅಭಿಪ್ರಾಯವಿದೆ. ಈ ಊರಿಗೆ ಸಮೀಪದಲ್ಲಿರುವ ಭೈರನಮಟ್ಟಿಯ ಹನುಮಂತ ದೇವರ ಗುಡಿಯ ಬಳಿ ದೊರೆತಿರುವ ಚಾಳುಕ್ಯ ಮೊದಲನೇ ಸೋಮೇಶ್ವರನ ಶಾಸನದಲ್ಲಿ ಉಕ್ತವಾಗಿರುವ "ಬಾಗಡಿಗೆ-೭೦" ಸಿಂಧ ವಂಶದ ಮಾಂಡಳಿಕರ ಕೇಂದ್ರವಾಗಿದ್ದು ಬಾಗಲಕೋಟೆ ಹೆಸರಿಗೆ ಮೂಲವಿರಬಹುದೆಂಬ ಅಸ್ಪಷ್ಟ ಅಭಿಪ್ರಾಯವಿದೆ. ಬಾಗಲಕೋಟೆಯ ಮುರಿಗಯ್ಯ ಜಂಗಿನ ಅವರ ವಶದಲ್ಲಿದ್ದ ತಾಮ್ರ ಪಟವು ಬಾದಾಮಿ ಚಾಳುಕ್ಯ ವಿನಯಾದಿತ್ಯನ ಕಾಲಕ್ಕೆ ಸೇರಿದ್ದು, ಅರಸನು ಕುಂಕುಮ ಮಹಾದೇವಿಯ ವಿನಂತಿ ಮೇರೆಗೆ ಹಾರಿತಿ ಗೋತ್ರದ ಭೀಮಶರ್ಮನ ಮೊಮ್ಮಗನೂ ದೇಶವರ್ಮನ ಮಗನೂ ಆದ ಸೋಮಶರ್ಮನಿಗೆ "ಮಲ್ಲಗ್ರಾಮ-೩೦" (ಬಾಗಲಕೋಟೆಯಿಂದ ಎರಡು ಕಿ.ಮೀ ಸಮೀಪದಲ್ಲಿರುವ ಮಲ್ಲಾಪುರವೆಂದು ಗುರುತಿಸಲಾಗಿದೆ) ರಲ್ಲಿಯ 'ಲೋಹಂಜವಾಟಕ' ಗ್ರಾಮವನ್ನು ದಾನ ನೀಡಿದ ಬಗೆಗೆ ಉಲ್ಲೇಖಿಸುತ್ತದೆ. ಲೋಹಂಜವಾಟಕ ಎಂಬ ಗ್ರಾಮ ಯಾವುದೆಂದು ಸ್ಪಷ್ಟವಾಗಿ ಗುರುತಿಸಲಾಗಿಲ್ಲವಾದರೂ ಬಾಗಲಕೋಟೆ-ಬಿಜಾಪೂರ ರಸ್ತೆಯಲ್ಲಿರುವ 'ಲೋಹಗಾಂವ್' ಇರಬಹುದೆಂಬ ಅಸ್ಪಷ್ಟ ಅಭಿಪ್ರಾಯವಿದೆ. ಮಲ್ಲಾಪುರದ ಹತ್ತಿರ ಗುಡ್ಡದ ಕೆಳಗೆ ಊರಿನಲ್ಲಿ ದುರದುಂಡೇಶ್ವರ ಮಠವಿದೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯ ನಂತರ ಬಾಗಲಕೋಟೆಯು ಬಾದಾಮಿಯಂತೆಯೇ ೧೩೫೦ ರಿಂದ ೧೬೫೫ ರವರೆಗೆ ವಿಜಯನಗರದ ಆಳ್ವಿಕೆಗೆ ಒಳಪಟ್ಟಿರಬೇಕು. ಏಕೆಂದರೆ, ಈ ಭಾಗದ ದೇಸಾಯಿಗಳು ಮತ್ತು ದೇಶಪಾಂಡೆಗಳು ವಿಜಯನಗರ ಅರಸರಿಂದಲೂ ದತ್ತಿದಾನಗಳನ್ನು ಸ್ವೀಕರಿಸಿರುವುದು ವ್ಯಕ್ತವಾಗುತ್ತದೆ.[೨]

ಸ್ಥಳೀಯ ಸಂಪ್ರದಾಯದಂತೆ ಒಬ್ಬ ಮುಸಲ್ಮಾನ ವೀರನು ಈ ಜಾಗದಲ್ಲಿ ಹುಲಿಯನ್ನು ಕೊಂದ ಕಾರಣ ಅದರ ನೆನಪಿಗಾಗಿ ಈ ಊರನ್ನು 'ಬಾಗನೂರು' (ಹುಲಿಯ ನಗರ) ಎಂದು ಕರೆದನೆಂದು ಹೇಳಲಾಗುತ್ತದೆ. ಇಬ್ರಾಹಿಂ ಆದಿಲ್‌ಷಾನ (೧೫೮೦-೧೬೨೬) ಕಾಲದಲ್ಲಿ ಆಸಫ್‌ಖಾನ್ ಎಂಬ ಸೇನಾಧಿಪತಿ ದಕ್ಷಿಣದ ಸಾಮ್ರಾಜ್ಯದ

ಆಡಳಿತವನ್ನು ನೋಡಿಕೊಳ್ಳುತ್ತಿದ್ದು ಬಾಗಲಕೋಟೆಯಲ್ಲಿ ನೆಲೆಸಿದ್ದನು. ಅನಂತರ ಬಾಗಲಕೋಟೆಗೆ ವಿಜಾಪುರದ ಮಂತ್ರಿಯಾಗಿದ್ದ ಸವಣೂರಿನ ನವಾಬ ಬಹಿಲಾಲ್ ಖಾನನು ಆಡಳಿತ ನೋಡಿಕೊಳ್ಳಲು ನೇಮಕಗೊಂಡನು. ಇದೇ ಸಮಯದಲ್ಲಿ ವಿಜಾಪುರದ ಸುಲ್ತಾನನು ಬಾಗಲಕೋಟೆ ನಗರವನ್ನು ತನ್ನ ಮಗಳಾದ 'ಬಲೀಮ್ ಷಾ ಬೀಬಿಗೆ' ಉಡುಗೊರೆಯಾಗಿ ನೀಡಿದನೆಂಬುದು ತಿಳಿದುಬರುತ್ತದೆ. ಈ ಉಡುಗೊರೆಯು ತನ್ನ ಮಗಳಿಗೆ ಬಳೆಯ ವೆಚ್ಚಕ್ಕಾಗಿ ಕೊಟ್ಟನೆಂಬ ಕಾರಣದಿಂದ ಇದಕ್ಕೆ 'ಬಾಂಗಡಿಕೋಟೆ' ಎಂದು ಕರೆದನೆಂದು ಪ್ರತೀತಿಯಿದೆ. ಈ ಬಾಂಗಡಿಕೋಟೆಯು ಕ್ರಮೇಣ 'ಬಾಗಲಕೋಟೆ' ಎಂದು ಬಳಕೆಗೆ ಬಂದಿತೆಂದು ಹೇಳಲಾಗುತ್ತದೆ. ವಿಜಾಪುರದ ಆಡಳಿತದ ತರುವಾಯ ಮರಾಠ ಪೇಶ್ವೆ ಬಾಲಾಜಿ ಬಾಜಿರಾಯನು ಈ ಪ್ರದೇಶವನ್ನು (೧೭೮೦–೧೭೬೧) ತನ್ನ ಹತೋಟಿಗೆ ತೆಗೆದುಕೊಂಡನು. ಪೇಶ್ವೆಯು ಬಾಗಲಕೋಟೆಯ ಆಡಳಿತವನ್ನು ಗಜೇಂದ್ರಗಡದಲ್ಲಿದ್ದ ಘೋರ್ಪಡೆಗೆ ವಹಿಸಿಕೊಟ್ಟನು. ತರುವಾಯ ೧೭೭೮ ರಲ್ಲಿ ಬಾಗಲಕೋಟೆಯು ಹೈದರಾಲಿ ಪ್ರಾಂತ್ಯವಾಗಿ ಸವಣೂರ ನವಾಬನ ಹತೋಟಿಗೆ ವಹಿಸಿ ಕೊಡಲಾಯಿತು. ಅನಂತರ ೧೮೦೦ ರಲ್ಲಿ ಈ ಪ್ರದೇಶವನ್ನು ಸುರ್‌ಸುಭಾ ಪ್ರಾಂತ್ಯವನ್ನಾಗಿ ಪರಿವರ್ತಿಸಿ ಆಡಳಿತವನ್ನು ನೋಡಿಕೊಳ್ಳಲು ನೇಮಕಗೊಂಡ ರಾಸ್ತಿಯಾ ಕುಟುಂಬಕ್ಕೆ ಸೇರಿದ ಆನಂದರಾವ್ ಭಿಕಾಜಿಯು ಬಾಗಲಕೋಟೆಯಲ್ಲಿ ನೆಲೆಸಿ ಒಂದು ಸುಂದರ ಅರಮನೆಯನ್ನು ನಿರ್ಮಿಸಿಕೊಂಡಿದ್ದನೆಂದು ಐತಿಹ್ಯವಿದೆ. ಸವಣೂರಿನ ನವಾಬನ ಹತೋಟಿಯಲ್ಲಿದ್ದಾಗ ಹಳೇಪೇಟೆಯನ್ನೂ ರಚಿಸಲಾಯಿತು. ಪೇಶ್ವೆಗಳ ಕಾಲದಲ್ಲಿ ಬಾಗಲಕೋಟೆಯಲ್ಲಿ ಟಂಕಸಾಲೆಯೊಂದನ್ನು ಸ್ಥಾಪಿಸಲಾಯಿತೆಂದೂ ಅದು ೧೮೩೫ ರವರೆಗೆ ಚಾಲ್ತಿಯಲ್ಲಿತ್ತೆಂದು ತಿಳಿದು ಬರುತ್ತದೆ. ಈಗಲೂ ಬಾಗಲಕೋಟೆಯಲ್ಲಿ ಮರಾಠರ ಕಾಲದ ಕೋಟೆ ಮತ್ತು ಸೈನಿಕ ಶಿಬಿರಗಳಿದ್ದ ಅವಶೇಷಗಳು ಊರಿನ ಸುತ್ತಲೂ ಕಂಡು ಬರುತ್ತವೆ. ಬಾಗಲಕೋಟೆಯನ್ನು ೧೮೧೮ ರಲ್ಲಿ ಸರ್ ಥಾಮಸ್ ಮುನ್ರೋ ತನ್ನ ವಶಕ್ಕೆ ತೆಗೆದುಕೊಂಡನು. ಬಾಗಲಕೋಟೆಯಿಂದ ೪ ಕಿ.ಮೀ ದೂರದಲ್ಲಿರುವ ಚಿಕ್ಕಗ್ರಾಮವು ಹಿಂದೆ ಗೋಪಾಳಪುರವೆಂದು ಕರೆಯಲ್ಪಡುತ್ತಿತ್ತು. ನಂತರ ಹವೇಲಿ ಎಂದು ಕರೆಯಲ್ಪಟ್ಟಿತು. 'ಹವೇಲಿ' ಎಂದರೆ ಬೃಹತ್ ಕಟ್ಟಡ ಅಥವಾ ಮಹಡಿ ಮನೆ ಎಂದು ಅರ್ಥೈಸಲಾಗಿದೆ. ಬ್ರಿಟಿಷರ ಕಾಲದಲ್ಲಿ ಅಧಿಕಾರಿಗಳಿಗೆ ತಂಗಲು ಬಂಗಲೆಗಳನ್ನು ಇಲ್ಲಿ ಕಟ್ಟಲಾಗಿದ್ದುದರಿಂದ ಈ ಸ್ಥಳಕ್ಕೆ 'ಹವೇಲಿ' ಎಂಬ ಹೆಸರು ರೂಢಿಗೆ ಬಂದಿರಬೇಕು. ಇಲ್ಲಿನ ಹನಮಂತ ದೇವರಗುಡಿ ಎದುರಿನಲ್ಲಿರುವ ೧೮೨೨ ರ ಶಾಸನವು ಈಸ್ಟ್‌ಇಂಡಿಯಾ ಕಂಪನಿ ಸರಕಾರದ ಸುಬೇದಾರ ಅಪ್ಪೂರಾಯನಿಂದ ಹನಮಂತ ದೇವರಗುಡಿಯ ನಿರ್ಮಾಣ ಮತ್ತು ನೀಡಿದ ದಾನದ ಬಗೆಗೆ ಉಲ್ಲೇಖಿಸುತ್ತದೆ. [೨]

ಶಿರೂರ:

ತಾಲೂಕು ಕೇಂದ್ರವಾದ ಬಾಗಲಕೋಟೆಯಿಂದ ೨೦ ಕಿ.ಮೀ.ದೂರದಲ್ಲಿರುವ ಇದು ಬಾದಾಮಿ ಚಾಲುಕ್ಯರಷ್ಟೇ ಪ್ರಾಚೀನ ನೆಲೆಯಾಗಿದೆ. ಇಲ್ಲಿ ಸುಮಾರು ೮ ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಸಿರಿವೂರು, ಶ್ರೀಪುರ ಎಂದು ಉಲ್ಲೇಖಗೊಂಡಿದೆ.[೪] ಈ ಹಿಂದೆ ಹುನಗುಂದದ ಮೂವತ್ತು ಕಂಪನದಲ್ಲಿತ್ತು. ಈ ಶಾಸನಗಳಲ್ಲಿ ರಾಷ್ಟ್ರಕೂಟರ ಕೃಷ್ಣನ ಕಾಲಕ್ಕೆ ಸೇರಿದ ತಾಮ್ರ ಶಾಸನ ಸಿರಿವೂರ ದೇವಾಲಯಗಳಿಗೆ, ಕೆರೆಗಳಿಗೆ ದಾನ-ದತ್ತಿ ನೀಡಿದ ಉಲ್ಲೇಖವಿದೆ. ೬ನೇ ವಿಕ್ರಮಾದಿತ್ಯನ ೧೧೦೦ ನೇ ಶಾಸನ, ಸಿದ್ದೇಶ್ವರ ದೇವರ ಆಚಾರ್ಯರಾದ ಪ್ರಸನ್ನ ಪಂಡಿತರು ಸಿರಿವೂರಿನ ಬಾಚಿಶೆಟ್ಟಿ ಕೆರೆಯ ನಿರ್ವಹಣೆಗೆ ಭೂದಾನ ನೀಡಿದ ಅಂಶವನ್ನು ತಿಳಿಸುತ್ತದೆ.[೫] ಇಲ್ಲಿರುವ ಶಾಸನೋಕ್ತ ಸಿದ್ದೇಶ್ವರ ದೇವಾಲಯ ಐತಿಹಾಸಿಕ ದೇವಾಲಯವಾಗಿದೆ. ಅದರಂತೆ ಸಿರಿವೂರಿನಲ್ಲಿ ಒಟ್ಟು ಐದು ಕೆರೆಗಳನ್ನು ಕಟ್ಟಿಸಲಾಗಿದೆಂದು ಶಾಸನಗಳ ಮೂಲಕ ತಿಳಿದು ಬರುತ್ತದೆ ಅದರಲ್ಲಿ ಈಗ ಮೂರು ಕೆರೆಗಳು ಲಭ್ಯವಿವೆ.

ಬಾಚಿಶೆಟ್ಟಿ ಕೆರೆ :

ಕ್ರಿ.ಶ. ೧೧೦೦ ಶಿರೂರಿನ ಒಂದು ಶಾಸನದಲ್ಲಿ ಸಿದ್ಧೇಶ್ವರದೇವಾಲಯದ ಆಚಾರ್ಯ ಪ್ರಸನ್ನ ಪಂಡಿತರಿಂದ ಬಾಚಿಶೆಟ್ಟಿ ಕೆರೆಗೆ ಭೂದಾನ ನೀಡಿದ ಸಂಗತಿ ತಿಳಿದುಬರುತ್ತದೆ.[೬] ಇನ್ನೊಂದು ಶಾಸನದಲ್ಲಿ ಶಿರೂರಿನ ಕುಸುವಾಡಿ ಬೃಹತ್ ಹಾಗೂ ಗೌರ ತಟಾಕಗಳನ್ನು ನಿರ್ಮಿಸಿದನೆಂಬ ಉಲ್ಲೇಖವಿದೆ. ಈ ಕೆರೆಯು ಶಿರೂರಿನ ಐತಿಹಾಸಿಕ ಕೆರೆಯಾಗಿದೆ. ಇದು ೧೨ ಕೂರಿಗೆ (೪೮ ಎಕರೆ) ಭೂ ಪ್ರದೇಶದ ಸುತ್ತಳತೆ ಇದ್ದು, ಕೆರೆಯ ದಂಡೆಯ ಮೇಲೆ ಪೂರ್ವಕ್ಕೆ ಗಣೇಶಗುಡಿ ಮತ್ತು ಬೆಟ್ಟದಲ್ಲಿ ಮಾರುತಿ ದೇವಾಲಯ, ಉತ್ತರಕ್ಕೆ ಶಿರಿಯೂರು ಗ್ರಾಮ. ಪಶ್ಚಿಮಕ್ಕೆ ಪಡಗೆರಿ. ದಕ್ಷಿಣಕ್ಕೆ ಸಿದ್ಧೇಶ್ವರ ದೇವಾಲಯವಿದ್ದು, ಈ ಕೆರೆಯ ವಿಶೇಷತೆಗಳಾಗಿವೆ. ಇದೇ ಕೆರೆಯ ನೀರನ್ನು ಗ್ರಾಮಕ್ಕೆ ಕುಡಿಯಲು ಹಾಗೂ ಕೃಷಿಗಾಗಿ ಪೂರ್ವಜರು ಅನೇಕ ವರ್ಷಗಳಿಂದ ಬಳಸುತ್ತಿರುವರು.

ಈ ಕೆರೆಯ ಪೂರ್ವದಿಕ್ಕಿನಲ್ಲಿ ಎತ್ತರವಾದ ಕಲ್ಲಿನಿಂದ ಕೂಡಿದ ವಾರಿ (ವಡ್ಡು) ಇದೆ. ಅಲ್ಲೊಂದು ಚಿಕ್ಕ ಮದಗವಿದೆ. ಅದಕ್ಕೆ ಕೆಂಚವ್ವನ ಮದಗ ಎಂದು ಕರೆಯುತ್ತಾರೆ. ಬಹುಶಃ ಕೆಂಚವ್ವ ಎಂಬುವವಳ ಬಲಿದಾನದ ಪ್ರತೀಕವಾಗಿ ಕೆರೆಯನ್ನು ಕಟ್ಟಿಸಲಾಗಿದೆ ಎಂದು ಮಾಹಿತಿ ತಿಳಿದು ಬರುತ್ತದೆ. ಈ ಕೆಂಚವ್ವನ ಮದಗದ ಮುಖಾಂತರ ಗಣಪತಿ ಮಂದಿರದ ಕೆಳಗಡೆಯಿಂದ ಹಾಯ್ದು ಬಲಬದಿಗೆ ಇರುವ ಅಕ್ಕತಂಗಿಯರ ಬಾವಿಯಲ್ಲಿ ಸಂಗ್ರಹವಾಗಿ ಅಲ್ಲಿಂದ ಭತ್ತ ಮತ್ತು ಕಬ್ಬಿನ ಗದ್ದೆಗಳಿಗೆ ನೀರನ್ನು ಬಿಡಲಾಗುತ್ತದೆ. ಈ ಕೆರೆ ನೀರಿನಿಂದ ಕಬ್ಬು ಸದೃಢವಾಗಿ, ರಸವತ್ತಾಗಿ ಬೆಳೆಯುತ್ತವೆ. ಹಾಗಾಗಿ ಶಿರೂರಿಗೆ 'ಕಬ್ಬಿನದ

ಶಿರೂರು' ಎಂದು ಕರೆಯುತ್ತಾರೆ. ಹಿಂದೆ ಕಬ್ಬನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿದ್ದುದರಿಂದ ಈ ಹೆಸರು ಬಂದಿರಬಹುದು. ಈ ಕೆರೆಯ ಮಧ್ಯದಲ್ಲಿ ವರ್ತುಳಾಕಾರದ ಸುಮಾರು ೧೫೦ ಪೂಟಿನ ಮಳ್ಳಗಡ್ಡೆ ಎಂಬ ದಿಣ್ಣೆಯಿದೆ. ಇದರಲ್ಲಿ ದೇವಾಲಯದ ಅವಶೇಷಗಳು ಮತ್ತು ಕಂಬಗಳಿವೆ. ಕೆರೆ ತುಂಬಿದಾಗ ಈ ನಡುಗಡ್ಡೆ ಕನ್ಯಾಕುಮಾರಿಯ ಸ್ವಾಮಿವಿವೇಕಾನಂದರ ಮೂರ್ತಿಯಂತೆ ಕಂಗೊಳಿಸುತ್ತದೆ. ಇದಕ್ಕೆ ದೊಡ್ಡ ಕೆರೆಯೆಂತಲೂ ಮತ್ತು ಅಕ್ಕನ ಕೆರೆಯೆಂತಲೂ ಕರೆಯುತ್ತಾರೆ.

ಈ ಕೆರೆಗೆ ವಿಶಿಷ್ಟವಾದ ತಾಂತ್ರಿಕತೆ ಬಳಸಿ ಕೆರೆ ಕಟ್ಟಿದ್ದಾರೆ. ಕೆರೆಯ ವಾರಿಯನ್ನು ಬೃಹತ್ ಕಲ್ಲುಗಳಿಂದ ನಿರ್ಮಾಣ ಮಾಡಿದ್ದಾರೆ. ಪೂರ್ವದ ವಾರಿಯಲ್ಲಿ ನೀರನ್ನು ಮೇಲಕ್ಕೆ ಎತ್ತುವ ಮತ್ತು ಅದು ಸಣ್ಣ ಸಣ್ಣ ಕಾಲುವೆಗಳ ಮೂಲಕ ಹೊಲ-ಗದ್ದೆಗಳಿಗೆ ಹರಿಯುವ ವ್ಯವಸ್ಥೆ ಮಾಡಿದ್ದಾರೆ. ಕೆರೆಯ ದಂಡೆಯ ಮೇಲೆ ಶಿರೂರಿನ ಸಿದ್ಧೇಶ್ವರ ದೇವಾಲಯವಿದೆ. ಅದರ ಪಕ್ಕದಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳ ಗುಚ್ಚವಿದೆ. ಇವರ ನಂತರ ಬಂದ ಎಲ್ಲ ರಾಜರುಗಳು ಮತ್ತು ಸಾಮ್ರಾಟರು ಕೆರೆಯ ಪೋಷಣೆ ಮತ್ತು ಸಂರಕ್ಷಣೆ ಮಾಡುತ್ತ ಬಂದಿದ್ದಾರೆ.

ಗುಡಗುಂಟಿ ಕೆರೆ :

ಬಾಗಲಕೋಟ ತಾಲೂಕಿನ ಶಿರೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಅಂದರೆ ಬಾದಾಮಿ-ಆಲಮಟ್ಟಿ ಒಳಮಾರ್ಗದಲ್ಲಿ ಬರುವ ೨೩ ಎಕರೆ ಪ್ರದೇಶದಲ್ಲಿ ವಿಸ್ತರಿಸಿದೆ. ಶಿರೂರು ಹಾಗೂ ಗುಳೇದಗುಡ್ಡದ ಎಡಭಾಗದ ನೀರು ಬಂದು ಶೇಖರವಾಗುತ್ತದೆ. ಇದು ಕಪ್ಪು ಎರೆ ಮತ್ತು ಕೆಂಪು ಮಿಶ್ರಿತ ಭೂಭಾಗ ಹೊಂದಿದ್ದು, ಯಾವುದೇ ರೀತಿಯ ತಾಂತ್ರಿಕವಾದ ಕಟ್ಟಡ ಹೊಂದಿಲ್ಲ. ಸಹಜವಾದ ತಗ್ಗು ಪ್ರದೇಶದಲ್ಲಿ ನೀರು ನಿಲ್ಲುತ್ತದೆ. ಕೆರೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣ ಮಾಡಿದ ಹಳೆಯ ದೇವಾಲಯವಿದೆ.

ಈ ಕೆರೆಯನ್ನು ಕೇವಲ ದನಕರುಗಳು-ಪ್ರಾಣಿ-ಪಕ್ಷಿಗಳಿಗೆ ನೀರು ಕುಡಿಯಲು ಬಳಸುತ್ತಾರೆ. ಕೆರೆ ತುಂಬಿದಾಗ ಸುತ್ತಲೂ ಇರುವ ಸುಮಾರು ೧೦ ಕಿ.ಮೀ. ಆಳದವರೆಗೆ ಇದರ ಅಂತರಜಲ ವೃದ್ಧಿಯಾಗುತ್ತದೆ. ಈ ಕೆರೆ ಶಿರೂರು ಶಾಸನದಲ್ಲಿ ಉಲ್ಲೇಖಗೊಂಡಿದ್ದು, ಐತಿಹಾಸಿಕ ಹಿನ್ನೆಲೆ ಹೊಂದಿದೆ. ಈ ಕೆರೆಯನ್ನು ಉಳಿಸಿ ಅದರ ಪರಂಪರೆಯನ್ನು ಮುಂದುವರೆಸಬೇಕಾಗಿದೆ. ಸುಮಾರು ವರ್ಷಗಳಿಂದ ತುಂಬಿದ ಹೂಳನ್ನು ತೆಗೆದು ಅದರ ದುರಸ್ತಿ ಕಾರ್ಯವನ್ನು ಮಾಡಬೇಕಿದೆ.

ಶಿರೂರಿನ ಒಂದು ಐಹಿತ್ಯದ ಪ್ರಕಾರ ಅಲ್ಲಿಯ ಹಿರಿಯರು ಹೇಳುವ ಮಾತಿನಂತೆ ಶಿರೂರಿನ ಸುತ್ತಲೂ ಸುಮಾರು ಏಳು ಕೆರೆಗಳಿವೆ ಅದರಲ್ಲಿ ಈ ಮೂರು ಕೆರೆಗಳು ಮಾತ್ರ ಉಳಿದುಬಂದಿವೆ. ನಾಲ್ಕು ಕೆರೆಗಳು ಕಾಲಾಂತರದಲ್ಲಿ ಕಣ್ಮರೆಯಾಗಿವೆ ಎಂದು

ಗ್ರಾಮದ ಹಿರಿಯರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈಗ ಈ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಕೆರೆ ಎಂದರೆ, ಶಿರೂರಿನ ಸಿದ್ದೇಶ್ವರ ದೇವಾಲಯದ ಪೂರ್ವ ದಿಕ್ಕಿನಲ್ಲಿರುವ ಅಕ್ಕ-ತಂಗಿಯರ ಕೆರೆ ಅದರ ಜೊತೆಗೆ ಗ್ರಾಮದಾಚೆಗೆ ಮತ್ತೊಂದು ಪಡಗೆರೆ (ಚಿಕ್ಕಕೆರೆ) ಕೆರೆ ಇದೆ.

ಈ ಕೆರೆಯ ಪಶ್ಚಿಮ ಭಾಗದ ದಂಡೆಗೆ ಬೃಹತ್ ಕಲ್ಲುಗಳ ಸಹಾಯದಿಂದ ಏರಿಯನ್ನು ನಿರ್ಮಾಣ ಮಾಡಿದ್ದಾರೆ. ಅದರ ಮಧ್ಯದಲ್ಲಿ ಪ್ರಾಚೀನ ಕಾಲದ ಪಾಳು ದೇವಾಲಯವಿದ್ದು, ಅದರ ಒಳಗಡೆ ಒಂದು ಕಾಡುಗಲ್ಲಿನ ಲಿಂಗವಿದೆ. ಅದು ಇವತ್ತಿಗೂ ಪೂಜೆಗೆ ಒಳಪಡುತ್ತಿದೆ. ಇದಲ್ಲದೇ ದೇವಾಲಯದ ಹಲವಾರು ಕುರುಹುಗಳು ಇಲ್ಲಿ ಕಂಡುಬರುತ್ತವೆ. ಜೊತೆಗೆ ಹಲವಾರು ಕುರಿಕಾಯಿ ಕುಟುಂಬಗಳು ಯುಗಾದಿ ಪಾಡ್ಯ ದಿವಸ ತಮ್ಮ ಕುರಿಗಳಿಗೆ ರೋಗ-ರುಜಿನೆಗಳು ಬರಬಾರದೆಂದು ಪ್ರಾಣಿ ಬಲಿಕೊಡುವ ಪದ್ಧತಿಯನ್ನು ಪ್ರತಿವರ್ಷ ಮಾಡುತ್ತಿದ್ದಾರೆ. ಇದೂ ಅಲ್ಲದೆ ಕೆರೆಯ ಆಸು-ಪಾಸಿನಲ್ಲಿ ಭೂ ಒಡೆತನವು ಉನ್ನತ ವರ್ಗದವರಾದ ಪರೋಹಿತರು, ಪೂಜಾರಿಗಳು, ಗೌಡರು, ದೇಶಮುಖರು ಅವರುಗಳದಾಗಿದೆ. ಅಂದರೆ ಕೆರೆಯ ಪಕ್ಕದಲ್ಲಿರುವ ಜಮೀನು ಉಳ್ಳವರ ಪಾಲಾಗಿದೆ. ಆದರೆ ಕೆರೆಯ ಸಾಂಸ್ಕೃತಿಕ ಆಚರಣೆಗಳನ್ನು ನಡೆಸಿಕೊಂಡು ಬರುವವರು ಸಾಮಾನ್ಯವರ್ಗದವರಾಗಿದ್ದಾರೆ. ಇಂದಿಗೂ ಆ ವರ್ಗ ಕೆರೆಗೆ ಸಂಬಂಧಿಸಿದಂತೆ ಗಂಗಾಪೂಜೆಯನ್ನು ಮಾಡುತ್ತ ಬರುತ್ತಿದ್ದಾರೆ.

ಈ ಕೆರೆ ತುಂಬಿದಾಗ ಅಕ್ಕನ ಕೆರೆಗೆ ನೀರು ಸುಲಭವಾಗಿ ಹರಿದು ಬಂದು ಸೇರುತ್ತದೆ. ಕೆರೆಯ ಪೂರ್ವ ಮತ್ತು ಪಶ್ಚಿಮದಂಡೆಗಳಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ ಕೆರೆಯು ಒಡೆಯದಂತೆ ಏರಿಯನ್ನು ನಿರ್ಮಾಣ ಮಾಡಿದ್ದಾರೆ. ಇದರ ದಕ್ಷಿಣ ಮತ್ತು ಉತ್ತರ ಭಾಗದಲ್ಲಿ ವಿಶಾಲವಾದ ಗುಡ್ಡದ ನೀರು ಹರಿದು ಬರುತ್ತದೆ. ಅಲ್ಲದೇ ಅದರ ಉತ್ತರ ಭಾಗದಲ್ಲಿ ರೈತರು, ಕುರಿಗಾಯಿಗಳು, ಸಾರ್ವಜನಿಕರು ಇದರ ಅಂಗಳವನ್ನು ಆಕ್ರಮಿಸಿ ಅದನ್ನು ಸ್ವಂತಕ್ಕೆ ಬಳಕೆ ಮಾಡಿಕೊಳ್ಳುತಿದ್ದಾರೆ. ಇದನ್ನು ಹಾಗೆ ಬಿಟ್ಟರೆ ಮುಂದೊಂದು ದಿನ ಊರಿನ ಪ್ರಭಾವಿಗಳ ಸ್ವಂತ ಆಸ್ತಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಕೆರೆಯ ನೀರು ಕೇವಲ ಕೃಷಿಗಷ್ಟೇ ಅಲ್ಲದೇ ಪರೋಕ್ಷ ಮತ್ತು ಅಪರೋಕ್ಷವಾಗಿ ಜನ ಜಾನುವಾರುಗಳಿಗೂ ಆಧಾರವಾಗಿದೆ. ಗ್ರಾಮದ ಕುಂಬಾರಿಕೆಯ ಹಲವಾರು ಕುಟುಂಬಗಳು ಕೆರೆಯ ಮಣ್ಣು ನೀರನ್ನು ಉಪಯೋಗಿಸಿಕೊಂಡು ಮಡಿಕೆ-ಕುಡಿಕೆಗಳನ್ನು ಮಾಡುವ ಮೂಲಕ ತಮ್ಮ ಕುಲ ಕಸಬನ್ನು ಮುಂದುವರೆಸುವುದರೊಂದಿಗೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದಾರೆ. ಇದರ ಸೂಸು ಮಣ್ಣನ್ನು ಉಸುಕಿನ ಜೊತೆಗೆ ಮಿಶ್ರಣ ಮಾಡಿ

ಕಟ್ಟಡ ಕಾರ್ಯಗಳಿಗೂ ಬಳಕೆ ಮಾಡುತ್ತಾರೆ. ಇಂತಹ ಹಲವಾರು ಉಪಯುಕ್ತ ಕಾರ್ಯಗಳು ಈ ಕೆರೆಯಿಂದಾಗುತ್ತಿವೆ.

ಪಡಗೆರೆ (ಚಿಕ್ಕಕೆರೆ – ಸಣ್ಣಕೆರೆ) :

ಜಿಲ್ಲೆಯ ಐತಿಹಾಸಿಕ ಶಾಸನೋಕ್ತ ಕೆರೆಗಳಲ್ಲಿ ಒಂದಾಗಿದೆ.[೯] ಕ್ರಿ.ಶ.೧೦೪೯ರ ಶಾಸನದಲ್ಲಿ ಶ್ರೀಪುರದಲ್ಲಿ ಹಲವಾರು ದೇವಾಲಯಗಳನ್ನಲ್ಲದೇ ಬಾವಿ ಹಾಗೂ ಕೆರೆಗಳನ್ನು ನಿರ್ಮಿಸಿದ್ದನ್ನು ದಾಖಲಿಸಲಾಗಿದೆ.[೧೦] ಪಡಗೆರೆಯು ದೊಡ್ಡ ಕೆರೆಯ ಪಶ್ಚಿಮದಿಕ್ಕಿನಲ್ಲಿದ್ದು ವಿಶಾಲವಾಗಿ ಹರಡಿಕೊಂಡಿದೆ. ಇದರ ದಕ್ಷಿಣಕ್ಕೆ ಗುಡ್ಡವಿದೆ. ಪಶ್ಚಿಮಕ್ಕೆ ರೈತರ ಭೂಮಿಗಳಿವೆ. ಈ ವಿಶಾಲವಾದ ಕೆರೆಗೆ ಬೆಟ್ಟದಲ್ಲಿರುವ ಭೈರಪ್ಪನ ಜಲಪಾತದ ಮುಖಾಂತರ ನೀರು ಹರಿದು ಬರುವುದರಿಂದ ಇದಕ್ಕೆ ಪಡಗೆರಿ ಅಥವಾ ಸಣ್ಣ ಕೆರೆ ಅಥವಾ ತಂಗಿ ಕೆರೆ ಎಂದು ಕರೆಯಲಾಗಿದೆ. ಇದರ ವಿಸ್ತೀರ್ಣ ೪x೫ ಭೂಮಿ ಹೊಂದಿದೆ. ಈ ಕೆರೆಯ ನೀರು ಸಾಮಾನ್ಯವಾಗಿ ಕೆಂಪು ಮಸಾರಿ ಭೂಮಿಯ ಮಣ್ಣಿನ ಬಣ್ಣವನ್ನು ಹೊಂದಿದೆ. ಮಸಾರಿ ಭೂಮಿಯ ಮಣ್ಣು ಕೆಂಪು ಇದ್ದು, ಅಲ್ಲಿಂದ ನೀರು ಹರಿದು ಬರುವುದರಿಂದ ಈ ಕೆರೆಯ ನೀರು ಕೆಂಪಾಗಲು ಕಾರಣವಾಗಿದೆ. ಈ ಕೆರೆಯ ಬದಿಗೆ ಬರುವ ರೇವು ಮಣ್ಣಿನಿಂದ ಕುಂಬಾರರು ಗೃಹೋಪಯೋಗಿ ಸಾಮಾನುಗಳಾದ ಗಡಿಗೆ, ಕುಡಿಕೆ, ಮಡಿಕೆಗಳನ್ನು ಮಾಡುತ್ತಾರೆ. ಹಾಗಾಗಿ ಕುಂಬಾರರಿಗೆ ಈ ಕೆರೆ ವರದಾನವಾಗಿದೆ. ಅಷ್ಟೇ ಅಲ್ಲದೆ ಈ ಕೆರೆಯ ಸೂಸು ಮರಳು ಮಣ್ಣನ್ನು ಹೊಳೆಯ ಉಸುಕಿನ ಜೊತೆಗೆ ಸೇರಿಸಿ ಮರಳನ್ನು ಕೆಲವರು ಮಾರಾಟ ಮಾಡುತ್ತಾರೆ.

ಈ ಕೆರೆಯ ನೀರನ್ನು ಇವತ್ತು ದನಕರುಗಳು ಕುಡಿಯಲಿಕ್ಕೆ ಬಳಸುತ್ತಾರೆ. ಕೆರೆಯ ಏರಿಯನ್ನು ಮೂರು ಕಡೆಯಿಂದ ಕಲ್ಲಿನಿಂದ ನಿರ್ಮಿಸಿದ್ದಾರೆ. ಇನ್ನೊಂದು ಕಡೆ ವಿಶಾಲವಾದ ಕೆರೆ ಅಂಗಳ ಹರಡಿಕೊಂಡಿದೆ. ಇಂದು ರೈತರು ಆ ಕೆರೆ ಅಂಗಳವನ್ನು ಆಕ್ರಮಿಸಿ ಕೃಷಿ ಚಟುವಟಿಕೆಗಳನ್ನು, ದನಕರು, ಕುರಿಗಳ ದಡ್ಡಿಗಳನ್ನು ನಿರ್ಮಿಸಿದ್ದಾರೆ. ಇವುಗಳನ್ನು ತಡೆದು ಕೆರೆಯನ್ನು ರಕ್ಷಿಸಬೇಕಾಗಿದೆ.

ತುಳಸಿಗೇರಿ :

ತುಳಸಿಗೇರಿ ಗ್ರಾಮದಿಂದ ಪೂರ್ವಕ್ಕೆ ಎರಡು ಕಿ.ಮೀ. ಅಂತರದಲ್ಲಿದ್ದು, ಬಾಗಲಕೋಟೆಯ ಹೆದ್ದಾರಿಯ ಎಡಗಡೆ ತುಗಲಗಟ್ಟಿ ಎಂಬ ಗ್ರಾಮ ಮತ್ತು ಬಾಗಲಕೋಟೆಯ ರಸ್ತೆಯ ಬಲಕ್ಕೆ ಇದ್ದ ಗುಡ್ಡದ ಬಲಬದಿಗೆ ಅಯ್ಯನಕೇರಿ ಎಂಬ ಗ್ರಾಮಗಳು ರೋಗ

ಮತ್ತು ಭೂತಪೀಡಿತವಾಗಿ ತೊಂದರೆಯಲ್ಲಿದ್ದ ಸಮಯಕ್ಕೆ ಈಗಿನ ತುಳಸಿಗೇರಿಯ ಆಂಜನೇಯ ದೇವಾಲಯದ ಸುತ್ತ ಮುತ್ತಲೂ ಇದ್ದ ತುಳಸಿವನದಲ್ಲಿ ಕದಂಬ ಮನೆತನದ ಕೃಷ್ಣರಾಜ ಒಡೆಯರು ಕ್ರಿ.ಶ. ೧೧೧೨ ಆಂಜನೇಯ ದೇವಾಲಯವನ್ನು ನಿರ್ಮಿಸಿದರು. ಆಗ ಅಯ್ಯನಕೇರಿ ಮತ್ತು ತುಗಲಗಟ್ಟಿಯ ಜನತೆಯ ರಕ್ಷಣೆಗಾಗಿ ತುರಟಗಿರಿಗೆ ಬಂದು ನೆಲೆಸಿದರು. ಇದು ಮುಂದೆ ಶಬ್ದಗಳ ಸುಧಾರಣಾ ಫಲವಾಗಿ ಅದನ್ನೀಗ ತುಳಸಿಗೇರಿ ಎಂದು ಕರೆಯುತ್ತಾರೆ. ಇದು ಸ್ಥಳೀಯರು ಹೇಳುವ ಕಥೆ. ಬಹುಮುಖಿ ಸಂಸ್ಕೃತಿಯ ಭಾರತದಲ್ಲಿ ಎಲ್ಲ ಸಮುದಾಯಗಳಿಂದ ಮಾನ್ಯತೆ ಪಡೆದ ಏಕೈಕ ದೇವರೆಂದರೆ ಮಾರುತಿ.[೧೧]

ಒಂದು ಐತಿಹ್ಯದಂತೆ ಬನವಾಸಿ ಕದಂಬರ ವಂಶಸ್ಥರು ರೋಣ ತಾಲೂಕಿನ ಚವಡಿಯಿಂದ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿರುವ 'ನೀರಬೂದಿಹಾಳಕ್ಕೆ' ರಾಜಧಾನಿಯನ್ನು ವರ್ಗಾಯಿಸಿದರು (ಕೃಷ್ಣರಾಜ ಒಡೆಯರು). ಇವರು ನವರಾತ್ರಿ ಉತ್ಸವಕ್ಕೆ ತಿರುಪತಿಯ ಶ್ರೀ ವೆಂಕಟಪತಿಯ ದರುಶನಕ್ಕೆ ಪ್ರತಿ ವರುಷ ಅಪಾರವಾದ ಸಿರಿ-ಸಂಪತ್ತಿನೊಂದಿಗೆ ತೆರಳಿ ಭಿಕ್ಷುಕರಿಗೆ ಹಾಗೂ ಭಕ್ತರಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು. ಇದರಿಂದಾಗಿ ಅರ್ಚಕರು ಮತ್ತು ಬ್ರಹ್ಮೋತ್ಸವದ ಉಚ್ಚ ರಥವನ್ನು ನೋಡಲು ಬರುತ್ತಿದ್ದ ಭಕ್ತಾದಿಗಳು ರಥದಲ್ಲಿ ಕುಳಿತು ಶ್ರೀ ವೆಂಕಟಪತಿಯನ್ನು ನೋಡದೇ ದ್ರವ್ಯಗಳನ್ನು ಕೊಡುತ್ತಾ ಬರುತ್ತಿದ್ದ ಶ್ರೀ ಕೃಷ್ಣರಾಜನನ್ನೇ ನೋಡುತ್ತಿದ್ದರು. ಇದರಿಂದಾಗಿ ಶ್ರೀ ವೆಂಕಟಪತಿಗೆ ಅವಮಾನವಾದಂತಾಗಿ, ವಿಜಯದಶಮಿ ದಿವಸ ರಾತ್ರಿ ಕೃಷ್ಣರಾಜನ ಸ್ವಪ್ನದಲ್ಲಿ ಶ್ರೀ ವೆಂಕಟಪತಿಯು ಬಂದು, ನನ್ನ ಶ್ರಮ ಸಾರ್ಥಕವಾಗಿದೆ. ಇನ್ನು ಮುಂದೆ ನಾನು ನಿನ್ನ ಊರಿನ ಹತ್ತಿರವಿರುವ ತುರಟೀಗಿರಿ ಎಂಬ ಹಳ್ಳಿಯ ಸಮೀಪದಲ್ಲಿರುವ ತುಳಸಿಯ ವನದಲ್ಲಿರುವ ವಾಲ್ಮೀಕ (ಹಾವಿನ ಹುತ್ತ) ದಲ್ಲಿ ಅವತರಿಸಿ ಬರುತ್ತೇನೆ ಎಂದು ಮಾಯವಾದನು. ಅಂದರಂತೆ ವೆಂಕಟಪತಿಯು ಮತ್ತೆ ಹುಟ್ಟಿ ಬರುತ್ತಾನೆ ಎಂಬ ನಂಬಿಕೆಯಿದೆ. ಇಲ್ಲಿ ಹಲವಾರು ಪ್ರಾಚೀನ ಅವಶೇಷಗಳು ಕಂಡು ಬರುತ್ತವೆ. [೧೨]

೧೪-೧೫ನೇ ಶತಮಾನದ ತುಳಸಿಗೇರಿಯ ಶಾಸನದಲ್ಲಿ ಬಾಳೆಗಿಡಗಳಿಂದ ಕೂಡಿದ ಉದ್ಯಾನವನವಿತ್ತೆಂದು ವರ್ಣನೆ ಇದೆ.[೧೩] ಈ ಗ್ರಾಮದ ಆರಾಧ್ಯ ದೇವರಾದ ಶ್ರೀ ಮಾರುತೇಶ್ವರ ದೇವಾಲಯದಿಂದ ಮತ್ತು ಕಿ.ಮೀ ಅನತಿ ದೂರದಲ್ಲಿರುವ ಗ್ರಾಮ ಪಂಚಾಯತ ಕಟ್ಟಡದ ಹಿಂದೆ ಈ ವಿಶಾಲವಾದ ಕೆರೆಯಿಂದ ಇದಕ್ಕೆ ಪಶ್ಚಿಮದ ಗುಡ್ಡದ ನೀರು ಹರಿದು ಬಂದು ಸೇರುತ್ತದೆ. ಇದು ಸುಮಾರು ೧೫ ಎಕರೆ ವಿಸ್ತಾರವನ್ನು ಹೊಂದಿದೆ. ಇದರ ಏರಿಯನ್ನು ಹರಳು ಮಿಶ್ರಿತವಾದ ಕೆಂಪು ಮಣ್ಣಿನಿಂದ (ಗರಸು) ನಿರ್ಮಾಣ ಮಾಡಿದ್ದಾರೆ. ಕೆರೆಯ

ದಕ್ಷಿಣ ಭಾಗದಲ್ಲಿ ಕೊನೆಯ ಹಂತದಲ್ಲಿ ಹಳೆಯ ತೂಬನ್ನು ದುರಸ್ಥಿ ಮಾಡಿ ಇತ್ತೀಚೆಗೆ ೧೯೩೪ ರಲ್ಲಿ ಆಧುನಿಕ ಪದ್ಧತಿಯ ಪ್ರತಿರೂಪವಾದ ಗೇಟುಗಳನ್ನು ನಿರ್ಮಾಣ ಮಾಡಿದ್ದಾರೆ. ಅದರ ಮೂಲಕ ಕೆರೆಯು ತುಂಬಿದಾಗ ನೀರಾವರಿಗಾಗಿ ಪಕ್ಕದ ಜಮೀನುಗಳಿಗೆ ನೀರು ಒದಗಿಸುತ್ತಾರೆ.

ಇಲ್ಲಿರುವ ಕೆರೆಯನ್ನು ನಾನಾ ರೀತಿಯಿಂದ ಸಾರ್ವಜನಿಕರು ಆಕ್ರಮಿಸಿದ್ದಾರೆ. ಅದರಲ್ಲಿ ಮೊದಲು ಗ್ರಾಮದ ಪಂಚಾಯತಿ ಕಟ್ಟಡ ಅದು ಇದರ ಅಂಗಳದಲ್ಲಿದೆ. ಸರ್ಕಾರದ ಕಟ್ಟಡವನ್ನು ಕೆರೆಯ ಭಾಗದಲ್ಲಿ ಕಟ್ಟಿಸಿದ್ದಾರೆ. ಇದರ ಇನ್ನೊಂದು ಪಕ್ಕದಲ್ಲಿ ಕಸದ ತೊಟ್ಟಿಗಳನ್ನು ನಿರ್ಮಿಸಿದ್ದಾರೆ.



ತುಳಸಿಗೇರಿ ಕೆರೆಯ ಒಂದು ನೋಟ

ಗದ್ದನಕೇರಿ :

ಗದ್ದನಕೇರಿಯಲ್ಲಿ ಮೋನಪ್ಪ ಸ್ವಾಮಿಗಳು ಮತ್ತು ಬಿಜಾಪುರ ಆದಿಲ್‌ಶಾಹಿಗಳ ನಡುವೆ ಮನಸ್ತಾಪವಾಗಿ ಘರ್ಷಣೆಯುಂಟಾದಾಗ ಮೋನಪ್ಪ ಸ್ವಾಮಿಗಳು ಗದ್ದೆಯ ಏರಿಯಲ್ಲಿ ಅಸದೃಶ್ಯರಾದರಂತೆ, ಆ ಕಾರಣಕ್ಕಾಗಿ ಗದ್ದನಕೇರಿ ಎಂಬ ಹೆಸರು ಬಂದಿತೆಂದು ಪ್ರತೀತಿ ಇದೆ.[೧೪] ಬಾಗಲಕೋಟೆಯ ಪಶ್ಚಿಮಕ್ಕೆ ೮ ಕಿ.ಮೀ ದೂರದಲ್ಲಿರುವ ಗದ್ದನಕೇರಿ ಎಂಬ ಗ್ರಾಮವು ಬಿಜಾಪುರ ಆದಿಲ್‌ಶಾಹಿಗಳ ಕಾಲದ ಪ್ರಮುಖ ಧಾರ್ಮಿಕ ಸ್ಥಳವಾಗಿ ಬೆಳೆದು ಬಂದಿದೆ. ಈ ಗ್ರಾಮದ ಸಮೀಪದ ಗುಡ್ಡದಲ್ಲಿ ಮಳೆಯಪ್ಪಯ್ಯನವರ ಹಾಗೂ ಅವರ ಮಗ ಮಾರಪ್ಪನ ಸಮಾಧಿಗಳಿರುವ ದೇವಾಲಯವೊಂದು ನಿರ್ಮಾಣಗೊಂಡಿದ್ದು, ಅತಿವೃಷ್ಟಿ ಮತ್ತು ಅನಾವೃಷ್ಟಿಯ ಸಂದರ್ಭದಲ್ಲಿ ಹಾಗೂ ಬರಗಾಲದ ಸಮಯದಲ್ಲಿ

ಇಲ್ಲಿಯ ಸುತ್ತಲೂ ಇರುವ ನೂರಾರು ಹಳ್ಳಿಯ ರೈತರು ಕೂಡಿಕೊಂಡು ಮಳೆ ಕೇಳುವ ಸಂಪ್ರದಾಯ ಬೆಳೆದು ಬಂದಿದೆ. ಹಾಗಾಗಿ ಉತ್ತರ ಕರ್ನಾಟದಲ್ಲಿಯೇ ಮಳೆ ಪರಂಪರೆ ಮತ್ತು ಉತ್ಸವ ಪೂಜೆಗಾಗಿ ಈ ಸ್ಥಳವು ಪ್ರಸಿದ್ಧವಾಗಿದೆ.

ಗುಡ್ಡದ ಕೆರೆ– ಗದ್ದನಕೇರಿ :

ಗ್ರಾಮ ನಾಮ ವಿಜ್ಞಾನ ಇಂದು ಕನ್ನಡದಲ್ಲಿ ಜನಪ್ರಿಯವಾಗಬೇಕಾದ ಒಂದು ಶಾಸ್ತ್ರ ಪ್ರಕಾರ, ಕನ್ನಡದಲ್ಲಿ ಸರಕಾರ ಹೊರತಂದ ಗ್ರಾಮ ನಾಮ ಸೂಚಿಯನ್ನು ಬಿಟ್ಟರೆ ತೀರಾ ವಿರಳ, ಈ ನಾಡಿನ ಪ್ರಸಿದ್ಧ ಮತ್ತು ಐತಿಹಾಸಿಕ ಹಿನ್ನೆಲೆಯನ್ನೊಳಗೊಂಡ ಗ್ರಾಮಗಳ ಬಗೆಗೆ ದಾಖಲೆ ಮಾಹಿತಿಯನ್ನು ಕಲೆ ಹಾಕುವ ಕೆಲಸ ಕೆಲವು ಕಡೆ ನಡೆದಿದೆ. ಬಾಗಲಕೋಟ ಪಕ್ಕದ ಗದ್ದನಕೇರಿ ದಿನ್ನೆಯ ಮೇಲೆ ಮಳೆಯಪ್ಪಜ್ಜನ ಹಾಗೂ ಮೌನಪ್ಪಯ್ಯನ ಎರಡು ಗುಡಿಗಳಿವೆ. ಇಂದಿಗೂ ಅಲ್ಲಿ ಮಳೆಗಾಗಿ ಕಂಬಳಿಬೀಸಿ ಮಳೆ ಕರೆಯುವ ಆಚರಣೆಯನ್ನು ಕಾಣುತ್ತೇವೆ. [೧೫] ಬಹು ಮುಖ್ಯವಾಗಿ ನಮ್ಮ ಗ್ರಾಮ ನಾಮಗಳ ಹಿನ್ನೆಲೆಗೆ ದಾಖಲಾತಿ ಸಿಕ್ಕುವುದು ಶಾಸನ ಮತ್ತು ತಾಮ್ರಪಟಗಳಿಂದ ಶಾಸನಗಳಲ್ಲದೇ ಕೆಲವು ಪ್ರಾಕೃತಿಕ ಹಿನ್ನೆಲೆ ಮೌಖಿಕಪರಂಪರೆ ಮತ್ತು ಆರಾಧನಾ ಸಂಸ್ಕೃತಿಯ ಹಿನ್ನೆಲೆಯಾಗಿದ್ದು ಕೊಂಡ ಪರಿಣಾಮ ಈ ಊರಿಗೆ ಹೆಸರು ಬಂದಿದೆ. ಗುಡ್ಡದ ಕೆರೆ– ಗದ್ದನಕೇರಿ ಈ ಕೆರೆ ಒಂದು ಶಾಸನೋಕ್ತ ಕರೆಯಾಗಿದೆ. ಮಾಳಿಂಗಪ್ಪನ ಮಗ ಮೋನಪ್ಪಯ್ಯನಿಗೆ ಕೆರೆ ಕಟ್ಟಿಸಿದ್ದಕ್ಕೆ ಮಾನ್ಯತೆ ನೀಡಿದ ಉಲ್ಲೇಖವಿದೆ. [೧೬]



ಗದ್ದನಕೇರಿ ಕೆರೆ

ಗದ್ದನಕೇರಿ ಗ್ರಾಮಕ್ಕೂ ಇಂಥದೇ ಪ್ರಾಕೃತಿಕ ಹಿನ್ನೆಲೆ ಇದೆ. ಇಲ್ಲಿ ಎರಡೂ ದೊಡ್ಡದಾದ ಗುಡ್ಡಗಳು ಸೇರಿ ನಡುವೆ ತಡೆಗೋಡೆ ನಿರ್ಮಾಣವಾಗಿದ್ದರಿಂದ ನೈಸರ್ಗಿಕವಾಗಿ

ಕೆರೆ ನಿರ್ಮಾಣವಾಗಿದೆ. ಇದನ್ನೇ ಗುಡ್ಡದ ಕೆರೆ, ಗುಡ್ಡದ ಕೆರೆ ಎಂದು ಕರೆದುಕೊಂಡು ಬಂದಿರಬಹುದು. ಅದೇ ಮುಂದೆ ಗುಡ್ಡದ ಕೆರೆ–ಗುಡ್ಡದ ಕೇರಿ–ಗದ್ದನಕೇರಿ ಎಂಬ ಹೆಸರು ಆಗಿರಬಹುದು. ಜನಪದ ಮೌಖಿಕ ಪರಂಪರೆಯಲ್ಲಿ ಗುಡ್ಡದ ಕೆರೆ ಗದ್ದನಕೇರಿಯಾಗಿರಬಹುದು. ಈ ಬಗ್ಗೆಯೂ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ.

ಹಳ್ಳೂರು ಕೆರೆ :

ಬಾಗಲಕೋಟೆಯಿಂದ ಸುಮಾರು ೨೩ ಕಿ.ಮೀ ದೂರದಲ್ಲಿ ಕೂಡಲಸಂಗಮ ರಸ್ತೆಯಲ್ಲಿ ಬರುವ ಗ್ರಾಮ.[೧೭] ಹಳ್ಳೂರು ಅಥವಾ ಶಾಸನೋಕ್ತ ಹಳ್ಳಾವೂರವು ಬಾದಾಮಿ ಚಾಲುಕ್ಯರ ಆಡಳಿತ ವ್ಯಾಪ್ತಿಯಲ್ಲಿ ಬೆಳೆದು ಬಂದ ಜೈನ ಮತ್ತು ಶೈವ ಪಂಥದ ಪ್ರಮುಖ ಕೇಂದ್ರವಾಗಿದೆ. ಹಳ್ಳ ವೂರವು ಬೆಳ್ವಲನಾಡಿನ ಗ್ರಾಮವಾಗಿತ್ತೆಂದು ಶಾಸನ ತಿಳಿಸುತ್ತದೆ.[೧೮] ಇಲ್ಲಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಕಾಲದ ದೇವಾಲಯಗಳು, ಕೋಟೆಗಳು ಇತರೆ ಪ್ರಾಚೀನ ಅವಶೇಷಗಳು ಹೆಚ್ಚಾಗಿವೆ.

ಗ್ರಾಮದಲ್ಲಿ ಪ್ರಮುಖ ಆರಾಧ್ಯದೈವವಾದ ಬಸವಣ್ಣನ ಗುಡಿ ಇದೆ. ಈ ದೇವಾಲಯ ಸಮುಚ್ಚಯದ ಪಕ್ಕದಲ್ಲಿ ಸುಮಾರು ೧೦ ಎಕರೆ ವಿಶಾಲವಾದ ಪ್ರದೇಶದಲ್ಲಿ ಕೆರೆ ಇದೆ. ಇದರ ಪೂರ್ವದ ಏರಿಯು ಬಹು ಎತ್ತರವಾಗಿದೆ. ಆದರ ಒಳಮೈ ಕಲ್ಲುಗಳನ್ನು ಜೋಡಿಸಿ ಕಟ್ಟಿಸಿದ್ದಾರೆ. ಇತ್ತೀಚೆಗೆ ಸರಕಾರ ಅದರ ಹೂಳು ತೆಗೆಸಿ, ನೀರು ನಿಲ್ಲುವ ಸಾಮರ್ಥ್ಯ ಹೆಚ್ಚಿಸಿದ್ದಾರೆ.

ಇದು ಪ್ರಾಚೀನವಾದ ಕೆರೆಯಾಗಿದೆ. ಅಂದರೆ ರಾಷ್ಟ್ರಕೂಟರ ಕಾಲದಲ್ಲಿ ಅದರ ಮೂಲ ರಚನೆ ಆಗಿರಬೇಕು. ನಂತರದಲ್ಲಿ ಬ್ರಿಟಿಷರ ಕಾಲದಲ್ಲಿ ಇದನ್ನು ಮತ್ತೆ ವಿಸ್ತರಿಸಿ ಅದರ ಪೂರ್ವ ಏರಿಯಲ್ಲಿ ಒಂದು ಚೌಕ್ ಅಳತೆಯ ಕಲ್ಲಿನಲ್ಲಿ ಡಿ.ಎಲ್.ಸಿ. ೧೮೪೬ ಎಂದು ದಾಖಲಾಗಿದೆ.

ಈ ಕೆರೆಯು ನೀರಾವರಿಗೆ ಬಳಕೆಯಾಗುವುದಿಲ್ಲ. ಕೆಲವು ಜಾನುವಾರುಗಳಿಗೆ ನೀರು ಕುಡಿಯಲು ಬಳಕೆಯಾಗುತ್ತದೆ. ಏರಿಯ ಮಧ್ಯದಲ್ಲಿ ಯಾವುದೇ ತೂಬು ಮತ್ತು ಮದಗ ಕಂಡು ಬರುವುದಿಲ್ಲ. ಇದರಿಂದ ಪ್ರಾಚೀನ ಕಾಲದಿಂದಲೂ ಇದು ಗೃಹ ಬಳಕೆಯ ಕೆರೆಯಾಗಿತ್ತು. ನಂತರ ಕಾಲದಲ್ಲಿ ಬೋರವೆಲ್ ಸೌಲಭ್ಯಗಳಿಂದ ಜನರು ಇದನ್ನು ನಿರ್ಲಕ್ಷಿಸಿದ್ದಾರೆ.

ಕೆರೆಯ ಪಶ್ಚಿಮ ಭಾಗದಲ್ಲಿ ಅದರ ಅಂಗಳವನ್ನು ಸ್ಥಳೀಯ ನಿವಾಸಿಗಳು ಆಕ್ರಮಿಸಿ ದನ–ಕರುಗಳ ದೊಡ್ಡಿಗಳನ್ನು ಕೃಷಿ ಮತ್ತು ಇತರೆ ಕಾರಣಗಳಿಗಾಗಿ ಆಕ್ರಮಿಸಿದ್ದಾರೆ. ಕೆರೆಯ ಪಕ್ಕದಲ್ಲಿ ಬಸವೇಶ್ವರ ದೇವಾಲಯವಿದೆ. ದೇವಾಲಯದ ವಾಸ್ತುಪ್ರಕಾರ ಕೆರೆಯನ್ನು

ನಿರ್ಮಾಣಮಾಡಿದ್ದಾರೆ. ಸರ್ಕಾರ ತಕ್ಷಣ ಕೆರೆಯನ್ನು ರಕ್ಷಿಸಬೇಕಿದೆ. ಬಸವೇಶ್ವರ ದೇವಾಲಯದ ಪಕ್ಕದಲ್ಲಿ ವಿಶಾಲವಾದ ಕೆರೆಯು ಬಿಳಿಕೆಂಪು ಗರಸು ಮಣ್ಣಿನಿಂದ ಆವೃತವಾಗಿದ್ದು, ಸುತ್ತಲೂ ಎತ್ತರದ ತಡೆಗೋಡೆ ನಿರ್ಮಾಣ ಮಾಡಿದ್ದಾರೆ. ತಡೆಗೋಡೆ ಮಧ್ಯದಲ್ಲಿ ಬ್ರಿಟಿಷ್ ಕಾಲದ ಕಲ್ಲಿನ ಫಲಕವಿದೆ.

ಭಗವತಿ ಕೆರೆ :

ಬಾಗಲಕೋಟ ಜಿಲ್ಲಾ ಹೆದ್ದಾರಿಯ ಪಕ್ಕದಲ್ಲಿ ಬರುವ ಕೂಡಲಸಂಗಮ ಮಾರ್ಗದಲ್ಲಿ ಬಾಗಲಕೋಟೆಯಿಂದ ಪೂರ್ವಕ್ಕೆ ೧೮ ಕಿ.ಮೀ ದೂರದಲ್ಲಿ ಐತಿಹಾಸಿಕ ಹಿನ್ನೆಲೆ ಹೊಂದಿರುವ ಭಗವತಿ ಗ್ರಾಮವಿದೆ. ಸಿಂಧರ ಮೂಲಸ್ಥಳವಾದ 'ಬೋಗಾವತಿಯೇ' ಭಗವತಿ ಎಂಬುದು ಲಕ್ಷ್ಮೀ ನಾರಾಯಣ ಅವರ ಅಭಿಪ್ರಾಯವಾಗಿದೆ.[೨೦] ಇಲ್ಲಿರುವ ಕೋನಮ್ಮದೇವಿ ಮಂದಿರದ ಸುತ್ತಲೂ ಪ್ರಾಚೀನ ಅವಶೇಷಗಳು ಕಂಡು ಬರುತ್ತವೆ. ಇಲ್ಲಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರ ಆಡಳಿತಕ್ಕೆ ಒಳಪಟ್ಟ ಪ್ರದೇಶವಿದೆ. ಇದು ಸಿಂಧರ ಮೂಲ ಸ್ಥಳವಾಗಿದೆ.

ಬಾಗಲಕೊಟೆ ತಾಲೂಕಿನ ಭೈರಮಟ್ಟಿಗೆ ಹತ್ತಿರವಿರುವ ಭಗವತಿ ಗ್ರಾಮವೇ ಭೋಗಾವತಿ ಪುರ ಆಗಿದೆ ಎಂದಿದ್ದಾರೆ. ಈ ರೀತಿಯಾಗಿ ಭಗವತಿ ಗ್ರಾಮಕ್ಕೆ "ಭೋಗಾವತಿಪುರ"– ಭಗವತಿ ಎಂಬ ಮೊದಲಾದ ಹೆಸರುಗಳು ಕಂಡು ಬಂದರೂ ಇದಕ್ಕೆ ಮೂಲಾಧಾರಗಳ ಕೊರತೆ ಎದ್ದುಕಾಣುತ್ತದೆ.

ಕನ್ನಡ ನಾಡಿನ ಖ್ಯಾತ ವಿದ್ವಾಂಸ ಹಾಗೂ ಈ ನಾಡಿನ ಹಿರಿಯ ಸಂಶೋಧಕರಾದ ಎಂ.ಚಿದಾನಂದಮೂರ್ತಿಯವರು ಈ ಊರಿನ ಹಿನ್ನಲೆ ಬಗ್ಗೆ ಅಧ್ಯಯನ ಮಾಡಿದ್ದಾರೆ. ಇದು ಭಗವದ್ಗೀತೆಯಷ್ಟೇ ಪ್ರಾಚೀನ ಪ್ರದೇಶವಾಗಿದೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ ಇದರ ಹೆಸರು ಭಗವದ್ಗೀತೆ ಎಂಬ ಹಿಂದೂ ಧಾರ್ಮಿಕ ಗ್ರಂಥದಿಂದ ಬಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮದ ಮುಂದೆ ಇರುವ ಕೆರೆಯು ಸುಮಾರು ೨೦ ಎಕರೆ ವಿಸ್ತೀರ್ಣ ಹೊಂದಿದೆ. ಇದರ ತಳಭಾಗ ಹಳದಿ, ಬಿಳಿ ಮಿಶ್ರಿತವಾದ ಮಣ್ಣು ಹೊಂದಿದೆ. ಇದರ ಪೂರ್ವಭಾಗ ಏರಿಯು ಎತ್ತರವಾಗಿದೆ. ಈ ಕೆರೆಗೆ ಸುತ್ತಮುತ್ತಲಿನ ಸಾವಿರಾರು ಎಕರೆ ಭೂಮಿಯ ನೀರು ಮಳೆಗಾಲದಲ್ಲಿ ಹರಿದು ಬಂದು ಕೆರೆಯನ್ನು ಸೇರುತ್ತದೆ. ಕೆರೆಯು ಪೂರ್ತಿ ತುಂಬಿದಾಗ ಅದರ ಪೂರ್ವಭಾಗದ ಮೂಲಕ ನೀರನ್ನು ಹೊರಗೆ ಬಿಡುವ ವ್ಯವಸ್ಥೆ ಇದೆ. ಹೀಗೆ ಬಿಟ್ಟ ನೀರುಮುಂದೆ ಹಳ್ಳೂರಿನ ಹಳ್ಳ ಸೇರುತ್ತದೆ. ಕೆರೆ ತುಂಬಿದಾಗ ಗ್ರಾಮಕ್ಕೆ ನೀರುಣಿಸುವ ಪೂರೈಸುವ ಬಾವಿ ಮತ್ತು ಬೋರವೆಲ್‌ಗಳ ನೀರು ಇಮ್ಮಡಿಗೊಳ್ಳುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ. ಕೆರೆಯಿಂದ ಪಕ್ಕದ ಭೂಮಿಗೆ ನೀರು ಒದಗಿಸುತ್ತಿತ್ತು. ಆದರೆ ಈಗ ೧೦–೧೫ ವರ್ಷಗಳಲ್ಲಿ ಒಮ್ಮೆಯೂ ಕೆರೆ ತುಂಬಿಲ್ಲವೆಂದು ಊರಿನ

ಹಿರಿಯರು ಹೇಳುತ್ತಾರೆ.

ಕೆರೆಯ ಪೂರ್ವದ ಏರಿಯ ಪಕ್ಕದಲ್ಲಿ ಒಂದು ಪ್ರಾಚೀನಕಾಲದ ಲಕ್ಷ್ಮೀ ಮಂದಿರವಿದೆ. ಹಾಗಾಗಿ ಇದು ಬಹು ಪ್ರಾಚೀನ ಕೆರೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇವತ್ತು ದನಕರುಗಳಿಗೆ, ನೀರಾವರಿಗೆ ಬಳಕೆಯಾಗುತ್ತದೆ. ಇತ್ತೀಚೆಗೆ ನೀರಿನ ಅಭಾವದಿಂದ ದನಕರುಗಳಿಗೆ ಮಾತ್ರ ಬಳಕೆಯಾಗುತ್ತದೆ. ಇದರ ಪಕ್ಕದಲ್ಲಿ ಯಾವುದೇ ರೀತಿಯ ಕಾಲುವೆಗಳು ಗೋಚರಿಸುವುದಿಲ್ಲ. ಇಲ್ಲಿಯ ನೀರನ್ನು ಇಳಿಜಾರು ಪ್ರದೇಶದ ಮೂಲಕ ನೀರು ಹರಿಸಿ ವ್ಯವಸಾಯ ಮಾಡುತ್ತಿದ್ದರು ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಒಂದು ಕಾಲದಲ್ಲಿ ಗತವೈಭವದಿಂದ ಮೆರೆದ ಕೆರೆಯು ಇಂದು ಅದೋಗತಿಗೆ ಬಂದಿದೆ. ಕೆರೆಯ ಅಂಗಳಲ್ಲಿ ಅಕ್ರಮ ಕಟ್ಟಡಗಳು ತಲೆಯೆತ್ತಿವೆ. ಇದೆಲ್ಲದಕ್ಕೂ ಗ್ರಾ.ಪಂ.ದವರು ಅನುಮತಿ ನೀಡುತ್ತಿದ್ದಾರೆ. ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಕೆರೆಗಳ ಅವಶೇಷಗಳನ್ನು ದುರ್ಬೀನಿನ ಮೂಲಕ ಕಂಡು ಹಿಡಿಯುವ ಅನಿವಾರ್ಯತೆ ಬಂದರೂ ಬರಬಹುದು. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಊರಿನ ಹಿರಿಯರು, ಗ್ರಾಮ ಪಂಚಾಯಿತಿ, ಜಿಲ್ಲಾಡಳಿತ, ಶಾಸಕರು, ಪರಿಸರ ಹೋರಾಟಗಾರರು ಗಮನಿಸಿ ಕೆರೆಯ ಅಸ್ತಿತ್ವಕ್ಕಾಗಿ, ಉಳಿವಿಗಾಗಿ ಹೋರಾಡುವುದು ಅನಿವಾರ್ಯವಾಗಿದೆ.

ಸೀಮಿಕೇರಿ ಕೆರೆ :

ಬಾಗಲಕೋಟ-ಹುಬ್ಬಳ್ಳಿಯ ರಾಜ್ಯ ಮಾರ್ಗದ ಮಧ್ಯದಲ್ಲಿ ಅಂದರೆ ಗದ್ದನಕೇರಿ ಕ್ರಾಸ್‌ನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿರುವ ಒಂದು ಐತಿಹಾಸಿಕ ಗ್ರಾಮವಾಗಿದೆ. ಮೊದಲು ಹೆದ್ದಾರಿಯಿಂದ ಬಹಳ ದೂರದಲ್ಲಿತ್ತು. ಆದರೆ ಅಲ್ಲಿ ಜನಪೀಡನೆಗೊಳಗಾಗಿ ಹಲವಾರು ಜನರು ಸಾವು- ಬದುಕಿನೊಡನೆ ಹೋರಾಟ ಮಾಡುವ ಪ್ರಸಂಗ ಬಂದಾಗ ಆ ಗ್ರಾಮ ತೊರೆದು ಬಾಗಲಕೋಟೆ-ಹುಬ್ಬಳ್ಳಿ ರಾಜ್ಯಮಾರ್ಗ ಪಕ್ಕದಲ್ಲಿ ಗ್ರಾಮ ಸ್ಥಾಪನೆ ಮಾಡಿದ್ದಾರೆಂದು ಅಲ್ಲಿರುವ ಸ್ಥಳೀಯರು ಹೇಳುತ್ತಾರೆ.

ಇದರ ಹೆಸರಿನ ಚರಿತ್ರೆಯನ್ನು ಅವಲೋಕನ ಮಾಡಿದಾಗ ಸೀಮೆಯ ಪಕ್ಕದಲ್ಲಿ ಕೆರೆ ಇದ್ದದ್ದರಿಂದ ಇದಕ್ಕೆ ಸೀಮಿಕೆರಿ ಎಂದು ರೂಢಿಗತವಾಗಿ ಬಂದಿದೆ ಎಂಬುದು ಅಲ್ಲಿಯ ಸ್ಥಳೀಯರ ವಾದವಾಗಿದೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಈ ಗ್ರಾಮದಿಂದ ಸುಮಾರು ೩ಕಿ.ಮೀ ದೂರದಲ್ಲಿರುವ 'ಅಯ್ಯನ ಕೆರೆ' ಜಿಲ್ಲೆಯ ಪುರಾತನ ಕೆರೆಗಳಲ್ಲಿ ಒಂದಾಗಿದೆ. ಇದು ಸುಮಾರು ೪೦ ಎಕರೆ ವಿಸ್ತೀರ್ಣತೆ ಹೊಂದಿದ ಬಹುಮುಖ್ಯ ಕೆರೆಯಾಗಿದ್ದು, ನೂರಾರು ಎಕರೆಗಳಿಗೆ ನೀರು ಒದಗಿಸುತ್ತಿದೆ. ಇದರ ಏರಿಯು ಬೃಹದಾಕಾರದ ಕಪ್ಪು ಮಣ್ಣಿನಿಂದ ನಿರ್ಮಾಣಗೊಂಡಿದೆ. ಇದರ ಮಧ್ಯದಲ್ಲಿ ಇರುವ ತೂಬಿನ ಮೂಲಕ ನೀರನ್ನು ಕಾಲುವೆಗೆ ಹರಿಸಲಾಗುತ್ತದೆ. ಕಾಲುವೆಯಿಂದ

ಹೊಲಗದ್ದೆಗಳಿಗೆ ನೀರನ್ನು ಪೂರೈಸಲಾಗುತ್ತದೆ.

ಕೆರೆಯ ಸುತ್ತಲೂ ಮಣ್ಣಿನಿಂದ ನಿರ್ಮಾಣಗೊಂಡ ಏರಿ ಇದ್ದು ಅದರ ಒಳ ಭಾಗದಲ್ಲಿ ಕಲ್ಲುಗಳನ್ನು ಜೋಡಿಸಿದ್ದಾರೆ. ಗ್ರಾಮದಿಂದ ಸ್ವಲ್ಪ ದೂರದಲ್ಲಿದ್ದರೂ ಕೂಡ ಇಲ್ಲಿ ಹಲವಾರು ಪೂಜಾ ಕಾರ್ಯಗಳು ನಡೆಯುತ್ತವೆ. ಕೆರೆ ತುಂಬಿದಾಗ ಅದರಲ್ಲೂ ಶ್ರಾವಣ ಮಾಸದಲ್ಲಿ ಗಂಗಾಂಬಿಕೆಯ ಮತಸ್ಥರು ಮತ್ತು ತಳವಾರ ಜನಾಂಗದವರು ಮೊದಲು ಪೂಜೆ ಮಾಡುವರು. ಇದರಲ್ಲಿ ಕೆಲವೊಂದು ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ರೂಢಿಗತವಾಗಿ ಬೆಳೆದು ಬಂದಿದೆ. ಆದರೆ ಇಂದು ಕೆರೆಯು ನೀರಾವರಿ ಮತ್ತು ಜಾನುವಾರುಗಳಿಗೆ ಮಾತ್ರ ಬಳಕೆಯಾಗುತ್ತಿದೆ.

ಅಯ್ಯನ ಕೆರೆಯು ಊರಿನಿಂದ ಸ್ವಲ್ಪ ದೂರದಲ್ಲಿರುವುದರಿಂದ ಇದು ಯಾವುದೇ ಸದ್ದಿಲ್ಲದೇ ಪ್ರಶಾಂತ ಪ್ರದೇಶವಾಗಿದೆ. ಬೆಳಗಿನ ವೇಳೆ ಮತ್ತು ಸಾಯಂಕಾಲ ಸಾವಿರಾರು ಪಕ್ಷಿಗಳು ಇಲ್ಲಿಗೆ ಬರುತ್ತವೆ. ಜಿಲ್ಲಾಡಳಿತ ಮುತುವರ್ಜಿವಹಿಸಿ ಪಕ್ಷಿಧಾಮ ನಿರ್ಮಾಣ ಮಾಡಿದರೆ, ಸಾವಿರಾರು ಜಲಚರ ಪಕ್ಷಿ ಪ್ರಾಣಿಗಳಿಗೆ ಆಶ್ರಯವಾಗುವುದಲ್ಲದೆ ಅಂತರ್‌ಜಲಮಟ್ಟವು ವೃದ್ಧಿಯಾಗುತ್ತದೆ.

ಮುಚ್ಚಳಕಂಡಿ–ಮುಚಖಂಡಿ ಕೆರೆ :


ಪ್ರಾಚೀನ ನೀರಾವರಿ ವ್ಯವಸ್ಥೆಯಲ್ಲಿ ಮುಖ್ಯ ಲಕ್ಷಣವಾಗಿ ಜಿಲ್ಲೆಯಲ್ಲಿ ಕಂಡುಬರುವುದೇ ಕೆರೆಗಳು.[೨೧] ಬರ ಗ್ರಾಮನಾಮ ವಿಜ್ಞಾನ ಇಂದು ಕನ್ನಡದಲ್ಲಿ ಜನಪ್ರಿಯವಾಗಬೇಕಾದ ಒಂದು ಶಾಸ್ತ್ರ ಪ್ರಕಾರ. ಕನ್ನಡದಲ್ಲಿ ಸರ್ಕಾರ ಹೊರತಂದ ಗ್ರಾಮನಾಮ ಸೂಚಿಯನ್ನು ಬಿಟ್ಟರೆ ಗ್ರಾಮನಾಮಗಳ ಅಧ್ಯಯನವಾಗಿರುವುದು ತೀರಾ ವಿರಳ. ಈ ನಾಡಿನ ಪ್ರಸಿದ್ಧ ಮತ್ತು ಐತಿಹಾಸಿಕ ಹಿನ್ನೆಲೆಯನ್ನೊಳಗೊಂಡ ಗ್ರಾಮಗಳ ಬಗೆಗೆ ದಾಖಲೆ ಮಾಹಿತಿಗಳನ್ನು ಕಲೆ ಹಾಕುವ ಕೆಲಸ ಕೆಲವು ಕಡೆ ನಡೆದಿದೆ. ಬಹುಮುಖ್ಯವಾಗಿ ಗ್ರಾಮ ನಾಮಗಳ ಹಿನ್ನೆಲೆಗೆ ದಾಖಲೆ ಸಿಗುವುದು ಶಾಸನ ಮತ್ತು ತಾಮ್ರಪಟಗಳಿಂದ. ಶಾಸನಗಳಲ್ಲದೇ ಕೆಲವು ಪ್ರಾಕೃತಿಕ ಹಿನ್ನೆಲೆ, ಮೌಖಿಕ ಪರಂಪರೆ ಮತ್ತು ಆರಾಧನಾ ಸಂಸ್ಕೃತಿಯ ಹಿನ್ನೆಲೆಯಾಗಿದ್ದುಕೊಂಡ ಪರಿಣಾಮ ಊರಿಗೆ ಈ ಹೆಸರು ಬಂದಿದೆ.

ಇಲ್ಲಿ ಒಂದು ಪ್ರಮುಖ ಪ್ರದೇಶವಾದ ಮುಚಖಂಡಿ ಗ್ರಾಮ ಹಿನ್ನೆಲೆಯನ್ನು ಪಡೆದುಕೊಂಡು ಬಾಗಲಕೋಟೆ ತಾಲೂಕಿನಲ್ಲಿ ಬರುವ ಮುಚಖಂಡಿ, ಬಾಗಲಕೋಟೆಯಿಂದ ಸುಮಾರು ೬ ಕಿ.ಮೀ. ಅಂತರದಲ್ಲಿರುವ ಬೃಹದಾಕಾರದ ಒಂದು ಕೆರೆ ಇದೆ. ಇದರ ನಿರ್ಮಾಣವಾಗಿರುವುದು ಪ್ರಾಕೃತವಾಗಿ. ಇಲ್ಲಿ ಸುಮ್ಮನೆ ಹರಿದು ಹೋಗುತ್ತಿದ್ದ ನೀರನ್ನು ತಡೆದು ಬ್ರಿಟಿಷ್ ಸರಕಾರ ೧೮೮೨ರಲ್ಲಿ ಇಲ್ಲಿ ದೊಡ್ಡ ಪ್ರಮಾಣದ ತಡೆಗೊಡೆ ಕಟ್ಟಿದೆ. ಈ ತಡೆಗೊಡೆ ಎರಡು ಬೃಹತ್ತಾದ ಗುಡ್ಡಗಳನ್ನು ಜೋಡಿಸಿದೆ. ಈ ತಡೆಗೋಡೆ ತಳಕ್ಕೆ ಎರಡು ಗುಡ್ಡಗಳು ಕೂಡುವುದು. ತಡೆಗೋಡೆಯ ನಿರ್ಮಾಣಕ್ಕೆ ಮೊದಲು ಈ ಗುಡ್ಡಗಳು

ಕೂಡವಲ್ಲಿ ಮುಚ್ಚುವ ರೀತಿಯಲ್ಲಿರುವ ಕಿಂಡಿ ಇರಬಹುದು. ಜನರ ಆಡುನುಡಿಯಲ್ಲಿ ಮುಚ್ಚಳಕಿಂಡಿಯಾಗಿ ಅದು ಬರುಬರುತ್ತಾ ಮುಚ್ಚಕಿಂಡಿ– ಮುಚ್ಚಖಂಡಿಯಾಗಿರಬಹುದು ಎಂದು ಜಾನಪದ ತಜ್ಞ ಡಾ: ಪ್ರಕಾಶ ಖಾಡೆಯವರ ಅಭಿಪ್ರಾಯ. ಮೌಖಿಕ ಪರಂಪರೆಯಲ್ಲಿ ಈ ಹೆಸರು ರೂಢಿಗತವಾಗಿರಬಹುದು ಎಂದು ಹೇಳುತ್ತಾರೆ.

ಬಾಗಲಕೋಟೆಯ ಪಶ್ಚಿಮ (ನೈಋತ್ಯ)ಕ್ಕೆ ೬ ಕಿ.ಮೀ. ದೂರದಲ್ಲಿ ಮುಚಖಂಡಿ ಗ್ರಾಮವಿದೆ. ಆಲಮಟ್ಟಿ ಆಣೆಕಟ್ಟೆಯ ನಿರ್ಮಾಣದ ಹಿನ್ನೀರಿನಿಂದ ಮುಳುಗಡೆಯಾಗಿರುವ ಬಾಗಲಕೋಟೆಯನ್ನು ಯೋಜನಾ ಬದ್ಧವಾಗಿ ಮುಚಖಂಡಿ ಗ್ರಾಮಕ್ಕೆ ಹತ್ತಿಕೊಂಡು ನಿರ್ಮಿಸಿದ್ದಾರೆ.[೨೨] ಇದರಿಂದ ಮುಚಖಂಡಿಯು ನವಬಾಗಲಕೋಟೆಯಲ್ಲಿ ವಿಲೀನಗೊಂಡಿದೆ. ಕೆರೆಯ ಮುಂದಿರುವ ಫಲವತ್ತಾದ ಭೂಮಿಯನ್ನು ಬಾಗಲಕೋಟೆ ನಗರ ನಿರ್ಮಾಣಕ್ಕೆ ಬಳಸಿಕೊಂಡಿದ್ದಾರೆ. ವೀರಭದ್ರೇಶ್ವರ ದೇವಾಲಯದ ಹತ್ತಿರ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ವರ್ಷದಲ್ಲಿ ಎರಡು ಸಾರಿ ವೀರಭದ್ರನ ಜಾತ್ರೆ ನಡೆಯುವುದು ಸಾಂಸ್ಕೃತಿಕ ವಿಶೇಷವಾಗಿದೆ.

ಇಲ್ಲಿರುವ ವೀರಭದ್ರನ ಸನ್ನಿಧಿಯಲ್ಲಿರುವ ಕೆರೆಯೂ ವೈಶಿಷ್ಟ್ಯಪೂರ್ಣ ಮತ್ತು ವಿಶಿಷ್ಟ ತಾಂತ್ರಿಕತೆಯಿಂದ ಕೂಡಿದೆ. ಇದನ್ನು ೧೮೮೨ ರಲ್ಲಿ ಬ್ರಿಟಿಷ್ ಆಡಳಿತಾವಧಿಯಲ್ಲಿ ಪೂರ್ವ ಬೆಟ್ಟ ಮತ್ತು ಪಶ್ಚಿಮದ ಬೆಟ್ಟಗಳ ನಡುವೆ ಒಂದು ತಡೆಗೋಡೆ ಕಟ್ಟುವುದರ ಮೂಲಕ ನೀರು ನಿಲ್ಲಿಸಿ ಅದನ್ನು ಕಾಲುವೆಗಳ ಮೂಲಕ ಹರಿಸಿ ನೀರಾವರಿ ವ್ಯವಸ್ಥೆಗೆ ಅನುವು ಮಾಡಿಕೊಟ್ಟಿದ್ದಾರೆ. ಇದು ಸುಮಾರು ೪೨೦ ಹೆಕ್ಟರ್ ಭೂಮಿಗೆ ನೀರು ಒದಗಿಸುವ ಪ್ರಮುಖ ಕೆರೆಯಾಗಿದೆ.[೨೩] ಇದಕ್ಕೆ ಮಳೆಗಾಲದಲ್ಲಿ ಸುತ್ತಲು ಇರುವ ಗುಡ್ಡಗಳಾದ ಸಿಮಿಕೇರಿ, ಸೂಳಿಕೇರಿ, ಕಗಲಗೊಂಬ ಗುಡ್ಡಗಳಿಂದ ನೀರು ಹರಿದು ಬರುತ್ತದೆ.



ಮುಚಖಂಡಿ ಕೆರೆಯ ಒಳಗಿನ ನೋಟ

ಈ ಕೆರೆಯು ಬರೋಬ್ಬರಿ ೧೨೦ ವರ್ಷಗಳ ಅಮೋಘ ಇತಿಹಾಸ ಹೊಂದಿದ್ದು

ಮುಚಖಂಡಿ, ಗದ್ದನಕೇರಿ, ಬಾಗಲಕೋಟೆ, ಸೂಳಿಕೇರಿ, ಸೀಮಿಕೇರಿ ಸೇರಿದಂತೆ ಸುಮಾರು ಐದಾರು ಗ್ರಾಮದ ಜನರಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಬ್ರಿಟಿಷರು ಇದನ್ನು ನಿರ್ಮಾಣ ಮಾಡಿದ್ದಾರೆ. ಅಷ್ಟೇ ಅಲ್ಲದೇ ಇವತ್ತಿಗೂ ಈ ಕೆರೆ ತುಂಬಿದರೆ ಸುತ್ತಲಿನ ಹತ್ತಾರು ಹಳ್ಳಿಗಳ ಅಂತರ್ಜಲ ಮಟ್ಟ ವೃದ್ಧಿಯಾಗುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

ಈ ಕೆರೆಯ ಕಟ್ಟಡವು ಸಾಂಪ್ರದಾಯಿಕ ಶೈಲಿ ಮಾದರಿಯಲ್ಲಿ ನಿರ್ಮಾಣಗೊಂಡಿದೆ. ಇದರಲ್ಲಿ ಕೆಂಪುಕಲ್ಲು (ಕೆಂಪು ಮತ್ತು ಬಿಳಿ ಮಿಶ್ರಿತ ದಿಂಡುಗಲ್ಲು ಅಥವಾ ಪಾಟಿಕಲ್ಲು) ಗಳನ್ನು ಬಳಸಿದ್ದಾರೆ. ಇದರ ತಳಭಾಗ ಅಗಲವಿದ್ದು, ಒಳಮೈ ಒಂದೇ ಸಮನಾದ ಗೋಡೆಯನ್ನು ಹೊಂದಿದೆ. ಆದರೆ ಹೊರ ಮೈ (ಕೆರೆಯ ಮುಂಭಾಗ) ಮಾತ್ರ ತಳದ ವಿನ್ಯಾಸ ಮುಂದೆ ಚಾಚಿದೆ. ನಂತರದಲ್ಲಿ ಮೇಲೆರುವಾಗ ಸಣ್ಣದಾಗುತ್ತದೆ. ನಿರ್ಮಾಣಕ್ಕಾಗಿ ದೊಡ್ಡ, ದೊಡ್ಡ ಕಲ್ಲುಗಳನ್ನು ಮತ್ತು ಗಚ್ಚು-ಗಾರೆ ಜೊತೆಗೆ ಅವಶ್ಯಕತೆ ಇದ್ದಲ್ಲಿ ಕಬ್ಬಿಣದ ಸಲಾಖೆಗಳನ್ನು ಒಳಗೆ ವಿನ್ಯಾಸಗೊಳಿಸಿದ್ದಾರೆ.

ಕೆರೆಯ ನೀರನ್ನು ಬಳಸುವ ಉತ್ತಮ ತಂತ್ರಜ್ಞಾನ ಬಳಕೆ ರಚನೆ ಮಾಡಿದ್ದಾರೆ. ಇದಕ್ಕಾಗಿ ಕೆರೆ ಮೇಲಿನ ಭಾಗದಲ್ಲಿ ಸುತ್ತಳತೆ ಹೊಂದಿರುವ ಮೂರು ಕಲ್ಲುಗಳ ಮಧ್ಯ ಸಳಿ ಹಾಕಿ ಅವುಗಳ ಉದ್ದವಾದ ಸಳಿಗಳನ್ನು ಬಿಟ್ಟು ಕೆರೆಯ ಮಧ್ಯದಲ್ಲಿ ತೂಬಿನ ರಚನೆ ಮಾಡಿದ್ದಾರೆ. ಅದರ ಮೂಲಕ ನೀರನ್ನು ಹರಿ ಬಿಡುತ್ತಾರೆ. ಪ್ರಮುಖವಾದ ಕಾಲುವೆಗೆ ಮತ್ತೊಂದು ಉಪಕಾಲುವೆ ಮಾಡಿದ್ದಾರೆ. ಅದರ ಮೂಲಕ ಮುಂದೆ ಇರುವ ಉದ್ಯಾನವನಕ್ಕೆ ಮತ್ತು ದೇವಾಲಯ ಹಾಗೂ ಕುಡಿಯುವ ನೀರನ್ನು ನಿಯಂತ್ರಿಸುವುದನ್ನು ಇವತ್ತಿಗೂ ಸಹ ನಾವು ಕಾಣಬಹುದಾಗಿದೆ.

ನಿಸರ್ಗ ರಮ್ಯತಾಣದಲ್ಲಿ, ವಿಶಾಲವಾದ ಬೆಟ್ಟಗಳ ನಡುವೆ ಕೆರೆ ನಿರ್ಮಾಣ ಮಾಡಿದ್ದಾರೆ. ಇದರ ಮುಂಭಾಗದಲ್ಲಿ ಸುಂದರ ಪರಿಸರ ತಾಣ. ಅದರಲ್ಲಿ ಮಕ್ಕಳ ಆಟಿಕೆ ಪರಿಕರಗಳು ಜೊತೆಗೆ ಕೆರೆಯಲ್ಲಿ ವಿಹರಿಸಲು ಬೋಟ್ ವ್ಯವಸ್ಥೆ ಮಾಡಲಾಗಿದ್ದು, ಈ ಸುಂದರ ಪರಿಸರವನ್ನು ನೋಡಲು ನಿತ್ಯ ನೂರಾರು ಪ್ರವಾಸಿಗರು ಇಲ್ಲಿಗೆ ಬಂದು ಹೋಗುವರು.

ಬೆಳಗಾವಿಯ ಕೋಟೆ ಕೆರೆಯಂತೆ ಪ್ರವಾಸಿತಾಣ ಹಾಗೂ ಹುಬ್ಬಳ್ಳಿಯ ಉಣಕಲ್ ಕೆರೆಯಂತೆ ಜನಪ್ರಿಯಗೊಳಿಸಿ ದಿನನಿತ್ಯವೂ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುವಂತೆ ಸರಕಾರ ಮಾಡಬೇಕಾಗಿದೆ.

ಬೇವೂರು ಕೆರೆ :

ಬಾಗಲಕೋಟೆಯ ಪೂರ್ವಕ್ಕೆ ೨೮ ಕಿ.ಮೀ ದೂರದಲ್ಲಿರುವ ಬೇವೂರು ಅಥವಾ

ಶಾಸನೋಕ್ತ 'ಕಿರಿಯ ಬೇವೂರು' ಎಂತಲೂ ಶಾಸನದಲ್ಲಿ ಕರೆಯಲಾಗಿದೆ.[೨೪] ಇದನ್ನು ಕೆರೆಯ ಬೇವೂರು ಎಂತಲೂ, ಕರೆಯಲಾಗಿದೆ. ಗ್ರಾಮದ ಪೂರ್ವದಲ್ಲಿ ಪುರಾತನ ಕೆರೆ ಇದ್ದುದ್ದರಿಂದ ಕೆರೆ ಅಥವಾ ಕಿರಿಯ ಬೇವೂರು ಎಂದು ಕರೆಯುತ್ತಾರೆ.[೨೫] ಇಲ್ಲಿ ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಹಲವಾರು ಪ್ರಾಚೀನ ಅವಶೇಷಗಳು ಕಂಡುಬರುತ್ತವೆ.

ವಿಜಯಪುರ ಜಿಲ್ಲೆಯ ಇಂಡಿಯ ಕ್ರಿ.ಶ.೧೧೯೬ರ ಯಾದವರ ಜೈತುಗಿಯ ಶಾಸನವೊಂದು "ಹರಗೃಹದಿಂ ಸುರಗೃಹದಿಂ ಅರುಹ ಗೃಹದೇ ಬೌದ್ಧಾಲಯಂ ಗೊರವರ ಸವಣರ ಬೌದ್ಧರ ನೆರವಿನಿಂದ ಇಂಡಿವೆಡೆ ಸೊಗಯಿಸಿ ತೋರ್ತುಂ" ಎಂದು ಇಂಡಿಯ ಚತುಸ್ಸಮೆಯಗಳ ಬೀಡಾದುದನ್ನು ಶಾಸನ ಕವಿಯು ತುಂಬಾ ಸುಂದರವಾಗಿ ವರ್ಣಿಸಿದ್ದಾನೆ. ಈ ಮಾತು ಬಾಗಡಿಗೆ ೭೦ ರಲ್ಲಿರುವ ಬಾಗಲಕೋಟ ಜಿಲ್ಲೆಯ ಇದೇ ತಾಲೂಕಿನ ಬೇವೂರಿಗೆ ಅಕ್ಷರಶಹ ಒಪ್ಪುತ್ತದೆ. ಈ ಊರು ಶೈವ ವೈಷ್ಣವ ಹಾಗೂ ಜೈನ ಮುಂತಾದ ಧರ್ಮಗಳಿಗೆ ಆಶ್ರಯವಿತ್ತಿದ್ದು, ಇದೊಂದು ಶಾಸನೋಕ್ತ ಗ್ರಾಮವಾಗಿದ್ದು, ಪ್ರಾಚೀನ ಮಧ್ಯಕಾಲೀನ ಹಾಗೂ ಅರ್ವಾಚೀನ ಕಾಲದ ಅನೇಕ ಶಾಸನಗಳು, ವೀರಗಲ್ಲುಗಳು ಹಾಗೂ ದೇಗುಲಗಳಿಂದ ಈ ಊರು ಶೋಭಿಸುತ್ತಿದೆ.

ನಮಗೆ ಬೇವೂರು ಎಂದು ಕೂಡಲೇ ದಿಢೀರನೆ ನೆನಪಿಗೆ ಬರುವುದು ಅಂತರಾಷ್ಟ್ರೀಯ ಖ್ಯಾತಿಯನ್ನು ಹೊಂದಿದ ಜನರಲ್ ಜಿ.ಜಿ.ಬೇವೂರ ರವರು. ಇವರು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದವರು. ಆಧುನಿಕ ಭಾರತದ ಕರ್ನಾಟಕದವರೇ ಆದ ಪ್ರಸಿದ್ಧ ೩ ಜನ ದಂಡನಾಯಕರುಗಳಲ್ಲಿ ಬೇವೂರರವರು ಅಗ್ರಗಣ್ಯರಾಗಿದ್ದಾರೆ. ಆದರೆ ಅದಕ್ಕಿಂತಲೂ ಮೊದಲು ಬೇವೂರು, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ ವಿಜಯನಗರದ ಅರಸರ ಹಾಗೂ ವಿಜಾಪುರ ಸುಲ್ತಾನರ ಕಾಲದಲ್ಲಿಯೂ ಕೂಡ ಈ ಊರು ಪ್ರಸಿದ್ಧವಾಗಿತ್ತು. ಈ ಊರಿನಲ್ಲಿ ಹೊಲಗಳನ್ನು ಊಳುವಾಗ ಸಿಗುವ ಮಡಿಕೆ, ಚೂರುಗಳು, ಮನುಷ್ಯನ ತಲೆಬುರುಡೆ, ಎಲುಬುಗಳು ಹಾಗೂ ಸೀಸದ ನಾಣ್ಯಗಳು ಈ ಊರಿನ ಪ್ರಾಗೈತಿಹಾಸಿಕ ಹಾಗೂ ಇತಿಹಾಸ ಆರಂಭಕಾಲದ ಕುರುಹುಗಳನ್ನು ಹೊರಗೆಡವುತ್ತವೆ.

ಕ್ರಿ.ಶ. ೧೯೨೮-೨೯ರ ವರದಿಯ ಪ್ರಕಾರ ಇಲ್ಲಿಯವರೆಗೆ ಬೇವೂರಿನಲ್ಲಿ ೨ ಶಾಸನಗಳು ಲಭ್ಯವಾಗಿವೆ. ಊರ ಹೊರಗೆ ಹಾಳಾಗಿರುವ ಸೋಮೇಶ್ವರ ದೇವಾಲಯದ ಎದುರು ಕೆಂಪು ಮರಳುಗಲ್ಲಿನಲ್ಲಿ ಕೆತ್ತಿದ ತುಂಬಾ ತೃಟಿತವಾದ ಶಾಸನವಿದೆ (SIIXI-1, P-105), ಶಾಸನವು ತುಂಬಾ ತೃಟವಾಗಿರುವುದರಿಂದ ಲಿಪಿಯ ಸ್ವರೂಪದ ಮೇಲೆ ಈ ಶಾಸನವನ್ನು ಕ್ರಿ.ಶ.೧೦೫೦ ಎಂದು ಶಾಸನ ತಜ್ಞರು ನಿರ್ಣಯಿಸಿದ್ದಾರೆ. ಕಲ್ಯಾಣ ಚಾಲುಕ್ಯರ ಒಂದನೇ ಸೋಮೇಶ್ವರನ (ತ್ರೈಲೋಕ್ಯಮಲ್ಲ) ಕಾಲದ ಶಾಸನ ಇದ್ದಾಗಿದ್ದು, ಅವನ

ಮಹಾಮಂಡಳೇಶ್ವರ ನೊಳಂಬಾಧಿರಾಜನಿಂದ ಈ ಕಿರಿಯ ಬೇಹೂರಿನ ಸೋಮೇಶ್ವರ ದೇವಾಲಯಕ್ಕೆ ಭೂದಾನಗೈದ ವಿವರಗಳನ್ನು ತಿಳಿಸುತ್ತದೆ. ತಮಿಳುನಾಡಿನ ಪಲ್ಲವರ ಸಂಬಂಧಿಗಳು ಹಾಗೂ ಮಂಡಳಿಕರಾಗಿ ನೊಳಂಬರು ಕರ್ನಾಟಕದ ಬಹು ಭಾಗವನ್ನು ಕಲ್ಯಾಣದ ಚಾಲುಕ್ಯರ ಕಾಲದಲ್ಲಿಯೂ ಪ್ರತಿನಿಧಿಸಿದ್ದಾರೆ. ಅಲ್ಲದೆ ಈ ಶಾಸನವು ಬೇವೂರನ್ನು "ಕಿರಿಯ ಬೇವೂರು' ಕೆರೆಯ ಬೇವೂರು" ಎಂದು ಉಲ್ಲೇಖಿಸಿದೆ. ಅಲ್ಲದೆ ಶಾಸನದ ಇಪ್ಪತ್ತನೆಯ ಸಾಲಿನಲ್ಲಿ ಈ ಧರೆಯ ಮೇಲೆ ಒಟ್ಟು ೭೭೦ ಕೆರೆಗಳನ್ನು ರಾಜನು ನಿರ್ಮಿಸಿದನೆಂದು ತಿಳಿಸಿದೆ. ಅದೇ ರೀತಿಯಾಗಿ ಬೇವೂರಿನಲ್ಲಿಯೂ ಸಹ ತ್ರೈಲೋಕ್ಯಮಲ್ಲನು ಕೆರೆಯನ್ನು ನಿರ್ಮಿಸಿದ್ದು, ಇಂದಿನವರೆಗೂ ಆ ಕೆರೆ ಇದೆ. ಅಲ್ಲದೆ ಸೊಕರಾಜನೆಂಬ ಬ್ರಾಹ್ಮಣನ ಉಲ್ಲೇಖವಿದ್ದು, ಕೆರೆಯ ಬೇವೂರಿನಲ್ಲಿ ಶಿವ ದೇವಾಲಯ ನಿರ್ಮಿಸಿದನೆಂಬ ವಿವರಣೆ ಇದೆ. ಅಲ್ಲದೇ ಶಾಸನವು ಶಿವ ನಿಳಯದ ಕೇರಿಯೊಳಂ, ಶಿವ ಭೂಮಿಯೊಳಂ ಸಮಂತುಪುಟ್ಟದ ದಡಂ ಶಿವನೊಡಮಂ ಮಂತದಂ ಎಂದು ಮುಂತಾಗಿ ವಿವರಿಸುತ್ತದೆ. ತ್ರೈಲೋಕ್ಯಮಲ್ಲನ ಪಿರಿಯರಸಿ ಮೈಳಲದೇವಿಯನ್ನು ದಾನಚಿಂತಾಮಣಿ, ಸವತಿ ಮದಭಂಜನಿ ಎಂದು ಮುಂತಾಗಿ ಶಾಸನಗಳು ಕರೆದಿವೆ. ಈ ತ್ರೈಲೋಕ್ಯಮಲ್ಲನು 'ಭಾವಗಂಧವಾರಣ' ವೆಂಬ ಬಿರುದನ್ನು ಪಡೆದಿದ್ದ ವ್ಯಕ್ತಿಯೊಬ್ಬ ರಾಜಧಾನಿ ಕಲ್ಯಾಣದಿಂದ ಬನವಾಸಿಯವರೆಗೆ ಅನೇಕ ಗ್ರಾಮಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದಂತೆ ಶಾಸನಗಳು ವರ್ಣಿಸಿರುವದರಿಂದ ಈ ಬೇಹೂರಿನ ಸಂಗಮೇಶ್ವರ ತ್ರಿಕೂಟಾಚಲ ದೇಗುಲವನ್ನು ಸಹ ಈ ಭಾವಗಂಧವಾರಣನೇ ನಿರ್ಮಿಸಿರಬಹುದಾಗಿದೆ.[೨೬]

ಈ ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ಕೆರೆಯನ್ನು ಕಲ್ಯಾಣ ಚಾಲುಕ್ಯರ ಒಂದನೆಯ ಸೋಮೇಶ್ವರನ (ತ್ರೈಲೋಕ್ಯಮಲ್ಲ) ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ. ಇದು ಸುಮಾರು ೨೩೦ ಎಕರೆ ವಿಸ್ತೀರ್ಣ ಹೊಂದಿದೆ. ಅಂಗಳವು ಕಪ್ಪು ಎರೆ ಮಣ್ಣಿನಿಂದ ಕೂಡಿದೆ. ಕೆರೆಯ ಪಶ್ಚಿಮಭಾಗದಲ್ಲಿ ಬೃಹದಾಕಾರದ ಕಪ್ಪು ಮಣ್ಣಿನ ಏರಿ ನಿರ್ಮಾಣಮಾಡಿ ಅದರ ಮಧ್ಯಭಾಗದಲ್ಲಿ ತೂಬನ್ನು ರಚನೆ ಮಾಡಿದ್ದಾರೆ.

ಕೆರೆಯು ತೂಬಿನ ಮಟ್ಟಕ್ಕಿಂತಲೂ ಎತ್ತರದ ಪ್ರದೇಶದಲ್ಲಿದೆ. ಈ ನೀರನ್ನು ಮೊದಲು ಕುಡಿಯಲು ಬಳಕೆ ಮಾಡುತ್ತಿದ್ದರು. ನಂತರದಲ್ಲಿ ಬೋರ್‌ವೆಲ್‌ನ ಸೌಲಭ್ಯ ದೊರೆತ ಬಳಿಕ ಕೆರೆಯನ್ನು ನಿರ್ಲಕ್ಷಿಸಲಾಗಿದೆ.

ಇದು ಯಾವುದೇ ತಾಂತ್ರಿಕ ರಚನೆ ಹೊಂದಿಲ್ಲ. ಆದರೆ ಕಪ್ಪು ಮಣ್ಣಿನ ವಿಶಾಲವಾದ ಕೆರೆಯಾಗಿದೆ. ಆದರೆ ಇಂದು ಕೆರೆಯ ಬಹುಭಾಗವನ್ನು ಸ್ಥಳೀಯರು ಆಕ್ರಮಿಸಿ, ಇದರ ಅಂಗಳದಲ್ಲಿ ತಿಪ್ಪೆಗುಂಡೆಗಳನ್ನು, ದನಕರುಗಳಿಗೆ ಬಣಮೆ, ದಡ್ಡಿಗಳನ್ನು ಹಾಕಿದ್ದಾರೆ. ಇದೇ ರೀತಿ ಮುಂದುವರೆದರೆ ಇಡೀ ಕೆರೆಯನ್ನು ನುಂಗುವ ಹಂತದಲ್ಲಿದ್ದಾರೆ. ಅದನ್ನು

ಸರ್ಕಾರ ತುರ್ತಾಗಿ ಸಂರಕ್ಷಿಸಬೇಕಾಗಿದೆ.

ಮನ್ನಿಕಟ್ಟಿ ಕೆರೆ :

ಬಾಗಲಕೋಟ ಪಟ್ಟಣದಿಂದ ಸುಮಾರು ೧೧ ಕಿ.ಮೀ. ದೂರದಲ್ಲಿರುವ ಇದರ ಪೂರ್ವದಿಕ್ಕಿಗೆ ಹೊಂದಿರುವ ಮನ್ನಿಕಟ್ಟಿ ಎಂಬ ಗ್ರಾಮವಿದೆ. ಗ್ರಾಮದ ದಕ್ಷಿಣ ಭಾಗದಲ್ಲಿ ಹತ್ತು ಎಕರೆ ವಿಸ್ತೀರ್ಣದಲ್ಲಿ ವಿಶಾಲವಾದ ಸುಂದರ ಕೆರೆ ಇದೆ. ಕೆರೆಯ ಅಂಗಳ ಕೆಂಪು ಮಣ್ಣಿನಿಂದ ಆವೃತ್ತವಾಗಿದೆ. ಇದರ ಪೂರ್ವ, ದಕ್ಷಿಣ ಹಾಗೂ ಉತ್ತರಕ್ಕೆ ಎತ್ತರವಾದ ತಡೆಗೋಡೆಗಳು ಇವೆ. ಇದಕ್ಕೆ ವಿಶಾಲವಾದ ಪಶ್ಚಿಮ ಗುಡ್ಡಗಳು ಇದ್ದು ಅವುಗಳಿಂದ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ. ಇತ್ತೀಚೆಗೆ ಈ ಭಾಗದ ಶಾಸಕರ ಅನುದಾನದಲ್ಲಿ ಕೆರೆ ಅನುದಾನದಲ್ಲಿ ತಂತಿ ಬೇಲಿ ಮತ್ತು ಒಳಗಡೆ ಊರಿಗೆ ಕಲ್ಲುಗಳನ್ನು ಜೋಡಿಸಿದ್ದಾರೆ. ಕೆರೆಯ ಅಂಗಳದಲ್ಲಿ ಇತ್ತೀಚೆಗೆ ಮನೆಗಳನ್ನು ಕಟ್ಟಲು ಅವಕಾಶ ನೀಡಿದಕ್ಕಾಗಿ ನೂರಾರು ಮನೆಗಳು ನಿರ್ಮಾಣಗೊಂಡಿವೆ. ಸರ್ಕಾರ ಆ ಮನೆಗಳನ್ನು ತೆರವುಗೊಳಿಸಿ ಕೆರೆ ಅಂಗಳವನ್ನು ಸಂರಕ್ಷಿಸಬೇಕಿದೆ.

ಗ್ರಾಮದ ದಕ್ಷಿಣ ಭಾಗದಲ್ಲಿ ಬರುವ ಕೆರೆಯ ಅಂಗಳದಲ್ಲಿ ಹಲವಾರು ಪೂಜಾ ಕಾರ್ಯಗಳು ವರ್ಷದುದ್ದಕ್ಕೂ ನಡೆಯುತ್ತಾ ಬರುತ್ತಿವೆ. ಇದರಲ್ಲಿ ಪ್ರಮುಖವಾದದು 'ಕಿಚಡಿ' ಹಬ್ಬ. ಗ್ರಾಮದ ಎಲ್ಲ ಜನತೆ ತಮ್ಮ ತಮ್ಮ ಮನೆಗಳಿಂದ ಜೋಳದ ಕಿಚಡಿಯನ್ನು ತಂದು ಕೆರೆಯ ಪಕ್ಕದಲ್ಲಿರುವ ಮಂಟಪದಲ್ಲಿ ಹಾಕಿ ಪೂಜೆ-ಪುನಸ್ಕಾರ ಮಾಡಿದ ನಂತರದಲ್ಲಿ ಎಲ್ಲರೂ ಕೂಡಿ ಜಾತಿ-ಮತ-ಪಂಥ ಭೇದ-ಭಾವ ಮಾಡದೇ ಒಟ್ಟಿಗೆ ಕೂತು ಪ್ರಸಾದ ಸೇವಿಸುತ್ತಾರೆ. ಇದು ಆ ಕೆರೆಯ ವಿಶಿಷ್ಟ ಆಚರಣೆಯಾಗಿದೆ.

ಬೆನಕಟ್ಟಿ ಕೆರೆ :

ಬಾಗಲಕೋಟ ನಗರದಿಂದ ೧೩ ಕಿ.ಮೀ. ಅಂತರದಲ್ಲಿರುವ ಮತ್ತು ಕೂಡಲ ಸಂಗಮ ಹಾಗೂ ಆಲಮಟ್ಟಿ ಡ್ಯಾಂ ಮಾರ್ಗಮಧ್ಯದಲ್ಲಿ ಬರುವ ಬೆನಕಟ್ಟಿಯು ತನ್ನದೇಯಾದ ಚರಿತ್ರೆಯೊಂದಿಗೆ ಬೆಳೆದು ಬಂದಿದೆ. ಈ ಗ್ರಾಮದ ಸುತ್ತಲೂ ಇರುವ ಪ್ರದೇಶಗಳಲ್ಲಿ ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರಿಂದ ವಿಜಯನಗರದ ಅರಸರ ಕಾಲದವರೆಗೆ ಅವಶೇಷಗಳು ದೊರೆಯುತ್ತವೆ. ಹೊಯ್ಸಳರ ಸಮಕಾಲೀನ ಹಲವಾರು ಅವಶೇಷಗಳು ಮತ್ತು ಇದರ ಜೊತೆಗೆ ಕಂಬದಾಸರು ಇಲ್ಲಿ ಆಳಿದ ನಾಡು. ಅವರ ಸಮಾಧಿಯು ಕೂಡ ಊರಿನ "ಶ್ರೀ ಕನಕಪ್ಪನ" ದೇವಸ್ಥಾನಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿದೆ. ಅಲ್ಲದೇ ಇವರ ಕಾಲದ ತಾಳೆಗರೆಗಳು ಕೂಡ ದಾಸರ ಮನೆಯಲ್ಲಿ ಇದ್ದವು ಎಂದು ಗ್ರಾಮದ ಹಿರಿಯರು ಹೇಳುತ್ತಾರೆ. ಹಾಗಾಗಿ ಇದರ ಚರಿತ್ರೆಯು ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನದಿಂದ ತಿಳಿದು ಬರುತ್ತದೆ. ಶೈಕ್ಷಣಿಕ, ಧಾರ್ಮಿಕ ಕಲೆ

ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇಯಾದ ಹೆಜ್ಜೆಗುರುತನ್ನು ಇಟ್ಟಿರುವ ಬಾಗಲಕೋಟ ಜಿಲ್ಲೆಯ ಬೆನಕಟ್ಟಿ ಕೃಷಿ ಪ್ರಧಾನ ಮತ್ತು ಸುಸಂಸ್ಕೃತ ಗ್ರಾಮವಾಗಿದೆ.

'ಬೆನಕಟ್ಟಿ' ಎಂಬ ಗ್ರಾಮದ ಹೆಸರಿನ ಹಿನ್ನೆಲೆ ನೋಡಿದಾಗ ಅದು ಊರಿನಲ್ಲಿರುವ ಕೆರೆಯಲ್ಲಿ ಬೆನಕದ ಬಿಳಿ ಕಲ್ಲುಗಳು ಅಧಿಕ ಪ್ರಮಾಣದಲ್ಲಿ ದೊರೆಯುವದರಿಂದ ಇದಕ್ಕೆ ಬೆನಕದ+ಕಟ್ಟಿ ನಂತರದಲ್ಲಿ ಬೆನಕಟ್ಟಿ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾರೆ. ಇನ್ನೊಂದು ಸಿದ್ಧಾಂತದ ಪ್ರಕಾರ ಊರ ಮುಂದೆ ಸುಮಾರು ನಾಲ್ಕು ಕಿ.ಮೀ. ಉದ್ದಲಾಗಿ ಹರಡಿರುವ ಕಲ್ಲು ಸಾಲು ಜಮೀನು ಇರುವುದರಿಂದ ಇದಕ್ಕೆ ಬೆನಕಟ್ಟಿ ಎಂದು ಹೆಸರು ಬಂದಿದೆ.

ಈ ಗ್ರಾಮದ ಆರಾಧ್ಯ ದೇವತೆಯಾದ ಶ್ರೀ ಹೇಮರೆಡ್ಡಿ ಮಲ್ಲಮಾಂಬೆ ಹಾಗೂ ಮಹಾಯೋಗಿ ವೇಮನ ದೇವಾಲಯಗಳ ದಕ್ಷಿಣ ಭಾಗದಲ್ಲಿ ಆರು ಎಕರೆ ವಿಸ್ತಾರದ ಕೆರೆಯಿದೆ. ಇದು ನೀರು ಕುಡಿಯಲು ಮತ್ತು ಪೂಜಾ ಕಾರ್ಯಕ್ಕಾಗಿ ಬಳಕೆಯಾಗುತ್ತದೆ. ಮೊದಲು ಇದೇ ಕೆರೆಯ ನೀರನ್ನು ಕುಡಿಯುತ್ತಿದ್ದರು. ಈಗ ನಿಲ್ಲಿಸಿದ್ದಾರೆ. ಕೆರೆಯ ದಂಡೆಯಲ್ಲಿ ಊರಿನ ಹಲವಾರು ಸಾಂಸ್ಕೃತಿಕ ಆಚರಣೆಗಳು ನಡೆಯುತ್ತವೆ. ಕೆರೆಯ ದಕ್ಷಿಣ ಏರಿಯು ಅಖಂಡ ಕಪ್ಪು ಕಲ್ಲಿನಿಂದ ಆವೃತವಾಗಿದೆ. ಅದೇ ಉತ್ತರ ಏರಿಯನ್ನು ಕಲ್ಲಿನಿಂದ ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಪಶ್ಚಿಮದಲ್ಲಿರುವ ಸುಮಾರು ೨ ಕಿ.ಮೀ. ಅಗಲವಿರುವ ಗೋಮಾಳದಿಂದ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ.

ಗ್ರಾಮದ ಪೂರ್ವ ಭಾಗದಲ್ಲಿ ಅಂದರೆ ಕಮತಗಿ ರಸ್ತೆ ಮಾರ್ಗ ಮಧ್ಯದಲ್ಲಿ ಇನ್ನೊಂದು ಕೆರೆಯಿದೆ. ಅದಕ್ಕೆ "ಬೆಂಚಿ" ಎಂದು ಕರೆಯುವರು. ಇದಕ್ಕೆ ಬೆನಕಟ್ಟಿಯ ಪೂರ್ವ ಗುಡ್ಡದ ನೀರು ಹರಿದು ಬಂದು ಶೇಖರಣೆಯಾಗುತ್ತದೆ. ಪಶು, ಪಕ್ಷಿ, ಪ್ರಾಣಿಗಳಿಗಾಗಿ ಮೀಸಲಿಟ್ಟ ಕೆರೆಯಾಗಿದೆ. ಈ ಪ್ರದೇಶದಲ್ಲಿ ಮಳೆಯ ಕೊರತೆಯಾದಾಗ ಇದರ ನೀರನ್ನು ಪೈಪುಗಳ ಮೂಲಕ ಹೊಲಗಳಿಗೆ ಬಿಡುತ್ತಾರೆ. ಒಟ್ಟಾರೆಯಾಗಿ ಎರಡು ಕೆರೆಗಳಿಗೆ ಆಶ್ರಯ ಕೊಟ್ಟು ಅವುಗಳನ್ನು ಉಳಿಸಿ ರಕ್ಷಿಸಿಕೊಂಡು ಬಂದ ಕೀರ್ತಿ ಬೆನಕಟ್ಟಿ ಪ್ರದೇಶಕ್ಕೆ ಸಲ್ಲುತ್ತದೆ.

ಗುಡಗುಂಟಿ ಕೆರೆ :

ಬಾಗಲಕೋಟ ತಾಲೂಕಿನ ಶಿರೂರು ಗ್ರಾಮದ ವ್ಯಾಪ್ತಿಯಲ್ಲಿ ಬರುವ ಅಂದರೆ ಬಾದಾಮಿ-ಆಲಮಟ್ಟಿ ಒಳಮಾರ್ಗದಲ್ಲಿ ಬರುವ ೨೩ ಎಕರೆ ಪ್ರದೇಶದಲ್ಲಿ ವಿಸ್ತರಿಸಿದೆ. ಶಿರೂರು ಹಾಗೂ ಗುಳೇದಗುಡ್ಡದ ಎಡಭಾಗದ ನೀರು ಬಂದು ಶೇಖರವಾಗುತ್ತದೆ. ಇದು ಕಪ್ಪು ಎರೆ ಮತ್ತು ಕೆಂಪು ಮಿಶ್ರಿತ ಭೂಭಾಗ ಹೊಂದಿದ್ದು, ಇದಕ್ಕೆ ಯಾವುದೇ ರೀತಿಯ ತಾಂತ್ರಿಕವಾದ ಕಟ್ಟಡ ಇರುವುದಿಲ್ಲ. ಸಹಜವಾದ ತಗ್ಗು ಪ್ರದೇಶದಲ್ಲಿ ನೀರು ನಿಲ್ಲುತ್ತದೆ. ಕೆರೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣ ಮಾಡಿದ ಹಳೆಯ

ದೇವಾಲಯವಿದೆ.

ಈ ಕೆರೆಯ ನೀರನ್ನು ಕೇವಲ ದನಕರುಗಳು-ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ಬಳಸುತ್ತಾರೆ. ಕೆರೆ ತುಂಬಿದಾಗ ಸುತ್ತಲೂ ಇರುವ ಸುಮಾರು ೧೦ ಕಿ.ಮೀ. ಆಳದವರೆಗೆ ಇದರ ಅಂತರಜಲ ವೃದ್ಧಿಯಾಗುತ್ತದೆ. ಶಿರೂರು ಶಾಸನದಲ್ಲಿ ಉಲ್ಲೇಖಗೊಂಡ ಕೆರೆ ಇದಾಗಿದೆ ಹಾಗಾಗಿ ಐತಿಹಾಸಿಕ ಹಿನ್ನಲೆ ಹೊಂದಿದೆ. ಈ ಕೆರೆಯನ್ನು ಉಳಿಸಿ ಅದರ ಪರಂಪರೆಯನ್ನು ಮುಂದುವರೆಸಬೇಕಾಗಿದೆ. ಸುಮಾರು ವರ್ಷಗಳಿಂದ ತುಂಬಿದ ಹೂಳನ್ನು ತೆಗೆದು ಅದರ ದುರಸ್ತಿಕಾರ್ಯವನ್ನು ಮಾಡಬೇಕಿದೆ.

ಕೆರೆಯ ಮಧ್ಯದಲ್ಲಿ ಸಣ್ಣ ಪ್ರಾಚೀನ ಕಾಲದ ದೇವಾಲಯವಿದ್ದು, ಒಳಗಡೆ ಲಿಂಗವಿದ್ದು, ಇದರ ಆಧಾರದ ಮೇಲೆ ಪ್ರಾಚೀನ ಕೆರೆಯಾಗಿದೆ ಎಂಬುದು ವಿಧಿತವಾಗುತ್ತದೆ. ಶಿರೂರಿನ ಧರೆಯಲ್ಲಿ ಏಳು ಕೆರೆಗಳನ್ನು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣ ಮಾಡಲಾಗಿದ್ದು, ಈ ಕೆರೆಯು ತುಂಬಿದಾಗ ಸುತ್ತಲೂ ೨೦ ಕಿ.ಮೀ. ಅಂತರ ಜಲಮಟ್ಟ ಹೆಚ್ಚಳವಾಗುತ್ತದೆ ಎಂದು ಗ್ರಾಮದ ಹಿರಿಯರು ಹೇಳುತ್ತಾರೆ.

ಈ ಕೆರೆಗೆ ಶಿರೂರ, ಕಮತಗಿ, ಗುಳೇದಗುಡ್ಡದ ವಿಶಾಲವಾದ ಬೆಟ್ಟಗಳ ಉತ್ತರಭಾಗದ ನೀರು ಸೇರುತ್ತದೆ. ಆದರೆ ಇತ್ತೀಚೆಗೆ ಕೃಷಿ, ಗಣಿಗಾರಿಕೆ, ಮನೆ ನಿರ್ಮಾಣಕ್ಕಾಗಿ ಈ ಬೆಟ್ಟಗಳನ್ನು ಉಪಯೋಗಿಸುವ ಮೂಲಕ ನೀರು ಬರುವ ಜಲಮೂಲಗಳಿಗೆ ಅಡೆ-ತಡೆಯುಂಟಾಗಿ ನೀರು ಬರುವುದು ಕಡಿಮೆಯಾಗಿದೆ. ಹಾಗಾಗಿ ಇಂದು ಕೆರೆಯು ಸಂಪೂರ್ಣವಾಗಿ ತುಂಬುವುದು ವಿರಳವಾಗಿದೆ. ಅಲ್ಲದೇ ಕೆರೆಯ ಅಂಗಳದ ಹೂಳನ್ನು ಅಗೆದು ನೀರು ನಿಲ್ಲುವಂತೆ ಮಾಡುವ ಮೂಲಕ ಇದರ ಗತವೈಭವವನ್ನು ಮರಳಿ ತರಬೇಕಾಗಿದೆ.

ಬಿಲ್-ಕೆರೂರು ಕೆರೆ :

ಬಾಗಲಕೋಟೆಯಿಂದ ಸುಮಾರು ೨೫ ಕಿ.ಮೀ. ದೂರದಲ್ಲಿರುವ ಬಿಲ್ ಕೆರೂರು ಐತಿಹಾಸಿಕ ಚರಿತ್ರೆ ಹೊಂದಿದ ಗ್ರಾಮವಾಗಿದೆ. ಇಲ್ಲಿ ಕದಂಬರ ಕಾಲಕ್ಕಿಂತಲೂ ಪ್ರಾಚೀನವಾದ ಅವಶೇಷಗಳು ಇವತ್ತಿಗೂ ದೊರೆಯುತ್ತವೆ. ಪ್ರಮುಖವಾಗಿ ಬುದ್ಧನ ಅವಶೇಷಗಳು ಇಲ್ಲಿ ಕಂಡು ಬರುತ್ತವೆ. ರಾಮಾಯಣದ ಕಥೆಯು ಈ ಗ್ರಾಮಕ್ಕೆ ಅಂಟಿಕೊಂಡಿದ್ದು, ರಾಮಾಯಣದ ರಾಮನು ವನವಾಸದಲ್ಲಿ ಸೀತಾಮಾತೆಗೆ ನೀರಿನ ದಾಹ ಉಂಟಾಗುತ್ತದೆ. ಎಲ್ಲಿಯೂ ನೀರು ಸಿಗುವುದಿಲ್ಲ. ಆಗ ರಾಮನು ತನ್ನ ಬಿಲ್ಲನ್ನು ಬಿಟ್ಟು ನೀರು ತರಿಸುತ್ತಾನೆ. ಅಲ್ಲಿ ಒಂದು ನೀರಿನ ತೊಟ್ಟಿ ರಚನೆಯಾಗುತ್ತದೆ. ಆದ್ದರಿಂದ ಈ ಗ್ರಾಮಕ್ಕೆ ಬಿಲ್‌ಕೆರೂರು ಎಂದು ಹೆಸರು ಬಂದಿದ್ದು ಜನರ ಆಡು ಮಾತಿನಿಂದ ಬಿಲ್‌ಕೇರಿ ಎಂದು ಬಂದಿದೆ.

ಸೀತಿಮನೆ ಎಂಬ ಸ್ಥಳದಲ್ಲಿ ವಾಸ ಮಾಡಿದ್ದಕ್ಕಾಗಿ ಅವಳ ಹೆಸರಿನಲ್ಲಿ ಒಂದು

ಗುಹೆ, ಅದರ ಅಕ್ಕ-ಪಕ್ಕದಲ್ಲಿ ಸೀತಾಮಾತೆಯ ದೊಡ್ಡ ಪ್ರಮಾಣದ ಪಾದುಕೆಗಳು ಹಾಗೂ ಲವಕುಶರ ಹೊಂಡಗಳು ಮತ್ತು ಇತರ ಪ್ರಾಚೀನ ವಿಷಯಗಳು ಕಂಡುಬರುತ್ತವೆ.

ಹೊನ್ನಾಕಟ್ಟಿ ಕೆರೆ :

ಬಾಗಲಕೋಟೆಯ ಪೂರ್ವಭಾಗದಲ್ಲಿ ೬ ಕಿ.ಮೀ. ದೂರದಲ್ಲಿರುವ ಹೊನ್ನಾಕಟ್ಟಿಯು ಹಲವಾರು ಸಾಮ್ರಾಜ್ಯಗಳ ಆಡಳಿತಕ್ಕೆ ಒಳಪಟ್ಟ ಒಂದು ಐತಿಹಾಸಿಕ ಪ್ರದೇಶವಾಗಿದೆ. ಈವತ್ತಿಗೂ ಹಲವಾರು ಪ್ರಾಚೀನ ಕಾಲದ ಅವಶೇಷಗಳು ಇಲ್ಲಿ ಕಂಡು ಬರುತ್ತವೆ. ಬಿಜಾಪುರ ಸುಲ್ತಾನರ ಆಡಳಿತದ ನಂತರ ಅಧಿಕಾರ ನಡೆಸಿರುವ ಸಿಂಧ ಮನೆತನದವರ ಆಡಳಿತದ ಭಾಗವಾಗಿದ್ದ ಈ ಗ್ರಾಮ ನಂತರದಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿರುವುದು ಹಲವಾರು ಶಾಸನಗಳಿಂದ ತಿಳಿದು ಬರುತ್ತದೆ.

ಊರಿನ ಪೂರ್ವಭಾಗದಲ್ಲಿರುವ ಕೆರೆಯನ್ನು ಬ್ರಿಟಿಷರ ಆಡಳಿತಾವಧಿಯಲ್ಲಿ ನಿರ್ಮಾಣ ಮಾಡಿದ್ದಾರೆ. ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಬ್ರಿಟಿಷರು ಈ ಕೆರೆಯನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಒಂದು ಶಾಸನದ ಪ್ರಕಾರ ಪಡವಾಡಿಗೆಯ ರಾಯಪ್ಪನ ಮೊಮ್ಮಗ ಗೋಪಾಲಪ್ಪನ ಬಾಗಡಿಕೋಟೆ ಪೂರ್ವದಿಕ್ಕಿಗೆ ಬರುವ ಪೋನಾಯಕನ ಕಟ್ಟೆ ಎಂಬ ಗ್ರಾಮವನ್ನು ಜೀರ್ಣೋದ್ಧಾರ ಮಾಡಿದ. ಆ ಗ್ರಾಮದಲ್ಲಿ ಪಾಳುಬಿದ್ದಿದ್ದ ತಮ್ಮ ಹಿರಿಯರ ಕಾಲದ ಕೆರೆ-ಬಾವಿ, ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ, ಗ್ರಾಮದ ವ್ಯವಸಾಯಕ್ಕೆ ಯೋಗ್ಯಮಾಡಿಸಿದ. ಇದನ್ನು ಗಮನಿಸಿದ ಕಂಪನಿ ಸರ್ಕಾರ ಇವರಿಗೆ ಶಿಲಾಶಾಸನ ಹಾಕಿಸಿತು.[೨೮]

ಈ ಗ್ರಾಮದ ಮುಂದೆ ಬರುವ ಕೆರೆಗಳು ಅದರ ಅಂಗಳವು ಕಪ್ಪು ಮಣ್ಣಿನಿಂದ ಆವೃತ್ತವಾಗಿದ್ದು, ಅದರ ಏರಿಯು ಪೂರ್ವ ಉತ್ತರ ದಕ್ಷಿಣ ಭಾಗಗಳಲ್ಲಿ ಎತ್ತರವಾಗಿವೆ. ಪಶ್ಚಿಮ ಎತ್ತರವಾದ ಗುಡ್ಡದ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ. ಈ ಕೆರೆಯು ೧೦ ಎಕರೆ ವಿಸ್ತಾರಹೊಂದಿದೆ. ತುಂಬಿದಾಗ ಪೂರ್ವದ ಏರಿಯ ತೂಬಿನ ಮೂಲಕ ನೂರಾರು ಎಕರೆಗೆ ನೀರನ್ನು ಒದಗಿಸುತ್ತದೆ. ಮೊದಲು ಈ ಕೆರೆಯ ನೀರನ್ನು ಕುಡಿಯಲು ಬಳಸುತ್ತಿದ್ದರು. ಈಗ ಬೋರ್‌ವೆಲ್ ಸೌಕರ್ಯದಿಂದ ಕುಡಿಯಲು ಬಳಸುತ್ತಿಲ್ಲ. ಈಗ ಕೆರೆಯ ನೀರನ್ನು ದನಕರುಗಳಿಗೆ ಕುಡಿಯಲು ಬಳಸುತ್ತಾರೆ.

ಕೆರೆಯ ಪಶ್ಚಿಮದಲ್ಲಿ ವಿಶಾಲವಾದ ಬೆಟ್ಟಗಳಿಂದ ನೀರು ಹರಿದುಬರುತ್ತದೆ. ಕೆರೆಯ ಪಕ್ಕದಲ್ಲಿ ಮೇಲ್ವರ್ಗದವರು ತಮ್ಮ ಗದ್ದೆಗಳಿಗೆ ನೀರನ್ನು ಹಾಯಿಸಿದ ನಂತರ ಇತರೆ ಸಾಮಾನ್ಯ ಜನತೆಗೆ ನೀರನ್ನು ಬಿಡುತ್ತಾರೆ. ಅಂದರೆ ಹೆಚ್ಚಿನ ಪ್ರಮಾಣದ ನೀರನ್ನು ಗೌಡರು, ಶಾನಭೋಗರು, ಪಾಲೀಕಾರರು, ಶ್ರೀಮಂತರ ಪಾಲಾಗುತ್ತಿದೆ. ಸಾಮಾನ್ಯರಿಗೆ ನೀರು ದೊರೆಯುವುದು ದುಸ್ತರವಾಗಿದೆ. ಇದೇ ನಿಯಮ ಹಿಂದಿನಿಂದಲೂ ಬೆಳೆದು

ಬಂದಿದೆ.

ಬಾದಾಮಿ ತಾಲೂಕಿನ ಕೆರೆಗಳು :

ಕರ್ನಾಟಕದಲ್ಲಿ ವಾಸ್ತು ಮತ್ತು ಶಿಲ್ಪ ಕಲೆಗಳ ಪೈರನ್ನು ಮೊದಲಬಾರಿಗೆ ಅತ್ಯಂತ ಸಮೃದ್ಧವಾಗಿ ಬೆಳೆಯಿಸಿದ ಶ್ರೇಯಸ್ಸು ಬಾದಾಮಿಯಲ್ಲಿ ರಾಜ್ಯಭಾರ ಮಾಡಿದ ಚಾಲುಕ್ಯ ಅರಸರಿಗೆ ಸಲ್ಲುತ್ತದೆ.[೨೯] ಬಾದಾಮಿಯು ರಾಜ್ಯದಲ್ಲೇ ಅತ್ಯಂತ ಪ್ರಾಚೀನ ಸ್ಥಳಗಳಲ್ಲೊಂದಾಗಿದೆ.[೩೦] ಭೌಗೋಳಿಕವಾಗಿ ಎರಡು ಎತ್ತರವಾದ ಬೆಟ್ಟಗಳ ನಡುವೆ ಸುತ್ತುವರೆಯಲ್ಪಟ್ಟಿದೆ. ಈ ನಗರ ಪ್ರಾಚೀನ ಕಾಲದಿಂದಲೂ ನೈಸರ್ಗಿಕ ಸಂರಕ್ಷಣೆಗೆ ಒಳಪಟ್ಟಿದೆ. ಬಹುಶಃ ಇಂತಹ ಪ್ರದೇಶಗಳೇ ಬಾದಾಮಿ ಚಾಲುಕ್ಯರ ಸಾಮ್ರಾಜ್ಯದ ಸ್ಥಾಪನೆಗೆ ಮೂಲ ಕಾರಣವಿರಬಹುದು ಎಂದು ಅಭಿಪ್ರಾಯಪಡಲಾಗಿದೆ. ಊರಿನ ಪೂರ್ವದಲ್ಲಿ ಬೆಟ್ಟಗಳ ಮಧ್ಯದಲ್ಲಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾದ ಪುಷ್ಕರಣಿ ಇದ್ದು ಸುಂದರ ತಾಣವೆನಿಸಿದೆ. ಈ ಊರಿನ ಸ್ಥಳನಾಮವು ವಾತಾಪಿ. ಈ ಸ್ಥಳ ರಾಜಧಾನಿ ಎಂದು ಹೆಸರು ಪಡೆದಿದ್ದು, ವಾತಾಪಿ ಬಾದಾಮಿ ವಾತಾಪಿ ಇಲ್ವಾಲರೆಂಬ ಇಬ್ಬರು ಅಣ್ಣತಮ್ಮಂದಿರಿದ್ದರು. ಇಲ್ವಾಲನು ಬಂದ ಅತಿಥಿಗಳಿಗೆ ವಾತಾಪಿಯನ್ನು ಕೊಂದು ಉಣಿಸುತ್ತಿದ್ದ ಮತ್ತು ವಾತಾಪಿ ಹೊರಗೆ ಬಾ ಎಂದು ಕರೆಯುತ್ತಿದ್ದನು. ಈ ಶಬ್ದಗಳನ್ನು ಕೇಳಿ ವಾತಾಪಿಯು ಉಂಡವನ ಹೊಟ್ಟೆಯನ್ನು ಬಗೆದು ಹೊರಗೆ ಬರುತ್ತಿದ್ದನು. ಒಮ್ಮೆ ತಿಂದ ಅತಿಥಿಯು ವಾತಾಪಿ ಜೀರ್ಣೋಧವ ಎಂದರಂತೆ ಇದರ ಫಲವಾಗಿ ವಾತಾಪಿಯು ಹೊರಗೆ ಬರದೆ ಜೀರ್ಣವಾಗಿ ಹೋದನಂತೆ ಈ ವಾತಾಪಿ ಇಲ್ವಾಲರೇ ಬಾದಾಮಿ ಮತ್ತು ಐಹೊಳೆ ಗುಡ್ಡಗಳಾಗಿ ಬಿದ್ದಿರುವರೆಂಬ ನಂಬಿಕೆಯು ಈ ಭಾಗದ ಜನರಲ್ಲಿದೆ.

ಬಾದಾಮಿಯು ೭-೮ನೇ ಶತಮಾನಗಳಲ್ಲಿ ಒಂದು ದೊಡ್ಡ ಪಟ್ಟಣವಾಗಿ ೧೪ ವಿದ್ಯೆಗಳಲ್ಲಿ ಪಾರಂಗತರಾದ ಸಾವಿರಾರು ಬ್ರಾಹ್ಮಣರಿಂದ ಕೂಡಿದ ಧಾರ್ಮಿಕ ಕೇಂದ್ರವಾಗಿತ್ತೆಂದು ಇಲ್ಲಿಯ ಶಾಸನದಿಂದ ತಿಳಿದು ಬರುತ್ತದೆ. ಭಾರತೀಯ ವಾಸ್ತುವಿಜ್ಞಾನಕ್ಕೆ ವೇಸರ ಶೈಲಿ ಎಂಬ ಹೊಸ ಪ್ರಕಾರವನ್ನು ಆವಿಷ್ಕಾರಗೊಳಿಸಿ ಹೊಸ ಆಯಾಮಗಳನ್ನು ರೂಪಿಸಿದ ಶ್ರೇಯಸ್ಸು ಚಾಲಕ್ಯ ಸೂತ್ರಧಾರಿಗಳಿಗೆ ಸಲ್ಲುತ್ತದೆ.[೩೧] ೬ನೇ ಶತಮಾನದಲ್ಲಿ ಬಾದಾಮಿ ಪ್ರದೇಶವನ್ನು ಕದಂಬರಿಂದ ಗೆದ್ದುಕೊಂಡು ರಾಜ್ಯ ಆಳಿದರು. ಚಾಲುಕ್ಯರು ದಕ್ಷಿಣ ಭಾರತದಲ್ಲಿ ಬಲಿಷ್ಠ ರಾಜರಾದ ಕದಂಬ, ಪಲ್ಲವ, ಗಂಗರನ್ನು ಸೋಲಿಸಿ ವಿಜಯಶಾಲಿಗಳಾದರು. ಈ ಮನೆತನದವರು ಮೂಲತಃ ವೈಷ್ಣವ ಮತಾವಲಂಬಿಗಳು ಸಪ್ತಮಾತೃಕೆಗಳಿಂದ ಬೆಳೆಸಲ್ಪಟ್ಟವರೆಂದೂ ಮತ್ತು ಕಾರ್ತಿಕೇಯ ಕೃಪೆಗೆ ಪಾತ್ರರಾಗಿ ಸಂಪತ್ತು ಗಳಿಸಿದವರೆಂದು ತಿಳಿದು ಬರುತ್ತದೆ.

ಅಗಸ್ತ್ಯತೀರ್ಥ ಕೆರೆ :

ಬಾದಾಮಿಯ ವಿಶ್ವಪ್ರಸಿದ್ಧ ಅಗಸ್ತ್ಯತೀರ್ಥದ ಕೆರೆಯು ಪ್ರಸಿದ್ಧ ಜಲಮೂಲವಾಗಿದೆ.[೩೨] ಇದು ಬದಾಮಿ ಗುಹಾಲಯಗಳ ಎರಡು ವಿಶಾಲವಾದ ಬೆಟ್ಟಗಳ ನಡುವೆ ಸುಮಾರು ೨೨ ಎಕರೆ ವಿಶಾಲವಾದ ಸ್ಥಳವನ್ನು ಹೊಂದಿದೆ. ಬಾದಾಮಿ ಚಾಲುಕ್ಯರು ತಮ್ಮ ಆಡಳಿತದ ಅವಧಿಯಲ್ಲಿ ಈ ಕೆರೆಯನ್ನು ನಿರ್ಮಾಣ ಮಾಡಿದ್ದಾರೆ.

ಇದರ ಬಗ್ಗೆ ಅನೇಕ ದಂತ ಕಥೆಗಳು, ಪೌರಾಣಿಕ ಸಾಹಿತ್ಯ ಕತೆಗಳ ಜೊತೆಗೆ ಉಲ್ಲೇಖವಾಗಿದೆ. ಇದಲ್ಲದೆ ಶಾಸನಗಳಲ್ಲೂ ಕೂಡ ಉಲ್ಲೇಖವಾಗಿವೆ. ಬಾದಾಮಿ ಚಾಲುಕ್ಯರ ನಂತರದಲ್ಲಿ ಬಂದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರ ಸಾಮ್ರಾಜ್ಯ, ಬಿಜಾಪುರ ಆದಿಲ್‌ಶಾಹಿಗಳ ಕಾಲದಿಂದಲೂ ಇದನ್ನು ಪೋಷಣೆ ಮಾಡುತ್ತ ಬಂದಿದ್ದಾರೆ. ಈ ಕೆರೆಯ ತಾಂತ್ರಿಕತೆ ಏರಿ, ತೂಬು ಅದರ ವಿಶಿಷ್ಟ ನಿರ್ಮಾಣವಾಗಿವೆ. ಕೆರೆಯ ಸುತ್ತಲೂ ಕೆಳಗೆ ಇಳಿಯಲು ಮೆಟ್ಟಿಲು ಆಕಾರದ ವ್ಯವಸ್ಥೆ ಇದ್ದು ಕೆರೆಯ ಪೂರ್ವದಲ್ಲಿರುವ ಬೆಟ್ಟದ ನೀರು ಕೆರೆಗೆ ಬರಲು ಮಾರ್ಗವಿದ್ದು, ನೀರು ಕೆರೆಗೆ ಬರುವಾಗ ಮಣ್ಣು ನೀರನ್ನು ತಡೆಗಟ್ಟಿ ಕೆರೆಯಲ್ಲಿ ಸಂಗ್ರಹಿಸುತ್ತದೆ. ಕೆರೆ ಪೂರ್ತಿ ತುಂಬಿದಾಗ ಪಶ್ಚಿಮದ ಕಾಲುವೆಗಳ ಮೂಲಕ ಹರಿದು ಬನಶಂಕರಿದೇವಿ ಮಂದಿರದ ಮುಂದೆ ಹರಿಯುವ ಸರಸ್ವತಿ ಹಳ್ಳಕ್ಕೆ ಸೇರುತ್ತದೆಂದು ಸ್ಥಳೀಯರು ಹೇಳುತ್ತಾರೆ.

ಅಷ್ಟೊಂದು ನೀರಿನ ಮೂಲವನ್ನು ಹೊಂದಿದೆ. ಈ ಕೆರೆಗೆ ವಿಶಾಲವಾದ ಗುಡ್ಡದ ನೀರು ಹರಿದು ಬರುವಾಗ ನಾನಾ ಗಿಡಮೂಲಿಕೆಗಳು, ವಿವಿಧ ಮಣ್ಣುಗಳು, ಗಂಧಕದಂತಹ ವಿಶಿಷ್ಟ ಅಂಶಗಳು ಕೆರೆಯಲ್ಲಿ ಶೇಖರಣೆಯಾಗುತ್ತವೆ. ಹಾಗಾಗಿ ಇಲ್ಲಿ ಸ್ನಾನ ಮಾಡಿದರೆ ಮಾನವನ ಎಲ್ಲ ರೋಗಗಳು ಸರ್ವನಾಶವಾಗುತ್ತವೆಂಬ ನಂಬಿಕೆ ಆದಿ ಕಾಲದಿಂದಲೂ ಈ ಪ್ರದೇಶದಲ್ಲಿ ಬೆಳೆದು ಬಂದಿದೆ. ಹಾಗಾಗಿ ದಿನನಿತ್ಯ ನೂರಾರು ಜನ ತಮ್ಮ ರೋಗಗಳನ್ನು ಕಳೆದುಕೊಳ್ಳಲು ಇಲ್ಲಿಗೆ ಬಂದು ಸ್ನಾನ ಮಾಡಿ ಬರುವರು. ಇದೇ ಅದರ ವೈಶಿಷ್ಟ್ಯವಾಗಿದೆ. ಈ ನಂಬಿಕೆ ಹಿಂದಿರುವ ಪೌರಾಣಿಕ ಹಿನ್ನೆಲೆ ಈ ಕೆಳಗಿನಂತೆ ತಿಳಿದು ಬರುತ್ತದೆ.

ಅಶ್ವತ್ಥಾಮ ತೀರ್ಥ ಮಹಾತ್ಮೆ :

ಲೋಪಾಮುದ್ರೆಯು ಅಗಸ್ತ್ಯ ಮುನಿಯನ್ನು ಕುರಿತು ಈ ತಿಲಕವನದಲ್ಲಿ ಬೇರೆ ಮಹತ್ವದ ತೀರ್ಥಗಳ ಬಗೆಗೆ ಹೇಳಬೇಕೆಂದು ಕೇಳುವಳು. ಆಗ ಅಗಸ್ತ್ಯರು "ಪ್ರಿಯೆ ! ನಿನ್ನದು ಉತ್ತಮ ಪ್ರಶ್ನೆ. ಅಂಥದೊಂದು ತೀರ್ಥವು ಬಾದಾಮಿ ಪರ್ವತದ ಮೇಲ್ಭಾಗದಲ್ಲಿದೆ. ಅದಕ್ಕೆ ಅಶ್ವತ್ಥಾಮ ತೀರ್ಥ" ಎಂದು ಹೆಸರು. ಅದರ ಮಹತ್ವವನ್ನು ಹೇಳುತ್ತೇನೆ ಕೇಳು ಎಂದರು.[೩೩]

ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನು ತೀರ್ಥಯಾತ್ರೆ ಮಾಡುತ್ತ

ಶ್ರೀ ಬನಶಂಕರಿ ಕ್ಷೇತ್ರಕ್ಕೆ ಬಂದನು. ಅಲ್ಲಿಯ ಪರಿದ್ರಾತೀರ್ಥ (ದೊಡ್ಡ ಹೊಂಡ) ಸರಸ್ವತಿ (ಹಳ್ಳ) ತೀರ್ಥದಲ್ಲಿ ಸ್ನಾನ ಮಾಡಿ ಆದಿಶಕ್ತಿಯ ದರ್ಶನ ಪಡೆದನು. ನಂತರ ಬನಶಂಕರಿ ದೇವಿಯನ್ನು ಭಕ್ತಿಯಿಂದ ಪೂಜಿಸಿ ಮಹಾಕೂಟ ಕ್ಷೇತ್ರದ ಕಡೆಗೆ ನಡೆದನು. ಅಲ್ಲಿ ಶಿವಪುಷ್ಕರಣಿ ಇನ್ನೂ ಮುಂತಾದ ತೀರ್ಥಗಳಲ್ಲಿ ಮಿಂದು ಶ್ರೀ ಮಹಾಕೂಟೇಶ್ವರನನ್ನು ಭಕ್ತಿಯಿಂದ ಪೂಜಿಸಿದನು. ನಂತರ ಪರ್ವತದ ಮೇಲ್ಭಾಗಕ್ಕೆ ಬಂದಾಗ ಅಲ್ಲಿಯ ಪ್ರಶಾಂತವಾದ ಸ್ಥಳ ನೋಡಿ ಅತೀವ ಸಂತೋಷ ಭರಿತನಾಗಿ ಅಲ್ಲಿಯೇ ೬ ತಿಂಗಳಕಾಲ ನೀರು ಮತ್ತು ಹಣ್ಣುಗಳನ್ನು ಮಾತ್ರ ಸೇವಿಸಿ ಶ್ರೀಬನಶಂಕರಿಯನ್ನು ಕುರಿತು ಘೋರ ತಪಸ್ಸನ್ನಾಚರಿಸಿದನು. ಅಶ್ವತ್ಥಾಮನ ತಪಸ್ಸಿಗೆ ಮೆಚ್ಚಿ ಬನಶಂಕರಿಯು ಪ್ರತ್ಯಕ್ಷಳಾದಳು. ಎದುರಿಗೆ ನಿಂತ ದೇವಿಯನ್ನು ನೋಡಿ ಅಶ್ವತ್ಥಾಮನು ಭಕ್ತಿ ಭಾವಾವೇಶಗಳಿಂದ "ಮಹಾದೇವಿ ! ಜಗತ್ ಸೃಷ್ಟಿಕರ್ತಳಾದ ನಿರಂಜನ ಸ್ವರೂಪ ಪರಮೇಶ್ವರಿಯೇ ಸರ್ವೇಶ್ವರಿಯೇ, ಶರ್ವಾಣಿಯೆ, ಸಕಲ ಸುರಗುಣ ವಂದಿತಳಾದ ದೇವಿಯೇ ನಿನಗೆ ವಂದನೆಗಳು" ಎಂದು ಸ್ತೋತ್ರ ಮಾಡುತ್ತ ದೇವಿಯ ಪಾದಗಳಲ್ಲಿ ಬಿದ್ದನು. ಆಗ ದೇವಿಯು ಸಂತುಷ್ಟಳಾಗಿ ಪ್ರಸನ್ನವದನದಿಂದ "ವತ್ಸಾ ! ನಿನ್ನ ತಪಸ್ಸಿಗೆ ಮೆಚ್ಚಿದೆ. ನಿನಗೆ ಬೇಕಾದ ವರವನ್ನು ಬೇಡು ಎಂದಳು. ಅಶ್ವತ್ಥಾಮನು ದೇವಿಯ ಮಾತುಗಳನ್ನು ಕೇಳಿ ಎದ್ದು ನಿಂತು ಕೈ ಮುಗಿದು ಬೇಡಿಕೊಂಡನು. ತಾಯಿ ! ಜಗಜ್ಜನನಿ ನಿನ್ನಿಂದ ನಿರ್ಮಿಸಲ್ಪಟ್ಟ ಈ ತೀರ್ಥವು ನನ್ನ ಹೆಸರಿನಿಂದ ಪ್ರಸಿದ್ಧವಾಗಲಿ. ಈ ತೀರ್ಥದಲ್ಲಿ ಸ್ನಾನ ಮಾಡುವವರು ಪಾಪ ಮುಕ್ತರಾಗಲಿ. ಈ ತೀರ್ಥದ ತೀರದಲ್ಲಿ ಲಿಂಗರೂಪದಲ್ಲಿ ನೀನು ನೆಲೆಸಿ ಭಕ್ತರ ಇಷ್ಟಾರ್ಥಗಳನ್ನು ಪೂರೈಸು, ಅಶ್ವತ್ಥಾಮನ ಪ್ರಾರ್ಥನೆಯನ್ನು ಕೇಳಿ ದೇವಿಯು ಅವನ ತಲೆಯ ಮೇಲೆ ಅಭಯ ಹಸ್ತವನ್ನಿಟ್ಟು "ತಥಾಸ್ತು" ಎಂದು ಹೇಳಿ ಅದೃಶ್ಯಳಾದಳು. ನಂತರ ಅಶ್ವತ್ಥಾಮನು ಅಲ್ಲಿಯೇ ಕೆಲ ಕಾಲದವರೆಗೆ ವಾಸವಾಗಿದ್ದು, ತಪ್ಪಸ್ಸನ್ನಾಚರಿಸಹತ್ತಿದನು. ಹೀಗಿರುವಾಗ ಒಂದು ದಿನ ರಾಕ್ಷಸನೊಬ್ಬನು ಅದೇ ಅಶ್ವತ್ಥಾಮ ತೀರ್ಥದಲ್ಲಿ ಸ್ನಾನ ಮಾಡಿ ಪಾಪ ಮುಕ್ತನಾಗಿ ದಿವ್ಯರೂಪ ಧರಿಸಿ ಸ್ವರ್ಗಕ್ಕೆ ಹೋದದ್ದನ್ನು ಅಶ್ವತ್ಥಾಮನು ಪ್ರತ್ಯಕ್ಷ ಕಂಡನು.[೩೪]

ಕಥೆ ಕೇಳುತ್ತಿದ್ದ ಲೋಪಾಮುದ್ರೆಯು ಕುತೂಹಲದಿಂದ, ಮುನಿಶ್ರೇಷ್ಠ ! ಈ ರಾಕ್ಷಸನು ಯಾರು ? ಅವನಿಗೇಕೆ ಈ ಜನ್ಮ ಪ್ರಾಪ್ತವಾಯಿತು ? ಅವನು ದಿವ್ಯರೂಪ ಧರಿಸಲು ಕಾರಣವೇನು ? ಎಂದು ಅಗಸ್ತ್ಯರನ್ನು ಪ್ರಶ್ನಿಸಿದಳು. ಆಗ ಅಗಸ್ತ್ಯರು ಆ ರಾಕ್ಷಸನನ್ನು ಕುರಿತು ಹೇಳುವರು.

ಹಿಂದೆ ಗೌಡ ಎಂಬ ರಾಜ್ಯವನ್ನು ವೀರಭದ್ರ ಎಂಬ ಮಹಾರಾಜನು ಆಳುತ್ತಿದ್ದನು. ಅಲ್ಲಿ ಸಕಲ ವೇದಶಾಸ್ತ್ರ ನಿಪುಣನಾದ ಒಬ್ಬ ಬ್ರಾಹ್ಮಣನಿದ್ದನು. ಆತನು ಯಾವಾಗಲೂ ಜನರನ್ನು ತುಚ್ಛವಾಗಿ ಕಾಣುವುದು, ಹೀಯಾಳಿಸಿ ಮಾತನಾಡುವುದು ಅಥವಾ ಗೊಳ್ಳನೆ

ನಕ್ಕು ಬಿಡುವುದು ಹೀಗೆ ಮಾಡುತ್ತಿದ್ದನು. ಈ ಬ್ರಾಹ್ಮಣನನ್ನು ನೋಡಿ ಒಮ್ಮೆ ನೀತಿಶಾಸ್ತ್ರ ತಿಳಿದ ಮುನಿಗಳು "ಎಲಾ ಗರ್ವಾಂಧನಾದ ಬ್ರಾಹ್ಮಣ ! ನೀನು ಸಕಲ ವೇದಶಾಸ್ತ್ರ ಪಾರಂಗತನೆಂಬ ಅಹಂಕಾರದಿಂದ ನಿಷ್ಕಾರಣವಾಗಿ ಎಲ್ಲರನ್ನೂ ದ್ವೇಷಿಸುತ್ತಿರುವಿ. ನೀನು ಬ್ರಾಹ್ಮಣನಾಗಿರಲು ಯೋಗ್ಯನಲ್ಲ. ಆದ ಕಾರಣ ನೀನು ನೀರಿಲ್ಲದ ಪ್ರದೇಶದಲ್ಲಿ ಬ್ರಹ್ಮರಾಕ್ಷಸನಾಗಿ ಜನ್ಮತಾಳು" ಎಂದು ಶಾಪಕೊಟ್ಟರು. ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಮುನಿಗಳ ಶಾಪವನ್ನು ಕೇಳಿದ ಬ್ರಾಹ್ಮಣನು ಪಶ್ಚಾತ್ತಾಪದಿಂದ ದುಃಖಿತನಾಗಿ ಈ ಶಾಪದಿಂದ ಮುಕ್ತಿ ನೀಡಿ ನನ್ನನ್ನು ಅನುಗ್ರಹಿಸಬೇಕೆಂದು ಪರಿಪರಿಯಾಗಿ ಬೇಡಿಕೊಂಡನು. ಆಗ ಮುನಿಗಳಿಗೆ ಕರುಣೆ ಹುಟ್ಟಿ "ನಮ್ಮ ಶಾಪ ಎಂದೂ ಸುಳ್ಳಾಗಲಾರದು. ನೀನು ಬ್ರಹ್ಮರಾಕ್ಷಸನಾಗಿ ಜನ್ಮತಾಳಲೇ ಬೇಕು. ಅನೇಕ ಅರಣ್ಯ ಪರ್ವತಗಳಲ್ಲಿ ಸಂಚರಿಸುತ್ತಾ ವಾತಾಪಿ (ಬಾದಾಮಿ) ಪರ್ವತದ ಹತ್ತಿರವಿರುವ ತಿಲಕಾರಣ್ಯಕ್ಕೆ ಹೋಗು. ಅಲ್ಲಿ "ಅಶ್ವತ್ಥಾಮ ತೀರ್ಥ"ವೆಂಬ ಹೆಸರಿನ ತೀರ್ಥವಿದೆ. ಅದರ ದಡದಲ್ಲಿ ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನು ತಪಸ್ಸು ಮಾಡುತ್ತ ಕುಳಿತಿರುತ್ತಾನೆ. ನೀನು ಅವನಿಗೆ ತೊಂದರೆ ಕೊಡು. ಆಗ ಅವನು ತನ್ನ ಕಮಂಡಲದಲ್ಲಿಯ ಜಲವನ್ನು ನಿನ್ನ ಮೇಲೆ ಪ್ರೋಕ್ಷಿಸಲು (ಸಿಂಪಡಿಸಲು) ಆ ಪವಿತ್ರವಾದ ಜಲ ಸಂಪರ್ಕದಿಂದ ನೀನು ಈ ನೀಚ ಜನ್ಮದಿಂದ ಮುಕ್ತನಾಗುವಿ ಅಲ್ಲಿಯವರೆಗೆ ನಿನಗೆ ರಾಕ್ಷಸ ಜನ್ಮ ತಪ್ಪದು ಎಂದು ಹೇಳುವರು.

ಮುನಿಗಳ ಶಾಪದಂತೆ ಆ ಬ್ರಾಹ್ಮಣನು ಬ್ರಹ್ಮರಾಕ್ಷಸನಾಗಿ ಭೂಮಿಯನ್ನು ಸಂಚರಿಸಹತ್ತಿದನು. ಕೆಲವು ಕಾಲದ ನಂತರ ಅವನು ತಿಲಕಾರಣ್ಯಕ್ಕೆ ಬಂದನು. ಅಲ್ಲಿ ತಪೋಮಗ್ನನಾದ ಅಶ್ವತ್ಥಾಮನನ್ನು ನೋಡಿ ಭಯಂಕರ ರೂಪತಾಳಿ ಕ್ರೂರವಾಗಿ ಚೀರ ಹತ್ತಿದನು. ರಾಕ್ಷಸನ ಚೀರಾಟದಿಂದ ಅಶ್ವತ್ಥಾಮನ ತಪೋ ಭಂಗವಾಯಿತು. ತನ್ನ ತಪ್ಪಸ್ಸಿಗೆ ಭಂಗ ತಂದ ರಾಕ್ಷಸನ ಮೇಲೆ ಕೋಪ ಬಂದರೂ ಅದನ್ನು ಸಹಿಸಿಕೊಂಡು ಅಶ್ವತ್ಥಾಮನು ಶಾಂತವಾದ ಮನಸ್ಸಿನಿಂದ ಯೋಚಿಸಿದನು. "ಈ ದುಷ್ಟನಿಗೆ ಶಾಪಕೊಟ್ಟು ತಪ್ಪಸ್ಸಿನ ಶಕ್ತಿಯನ್ನು ಹಾಳು ಮಾಡಿಕೊಳ್ಳುವುದಕ್ಕಿಂತ ತಪಃ ಪ್ರಭಾವದಿಂದಲೇ ನಿಗ್ರಹಿಸುವುದು ಲೇಸು ಎಂದು ಯೋಚಿಸಿ ತನ್ನ ಶರೀರದಿಂದ ತೇಜಸ್ಸನ್ನು ಉತ್ಪನ್ನ ಮಾಡಿದನು. ಪ್ರಭಾವದಿಂದ ರಾಕ್ಷಸನು ಭಯಭೀತನಾಗಿ ಓಡಿ ಹೋದನು. ಒಂದು ದಿವಸ ಅಶ್ವತ್ಥಾಮನು ಸ್ನಾನ, ತಪ ಅನುಷ್ಠಾನಗಳನ್ನು ಮುಗಿಸಿಕೊಂಡು ಶ್ರೀದೇವಿಯ ಪೂಜೆಗಾಗಿ ಹೊರಟಿದ್ದನು. ಆಗ ಮಾರ್ಗದ ಮಧ್ಯದಲ್ಲಿ ಬ್ರಹ್ಮರಾಕ್ಷಸನು ಭಯಂಕರ ರೂಪತಾಳಿ ಭೀಬತ್ಸವಾಗಿ (ಹೆದರುವಂತೆ) ಗರ್ಜಿಸುತ್ತ ಅಶ್ವತ್ಥಾಮನನ್ನು ನುಂಗಲು ಬಂದನು. ಆಗ ಅಶ್ವತ್ಥಾಮ ತನ್ನ ಜಲ ಕಮಂಡಲದಲ್ಲಿದ್ದ ತೀರ್ಥದ ನೀರನ್ನು ರಾಕ್ಷಸನ ಮೇಲೆ ಪ್ರೋಕ್ಷಿಸಿದನು. ಆಗ

ಜಲ ಸಂಪರ್ಕದಿಂದ ತಕ್ಷಣದಲ್ಲಿಯೇ ರಾಕ್ಷಸನು ರಾಕ್ಷಸ ಜನ್ಮದಿಂದ ಮುಕ್ತನಾಗಿ ದಿವ್ಯ ದೇಹಧರಿಸಿ ಸ್ವರ್ಗಕ್ಕೆ ಹೊರಟು ಹೋದನು. ದೃಶ್ಯವನ್ನು ಕಣ್ಣಾರೆ ಕಂಡು ಅಶ್ವತ್ಥಾಮನಿಗೆ ಆಶ್ಚರ್ಯವೂ ಆನಂದವೂ ಉಂಟಾಯಿತು. ಇದುವೇ ಅಶ್ವತ್ಥಾಮ ತೀರ್ಥದ ಮಹಿಮೆ. ಅತ್ಯಂತ ಪುಣ್ಯಕರವಾದ ತೀರ್ಥದ ಸ್ಮರಣ ಮಾತ್ರದಿಂದಲೇ ಎಲ್ಲ ಪಾಪಗಳು ದೂರವಾಗುವವು ಎಂದು ಅಗಸ್ತ್ಯರು ಲೋಪಾಮುದ್ರೆಗೆ ಹೇಳಿದರು.

ಭೂಸ್ಥಿತಿಯ ಮೇಲಿಂದ ಊರುಗಳಿಗೆ ಹೆಸರು ಕೊಡುವ ಪದ್ಧತಿಯನ್ನು ಇತಿಹಾಸದ ಮೊದಲ ಘಟ್ಟದಲ್ಲಿ ಕಾಣುತ್ತೇವೆ. ಬಾದಾಮಿಯಲ್ಲಿ ಅತ್ಯಂತ ಆಕರ್ಷಕವಾದ, ನೈಸರ್ಗಿಕವಾದ ದೃಶ್ಯವೆಂದರೆ ಮೂರುದಿಕ್ಕುಗಳಲ್ಲಿ ಕಲ್ಲುಬೆಟ್ಟಗಳಿಂದ ಆವೃತವಾದ ಭೂಪ್ರದೇಶ, ಈ ಪ್ರದೇಶದಲ್ಲಿ ಚಾಲುಕ್ಯರು 'ಅಗಸ್ತ್ಯತೀರ್ಥ' ಎಂಬ ಕೆರೆಯನ್ನು ಕಟ್ಟುವ ಮುನ್ನವೇ ಇಲ್ಲಿ ತೊರೆ ಇದ್ದಿತು.

ಕೆಂದೂರು ಕೆರೆ :

ಬಾದಾಮಿ ತಾಲೂಕಿನ ಐತಿಹಾಸಿಕ ಗ್ರಾಮವಾದ ಕೆಂದೂರು, ಬಾದಾಮಿ, ಗುಳೇದಗುಡ್ಡ ಮಾರ್ಗದ ಮಧ್ಯದಲ್ಲಿ ಬರುವ ಗ್ರಾಮವಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಮಹಾಕೂಟ ಸ್ತಂಭ ಶಾಸನದಲ್ಲಿ "ರೆಸುವೊಳಲು ನಾಡಿನ ಕೆಂದೂರು ಮಾನ್ಯದ ಗ್ರಾಮ ಎಂದು ಉಲ್ಲೇಖಿಗೊಂಡಿದೆ". ಚಾಲುಕ್ಯರಂತೆ ಮೊದಲಿನ ಗ್ರಾಮವಾಗಿ ಬೆಳೆದು ಬಂದಿದೆ. ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಹಲವಾರು ಅವಶೇಷಗಳು ಕಂಡುಬರುತ್ತವೆ. ಈ ಊರಿನ ಹೆಸರಿನ ಹಿನ್ನೆಲೆ ನೋಡಿದಾಗ ಅದು ಕೆಂಪುರು, ಕೆಂದೂರು ಎಂದು ಹೆಸರು ಬಂದಿದೆ ಎಂದು ಗ್ರಾಮಸ್ಥರ ಅಭಿಪ್ರಾಯವಾಗಿದೆ. ಇದರ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ಈ ಪ್ರದೇಶ ಜಯಂತಿಪುರದಲ್ಲಿ ನೆಲೆಸಿದ ಸಿಂಧ ತ್ರಿಭುವನಮಲ್ಲ ದೇವನು ರಾಜ್ಯಭಾರ ಮಾಡಿದನೆಂದು ಶಾಸನದಲ್ಲಿ ದೊರೆಯತ್ತದೆ.[೩೫] ಇಲ್ಲಿರುವ ಕೆರೆಯು ೨೫೬ ಎಕರೆ ವಿಸ್ತಾರ ಹೊಂದಿದ್ದು, ಬಹು ವಿಸ್ತಾರವಾಗಿದೆ. ಈ ಕೆರೆಯನ್ನು ಬಹುಮನಿ ದೊರೆಗಳು ಈ ಪ್ರದೇಶವನ್ನು ವಶಪಡಿಸಿಕೊಳ್ಳುವ ಪೂರ್ವದಲ್ಲಿ ಅಂದರೆ ೧೩೪೭ ರ ಮುನ್ನ ಕಟ್ಟಿದ್ದರು ಎನ್ನಲಾಗಿದೆ. ಈ ಕೆರೆ ಸುತ್ತಮುತ್ತ ಇರುವ ಸುಮಾರು ಹಳ್ಳಿಗಳಿಗೆ ಅಂತರಜಲದ ಆಕರವಾಗಿದೆ. ಕೆರೆ ತುಂಬಿದಾಗ ಸುತ್ತಲಿನ ಗ್ರಾಮಗಳ ಬೋರವೆಲ್ ಮತ್ತು ಬಾವಿಗಳ ನೀರು ಅಧಿಕವಾಗುತ್ತದೆ. ಈ ನೀರಿನಂದ ೪೦೦ ಹೆಕ್ಟೇರ್ ಭೂಮಿ ಚಾಲುಕ್ಯರ ಆಡಳಿತದ ಅವಧಿಯಲ್ಲಿ ನಿರ್ಮಾಣಗೊಂಡು ಕಲ್ಯಾಣಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಪೋಷಣೆಗೊಂಡು ಮುಂದೆ ಬಂದ ವಿಜಯನಗರ ಸಾಮ್ರಾಜ್ಯ, ಆದಿಲ್‌ಶಾಹಿ ಕಾಲದಲ್ಲಿ ಬಳಕೆಯಲ್ಲಿದ್ದ ಐತಿಹಾಸಿಕ ಕೆರೆಯಾಗಿದೆ.

ಚಾಲುಕ್ಯರ ದೊರೆಯಾದ ಮಂಗಳೇಶನು ತನ್ನ ಮಲತಾಯಿಯಾದ ದುರ್ಬಲದೇವಿಯ ಅಪ್ಪಣೆ ಪಡೆದು ಕಿಸುವೊಳಲ್, ಕಂಮೂರುಮಾನ್ಯ, ನಂದಿಗ್ರಾಮ, ಆರ್ಯಪುರ ಮೊದಲಾದ ೧೦ ಊರುಗಳನ್ನು ಮುಕುಟೇಶ್ವರನಿಗೆ ದಾನ ನೀಡಿದನೆಂಬುದು ಮಹಾಕೂಟದ ಜಯಸ್ತಂಭದ ಮೇಲಿರುವ ಶಾಸನ ತಿಳಿಸುತ್ತದೆ.[೩೬] ಈ ಕೆರೆಯು ಹಲವಾರು ಸಸ್ಯಗಳ ಬೆಳವಣಿಗೆಗೆ ಕಾರಣವಾಗಿದೆ. ಅಂದರೆ ಕೆರೆಯ ಅಂಗಳದಲ್ಲಿ ಹಲವಾರು ಗಿಡಮೂಲಿಕೆಯ ಔಷಧಿಗಳು ಬೆಳೆಯುತ್ತಿದ್ದು, ಹಲವಾರು ರೋಗಗಳಿಗೆ ಈ ಗಿಡಮೂಲಿಕೆಗಳನ್ನು ಔಷಧಕ್ಕಾಗಿ ಇವತ್ತಿಗೂ ಬಳಕೆ ಮಾಡುತ್ತಾರೆ. ಹಲವಾರು ವನಸ್ಪತಿ ತಜ್ಞರು ಕೆರೆ ಅಂಗಳಕ್ಕೆ ಬಂದು ಗಿಡಮೂಲಿಕೆಗಳನ್ನು, ತಪ್ಪಲಗಳನ್ನು, ಬೇರುಗಳನ್ನು, ಬಳ್ಳಿಗಳನ್ನು ಕತ್ತರಿಸಿಕೊಂಡು ಹೋಗುವರು. ಅದರ ಮೂಲಕ ನೂರಾರು ಜನರಿಗೆ ವನಸ್ಪತಿ ಔಷಧಗಳನ್ನು ಕೊಡುವವರು ಇದ್ದಾರೆ.ನ ಇದು ಈ ಕೆರೆಯ ವೈಶಿಷ್ಟ್ಯವಾಗಿದೆ.

ಕೆರೆಯು ಏರಿ ಕಲ್ಲು ಮಣ್ಣಿನಿಂದ ನಿರ್ಮಾಣಗೊಂಡಿದೆ. ಶಿವಮಂದಿರದ ದಾರಿಯಲ್ಲಿ ತೂಬು ಇದೆ. ಕೆರೆಯು ಇಂದು ಸಂಪೂರ್ಣವಾಗಿ ಹೂಳು ತುಂಬಿಹೋಗಿದೆ. ಅದನ್ನು ಬಹು ಬೇಗನೆ ದುರಸ್ಥಿ ಮಾಡಿದರೆ ಒಳ್ಳೆಯದು. ಈ ಕೆರೆಯನ್ನು ಪ್ರವಾಸಿ ಸ್ಥಾನವನ್ನಾಗಿ ನಿರ್ಮಾಣ ಮಾಡಿದರೆ ಒಳ್ಳೆಯದು. ಇದರಿಂದ ಐತಿಹಾಸಿಕ ಕೆಂಧೂರು ಕೆರೆಯನ್ನು ರಕ್ಷಿಸಿದಂತಾಗುತ್ತದೆ. ಈ ಕೆರೆಯ ಸುತ್ತಮುತ್ತಲೂ ಐತಿಹಾಸಿಕ ಪ್ರವಾಸಿ ತಾಣಗಳಿದ್ದು ಇದನ್ನು ರಕ್ಷಿಸುವುದು ಅತೀ ಮುಖ್ಯವಾಗಿದೆ.

ಕೆಲವಡಿ :

ಬಾದಾಮಿ ತಾಲೂಕಿನ ಉತ್ತರಕ್ಕೆ ೧೭ ಕಿ.ಮೀ ದೂರದಲ್ಲಿದ್ದು, ಗುಳೇದಗುಡ್ಡ ರೋಡ್ ರೈಲು ನಿಲ್ದಾಣದಿಂದ ಸುಮಾರು ಒಂದುವರೆ ಕಿ.ಮೀ. ಅಂತರದಲ್ಲಿ ಬರುವ ಐತಿಹಾಸಿಕ ಗ್ರಾಮವಾದ 'ಕೆಲವಡಿ'ಯು ಗತಕಾಲದಿಂದಲೂ ತನ್ನದೆ ಆದ ಚರಿತ್ರೆಯೊಂದಿಗೆ ಬೆಳೆದು ಬಂದಿದೆ. ೧೩ನೇ ಶತಮಾನದಲ್ಲಿ ಸಿಂಧನಾಯಕ ಊರಾಗಿದ್ದ ಕೆಲವಡಿಯಲ್ಲಿರುವ ರಂಗನಾಥ ದೇವಸ್ಥಾನವು ಜಾಗೃತವೆನಿಸಿತು.[೩೭] ಇಲ್ಲಿರುವ ಶ್ರೀ ರಂಗನಾಥ ದೇವರನ್ನು ಆಂಧ್ರದ ತಿರುಪತಿ (ವೆಂಕಟೇಶನ) ತಿಮ್ಮಪ್ಪನ ಅವತಾರವೆಂದು ಕರೆಯುವರು.

ಈ ದೇವಾಲಯವನ್ನು ಚಾಲುಕ್ಯರ ದೊರೆಯಾದ ಮಂಗಳೇಶನು ಕಟ್ಟಿಸಿದನೆಂದು ಹೇಳಲಾಗುತ್ತದೆ. ಇದರ ಜೊತೆಗೆ ಪ್ರಾಚೀನ ಅವಶೇಷಗಳು ದೊರೆಯುತ್ತವೆ. ದೇವಾಲಯದಲ್ಲಿರುವ ಒಂದು ಶಿಲಾಶಾಸನದ ಪ್ರಕಾರ ಕೆಲವಡಿಯ ಪ್ರದೇಶವು ಸಿಂಧದ ನಾಯಕನ ಆಳ್ವಿಕೆಯಲ್ಲಿ (೧೨೧೦-೧೨೮೦) ಕೆಲವಡಿಯು ೨೦೦೦ ಕೇಂದ್ರ ಸ್ಥಳವಾಗಿತ್ತೆಂದು ತಿಳಿದು ಬರುತ್ತದೆ.[೩೮] ಹಲವಾರು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು ಬೆಳೆದು ಬಂದಿದೆ.

ಈ ಗ್ರಾಮದ ಹೆಸರಿನ ಹಿನ್ನೆಲೆ ನೋಡಿದಾಗ ಅದು ಬಹು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ವಿಷ್ಣುವಿನ ಅವತಾರವಾದ ತಿರುಪತಿ ತಿಮ್ಮಪ್ಪನು ಹಲವು ಅಡಿಗಳನ್ನು ಇಡುವುದರ ಮೂಲಕ ಇಲ್ಲಿಗೆ ಬಂದು ತನ್ನ ಭಕ್ತರಿಗೂ ದರ್ಶನ ನೀಡಿದನೆಂದು ಹೇಳಲಾಗುತ್ತದೆ. ಹಾಗಾಗಿ ಇದಕ್ಕೆ ಹಲವುಅಡಿ, ಕೆಳವಡಿ ಕಾಲಾಂತರದಲ್ಲಿ ಕೆಲವಡಿ ಎಂದು ಹೆಸರು ಬಂದಿದೆ ಎಂದು ಸ್ಥಳೀಯರು ಹೇಳುತ್ತಾರೆ. ಇನ್ನೊಂದು ಸಿದ್ಧಾಂತದ ಪ್ರಕಾರವಾಗಿ ಗ್ರಾಮದಲ್ಲಿದ್ದ ವಯೋವೃದ್ಧರಿಗೆ ಮತ್ತು ಕಾಲು ಇಲ್ಲದವರಿಗೆ ಒಬ್ಬ ದಾಸಯ್ಯ ಅಜ್ಜನಿಗೆ ತಮ್ಮ ಭಕ್ತಿವಿಚಾರವನ್ನು ಅವರ ಮುಂದೆ ಹೇಳಿ ನಮ್ಮನ್ನು ತಿರುಪತಿ ತಿಮ್ಮಪ್ಪನ ದರುಶನಕ್ಕೆ ಕರೆದುಕೊಂಡು ಹೋಗು ಎಂದು ಹೇಳುತ್ತಾರೆ. ಆಗ ಆ ದಾಸಯ್ಯ ಇವರ ಭಕ್ತಿಗೆ ಮೆಚ್ಚಿಕೊಂಡು " ನೀವು ಇಲ್ಲಿಯೇ ಇರುವ ಅರಳಿ ಗಿಡದ ಕೆಳಗಡೆ ಇರುವ ನಾಗರ ಹಾವಿನ ಹುತ್ತದಲ್ಲಿ ಇರುವ ಲಿಂಗವನ್ನು ಪೂಜೆ ಮಾಡಿರೆಂದು ಹೇಳುತ್ತಾನೆ. ಆಗ ಅವರೆಲ್ಲರೂ ಅದೇ ರೀತಿ ಮಾಡಿದಾಗ ಅವರಿಗೆ ತಿರುಪತಿ ತಿಮ್ಮಪ್ಪ ದರ್ಶನ ನೀಡಿದನೆಂದು ಹೇಳುತ್ತಾರೆ. ಆ ಹುತ್ತದ ಅಡಿಯಲ್ಲಿ ವಿಷ್ಣುವಿನ ಅವತಾರವಾದ ರಂಗನಾಥ ಮಂದಿರ ಕಟ್ಟಿ ಆರಾಧನೆ ಮಾಡುತ್ತಿದ್ದಾರೆ. ಹಾಗಾಗಿ ಈ ಪ್ರದೇಶಕ್ಕೆ 'ಕೆಲವಡಿ' ಎಂಬ ಹೆಸರು ಬಂದಿದೆ ಎಂದು ಹೇಳುತ್ತಾರೆ.

ಊರು ಪಶ್ಚಿಮದಲ್ಲಿರುವ ಕೆರೆಯು ೪೨ ಎಕರೆ ಭೂಮಿ ಹೊಂದಿದ ವಿಶಾಲವಾದ ಕೆರೆಯಾಗಿದೆ. ಇದರ ಅಂಗಳವು ಸೂಸು ಕೆಂಪು ಮಣ್ಣಿನಿಂದ ಆವೃತ್ತವಾಗಿದೆ. ಇದಕ್ಕೆ ನಾಲ್ಕೂ ಕಡೆ ಏರಿಯನ್ನು ಬೃಹತ್ ಕಲ್ಲುಗಳಿಂದ ನಿರ್ಮಾಣ ಮಾಡಿದ್ದಾರೆ. ದಕ್ಷಿಣದಲ್ಲಿನ ತೂಬಿನ ಮೂಲಕ ಕೆರೆಯು ತುಂಬಿದಾಗ ೪-೫ ತಿಂಗಳುಗಳ ಕಾಲ ಗದ್ದೆಗಳಿಗೆ ನೀರನ್ನು ಪೂರೈಸುತ್ತಾರೆ. ಬೇಸಿಗೆಯಲ್ಲಿ ಸಂಪೂರ್ಣವಾಗಿ ಬತ್ತಿ ಹೋಗುತ್ತದೆ. ಇದು ಶಾಸನೋಕ್ತ ಐತಿಹಾಸಿಕ ಕೆರೆಯಾಗಿದೆ.

ತಿಮ್ಮಸಾಗರ ಕೆರೆ :

ಬಾದಾಮಿ ತಾಲೂಕಿನ ಉತ್ತರಕ್ಕೆ ೧೮ ಕಿ.ಮೀ.ದೂರದಲ್ಲಿದ್ದು, ಗುಳೇದಗುಡ್ಡ ರೋಡ್ ರೈಲು ನಿಲ್ದಾಣದಿಂದ ಸುಮಾರು ೨ ಕಿ.ಮೀ ಅಂತರದಲ್ಲಿ ಬರುವ ಐತಿಹಾಸಿಕ ಗ್ರಾಮವಾದ "ತಿಮ್ಮಸಾಗರ" ಪ್ರಾಚೀನ ಕಾಲದಿಂದಲೂ ತನ್ನದೆ ಆದ ಚರಿತ್ರೆಯೊಂದಿಗೆ ಬೆಳೆದು ಬಂದಿದೆ. ಈ ಗ್ರಾಮದ ಪಶ್ಚಿಮ ಭಾಗದ ಅನತಿ ದೂರದಲ್ಲಿ ಇರುವ ಶ್ರೀ ರಂಗನಾಥ ದೇವರನ್ನು ಆಂಧ್ರದ ತಿರುಪತಿಯ (ವೆಂಕಟೇಶ್ವರನ) ತಿಮ್ಮಪ್ಪನ ಅವತಾರವೆಂದು ಕರೆಯುವರು. ಇದನ್ನು ಚಾಲುಕ್ಯರ ದೊರೆಯಾದ ಮಂಗಳೇಶನು ಕಟ್ಟಿಸಿದನೆಂದು ಹೇಳಲಾಗುತ್ತದೆ. ಇದರ ಜೊತೆಗೆ ಬಾದಾಮಿ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಹಲವಾರು ಅವಶೇಷಗಳು ದೊರೆಯುತ್ತವೆ. ದೇವಾಲಯದಲ್ಲಿರುವ ಒಂದು ಶಿಲಾ ಶಾಸನದ

ಪ್ರಕಾರ "ತಿಮ್ಮಸಾಗರ" ಪ್ರದೇಶವು ಸಿಂಧದ ನಾಯಕನ ಆಳ್ವಿಕೆಯಲ್ಲಿ (೧೨೧೦ ರಿಂದ ೧೨೮೦) ಕೆಳವಡಿಯ ಮುನ್ನೂರರ ಆಡಳಿತ ಕೇಂದ್ರದಲ್ಲಿ ಬರುವ ಪ್ರದೇಶವಾಗಿದೆ.

ಇಲ್ಲಿರುವ ತಿಮ್ಮಸಾಗರ ಕೆರೆಯೂ ಇಪ್ಪತ್ತು ಎಕರೆ ವಿಸ್ತಾರ ಹೊಂದಿದೆ. ಇದರ ದಂಡೆಯ ಮೇಲೆ ಕೆಲವಡಿಯ ರಂಗನಾಥನ ಮಂದಿರವಿದೆ. ಕೆರೆಯ ಏರಿಯು ಕಲ್ಲುಗಳಿಂದ ನಿರ್ಮಾಣ ಮಾಡಿದ್ದಾರೆ. ಇದರ ದಕ್ಷಿಣದ ಭಾಗದಲ್ಲಿ ತೂಬು ಇದೆ. ಅದರ ಮೂಲಕ ೧೦೦ ಎಕರೆ ನೀರಾವರಿಗೆ ನೀರು ಒದಗಿಸುತ್ತದೆ. ಮಳೆಗಾಲದಲ್ಲಿ ಮಾತ್ರ ಇದರ ನೀರು ಬಳಕೆಯಾಗುತ್ತದೆ. ಬೇಸಿಗೆಯಲ್ಲಿ ಸಂಪೂರ್ಣ ಬತ್ತಿ ಹೋಗುತ್ತದೆ. ಹೀಗಾಗಿ ಸುಮಾರು ನಾಲ್ಕರಿಂದ ಐದು ತಿಂಗಳ ಕಾಲ ವ್ಯವಸಾಯಕ್ಕೆ ನೀರು ಪೂರೈಕೆಯಾಗುತ್ತದೆ. ತಳವು ಕಪ್ಪು ಮಣ್ಣಿನಿಂದ (ಎರಿಮಣ್ಣು) ಆವೃತವಾಗಿದೆ. ಏರಿಯ ನಡುವೆ ಗಿಡಗಳನ್ನು ಬೆಳೆಸಿ ಅದು ಹೆಚ್ಚುವರಿ ನೀರಿನಿಂದ ಒಡೆದು ಹೋಗದಂತೆ ವ್ಯವಸ್ಥೆ ಮಾಡಿದ್ದಾರೆ. ಇದು ನೀರಾವರಿಗೆ ಮತ್ತು ಪ್ರಾಣಿ–ಪಕ್ಷಿಗಳಿಗೆ ಉಪಯೋಗವಾಗುತ್ತದೆ.

ಈ ಕೆರೆಯಿಂದಲೇ ಇದಕ್ಕೆ 'ತಿಮ್ಮಸಾಗರ' ಎಂದು ಹೆಸರು ಬಂದಿದೆ. ಇದು ಸಾಗರದಂತೆ ಹಬ್ಬಿದ್ದರಿಂದ ಇದಕ್ಕೆ ತಿಮ್ಮಸಾಗರ ಎಂದು ಹೆಸರು ಬಂದಿದೆ. ಇದು ಅಲ್ಲದೇ ಕೆರೆಯ ಮಧ್ಯದಲ್ಲಿ ಮತ್ತೊಂದು ಸಣ್ಣ ಕೆರೆಯಿದೆ. ಅದಕ್ಕೆ ತಿಮ್ಮಪ್ಪನ ಹೊಂಡ ಎಂದು ಕರೆಯುತ್ತಾರೆ. ಅದರ ನೀರನ್ನು ಪೂಜೆಗಾಗಿ ಉಪಯೋಗಿಸುತ್ತಾರೆ.

ಇಲ್ಲಿ ತಿರುಪತಿ ತಿಮ್ಮಪ್ಪನು ತನ್ನ ಭಕ್ತರಿಗೆ ದರ್ಶನ ಕೊಟ್ಟಿದ್ದಕ್ಕಾಗಿ ಇದಕ್ಕೆ ತಿಮ್ಮಪ್ಪನ ಹೊಂಡ ಎಂದು ಕರೆಯುವರು.

ಕೆರೆಯ ಉತ್ತರ ಭಾಗದಲ್ಲಿ ಇರುವ ತೂಬಿನ ಮೂಲಕ ನೀರು ಕೆಲವಡಿ ಭೂಮಿಗೆ ಕಾಲುವೆ ಮೂಲಕ ಹರಿದು ಕೆಲವಡಿ, ತಿಮ್ಮಸಾಗರ, ಹಂಸನೂರ, ಗಿರಿಸಾಗರ, ಕೋಟೆಕಲ್ಲು ಸೇರಿದಂತೆ ಹಲವು ಗ್ರಾಮಗಳಿಗೆ ಕೃಷಿಗೆ ಈ ಕೆರೆಯು ದೊರೆಯುತ್ತದೆ. ಈ ನೀರಿನಿಂದ ರೈತರು ತೊಗರೆ, ಅಲಸಂದೆ, ಗೋವಿನಜೋಳ, ಹೆಸರು ಮುಂತಾದ ಉತ್ತಮ ಪೌಷ್ಟಿಕ ಆಹಾರದ ಧಾನ್ಯಗಳನ್ನು ಬೆಳೆಯುತ್ತಾರೆ. ಆದರೆ ಸುಮಾರು ೫–೬ ವರ್ಷಗಳಿಂದಲೂ ಮಳೆಯಾಗದೇ ಕೆರೆಯು ಸಂಪೂರ್ಣ ಭರ್ತಿಯಾಗದ ಕಾರಣ ಗ್ರಾಮದ ಹಲವಾರು ಕುಟುಂಬಗಳು ನೀರಿನ ಕೊರತೆಯಿಂದ ಉದ್ಯೋಗ ಅರಿಸಿ ಬೇರೆ ಬೇರೆ ರಾಜ್ಯಗಳಿಗೆ ವಲಸೆ ಹೋಗಲು ಪ್ರಾರಂಭಿಸಿದ್ದಾರೆ ಎಂದು ಅಲ್ಲಿಯ ರೈತರು ಹೇಳುತ್ತಾರೆ. ಮುಂದಿನ ವರ್ಷ ಉತ್ತಮ ಮಳೆ ಬಂದು ಕೆರೆ ತುಂಬಿದರೆ ಹೊರಗಿನಿಂದ ಮರಳಿ ಬಂದು ತಮ್ಮ ತಮ್ಮ ಗದ್ದೆಗಳಲ್ಲಿ ಕೃಷಿ ಕಾರ್ಯಗಳನ್ನು ಆರಂಭ ಮಾಡುತ್ತಾರೆಂದು ಸ್ಥಳೀಯರ ಅಭಿಪ್ರಾಯ.

ಹುಲ್ಲಿಕೇರಿ ಕೆರೆ :

ಬಾದಾಮಿ ತಾಲೂಕಿನ ಇನ್ನೊಂದು ಐತಿಹಾಸಿಕ ಕೆರೆಯಾದ ಹುಲ್ಲಿಕೇರಿಯು

ಗುಳೇದಗುಡ್ಡದಿಂದ ಪೂರ್ವದಿಕ್ಕಿಗೆ ೧೫ ಕಿ.ಮೀ. ದೂರದಲ್ಲಿ ಬರುತ್ತದೆ. ಚಾರಿತ್ರಿಕ ನೆಲೆಯಾದ ಈ ಪ್ರದೇಶಕ್ಕೆ ಕೆರೆಯ ಅಂಗವಾಗಿ ಈ ಗ್ರಾಮಕ್ಕೆ ಹುಲ್ಲಿಕೇರಿ ಎಂದು ಹೆಸರು ಬಂದಿದೆ ಎಂದು ಗ್ರಾಮದ ಹಿರಿಯರು ಹೇಳುತ್ತಾರೆ.

ಕಲ್ಲು ಗಣಿಗಾರಿಕೆಗೆ ಹೆಸರುವಾಸಿಯಾದ ಪ್ರದೇಶವಾಗಿದ್ದು, ಬಾದಾಮಿ ಚಾಲುಕ್ಯರು ದೇವಾಲಯಕ್ಕೆ ಕಲ್ಲುಗಳನ್ನು ಇಲ್ಲಿಂದಲೇ ತೆಗೆದುಕೊಂಡು ಹೋಗಿದ್ದಾರೆ ಎಂದು ಗ್ರಾಮದ ಕೆಲವರ ಅಭಿಪ್ರಾಯವಾಗಿದೆ.

ಇಲ್ಲಿರುವ ಕೆರೆಯು ಎರಡು ಬೆಟ್ಟಗಳ ನಡುವೆ ೫೨ ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಇದರ ಅಂಗಳವು ಕೆಂಪು ಮಣ್ಣಿನಿಂದ ಆವೃತವಾಗಿದೆ. ಮೊದಲು ಕಡಿಮೆ ನೀರಿಗಾಗಿ ಬಳಕೆ ಮಾಡುತ್ತಿದ್ದರು. ಈಗ ಬೋರವೆಲ್ಲಿನ ಸೌಕರ್ಯಗಳಿಂದಾಗಿ ಜಾನುವಾರು ಬಳಕೆಗೆ ಮಾತ್ರ ಬಳಸುತ್ತಾರೆ. ಉತ್ತರದ ಅಂಗಳವನ್ನು ರೈತರು ಆಕ್ರಮಿಸಿ ಕೃಷಿಯ ಕಾರ್ಯಗಳಿಗೆ ಬಳಕೆ ಮಾಡುತ್ತಿದ್ದಾರೆ. ಇದರ ಪಕ್ಕದ ಗುಡ್ಡದಲ್ಲಿ ನಡೆಯುವ ಗಣಿಗಾರಿಕೆಯಿಂದ ಕೆರೆಗೆ ಬರುವ ನೀರು ಕಡಿಮೆಯಾಗಿದೆ.

ಕೋಟೆಕಲ್ ಕೆರೆ :

ಬಾದಾಮಿ ತಾಲೂಕಿನ ಗುಳೇದಗುಡ್ಡ ಪಟ್ಟಣದ ಪಶ್ಚಿಮದ ದಿಕ್ಕಿನಲ್ಲಿ ಬರುವ ಕೋಟೆಕಲ್‌ವು ಐತಿಹಾಸಿಕ ಮತ್ತು ಧಾರ್ಮಿಕ ಶಿಕ್ಷಣದ ಕೇಂದ್ರವಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಆಡಳಿತಕ್ಕೆ ಸಂಬಂಧಿಸಿದ ಹಲವಾರು ಅವಶೇಷಗಳು ಕಂಡುಬರುತ್ತವೆ. ಈ ಗ್ರಾಮವು ಹೊಳೆ-ಹುಚ್ಚೇಶ್ವರ ಸಂಸ್ಥಾನದ ಮೊಟ್ಟ ಮೊದಲ ಮಠವು ಸ್ಥಾಪಿತಗೊಂಡು ನಂತರದಲ್ಲಿ ಬೇರೆ ಕಡೆಗಳಲ್ಲಿ ಮಠಗಳು ಸ್ಥಾಪಿತಗೊಂಡಿವೆ. ಮೂಲ ಮಠದ ಹುಟ್ಟು ಮತ್ತು ಬೆಳವಣಿಗೆ ಈ ಪ್ರದೇಶವೇ ಕಾರಣವಾಗಿದೆ. ಊರಿನ ಬೃಹತ್ತಾಕಾರದ ಮಠವು ಊರಿನ ಶೈಕ್ಷಣಿಕ, ಆಧ್ಯಾತ್ಮಿಕ ಹಾಗೂ ಆರ್ಥಿಕ ಬೆಳೆವಣಿಗೆಗೆ ಹಗಲಿರುಳು ಶ್ರಮವಹಿಸುತ್ತಿದೆ. ಇಂತಹ ಸರ್ವಾಂಗೀಣ ಅಭಿವೃದ್ಧಿ ಬಯಸುವ ಪ್ರಮುಖ ಧಾರ್ಮಿಕ ನೆಲೆಯಾಗಿ ರೂಪುಗೊಂಡಿದೆ. ಇದು ದೇಸಗತಿಯ ಕೇಂದ್ರವಾಗಿತ್ತು.[೫೯]

ಮಠದ ಈಶಾನ್ಯ ದಿಕ್ಕಿನಲ್ಲಿರುವ ಕೆರೆಯು ೧೫ ಎಕರೆ ವಿಸ್ತಾರ ಹೊಂದಿದೆ. ಕೆರೆಯ ಪಶ್ಚಿಮದಲ್ಲಿ ಎತ್ತರವಾದ ಕೆಂಪು-ಬಿಳಿ ಮಿಶ್ರಿತವಾದ ಗರಸಿನಿಂದ ವಾರಿಯನ್ನು ನಿರ್ಮಾಣ ಮಾಡಿದ್ದಾರೆ. ಕೆರೆಯು ತುಂಬಿದಾಗ ಅದು ಕಾಲುವೆಯ ಕಲ್ಲನ್ನು ಸರಿಸಿ ಅದರ ಮೂಲಕ ನೀರು ಹರಿದು ಹೋಗುತ್ತದೆ. ಕೆರೆಯ ಅಂಗಳವು ಬಿಳಿ ಮತ್ತು ಕೆಂಪು ಮಿಶ್ರಿತವಾದ ಮಣ್ಣಿನಿಂದ ಆವೃತವಾಗಿದೆ. ಕೆರೆಯ ಪಕ್ಕದಲ್ಲಿರುವ ವಿಶಾಲವಾದ ಪೂರ್ವೋತ್ತರ ದಕ್ಷಿಣಕ್ಕೆ ಹರಡಿಕೊಂಡಿರುವ ವಿಶಾಲವಾದ ಬೆಟ್ಟಗಳಿಂದ ನೀರು ಹರಿದು ಬಂದು ಕೆರೆ ಸೇರುತ್ತದೆ. ಕೆರೆಯ ಪಕ್ಕದಲ್ಲಿರುವ ಕೋಟೆಕಲ್ ಮಠವು ಅದಕ್ಕೆ ಎರಡು ದಾರಿಗಳಿವೆ.

ಒಂದು ಊರಿನ ಕಡೆಗೆ ಹಾಗೂ ಇನ್ನೊಂದು ಕೆರೆಯ ಕಡೆಗೆ ಇದೆ. ಕೆರೆಯ ನೀರನ್ನು ಪೂಜಾ ಕಾರ್ಯಗಳಿಗೆ ಬಳಸುವುದುಂಟು.

ಮಠದ ಶ್ರೀಗಳು ಕೆರೆಯು ಯಾವುದೇ ರೀತಿಯಿಂದ ಮಲೀನಗೊಳ್ಳದಂತೆ ಕಾಲಕಾಲಕ್ಕೆ ಅದರ ದುರಸ್ಥಿ ಕಾರ್ಯವನ್ನು ಮಾಡಿಸುವರು. ಆ ಊರಿನಲ್ಲಿರುವ ಮಚಗಾರರ ಕುಟುಂಬದವರು ಕೆರೆಯಲ್ಲಿ ಮೀನುಗಾರಿಕೆ ಮಾಡುತ್ತಾ ಆ ಕೆರೆಯನ್ನು ಕಾಯುತ್ತಾರೆ. ಅಷ್ಟೇ ಅಲ್ಲದೆ ಕೆರೆ ತುಂಬಿದ ಮೊದಲದಿನ ಕೆರೆಗೆ ಬೆಸ ಸಂಖ್ಯೆಯ ಪ್ರಾಣಿಯನ್ನು ಬ್ಯಾಟಿಕೊಟ್ಟು ನೈವೇದ್ಯ ನೆರವೇರಿಸುವರು.

ನೀರಲಕೇರಿ ಕೆರೆ :

ಬಾಗಲಕೋಟ ತಾಲೂಕಿನ ಕೊನೆಯ ಗ್ರಾಮವಾದ ನೀರಲಕೇರಿಯು ಬಾದಾಮಿ-ಬಾಗಲಕೋಟ ಮಾರ್ಗದಲ್ಲಿ ಬರುವ ಐತಿಹಾಸಿಕ ಪ್ರದೇಶವಾಗಿದೆ. ಇಲ್ಲಿ ಬಾದಾಮಿ ಚಾಲುಕ್ಯರ ಕಾಲದ ನಾರಾಯಣ ದೇವಾಲಯ ಹಾಗೂ ಮೂರು ಶಾಸನಗಳ ಜೊತೆಗೆ ಊರಿನಲ್ಲಿ ಹಲವಾರು ಸ್ಮಾರಕಗಳ ಅವಶೇಷಗಳು ಕಂಡುಬರುತ್ತವೆ. ಇಲ್ಲಿ ಶಿಲಾಯುಗ ಮಾನವನ ಅವಶೇಷಗಳು ಕೂಡ ಕಂಡು ಬರುತ್ತವೆ. ಈ ಊರಿನ ಪಶ್ಚಿಮದಲ್ಲಿರುವ ಕೆರೆಯು ನೇರಳೆ ಬಣ್ಣ ಹೊಂದಿದ್ದು, ಅದರ ಪಕ್ಕದಲ್ಲಿ ಪುರಾತನ ಗ್ರಾಮ ಬೆಳೆದಿದ್ದರಿಂದ ಇದಕ್ಕೆ ನೀರಲಕೇರಿ ಎಂದು ಹೆಸರು ಬಂದಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಗ್ರಾಮದ ಪೂರ್ವಕ್ಕೆ ಇರುವ ಕೆರೆಯು ಪುರಾತನ ಕೆರೆಯಾಗಿದ್ದು, ಕೆರೆಯ ಒಂದು ಭಾಗದಲ್ಲಿ ಪ್ರಾಚೀನ ಕಾಲದ ಲಕ್ಷ್ಮೀ ಮಂದಿರವು ಪೂರ್ವ ದಿಕ್ಕಿಗಿದೆ. ಕೆರೆಯು ೧೮ ಎಕರೆ ವಿಸ್ತಾರವಾಗಿದ್ದು, ಇದರ ಅಂಗಳವು ಬಿಳಿ ಮತ್ತು ಕಪ್ಪು ಮಣ್ಣಿನಿಂದ ಆವೃತವಾಗಿದೆ. ಇದರ ಸುತ್ತಲೂ ಮಣ್ಣಿನ ಏರಿ ಇದೆ. ಇದನ್ನು ಮೊದಲು ಕುಡಿಯುವ ನೀರಿಗಾಗಿ ಬಳಕೆ ಮಾಡುತ್ತಿದ್ದರು. ಇವತ್ತು ದನಕರುಗಳು-ಪಶು-ಪಕ್ಷಿಗಳು-ಪ್ರಾಣಿಗಳಿಗೆ ಬಳಕೆಯಾಗುತ್ತಿದೆ. ಇಂತಹ ಪುರಾತನ ಕೆರೆಯನ್ನು ಇತ್ತೀಚಿಗೆ ೨೦೧೨ ರಲ್ಲಿ ಶಾಸಕರ ಕೆರೆ ಅಭಿವೃದ್ಧಿ ಅನುದಾನದಲ್ಲಿ ಹೂಳು ತೆಗೆದು ಅದರ ಸುತ್ತಲೂ ತಂತಿ ಬೇಲಿ ನಿರ್ಮಿಸಿದ್ದಾರೆ.

ಮಂಗಳೂರು ಕೆರೆ :

ಬಾದಾಮಿ ಚಾಲುಕ್ಯರ ಆಡಳಿತ ವ್ಯಾಪ್ತಿಗೆ ಒಳಪಟ್ಟ ಪ್ರಮುಖ ಪ್ರದೇಶವಾದ ಮಂಗಳೂರು ಬಾದಾಮಿ ಪಶ್ಚಿಮ ದಿಕ್ಕಿನಲ್ಲಿ ೧೮ ಕಿ.ಮೀ. ಅಂತರದಲ್ಲಿ ಬರುತ್ತದೆ. ಈ ಪ್ರದೇಶದಲ್ಲಿ ಚಾಲುಕ್ಯರಿಗೆ ಸಂಬಂಧಿಸಿದ ಹಲವಾರು ಅವಶೇಷಗಳು, ಶಾಸನಗಳು ದೊರೆಯುತ್ತವೆ. ಇಲ್ಲಿರುವ ಕೆರೆಯು ೨೧ ಎಕರೆ ವಿಸ್ತಾರವನ್ನು ಹೊಂದಿದೆ. ಸುತ್ತಲೂ ಮಣ್ಣಿನಿಂದ ಏರಿ ನಿರ್ಮಾಣ ಮಾಡಿದ್ದಾರೆ. ಕೆರೆಯ ಅಂಗಳವು ಕಪ್ಪು ಮತ್ತು ಕೆಂಪು ಮಣ್ಣಿನಿಂದ ಆವೃತವಾಗಿದೆ. ಈ ಕೆರೆಯು ಬಾದಾಮಿ ಚಾಲುಕ್ಯರ ಕಾಲದಲ್ಲಿ

ನಿರ್ಮಾಣವಾಗಿರಬಹುದೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಮೊದಲು ಗ್ರಾಮಕ್ಕೆ ಈ ಕೆರೆಯ ನೀರನ್ನೇ ಕುಡಿಯಲು ಬಳಸುತ್ತಿದ್ದರು.

ಖಾನಾಪುರ ಕೆರೆ :

ಬಾದಾಮಿ ತಾಲೂಕಿನ ಐತಿಹಾಸಿಕ ಪ್ರದೇಶವಾದ ಖಾನಾಪುರವು ಗುಳೇದಗುಡ್ಡದಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಈ ಭಾಗದಲ್ಲಿ ಬಾದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದ ಅವಶೇಷಗಳು ದೊರೆಯುತ್ತವೆ. ಈ ಊರಿನ ಹೆಸರಿನ ಹಿನ್ನೆಲೆಯನ್ನು ಅಧ್ಯಯನ ಮಾಡಿದಾಗ ಈ ವಿಷಯ ತಿಳಿದುಬರುತ್ತದೆ. ಇಲ್ಲಿ ಇರುವ ಮಣ್ಣು ಮತ್ತು ಆಕಾರ ಕೆರೆಯ ಸ್ವರೂಪ ಹೊಂದಿರುವುದರಿಂದ ಕಾಲಾನಂತರದಲ್ಲಿ ಕೆರೆ ಬದಲಾಗಿ ಖಾನಾಪುರ ಎಂಬ ಹೆಸರು ಬಂದಿರಬಹುದೆಂದು ಹಿರಿಯರ ಅಭಿಪ್ರಾಯವಾಗಿದೆ.

ಪೂರ್ವ ಮತ್ತು ಪಶ್ಚಿಮದಲ್ಲಿ ಎರಡು ವಿಶಾಲವಾದ ಬೆಟ್ಟಗಳ ನಡುವೆ ಬೃಹತ್ ಕಲ್ಲುಗಳಿಂದ ಏರಿಯನ್ನು ನಿರ್ಮಾಣ ಮಾಡಿದ್ದಾರೆ. ಕೆರೆಯು ಸಂಪೂರ್ಣ ತುಂಬಿದಾಗ ನೂರು ಎಕರೆಗಳಷ್ಟು ನೀರು ನಿಲ್ಲುತ್ತದೆ. ಇದರ ಮೂಲಕ ಸುತ್ತಲೂ ಹತ್ತಾರು ಹಳ್ಳಿಗಳ, ಅಂತರಜಲ ಮಟ್ಟ ಕ್ರಮೇಣ ವೃದ್ಧಿಯಾಗುತ್ತದೆ. ಈ ಕೆರೆ ಸಂಪೂರ್ಣ ತುಂಬಿದಾಗ ಅದರ ಮಧ್ಯದಲ್ಲಿರುವ ತೂಬಿನ ಮೂಲಕ ನೀರನ್ನು ಪರ್ವತಿ ಕೆರೆಗೆ ಬಿಡುತ್ತಾರೆ. ಅಷ್ಟೊಂದು ವಿಶಾಲವಾದ ಕೆರೆಯಾಗಿದೆ.

ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಕೆರೆಯು ಬರಗಾಲ ಸಮಯದಲ್ಲಿ ಸಂಪೂರ್ಣವಾಗಿ ಬತ್ತಿದಾಗ ಅಲ್ಲಿಯ ಜನರು ಅದರ ಅಂಗಳದಲ್ಲಿ ಬಾವಿಗಳನ್ನು ತೋಡುತ್ತಾರೆ. ಸುಮಾರು ೧೦ ಪೂಟಗಳಷ್ಟು ಅಗೆದಾಗ ಸಹಜವಾಗಿ ನೀರು ಬರುತ್ತದೆ. ಈ ನೀರನ್ನು ಬೇಸಿಗೆ ಕಾಲದಲ್ಲಿ ಶೇಂಗಾ ಬೆಳೆಯನ್ನು ಬೆಳೆಯಲು ಉಪಯೋಗಿಸುತ್ತಾರೆ. ಇದರಿಂದ ರೈತರಿಗೆ ಮತ್ತು ಸಾಮಾನ್ಯರಿಗೂ ಉದ್ಯೋಗ ಆದಾಯ ಬರುತ್ತದೆ.

ಗಂಜಿಕೆರೆ :

ಇಲ್ಲಿನ ಕೆರೆಯ ಹೆಸರು 'ಗಂಜಿಕೆರೆ' ಎಂದು ಜನರು ಕರೆಯುತ್ತಾರೆ. ಇದು ೨೦೦ ಎಕರೆ ವಿಸ್ತಾರವಾದ ಕೆರೆಯು ದಕ್ಷಿಣದಲ್ಲಿ ಬ್ರಿಟಿಷರ ಕಾಲದ ತೂಬನ್ನು ಹೊಂದಿದೆ. ಇದರ ಏರಿ ಕೆಂಪು, ಬಿಳಿ, ಗಂಜಿ ಆಕಾರದ ಮಣ್ಣಿನಿಂದ ನಿರ್ಮಾಣವಾಗಿದೆ. ಇದರ ಅಂಗಳದ ಕೆರೆ ಮತ್ತು ಗಂಜಿ ಆಕಾರದ ಮಣ್ಣನ್ನು ಹೊಂದಿರುವುದರಿಂದ ಇದಕ್ಕೆ ಗಂಜಿಕೆರೆ ಎಂದು ಕರೆಯುವರು. ಇದನ್ನು ಮೂರು ಬೆಟ್ಟಗಳ ನಡುವೆ ಕಟ್ಟಿದ್ದಾರೆ. ಒಂದು ಕಡೆ ಮಾತ್ರ ಏರಿ ನಿರ್ಮಿಸಲಾಗಿದೆ. ಕೆರೆಯ ಮುಂದೆ ಕಾಲುವೆ ನಿರ್ಮಾಣ ಮಾಡಿ ಅದರ ಮೂಲಕ ಗುಳೇದಗುಡ್ಡ ರಸ್ತೆಯ ಕಡೆಗೆ ೧೦೦ ಎಕರೆ ಪ್ರದೇಶಕ್ಕೆ ನೀರು ಒದಗಿಸಲಾಗುತ್ತದೆ.

ಕೆರೆಯು ಉತ್ತಮ ಸ್ಥಿತಿಯಲ್ಲಿದೆ.

ಬಾದಾಮಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಗುಳೆದಗುಡ್ಡ ಪಟ್ಟಣದಿಂದ ಪೂರ್ವದ ಕಡೆ ಬರುವ ಹುಲ್ಲಿಕೇರಿ ಗ್ರಾಮದ ಮಾರ್ಗದ ಮಧ್ಯದಲ್ಲಿ ಬರುವ ಎರಡು ಬೆಟ್ಟಗಳ ನಡುವೆ ತಡೆಗೋಡೆಯನ್ನು ನಿರ್ಮಿಸಿದ ಐತಿಹಾಸಿಕ ಕೆರೆಯೇ ಗಂಜಿ ಕೆರೆಯಾಗಿದೆ. ಇದೊಂದು ಜಿಲ್ಲೆಯ ವಿಶಿಷ್ಟ ಮಾದರಿ ಕೆರೆಯಾಗಿದ್ದು, ಇದರ ಅಂಗಳದ ಮಣ್ಣು ಅಕ್ಕಿ ಗಂಜಿಯ ಆಕಾರವನ್ನು ಹೊಂದಿದ್ದರಿಂದ ಇದಕ್ಕೆ ಗಂಜಿ ಕೆರೆ ಎಂದು ಸ್ಥಳಿಯರು ಕರೆಯುತ್ತಾರೆ.

ಈ ಕೆರೆಯು ೨೦೦ ಎಕರೆ ವಿಸ್ತಾರ ಹೊಂದಿದ್ದು, ಇದರ ಉತ್ತರ ಕಡೆ ಬೃಹತ್ ಆಕಾರದ ಏರಿಯನ್ನು ನಿರ್ಮಿಸಿ ಅದರ ಮಧ್ಯದಲ್ಲಿ ತೂಬನ್ನು ನಿರ್ಮಾಣ ಮಾಡಿ ಅದರ ಮೂಲಕ ನೂರಾರು ಎಕೆರೆಗೆ ನೀರನ್ನು ಕಾಲುವೆಗಳ ಮೂಲಕ ಹರಿಸುತ್ತಾರೆ. ಈ ಕೆರೆಯ ತೂಬು ಬ್ರಿಟಿಷ್ ಕಾಲದಲ್ಲಿ ಜೋಡಣೆ ಮಾಡಿದ್ದಾರೆ. ಮುಚಖಂಡಿ ಕೆರೆಗೆ ಬಳಸಿ ರಚನೆ ಮತ್ತು ತಾಂತ್ರಿಕತೆ ಇದರ ಆಕಾರವನ್ನೆ ಹೋಲುತ್ತದೆ. ಎರಡನ್ನೂ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರಬಹುದೆಂಬುದು ವಿದ್ವಾಂಸರ ಅಭಿಮತವಾಗಿದೆ.

ಕೆರೆಯ ಉತ್ತರದ ದಿಕ್ಕಿನಲ್ಲಿ ಕಾಲುವೆಗಳನ್ನು ನಿರ್ಮಾಣಮಾಡಿ ಕೆರೆ ನೀರು ಸಮೃದ್ಧಿಹೊಂದಿದಾಗ ಕೆರೆ ಮುಂದಿರುವ ಜಮೀನುಗಳಿಗೆ ನೀರನ್ನು ಹಾಯಿಸಿ ಗೋಧಿಯನ್ನು ಬೆಳೆಯುತ್ತಾರೆ. ಜೊತೆಗೆ ಇದರ ಅಂಗಳದ ಮಣ್ಣು ಮರಳಿನ ಬಣ್ಣ ಹೊಂದಿದ್ದರಿಂದ ಇದನ್ನು ಕಟ್ಟಡಕ್ಕೆ ಮರಳಾಗಿ ಬಳಸುತ್ತಾರೆ. ಕೆರೆ ಸುತ್ತಮುತ್ತಲಿನ ಹಲವಾರು ಹಳ್ಳಿಗಳ ಜನರು ಇದೇ ಮಣ್ಣಿನಿಂದ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಅಲ್ಲದೇ ಬಾಗಲಕೋಟೆ ಪಟ್ಟಣಕ್ಕೂ ಕೂಡಾ ಇದೇ ಮರಳನ್ನು ಸಾಗಿಸುವರು. ಅಷ್ಟೊಂದು ವೈಶಿಷ್ಟ್ಯಪೂರ್ಣವಾಗಿ ಕೆರೆ ಸದುಪಯೋಗವಾಗುತ್ತ ಬಂದಿದೆ.

ಜಲಗೇರಿ ಕೆರೆ :

ಬಾದಾಮಿ ತಾಲೂಕಿನ ಪ್ರಮುಖ ಗ್ರಾಮ ಜಲಗೇರಿ. ಅದರ ಹಿಂದಿನ ಹೆಸರು ಜಲಗಡ್ಡೆ, ನೀರು ಗಡ್ಡೆ ಎಂದು ಕರೆಯುತ್ತಿದ್ದರು. ಅಂದರೆ ಪ್ರಾಚೀನ ಕಾಲದಲ್ಲಿ ಇಲ್ಲಿ ನೀರು ಬರುತ್ತಿತ್ತು. ಆದ್ದರಿಂದ ಇದನ್ನು ಜಲಗಡ್ಡೆ ಎಂದು ಕರೆದಿದ್ದಾರೆ. ಈ ಗ್ರಾಮದಲ್ಲಿ ಸಾಕಷ್ಟು ಪ್ರಾಚೀನ ಅವಶೇಷಗಳು ಕಂಡುಬರುತ್ತವೆ. ಇದರ ಜೊತೆಗೆ ಬಹುಜನಾಂಗದ ಸಮ್ಮಿಶ್ರಣದ ಸಂಸ್ಕೃತಿಯ ಪ್ರದೇಶವಾಗಿದೆ. ಇವತ್ತಿಗೂ ಯಾವುದೇ ಕೋಮುವಿವಾದಕ್ಕೆ ಆಸ್ಪದ ನೀಡದೇ ಏಕತೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಜಲದ ಮೂಲದಿಂದ ಹುಟ್ಟಿಬಂದಿದೆ.

ಈ ಗ್ರಾಮದಿಂದ ಅನತಿದೂರದಲ್ಲಿ ಊರಿನ ಹಿಂದುಗಡೆ ಗುಡ್ಡದ ಪಕ್ಕದಲ್ಲಿ ಕೆರೆ

ನಿರ್ಮಾಣಗೊಂಡಿದೆ. ಇದೊಂದು ಪ್ರಾಚೀನ ಕೆರೆಯಾಗಿದೆ. ಇದರ ಅಂಗಳ ಸುಮಾರು ೪ ಎಕರೆ ವಿಸ್ತಾರಹೊಂದಿದೆ. ಎರಡು ಗುಡ್ಡಗಳ ಮಧ್ಯದಲ್ಲಿ ನೀರಿಗೆ ಏರಿ ನಿರ್ಮಿಸಿ ನೀರು ತಡೆ ಹಿಡಿದಿದ್ದಾರೆ. ಕೆರೆಯ ಏರಿ ಮಧ್ಯದಲ್ಲಿ ಏಳು ಮದಗಗಳಿವೆ ಒಂದು ಹೆಣ್ಣು ಒಂದು ಗಂಡು ಎಂಬ ಎರಡು ಹೆಸರು ಇವೆ. ಇವುಗಳ ಮೂಲಕ ನೀರಾವರಿಗೆ ಉಪಯೋಗವಾಗುತ್ತದೆ. ಇದರಿಂದ ಸುಮಾರು ೩೦ ಎಕರೆಗಳಿಗೆ ನೀರು ಪೂರೈಕೆಯಾಗುತ್ತದೆ. ಬೇಸಿಗೆ ಕಾಲದಲ್ಲಿ ನೀರಿನ ಅಭಾವ ವಿಪರೀತ ವಿರುತ್ತದೆ. ಆದ ಕಾರಣ ಇದರ ನೀರನ್ನು ಜಾನುವಾರುಗಳಿಗೆ ಬಳಕೆ ಮಾಡುತ್ತಾರೆ.



ಜಲಗೇರಿ ಕೆರೆಯ ಒಂದು ನೋಟ

ಈ ಕೆರೆಯ ವೈಶಿಷ್ಟ್ಯವೇನೆಂದರೆ ಏರಿಯ ಮಧ್ಯದಲ್ಲಿ ಗಂಡು ಮತ್ತು ಹೆಣ್ಣು ಎಂಬ ಎರಡು ಮದಗ ನಿರ್ಮಾಣಹೊಂದಿವೆ. ನೀರನ್ನು ಇತರ ಸಾಧನಗಳ ಮೂಲಕ ನಿಯಂತ್ರಣ ಮಾಡುವುದಕ್ಕೆ ಗಂಡು ಮದಗ ಎಂದು ನೀರು ಸರಾಗವಾಗಿ ಹರಿಯುವುದಕ್ಕೆ ಹೆಣ್ಣು ಮದಗ ಎಂತಲೂ ಕರೆಯುವರು. ಈ ರೀತಿಯಾಗಿ ಎರಡು ಮದಗದ ವೈಶಿಷ್ಟ್ಯತೆಯನ್ನು ಕಾಣುತ್ತೇವೆ.

ಇನ್ನೊಂದು ಪ್ರಮುಖ ಅಂಶವೆಂದರೆ ಇವತ್ತು ಕೆರೆಗೆ ಯಾವುದಾದರು ಕೆಲಸ ಕಾರ್ಯ ಮಾಡುವುದಿದ್ದರೆ ಮೊದಲು ಬೆಸ ಸಂಖ್ಯೆ ಪ್ರಾಣಿಗಳನ್ನು ಬ್ಯಾಟಿ ನೀಡುವ ಪರಿಪಾಠ ಇಂದಿಗೂ ಮುಂದುವರೆದುಕೊಂಡು ಬಂದಿದೆ. ಕೆರೆ ತುಂಬಿದಾಗ 'ಹಂಗಡ ಗಡಿಗೆ' ಬಿಡುವ ವಿಶಿಷ್ಟ ಪರಂಪರೆ ಮುಂದುವರೆದಿದೆ.

ಕಟಗೇರಿ ಕೆರೆ :

ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಆಡಳಿತದ ಪ್ರಮುಖ ನೆಲೆ, ಕಲಾಕೇಂದ್ರವಾದ ಕಟಗೇರಿ. ಇದರ ಪ್ರಾಚೀನ ಹೆಸರು ಮತ್ತು ಶಾಸನದಲ್ಲಿ ಕಡಕೆರೆ, ಕಡಕೆರೆಗೆ ಎಂದು ಉಲ್ಲೇಖಿತವಾಗಿದೆ. ಕ್ರಿ.ಶ.೧೨ ನೇ ಶತಮಾನದ ಒಂದು ಶಾಸನದಲ್ಲಿ

ಇದರ ಭೌಗೋಳಿಕ ಚರಿತ್ರೆಯ ಬಗ್ಗೆ ಕೂಡಾ ದಾಖಲುಗೊಂಡಿದೆ. ಈ ಪ್ರದೇಶ ಕಳಚೂರಿ ಸಾಮಂತರ ಆಡಳಿತಕ್ಕೆ ಒಳಪಟ್ಟಿತ್ತು. ಇದರ ಜೊತೆಗೆ ಪ್ರಾಚೀನ ಕಾಲದಿಂದಲೇ ಇದು ಒಂದು ಮಹಾ ಅಗ್ರಹಾರದ ಕೇಂದ್ರವಾಗಿ ಹಾಗೂ ಬಣಂಜದಾದಿ ಪಟ್ಟಣವಾಗಿ ಬೆಳೆದು ಬಂದಿರುವುದು ಚರಿತ್ರೆಯಲ್ಲಿ ದಾಖಲಾಗಿದೆ. ಕಟ್ಟೆಯ ಕೆರೆ ಹೋಗಿ ಕಟಗೇರಿ ಎಂಬ ಹೆಸರು ರೂಢಿಗತವಾಗಿ ಬಂದಿದೆ. ಶಾಸನಗಳಲ್ಲಿ ಕಡಕೆರಿಯನ್ನು ಅನಾದಿ ಅಗ್ರಹಾರ, ಬನಂಜದ ಆದಿಪಟ್ಟಣವೆಂದು ಕರೆಯಲಾಗಿದೆ. [೪೦]

ಕಟಗೇರಿಯ ಕೆರೆ : ಈ ಗ್ರಾಮದ ಹಿಂದೆ ವಿಶಾಲವಾದ ಸುಮಾರು ೧೫ ಎಕರೆ ವಿಸ್ತಾರ ಹೊಂದಿದ ಕೆರೆಯ ಅಂಗಳವಿದೆ. ಇದಕ್ಕೆ ಎರಡು ಕಡೆಗಳಲ್ಲಿ ಮಣ್ಣಿನ ಏರಿ ನಿರ್ಮಿಸಿ, ಅದರ ಒಳಮೈ ಕಲ್ಲುಗಳನ್ನು ಜೋಡಿಸಿದ್ದಾರೆ. ಇದರ ಅಭಿವೃದ್ಧಿಗಾಗಿ ಜಲ ಸಂವರ್ಧನ ಯೋಜನಾ ಸಂಘದವರು ಕಳೆದ ಸಲ ಅಭಿವೃದ್ಧಿಮಾಡಿದ್ದಾರೆ. ಪೂರ್ವದ ಏರಿ ಹೆಚ್ಚು ಉದ್ದವಾಗಿದೆ. ಇದರ ಮಧ್ಯದಲ್ಲಿ ಮದಗ ಇದ್ದು ಅದರ ಮೂಲಕ ಕಾಲುವೆಗಳಲ್ಲಿ ನೀರು ಹರಿದು ನೂರಾರು ಎಕರೆ ನೀರಾವರಿಗೆ ಮಳೆಗಾಲದಲ್ಲಿ ಉಪಯೋಗವಾಗುತ್ತದೆ. ಬೇಸಿಗೆಯಲ್ಲಿ ಸಂಪೂರ್ಣ ಬತ್ತಿ ಹೋಗುತ್ತದೆ. ಆದರೆ ಹೂಳನ್ನು ಸಂಪೂರ್ಣ ತೆಗೆಸುವ ಕಾರ್ಯ ಇದುವರೆಗೂ ನಡೆದಿಲ್ಲ. ಪಶ್ಚಿಮ ಭಾಗದಲ್ಲಿ ವ್ಯವಸಾಯಗಾರರು ಇದರ ಅಂಗಳ ಆಕ್ರಮಿಸಿ ಬೇಸಾಯ ಮಾಡುತ್ತಿದ್ದಾರೆ. ಕೆರೆಯ ಪಶ್ಚಿಮದ ಭಾಗದ ವಿಶಾಲವಾದ ಪ್ರದೇಶದ ಮೂಲಕ ಮಳೆ ನೀರು ಹರಿದು ಬಂದು ಸೇರುತ್ತದೆ. ಒಂದು ದಂಡೆಯಲ್ಲಿ ಕೋಟೆಗೋಡೆ ಇದೆ. ಅದರ ಪಕ್ಕದಲ್ಲಿ ಕೆರೆಯನ್ನು ನಿರ್ಮಿಸಿ ಅರಮನೆಗೆ ನೀರು ಸರಬರಾಜು ಮಾಡುವ ವ್ಯವಸ್ಥೆ ಕಂಡು ಬರುತ್ತದೆ. ಕೆರೆಯ ದಂಡೆಗೆ ಊರು ರಚನೆಗೊಂಡಿದ್ದರಿಂದ ಇದಕ್ಕೆ ಕಡಗೇರೆ, ಕಟಗೇರಿ ಎಂಬ ಹೆಸರು ಬಂದಿದೆ ಎಂದು ಅಲ್ಲಿಯ ಸ್ಥಳಿಯರು ಹೇಳುತ್ತಾರೆ. ಸರಕಾರವು ತಕ್ಷಣವೇ ಕೆರೆಯ ಅಂಗಳದ ಹೂಳನ್ನು ತೆಗೆಯಿಸಿ ಸ್ವಚ್ಛಗೊಳಿಸಬೇಕಾಗಿದೆ. ಇದರಿಂದ ಹೆಚ್ಚು ಹೆಚ್ಚು ನೀರು ನಿಂತು, ಅಂತರ್‌ಜಲಮಟ್ಟ ಅಭಿವೃದ್ಧಿಯಾಗುತ್ತದೆ. ಇದರಿಂದ ಸುತ್ತಲೂ ಇರುವ ಹತ್ತಾರು ಹಳ್ಳಿಗಳ ಬೋರ್‌ವೆಲ್‌ಗಳ ನೀರು ಸಮೃದ್ಧವಾಗುತ್ತದೆ.

ನೀರಬೂದಿಹಾಳ ಕೆರೆ :

ಬಾದಾಮಿ ತಾಲೂಕಿನ ಪ್ರಮುಖ ಐತಿಹಾಸಿಕ ಪ್ರದೇಶವಾದ ನೀರಬೂದಿಹಾಳವು ಪ್ರಾಚೀನ ಮಾನವನ ವಸತಿ ನೆಲೆ ಸ್ಥಳವಾಗಿದೆ. ಹಾಗೆ ಇದರ ಹೆಸರಿನ ಹಿನ್ನೆಲೆ ಅವಲೋಕಿಸಿದಾಗ ಇದು ಒಂದು ಕೆರೆ ಪಕ್ಕದಲ್ಲಿ 'ಆದಿ ಮಾನವನ ವಸತಿ ನೆಲೆಗಳಿದ್ದವು'. ಯಾವುದೋ ಕಾರಣಕ್ಕೆ ಅವರು ಅಲ್ಲಿಂದ ಬೇರೆ ಕಡೆ ವಲಸೆ ಹೋಗುವಾಗ ತಾವು ಬಳಸಿಬಿಟ್ಟು ಹೋದ ಅವಶೇಷಗಳಿಗೆ ಬೆಂಕಿ ಹಚ್ಚಿ ಹೋದರು. ಅದು ಮುಂದೆ ಬೂದಿದಿಬ್ಬವಾಗಿ ನಿರ್ಮಾಣವಾಯಿತು. ಕಾಲಾಂತರದಲ್ಲಿ ಇಲ್ಲಿ ಮತ್ತೆ ಮಾನವನ ವಸತಿ

ನೆಲೆ ಬೆಳೆದು ಬಂದು ಅದಕ್ಕೆ ನೀರ ಬೂದಿಹಾಳ ಎಂಬ ಹೆಸರು ಪ್ರಾಪ್ತವಾಗಿದೆ ಎಂದು ಅಲ್ಲಿಯ ಸ್ಥಳೀಯರು ಹೇಳುತ್ತಾರೆ.


ನೀರುಬೂದಿಹಾಳ ಕೆರೆ : ಈ ಗ್ರಾಮದ ಮುಂದೆ ಬರುವ ಲೋಕಾಪೂರ ರಸ್ತೆಯ ಪಕ್ಕದಲ್ಲಿ ಬಹು ವಿಶಾಲವಾದ ಕೆರೆ ಇದೆ. ಇದು ಸುಮಾರು ೧೬೦೦ ಎಕರೆ ವಿಸ್ತಾರ ಹೊಂದಿದ ಮತ್ತು ಕರ್ನಾಟಕದ ಎರಡನೆ ದೊಡ್ಡ ಕೆರೆಯಾಗಿದೆ.[೪೧]



ನೀರುಬೂದಿಹಾಳ ಕೆರೆ ಒಂದು ನೋಟ

ಇದಕ್ಕೆ ಪೂರ್ವ ಮತ್ತು ಪಶ್ಚಿಮದ ಗುಡ್ಡದ ನೀರು ಹರಿದು ಬಂದು ಸೇರುತ್ತದೆ. ಇದರ ಸುತ್ತಲೂ ಸಾಮಾನ್ಯ ರಚನೆ ಹೊಂದಿದ ಏರಿಯಿದೆ. ಇದರ ದಕ್ಷಿಣಭಾಗದಲ್ಲಿ ಚೆಕ್‌ಡ್ಯಾಂ ಕಟ್ಟಿ ಅದರ ಮೂಲಕ ಹಲವಾರು ಗ್ರಾಮಗಳಿಗೆ ನೀರು ಪೂರೈಕೆಯಾಗುತ್ತದೆ. ಇದರ ನೀರು ಸುಮಾರು ನಾಲ್ಕು ತಿಂಗಳಕಾಲ ನಿಲ್ಲುತ್ತದೆ. ಇದರಿಂದ ಸುತ್ತಮುತ್ತಲಿನ ಹಲವಾರು ಗ್ರಾಮಗಳ ಅಂತರ್ಜಲ ವೃದ್ಧಿಗೊಳ್ಳುತ್ತಿದೆ. ಹಾಗಾಗಿ ಇದರಿಂದ ಸುಮಾರು ೩೦ ಕಿ.ಮೀ.ದೂರದಲ್ಲಿರುವ ಸೂಳಿಕೇರಿಯ ಹಲವು ಕುಟುಂಬಗಳು ತಮ್ಮ ಬೋರವೆಲ್ ನೀರು ಇಮ್ಮಡಿಗೊಂಡಾಗ ಅವರು ಸ್ವತ: ಕೆರೆಗೆ ಬಂದು ಪೂಜೆಗೈದು ಹೋಗುವರು. ಈ ರೀತಿ ಬೇರೆ ಗ್ರಾಮದ ಜನರು ಪೂಜೆಗೈಯ್ಯುವ ಪರಂಪರೆ ಇದೆ. ಇದರ ನೀರು ಕಾಲುವೆಗಳ ಮೂಲಕ ಕಲಾದಗಿ, ಶಾರದಾಳ, ಅಂಕಲಗಿ, ಗೋವಿನಕೊಪ್ಪ, ಖಜ್ಜಿಡೋಣಿ ಗ್ರಾಮಗಳ ಜಮೀನುಗಳಿಗೆ ಪೂರೈಕೆಯಾಗುತ್ತದೆ.

ಈ ಕೆರೆಯ ಪಕ್ಕದಲ್ಲಿ ಕರ್ನಾಟಕ ಸರ್ಕಾರದವರು ಪಕ್ಷಿಧಾಮ ನಿರ್ಮಿಸಲು ಸುಮಾರು ೧೫ ಎಕರೆ ಪ್ರದೇಶದಲ್ಲಿ ವ್ಯವಸ್ಥೆ ಮಾಡುತ್ತಿದ್ದಾರೆ. ಬಹಳ ಪ್ರಶಾಂತವಾದ ಮತ್ತು ವಿಶಾಲವಾದ ಕೆರೆ ಸ್ವಾಭಾವಿಕ ಪ್ರದೇಶ ಹೊಂದಿದ್ದರಿಂದ ಈ ಪಕ್ಷಿಧಾಮ ನಿರ್ಮಾಣಕ್ಕೆ ಕಾರಣವಾಗಿದೆ.



ಇಷ್ಟೊಂದು ಬೃಹದಾಕಾರದ ಕೆರೆ ಇವತ್ತು ಸಂಪೂರ್ಣವಾಗಿ ಹೂಳು ತುಂಬಿ ಸಾಕಷ್ಟು ಗಿಡ-ಗಂಟಿಗಳು ಬೆಳೆದು ನಿಂತಿವೆ. ಸರ್ಕಾರ ಮತ್ತು ಜಿಲ್ಲಾ ಪಂಚಾಯತಿಯವರು ತಕ್ಷಣ ಇದರ ಹೂಳು ತೆಗೆಯುವ ಕಾರ್ಯ ನಡೆಸಬೇಕಾಗಿದೆ. ಸ್ವಚ್ಚಗೊಳಿಸಿ ಇದನ್ನು ಒಂದು ಸುಂದರ ಪ್ರವಾಸಿ ತಾಣವನ್ನಾಗಿ ಮಾಡಬೇಕಾಗಿದೆ. ಹೆಚ್ಚು ನೀರನ್ನು ಕೆರೆಯಲ್ಲಿ ನಿಲ್ಲಿಸುವುದರಿಂದ ಅಂತರ್‌ಜಲ ಅಭಿವೃದ್ಧಿಯಾಗುತ್ತದೆ.

ಪರ್ವತಿ ಕೆರೆ :

ಬಾದಾಮಿ ತಾಲೂಕಿನ ಐತಿಹಾಸಿಕ ಪ್ರದೇಶವಾದ ಪರ್ವತಿಯ ಗುಳೇದಗುಡ್ಡ ಪಟ್ಟಣದ ಪೂರ್ವ ದಿಕ್ಕಿಗೆ ೫ ಕಿ.ಮೀ. ಅಂತರದಲ್ಲಿ ಬರುತ್ತದೆ. ಬಾದಾಮಿ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟ ಭಾಗವಾಗಿದ್ದು, ಅವರ ಕಾಲದ ಹಲವಾರು ಅವಶೇಷಗಳು ದೊರೆಯುತ್ತವೆ. ಈ ಗ್ರಾಮಕ್ಕೆ ಶಿವನ ಹೆಂಡತಿಯಾದ ಪಾರ್ವತಿಯ ಹೆಸರು ಇದ್ದು, ಕಾಲಾಂತರದಲ್ಲಿ ಪರ್ವತಿ ಎಂಬ ಹೆಸರು ಬಂದಿದೆ ಎಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಇದಕ್ಕೆ ಪೂರಕವಾಗಿ ಈರಣ್ಣ ದೇವಾಲಯವಿದ್ದು, ಇದರ ಪಕ್ಕದಲ್ಲಿ ಪಾರ್ವತಿ ಮಂದಿರ ಎದುರುಗಡೆ ನಂದಿ ಮಂಟಪವಿದ್ದು, ಪ್ರತಿ ವರ್ಷ ಈರಣ್ಣನ ತೆಪ್ಪದ ತೇರು ಎಳೆಯುತ್ತದೆ. ಹಾಗಾಗಿ ಇದಕ್ಕೆ ಪಾರ್ವತಿ, ಪರ್ವತಿ ಎಂಬ ಹೆಸರು ಬಂದಿರಬಹುದು.

೧. **ದೊಡ್ಡಕೆರೆ :** ಪರ್ವತಿ ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ವಿಶಾಲವಾದ ಕೆರೆಯು ೨೧೦ ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಇದರ ಅಂಗಳ ಸಂಪೂರ್ಣವಾಗಿ ಎರಿ ಮಣ್ಣಿನಿಂದ ಆವೃತವಾಗಿದೆ. ಏರಿಯನ್ನು ಬೃಹತ್ ಕಲ್ಲುಗಳ ಮೂಲಕ ನಿರ್ಮಾಣ ಮಾಡಿದ್ದಾರೆ. ಎರಡು ವಿಶಾಲವಾದ ಬೆಟ್ಟಗಳ ನಡುವೆ ಬಾರಿ ನಿರ್ಮಿಸಿ ಅದರ ಮಧ್ಯದಲ್ಲಿ ಒಂದು ತೂಬನ್ನು ನಿರ್ಮಿಸಿದ್ದಾರೆ. ಅದರ ಮೂಲಕ ದೊಡ್ಡ ಕೆರೆಯ ನೀರು ತುಂಬಿದಾಗ ಅದು ಸಣ್ಣ ಕೆರೆಗೆ ಬರುತ್ತದೆ. ಕೆರೆಯ ಅಂಗಳ ಸಂಪೂರ್ಣವಾಗಿ ಹೂಳು ತುಂಬಿದೆ. ಕೆರೆಯು ಖಾಲಿಯಾದಾಗ ರೈತರು ಅದರ ಎರಿಮಣ್ಣನ್ನು (ಕಪ್ಪು ಮಣ್ಣನ್ನು) ಹೊಲಗಳಿಗೆ ಒಯ್ಯುತ್ತಾರೆ. ಅಲ್ಲದೆ ಕೆಲವು ಕಡೆ ಬೆನೆಗಳು ರೈತರು ಅಂಗಳದಲ್ಲಿ ೧೫ ರಿಂದ ೨೦ ಫೂಟಿನ ಬಾವಿಗಳನ್ನು ತೋಡಿದಾಗ ನೀರು ಬರುತ್ತದೆ. ಅದಕ್ಕೆ ಪೆಟ್ರೋಲ್ ಎಂಜಿನ್ ಮೂಲಕ ನೀರು ಬಳಸಿ ಶೇಂಗಾ ಬೆಳೆ ತೆಗೆಯುತ್ತಾರೆ. ಇದರ ಕೆರೆಯ ಅಂಗಳದಲ್ಲಿ ಅಂತರ್‌ಜಲಮಟ್ಟ ಮೇಲೆ ಇದೆ. ಇದು ಜಿಲ್ಲೆಯ ಎಲ್ಲಾ ಕೆರೆಗಳಿಗಿಂತ ವಿಶಿಷ್ಟವಾಗಿದೆ.

೨. **ಸಣ್ಣ ಕೆರೆ :** ಪರ್ವತಿಯ ಈರಣ್ಣನ ದೇವಾಲಯ ಎದುರಿಗೆ ಪೂರ್ವ ದಿಕ್ಕಿನಲ್ಲಿ ಬರುವ ಕೆರೆಯು ಇನ್ನೊಂದು ಸಣ್ಣ ಕೆರೆಯಾಗಿದೆ. ಇದು ೧೭೬ ಎಕರೆ ವಿಸ್ತಾರವನ್ನು ಹೊಂದಿದೆ. ಕೆರೆಯ ಪೂರ್ವ-ಪಶ್ಚಿಮದಲ್ಲಿ ಬೆಟ್ಟಗಳಿಗೆ ಪಶ್ಚಿಮ ಬೆಟ್ಟದಲ್ಲಿ ಈರಣ್ಣನ ದೇವಾಲಯವಿದೆ. ಕೆರೆಯ ಉತ್ತರ ಭಾಗದಲ್ಲಿ ಏರಿಯನ್ನು ನಿರ್ಮಿಸಿ ತೂಬಿನ ಮೂಲಕ

ಕಾಲುವೆಗಳಿಗೆ ನೀರು ಬಿಡುತ್ತಾರೆ. ಕೆರೆಯ ಅಂಗಳ ಕಲ್ಲು ಮತ್ತು ಕೆಂಪು ಮಣ್ಣಿನಿಂದ ಆವೃತವಾಗಿದೆ. ಈರಣ್ಣನ ಪೂಜೆಗೆ ಕೆರೆಯ ನೀರು ಅರ್ಪಿತವಾಗುತ್ತದೆ. ಪ್ರತಿವರ್ಷ ಈ ಕೆರೆಯಲ್ಲಿ ಅಕ್ಟೋಬರ್ ತಿಂಗಳಲ್ಲಿ ತೆಪ್ಪದ ತೇರು ಎಳೆಯುತ್ತಾರೆ. ಜಿಲ್ಲೆಯಲ್ಲಿ ಎರಡು ಪ್ರಮುಖವಾದ ಐತಿಹಾಸಿಕ ಕೆರೆಗಳಲ್ಲಿ ಮಾತ್ರ ಆ ತೇರನ್ನು ಎಳೆಯುವುದರ ಮೂಲಕ ಕೆರೆಯ ಪಾವಿತ್ರತೆಯನ್ನು ಇಮ್ಮಡಿಗೊಳಿಸಿದ್ದಾರೆ. ಜನರು ಅದರ ರಕ್ಷಣೆಗೆ ಕಂಕಣಬದ್ಧರಾಗಿ ನಿಂತಿದ್ದಾರೆ. ಇದು ಐತಿಹಾಸಿಕ ಹಾಗೂ ಧಾರ್ಮಿಕ ಕೆರೆಯಾಗಿ ಬೆಳೆದು ಬಂದಿದೆ.

ಕೆರಕಲಮಟ್ಟಿ ಕೆರೆ :

ಬಾದಾಮಿ ತಾಲೂಕಿನ ಐತಿಹಾಸಿಕ ದೇಶಗತಿ ಮನೆತನಕ್ಕೆ ಹೆಸರುವಾಸಿಯಾದ ಕೆರಕಲಮಟ್ಟಿ ಎಂಬ ಗ್ರಾಮವು ಬಾಗಲಕೋಟ ಪಟ್ಟಣದ ಪಶ್ಚಿಮಕ್ಕೆ ೩೦ ಕಿ.ಮೀ. ಅಂತರದಲ್ಲಿದೆ. ಇಲ್ಲಿ ದೇಶಗತಿ ಮನೆತನದ ೧೮ನೇ ಶತಮಾನದ ಬೃಹತ್ ಗಾತ್ರದ ಕೋಟೆಗೋಡೆ ಒಳಗಡೆ ಬೃಹತ್ತಾಕಾರದ ದೇಶಗತಿ ಮನೆಯಿದೆ. ನಾನಾ ಚಿತ್ರಗಳ ಚಿತ್ರೀಕರಣ ಮಾಡುವ ಮೂಲಕ ಜಿಲ್ಲೆಯ ಹೆಚ್ಚು ಪ್ರಚಾರದಲ್ಲಿರುವ ಗ್ರಾಮವಾಗಿದೆ.

ಇಲ್ಲಿರುವ ಕೆರೆಯು ದೇಸಾಯಿಯರ ವಾಡೆಯ ಪೂರ್ವದಲ್ಲಿ ೨೪ ಎಕರೆ ವಿಸ್ತಾರ ಹೊಂದಿದ ಕೆರೆಯಿದೆ. ಇದು ಸಂಪೂರ್ಣವಾಗಿ ಬಿಳಿ ಗರಸದಿಂದ ಅಂಗಳ ಆವೃತ್ತವಾಗಿದೆ. ಸುತ್ತಲೂ ಗರಸಿನಿಂದ ನಿರ್ಮಾಣ ಮಾಡಿದ್ದಾರೆ. ಮೊದಲು ಕುಡಿಯುವ ನೀರಿನ ಸಲುವಾಗಿ ಬಳಕೆ ಮಾಡುತ್ತಿದ್ದರು. ಇವತ್ತು ದನ-ಕರುಗಳಿಗೆ ಹಾಗೂ ಇತರೆ ಕಾರ್ಯಗಳಿಗೆ ಬಳಕೆಯಾಗುತ್ತಿದೆ. ಇದಕ್ಕೆ ಯಾವುದೇ ರೀತಿಯ ನೀರಿನ ಕಾಲುವೆಗಳಿಲ್ಲ. ಈ ಕೆರೆಯನ್ನು ದೇಶಗತಿ ಮನೆತನದವರು ಗ್ರಾಮದ ಪ್ರಜಾ ಕಲ್ಯಾಣಕ್ಕಾಗಿ ಸುಮಾರು ೩೦೦ ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದಾರೆಂದು ದೇಶಗತಿ ಮನೆತನದವರು ಹೇಳುತ್ತಾರೆ. ಊರಿನ ಪ್ರಮುಖ ಆಚರಣೆಗಳು ಇಲ್ಲಿ ನಡೆಯುತ್ತವೆ. ವಾಡೆದವರೂ ಕೂಡ ಕೆರೆ ತುಂಬಿದಾಗ ಗಂಗಾ ಪೂಜೆ ಮಾಡುವರು. ಸ್ಥಳೀಯರು ಕೆರೆ ತುಂಬಿದರೆ ಸುತ್ತಮುತ್ತ ಇರುವ ನೂರಾರು ಎಕರೆ ನೀರಾವರಿ ಬೋರ್‌ವೆಲ್‌ಗಳಲ್ಲಿ ನೀರು ಹೆಚ್ಚು ಶೇಖರಣೆಯಾಗಿ ಹೆಚ್ಚಿನ ನೀರನ್ನು ಒದಗಿಸುತ್ತವೆ. ಯಾವುದೇ ರೀತಿ ನೀರಿನ ತೊಂದರೆ ಕಂಡುಬರುವುದಿಲ್ಲ ಎಂದು ಹೇಳುತ್ತಾರೆ. ಈಗಲೂ ಈ ಕೆರೆ ಸ್ಥಿತಿ ಉತ್ತಮವಾಗಿದೆ.

ಸೂಳಿಕೇರಿ ಕೆರೆ :

ಬಾಗಲಕೋಟ-ಬಾದಾಮಿ ಮಾರ್ಗದಲ್ಲಿ ಬರುವ ಹಾಗೂ ಜಿಲ್ಲಾ ಕೇಂದ್ರದಿಂದ ೧೬ ಕಿ.ಮೀ. ಅನತಿ ದೂರದಲ್ಲಿ ಬರುವ ಬಹು ಪ್ರಾಚೀನ ಗ್ರಾಮ ಸೂಳಿಕೇರಿಯಾಗಿದೆ. ಇದು ಹಲವು ರಾಜನತೆನದ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿದೆ. ಇಲ್ಲಿ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ವಿಜಯನಗರ ಸಾಮ್ರಾಜ್ಯ ಹಾಗೂ ಬಿಜಾಪುರ

ಆದಿಲ್‌ಶಾಹಿಗಳ ಆಡಳಿತದ ನೂರಾರು ಅವಶೇಷಗಳು ಕಂಡು ಬರುತ್ತವೆ.

ಈ ಗ್ರಾಮದ ಹೆಸರನ್ನು ಅವಲೋಕನ ಮಾಡಿದಾಗ ಹಲವಾರು ವಿಭಿನ್ನ ಸಂಗತಿಗಳು ತಿಳಿದು ಬರುತ್ತವೆ. ಅದರಲ್ಲಿ ಒಂದು ವಿಚಾರದ ಪ್ರಕಾರ ಈ ಭಾಗದ ಸಾಮಂತ ರಾಜನ ಉಪಪತ್ನಿಯು (ಸೂಳಿ) ಪ್ರಜೆಗಳ ಕುಡಿಯುವ ನೀರಿಗಾಗಿ ಅವಳ ತನ್ನ ಆದಾಯವನ್ನು ಒಟ್ಟುಗೂಡಿಸಿ ಇಲ್ಲಿ ಒಂದು ವಿಶಾಲವಾದ ಕೆರೆಯನ್ನು ಕಟ್ಟಿಸಿರುತ್ತಾಳೆ. ಇದರ ಪಕ್ಕದಲ್ಲಿ ಗ್ರಾಮ ಬೆಳೆದಿದ್ದರಿಂದ ಈ ಪ್ರದೇಶಕ್ಕೆ ಸೂಳಿಕೇರಿ ಎಂದು ಬಂದಿರಬಹುದೆಂದು ಸ್ಥಳೀಯರ ಅಭಿಪ್ರಾಯ.

ಇಲ್ಲಿರುವ ಕೆರೆಯ ಅಂಗಳದಲ್ಲಿ ಅನೇಕ ಖಾಸಗಿ ಮತ್ತು ಸರಕಾರಿ ಕಟ್ಟಡಗಳನ್ನು ಕಟ್ಟಿದ್ದಾರೆ. ಕೆರೆಯ ಅಂಗಳವನ್ನು ನಾನಾ ರೀತಿಯಾಗಿ ಆಕ್ರಮಿಸಿಕೊಂಡಿದ್ದಾರೆ. ಈ ಕೆರೆ ಕೇವಲ ನಾಲ್ಕು ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಪಶ್ಚಿಮ ಗುಡ್ಡದ ನೀರು ಕೆರೆಗೆ ಬಂದು ಸೇರುತ್ತದೆ. ಸ್ಥಳೀಯ ಸರಕಾರ ಮತ್ತು ಜಿಲ್ಲಾ ಆಡಳಿತ ಕೆರೆಯ ಹೂಳನ್ನು ತೆಗೆಸಿ ಮೂಲ ಕೆರೆಯನ್ನು ಸಂರಕ್ಷಣೆ ಮಾಡುವುದು ಅತೀ ಅವಶ್ಯವಾಗಿದೆ.

ಕೆರೂರ ಕೆರೆ:

ಕೆರೆಗೆ ಹಾರವಾದಳೇ ಕೆಂಚಮ್ಮ........!

ಬಾಗಲಕೋಟ ಜಿಲ್ಲಾ ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿರುವ ಹಾಗೂ ಬಾದಾಮಿಯ ವಾಯುವ್ಯಕ್ಕೆ ೧೭ ಕಿ.ಮೀ. ದೂರದಲ್ಲಿರುವ ಮತ್ತು ಹುಬ್ಬಳ್ಳಿ-ಬಿಜಾಪೂರದ ರಾಜ ಮಾರ್ಗಮಧ್ಯದಲ್ಲಿ ಬರುವ ಪ್ರಮುಖ ಐತಿಹಾಸಿಕ ಒಂದು ಪಟ್ಟಣ ಕೆರೂರು. ಇದರ ಸುತ್ತಲೂ ಹಾಳು ಬಿದ್ದ ಕೋಟೆ ಗೋಡೆ ಮತ್ತು ಇತರೆ ಅವಶೇಷಗಳಿವೆ. ಹಿಂದೆ ಬಿಜಾಪೂರ ಆದಿಲ್‌ಶಾಹಿ ಕಾಲದ ಪ್ರಮುಖ ಭಾಗವಾಗಿತ್ತು. ಅವರ ಕಾಲದಲ್ಲಿ ಊರಿನ (ಕೋಟೆ) ಈಶಾನ್ಯ ಭಾಗದಲ್ಲಿ ವಾಸ್ತು ಪ್ರಕಾರವಾಗಿ ವಿಶಾಲವಾದ ಕೆರೆಯನ್ನು ಆದಿಲ್‌ಶಾಹಿಗಳು ನಿರ್ಮಿಸಿದ್ದಾರೆ.

ಕೆರೂರ ಪಟ್ಟಣದ ಹೆಸರಿನ ಹಿನ್ನೆಲೆಯನ್ನು ನಾವು ನೋಡಿದಾಗ ಅದು ಈ ರೀತಿ ತಿಳಿದು ಬರುತ್ತದೆ. ಪಟ್ಟಣದ ಈಶಾನ್ಯ ಭಾಗದಲ್ಲಿರುವ ಕೆರೆಯೂ ಬಹು ವಿಶಾಲವಾಗಿ ಹರಡಿಕೊಂಡಿದೆ. ಹಾಗಾಗಿ ಇದಕ್ಕೆ 'ಕೆರೆಊರು- ಕೆರೆವೂರು' ಎಂದು ಕರೆಯಲ್ಪಟ್ಟು ಮುಂದೆ ರೂಢಿಗತವಾಗಿ ಕೆರೂರ ಎಂದು ಹೆಸರು ಬಂದಿರಬಹುದೆಂದು ಅಲ್ಲಿಯ ಸ್ಥಳೀಯರು ಹೇಳುತ್ತಾರೆ.

ಪಟ್ಟಣದ ಮೇಲ್ಭಾಗದ ಗುಡ್ಡದ ಅಂಚಿನಲ್ಲಿ ಶತಮಾನಗಳ ಹಿಂದೆ ಕುಡಿಯುವ ನೀರಿಗಾಗಿ ನಿರ್ಮಿಸಲ್ಪಟ್ಟ ೧೧೦ ಎಕರೆ ವಿಸ್ತೀರ್ಣವಾದ ಐತಿಹಾಸಿಕ ಕೆರೆಯು ನೀರಿನಿಂದ ತುಂಬಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ನೂರಾರು ಗ್ರಾಮಗಳ ಅಂತರ್ಜಲಮಟ್ಟ

ಹೆಚ್ಚಿಸಿದೆ.

ಇಂತಹ ಕೆರೆ ಇತಿಹಾಸದ ಗರ್ಭದಲ್ಲಿ ಪುರಜನರ ದಾಹ ತೀರಿಸಲು ಜೀವ ಜಲಕ್ಕಾಗಿ ಜೀವನವನ್ನು ತ್ಯಾಗ ಮಾಡಿದ ಹೆಣ್ಣು ಮಗಳೊಬ್ಬಳ ದುರಂತ ಕಥೆ ಇಲ್ಲಿದೆ.

ಸರದಾರ ಸಲಬತ್‌ಖಾನ್ ಅವರನ್ನು ಕೆರೂರಿನ ನಿರ್ಮಾರ್ಪಕರೆಂದು ನಂಬಲಾಗಿದ್ದು, ಕೆರೆಯ ತಡೆಗೋಡೆ ಹತ್ತಿರದಲ್ಲಿ ಸಮಾಧಿಯಿದ್ದು, ಅವರ ಆಡಳಿತಾವಧಿಯಲ್ಲಿ ಅಥವಾ ಅದಕ್ಕಿಂತ ಮುಂಚೆ ಐತಿಹಾಸಿಕ ಕೆರೆ ಹಾಗೂ ಕೋಟೆ ಗೋಡೆಯ ನಿರ್ಮಾಣ ಕಾರ್ಯವು ನಡೆದಿರಬಹುದೆಂದು ತರ್ಕಿಸಲಾಗಿದೆ.

ಅಂದು ನಿರ್ಮಾಣಗೊಂಡ ಕೆರೆಯ ತಡೆಗೋಡೆಯು ಮೇಲಿಂದ ಮೇಲೆ ಒಡೆಯುತ್ತಿತ್ತಂತೆ! ಪತಿವ್ರತೆಯಾದ ಗರ್ಭಿಣಿ ಹೆಣ್ಣು ಮಗಳೊಬ್ಬಳನ್ನು ಕೆರೆಗೆ ಆಹುತಿ ನೀಡಿದರೆ ತಡೆಗೋಡೆಯು ಒಡೆಯುವುದಿಲ್ಲ ಎಂಬ ದೈವ ವಾಣಿಯಾಗಿ, ಪುರ ಪ್ರಮುಖರ ಆಶಯದಂತೆ ಕಮತರ ಕುಟುಂಬದ ಕೆಂಚಮ್ಮ ಜೀವಂತವಾಗಿ ಸಮಾಧಿಗೊಂಡಳೆಂದು ಹೇಳಲಾಗುತ್ತದೆ.

ಕೋಟೆ ಗೋಡೆಗಳಿಂದ ಸುತ್ತುವರೆದ ಅಂದಿನ ಕೆರೂರ ಗ್ರಾಮವು ಇಂದಿನ ಕಿಲ್ಲಾ ಪೇಟೆಯಾಗಿದ್ದು, ಅಲ್ಲಿ ವಾಸಿಸುವ ಕಮತರ ಕುಟುಂಬದ ವಂಶಸ್ಥಳೆಂದು ಹೇಳಲಾಗುವ ಹೆಣ್ಣು ಮಗಳು ಕೆರೆಗೆ ಹಾರ (ಬಲಿ) ವಾದಳೆ? ಎಂಬ ಪ್ರಶ್ನೆಯು ಈಗ ಪಟ್ಟಣಿಗರ ಕುತೂಹಲವನ್ನು ಹೆಚ್ಚಿಸಿದೆ.

ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರು ಪೂರೈಸುವ ೧೪ ಕೋಟಿ ರೂ. ವೆಚ್ಚದ ಯೋಜನೆಯ ಕಾಮಗಾರಿ ನಡೆಯುತ್ತಿದ್ದು, ಈಗ ಕೆರೆಯ ತಡೆಗೋಡೆಯನ್ನು ದುರಸ್ತಿಗೊಳಿಸಿ ಬಲಪಡಿಸುವ ಕಾರ್ಯವೂ ಭರದಿಂದ ಸಾಗಿದೆ. ತಡೆಗೋಡೆಯೊಳಗೆ ಕೆಂಚಮ್ಮ ಎಂಬ ಹೆಣ್ಣು ಮಗಳು ಜೀವಂತವಾಗಿ ಸಮಾಧಿಗೊಂಡಳೆಂದು ನಂಬಲಾದ ಸ್ಥಳವು ಕುತೂಹಲದ ಕೇಂದ್ರವಾಗಿ ದಿನಿತ್ಯ ನೂರಾರು ಪಟ್ಟಣಿಗರನ್ನು ಆಕರ್ಷಿಸುತ್ತಿದೆ.

ಕೆರೆಯ ನೀರಿನ ಅಂಚಿನಲ್ಲಿ ಕಲ್ಲು ಗಚ್ಚಿನಿಂದ ಕಟ್ಟಲ್ಪಟ್ಟ ಗೋಡೆಯಿದ್ದು, ಅದಕ್ಕೆ ಎರಡು ಕೆತ್ತನೆಯ ಕಲ್ಲು ಕಂಬಗಳನ್ನು ಅಳವಡಿಸಿ ಅದರ ಬಾಗಿಲನ್ನು ಭಾರವಾದ ಕಲ್ಲು ಚಪ್ಪಡಿಯಿಂದ ಮುಚ್ಚಲಾಗಿದೆ. ಅದರೊಳಗೆ ಅನೇಕ ತಿಂಗಳುಗಳ ಕಾಲ ಸಾಕಾಗುವಷ್ಟು ನೀರು ಆಹಾರ ಪದಾರ್ಥ ಹಾಗೂ ಅವಶ್ಯಕ ಸಾಮಗ್ರಿಗಳೊಂದಿಗೆ ತುಂಬು ಗರ್ಭಿಣಿಯಾದ ಕೆಂಚಮ್ಮ ಎಂಬ ಹೆಣ್ಣು ಮಗಳನ್ನು ಒಳಗೆ ಹಾಕಿ ಕಲ್ಲುಚಪ್ಪಡಿಯಿಂದ ಬಾಗಿಲನ್ನು ಭದ್ರಪಡಿಸಲಾಗಿದೆ ಎಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಅದು ಕೆರೆಯ ಹೆಚ್ಚಿನ ನೀರು ಹರಿದು ಹೋಗುವ ಕಾಲುವೆ ಎನ್ನುತ್ತಾರೆ.

ಕೆಂಚಮ್ಮ ಕಮತರ ಮನೆತನದ ಸುಂದರ ಯುವತಿಯಾಗಿದ್ದಳಂತೆ! ಪರಮ

ಪತಿವ್ರತೆಯಾಗಿ, ತ್ಯಾಗ ಬುದ್ಧಿ ಹೊಂದಿದ್ದ ಅವಳು ಸ್ವ ಇಚ್ಛೆಯಿಂದ ಕೆರೆಯ ನೀರಿಗಾಗಿ ಆತ್ಮಾಹುತಿ ಮಾಡಿಕೊಂಡ ಬಗ್ಗೆ ಹಿರಿಯ ತಲೆಮಾರಿನವರಲ್ಲಿ ಏಕಾಭಿಪ್ರಾಯವಿದೆ. ಆದರೆ ಅವಳು ಯಾವ ಸ್ಥಳದಲ್ಲಿ, ಹೇಗೆ ಕರೆಗೆ ಹಾರವಾದಳು? ಎಂಬ ಬಗ್ಗೆ ಬೇರೆ ಬೇರೆ ಮಾತುಗಳು ಕೇಳಿ ಬರುತ್ತವೆ. ಕಿಲ್ಲಾ ಪೇಟೆಯಲ್ಲಿರುವ ಕಮತರ ಮನೆತನದ ೧೨ ಕುಟುಂಬಗಳಿದ್ದು ಹಿಂದೆ ಅವರಿಗೆ ಕೆರೆಯ ಪಕ್ಕದಲ್ಲಿರುವ ೧೬ ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಲಾಗಿದೆ. ಮತ್ತು ಅವರು ಪ್ರತಿ ವರ್ಷ ಕೆರೆಗೆ ಹೊಸ ನೀರು ಬಂದು ತುಂಬಿಕೊಂಡಾಗ ಕೆರೆಯನ್ನು ಪೂಜಿಸುವ ಪರಿಪಾಠವನ್ನು ಮುಂದುವರೆಸಿಕೊಂಡು ಬಂದಿದ್ದು, ಕೆಂಚಮ್ಮ ಕಮತರ ಕುಟುಂಬದ ಕುಡಿ ಎಂಬುದಕ್ಕೆ ಪುರಾವೆಗಳಿವೆ.

ಕೆರೆಗೆ ಹೋಗಿ ಆತ್ಮಾಹುತಿ ಮಾಡಿಕೊಂಡ ಸ್ಥಳವನ್ನು ಪರಿಶೀಲಿಸಿ ಅದನ್ನು ಹಿರಿಯರ ಸಮ್ಮುಖದಲ್ಲಿ ತೆರೆದು ನೋಡಿ, ಅಲ್ಲಿರಬಹುದಾದ ಅವಶೇಷಗಳನ್ನು ಸಂಗ್ರಹಿಸಿ ತಡೆಗೋಡೆ ದುರಸ್ತಿಗೊಳಿಸಿ ಅಲ್ಲಿ ಕೆಂಚಮ್ಮ ದೇವಿ ಮಂದಿರ ನಿರ್ಮಿಸಬೇಕೆಂದು ಒತ್ತಾಯಿಸಿದ್ದಾರೆ.

ಹುನಗುಂದ ತಾಲೂಕಿನ ಕೆರೆಗಳು :

ಐಹೊಳೆ ಕೆರೆ :

ಮಲಪ್ರಭೆಯ ತಟದ ಮೇಲೆ ಗುಡಿಗುಚ್ಛಗಳನ್ನು ಅರಳಿಸಿ ಕಲಾಸೌರಭವನ್ನು ಪಸರಿಸುತ್ತಿರುವ ಗ್ರಾಮವಿದು. [೪೨] ಕರ್ನಾಟಕದ ಕಲಾ ಇತಿಹಾಸದಲ್ಲಿ ದೇವಾಲಯಗಳ ವಾಸ್ತುಶೈಲಿಗಳ ತೊಟ್ಟಿಲು, ಪ್ರಯೋಗಾಲಯ ಎಂದೆ ಖ್ಯಾತಿ ಪಡೆದಿರುವ ಐಹೊಳೆಯು ಹುನಗುಂದದಿಂದ ೨೬ ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ ಇದನ್ನು 'ಅಯ್ಯಾವೊಳೆ' ಹಾಗೂ 'ಆರ್ಯಪುರ' ಎಂದು ಉಲ್ಲೇಖಿಸಲಾಗಿದೆ. ಈಗ ಇದನ್ನು ಐಹೊಳೆ, ಐವಳಿ ಮತ್ತು ಅಯ್ಯಹೊಳೆ ಎಂದು ಕರೆಯುತ್ತಾರೆ. ಬಾದಾಮಿ ಚಾಲುಕ್ಯರ ಪ್ರಮುಖ ನಗರವಾಗಿದ್ದ ಇದು ವಾಸ್ತುಶಿಲ್ಪ ಸ್ಮಾರಕಗಳಿಗಾಗಿ ಹೆಸರುವಾಸಿಯಾಗಿದೆ. ಮೇಗುತಿ ಗುಡ್ಡದ ಬಳಿ ಇರುವ 'ಮೋರೇರ' ಅಂಗಡಿಗಳು ಎಂದು ಕರೆಯಲಾದ ಸ್ಥಾನದಲ್ಲಿ ಹಲವು ಪ್ರಾಗೈತಿಹಾಸಿಕ ಶಿಲಾಗೋರಿಗಳಾಗಿವೆ. ಐಹೊಳೆ ಕೆಲವು ದೇಗುಲದ ಬಳಿ ನಡೆಸಿದ ಉತ್ಖನನಗಳಿಂದ ಚಾಲುಕ್ಯ ಪೂರ್ವಕಾಲದ ಇಟ್ಟಿಗೆ ಕಟ್ಟಡಗಳ ಸ್ಥಳಪಾಯಗಳು, ಮಡಿಕೆ, ಕುಡಿಕೆಗಳು ದೊರೆತಿವೆ. ಇಲ್ಲಿ ಬಾದಾಮಿ ಚಾಲುಕ್ಯರ ಆಡಳಿತ ಆರಂಭವಾದ ಮೇಲೆ ಅಭಿವೃದ್ಧಿ ತ್ವರಿತವಾಯಿತು. ೭ನೇ ಶತಮಾನದ ಸುಮಾರಿಗೆ ಪ್ರಸಿದ್ಧ ಕಲಾಕೇಂದ್ರವಾಗಿ ಬೆಳೆಯಿತು. ಇಲ್ಲಿರುವ ಹೆಚ್ಚಿನ ಶಾಸನಗಳು ೬ ರಿಂದ ೮ ನೇ ಶತಮಾನಕ್ಕೆ ಸೇರಿದವುಗಳಾಗಿವೆ. ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೆಲವು ದೇಗುಲಗಳು ನಿರ್ಮಾಣವಾಗಿವೆ.

ಐಹೊಳೆ ಐನೂರು ಮಹಾಜನರಿರುವ ಅಗ್ರಹಾರ ಮತ್ತು ವರ್ತಕರ ಸಂಘವಾಗಿತ್ತು. ಪರಶುರಾಮ ತನ್ನ ಕೊಡಲಿಯನ್ನು ಈ ಹೊಳೆಯಲ್ಲಿ ತೊಳೆದಿದ್ದುದರಿಂದ ಅದನ್ನು ನೋಡಿದ ಜನ 'ಅಯ್ಯಾ ಹೊಳೆ' ಎಂದು ಕರೆದದ್ದು ಪ್ರತೀತಿ ಇದೆ. ಐಹೊಳೆಯು ಪ್ರಾಚೀನತೆಯ ರಾಮಾಯಣದ ಜೊತೆಗೆ ತಳಕು ಹಾಕಿಕೊಂಡಿದೆ. ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ ಇಲ್ಲಿನ ರಾವಣಫಡಿ ಗುಹೆಯ ಸ್ಥಳದಲ್ಲಿ ವಿಶ್ರಾಂತಿ ಪಡೆದ ಎಂಬ ಪ್ರತೀತಿ ಇದೆ.

ಇಲ್ಲಿಯ ಒಂದು ಶಾಸನದಲ್ಲಿ ಪರಶುರಾಮನ ಗುಡಿ ಹತ್ತಿರ ಇರುವ ಸರ್ವೇ ನಂ. ೭೫ ರಲ್ಲಿರುವ ಬಂಡೆಗಲ್ಲಿನ ಮೇಲಿನ ಶಾಸನವು ರಾಜನಾದ ಬೆರಿಗೆದೇವನಾಯಕ ವೊಡೆಯನ ರಾಮಲಿಂಗ (ದೇವರ) ಸ್ತಾನಿಕ ಮಾಪೆಖಾನನ ಚಿಕ್ಕ ಸೋಮ ನಾಯಕನಿಗೆ ಬೆಸಕನವೊರೆ ಗ್ರಾಮದ ತುಸಬುರ್‌ಚಿ ಕೆರೆಯ ಸ್ಥಳವನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಈ ದಾನಕ್ಕೆ ತಪ್ಪಿದರೆ ಹಿಂದುವಾದಲ್ಲಿ ಕಾಶಿಯಲ್ಲಿ ಹಸುವನ್ನು ಕೊಂದ ಪಾಪಕ್ಕೂ, ಮುಸಲ್ಮಾನನಾದಲ್ಲಿ ಮಕ್ಕಾದಲ್ಲಿ ಪಾಪ ಮಾಡಿದ ಕಾರ್ಯಕ್ಕೂ ಹೋಗುವರು ಎಂದು ತಿಳಿಸುತ್ತದೆ.

ಐಹೊಳೆ ಶಾಸನದಲ್ಲಿ ಉಲ್ಲೇಖಗೊಂಡ ತುಸಬುರ್‌ಚಿ ಕೆರೆಯ ಸ್ಥಳವನ್ನು ದಾನವಾಗಿ ನೀಡಿದ ಮಾಹಿತಿ ಇದೆ. ಆದರೆ ಇಂದು ಈ ಕೆರೆ ಯಾವುದು ಮತ್ತು ಎಲ್ಲಿ ಬರುತ್ತದೆ ? ಅದರ ವಿಸ್ತೀರ್ಣ, ಅದರ ಆಯ ಕಟ್ಟಿನ ಬಗ್ಗೆ ಮಾಹಿತಿ ದೊರೆತಿಲ್ಲ. ಹಾಗಾಗಿ ಇದರ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ.

ಅರಸಿಬೀದಿ ಕೆರೆ :

ಅರಸಿಬೀದಿ ಶಾಸನೋಕ್ತ ವಿಕ್ರಮಪುರವು ಹುನಗುಂದದಿಂದ ನೈರುತ್ಯಕ್ಕೆ ೨೬ಕಿ.ಮೀ.ದೂರದಲ್ಲಿದ್ದು, ಕಲ್ಯಾಣದ ಚಾಲುಕ್ಯರ ದ್ವಿತೀಯ ರಾಜಧಾನಿಯಾಗಿತ್ತು. ವಿಕ್ರಮಪುರವು ಅಂದಿನ ಕಾಲದ ಬ್ರಹ್ಮಪುರಿ, ಮಹಾ ಅಗ್ರಹಾರವೆಂದು ಹೆಸರುಪಡೆದ ಪ್ರಾಚೀನ ಸ್ಥಳವಾಗಿದೆ.[೪೩] ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಐಹೊಳೆಯಿಂದ ಸಮೀಪದಲ್ಲಿರುವ ಗುಡೂರು ಗ್ರಾಮದ ಬಲಕ್ಕೆ ೫ ಕಿ.ಮೀ. ಅಂತರದಲ್ಲಿರುವ 'ಅರಸಿಬೀದಿ' ಒಂದು ಕಾಲಕ್ಕೆ ರಾಜಧಾನಿಯಾಗಿ ಮೆರೆದ ಸ್ಥಳ. ಇಂದು ಅವಶೇಷಗಳಡಿಯಲ್ಲಿ ಹೂತುಹೋದ ಪ್ರದೇಶ. ಕಲ್ಯಾಣ ಚಾಲುಕ್ಯರಲ್ಲಿ ಸ್ವತಂತ್ರ ರಾಜ್ಯಭಾರ ನಡೆಸಿದ ಕೆಲವೇ ರಾಣಿಯರಲ್ಲಿ ಒಬ್ಬಳಾದ ರಾಣಿ ಅಕ್ಕಾದೇವಿಯು ಕ್ರಿ.ಶ. ೧೧ ರಿಂದ ೧೩ನೆಯ ಶತಮಾನದ ಸುಮಾರಿನಲ್ಲಿ ಅರಸಿಬೀದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದಳು.

ಮನುಷ್ಯನ ಸ್ವಾರ್ಥ ಲಾಲಸೆ ಇತಿಹಾಸದ ಅವಶೇಷಗಳೆಂದರೆ ಅದರ ಒಡಲಲ್ಲಿ

ಪ್ರತೀಕವಾಗಿ ಬಂಗಾರವೇನಾದರೂ ಸಿಕ್ಕಿತೆಂಬ ದುರಾಲೋಚನೆಯಿಂದ ಸ್ಮಾರಕವಗಳನ್ನು ಅಗೆದು ಕೆಡಲಾಗಿದೆ. ಇಂದು ಭಗ್ನಾವೇಶೇಷಗಳಿಂದ ಶೇಷವಾಗಿ ಉಳಿದಿರುವ ಅರಸಿಬೀದಿಯ ದುರ್ವ್ಯವಸ್ಥೆ ಬಹುಶಃ ಈ ಭೂಮಿಯ ಮೇಲಿನ ಯಾವ ರಾಜಧಾನಿಗೂ ಬಂದಿರಲಿಕ್ಕಿಲ್ಲ.

ಅರಸಿಬೀದಿ ಈಗ ಸಂಪೂರ್ಣ ಜನವಸತಿ ರಹಿತ ಗ್ರಾಮ. ಇಲ್ಲಿ ಈಗ ಪಾಳು ಬಿದ್ದಿರುವ ಎರಡು ಜಿನಾಲಯಗಳು, ಕೆರೆಯ ಅವೇಶೇಷ ಅನಾಥವಾಗಿ ಬಿದ್ದಿರುವ ಶಾಸನ, ಸ್ಮಾರಕಗಳು ಮನೆ ಮಾರು ಅವಶೇಷಗಳು, ಮಣ್ಣಿನ ಪಾತ್ರೆ ಪರಡಿಗಳು, ಶಿಥಿಲಗೊಂಡ ಗೋಡೆಗಳು, ಭಗ್ನ ಶಿಲಾ ವಿಗ್ರಹಗಳು, ಬಂಗಾರದ ಆಸೆಗಾಗಿ ರಾಕ್ಷಸೀ ಪ್ರವೃತ್ತಿಯ ಜನ ತೋಡಿದ ತಗ್ಗು ದಿನ್ನೆಗಳು, ದಟ್ಟವಾಗಿ ಬೆಳೆದ ಮುಳ್ಳಿನ ಪೊದೆಗಳು, ಈ ಪೊದೆಗಳಲ್ಲಿ ಹೂತುಹೋದ ಶಾಸನಗಳು ಇಲ್ಲಿ ಕಾಣಸಿಗುತ್ತವೆ.

ಹತ್ತನೆಯ ಶತಮಾನದಲ್ಲಿ ನಿರ್ಮಾಣವಾದ ತ್ರಿಕೂಟ ಜಿನಾಲಯ ಮತ್ತು ಗುಣದ ಬೆಡಂಗಿ ಜಿನಾಲಯಗಳು ಈಗ ಅತ್ಯಂತ ಶೋಚನೀಯ ಸ್ಥಿತಿಯಲ್ಲಿವೆ. ಈ ದೇವಾಲಯಗಳು ಚಾಲುಕ್ಯರ ಕಾಲದ ಕಲಾ ನೈಪುಣ್ಯತೆಯ ಅದ್ಭುತ ವಾಸ್ತುಶಿಲ್ಪವನ್ನು ಹೊಂದಿದ್ದರೂ ಬಹುತೇಕ ಪ್ರತಿಮೆ ಮತ್ತು ಕಂಬಗಳು ಭಗ್ನವಾಗಿವೆ. ಯಾವ ರಕ್ಷಣೆಯಿಲ್ಲದೆ ಇರುವ ಕಾರಣವಾಗಿ ನಿಧಿಯ ಆಸೆಗಾಗಿ ಜನ ಎಲ್ಲವನ್ನೂ ಭಗ್ನಗೊಳಿಸಿದ್ದಾರೆ. ತ್ರಿಕೂಟ ಜಿನಾಲಯದ ಗರ್ಭಗುಡಿಯಲ್ಲಿ ಸ್ಥಾಪಿಸಲಾಗಿದ್ದ ಆಳೆತ್ತರದ ಜಿನಮೂರ್ತಿ ತುಂಡುತುಂಡಾಗಿ ಮೇಲಿನ ಭಾಗವಷ್ಟೇ ಹೊರಬಂದು ಬಿದ್ದಿದೆ. ಮಳೆ ಬಂದಾಗ ದನಗಾಹಿಗಳು ಇಲ್ಲಿ ಆಶ್ರಯ ಪಡೆಯುತ್ತಾರೆ. ಸುತ್ತಲೂ ಜಮೀನು ಹೊಂದಿರುವ ರೈತರು ಈ ಜಿನಾಲಯಗಳಲ್ಲಿ ತಮ್ಮ ಒಕ್ಕಲುತನದ ಸಲಕರಣೆಗಳನ್ನು ಒಟ್ಟಿದ್ದಾರೆ. ಎತ್ತುಗಳನ್ನೂ ಇಲ್ಲಿಯೇ ಕಟ್ಟುತ್ತಾರೆ. ಯಾವ ರಕ್ಷಣೆಯೂ ಇಲ್ಲದೆ ಈ ಜಿನಾಲಯಗಳು ದಿನದಿಂದ ದಿನಕ್ಕೆ ಕುಸಿಯುತ್ತಿವೆ.[೪೪]

ರಾಣಿ ಅಕ್ಕಾದೇವಿ ಕೆರೆ :

ಕನ್ನಡ ನಾಡಿನ ವೀರ ಪರಂಪರೆಯಲ್ಲಿ ಅಪ್ರತಿಮ ಮಹಿಳೆ ರಾಣಿ ಅಕ್ಕಾದೇವಿ. ಈಕೆ ಚಾಲುಕ್ಯರ ದಶವರ್ಮ ಭಾಗಲದೇವಿಯರ ಮಗಳು. ಈಕೆಯ ಕಾಲ ಹತ್ತನೆಯ ಶತಮಾನ. ಚಾಲುಕ್ಯರ ಅರಸರ ಮಗಳಾದ ಅಕ್ಕಾದೇವಿ ಕದಯಿರ ಸೊಸೆ. ರಾಣಿ ಅಕ್ಕಾದೇವಿ ಕದಂಬ ಮತ್ತು ಚಾಲುಕ್ಯ ಅರಸಿಯರ ಪಾಲಿಗೆ ರತ್ನ ಕಿರೀಟವೆನಿಸಿರುವವಳು. ಸಾಹಿತ್ಯ, ಧರ್ಮ, ರಾಜ್ಯಾಡಳಿತ, ಯುದ್ಧ ಮೊದಲಾದ ಹಲವು ರಂಗಗಳಲ್ಲಿ ಅಕ್ಕಾದೇವಿಯ ವ್ಯಕ್ತಿತ್ವ ವರ್ಣನಾತೀತವಾದದು.[೪೫] "ಸ್ವಸ್ತಿ ಅರಿನೃಪಮಕುಟ ಘಟ್ಟಿತ ಚರಚಾರ ವಿಂದೆಯರ್ ಗುಣದ ಬೆಡಂಗಿ" ಎಂದು ಅರಸಿಬೀದಿಯ ಶಾಸನ (ಕ್ರಿ.ಶ.೧೦೪೮) ರಾಣಿ ಅಕ್ಕಾದೇವಿಯನ್ನು ಸ್ತುತಿಸಿದೆ.

ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ತ್ರಿಭುವನಮಲ್ಲ ದೇವನ ಆರಾಧಕ

ಕಾರ್ಯಸಾಧಕ ಮುಂತಾದ ಬಿರುದುಗಳನ್ನು ಹೊಂದಿದ್ದ ಅವರ ಅರಸನು ಕಿಸುಗಾಡು ೭೦, ಕರಿವಿಡಿ ೩೦ನ್ನು ಆಳುತ್ತಿದ್ದ, ಇವನ ರಾಜಧಾನಿ ವಿಕ್ರಮಪುರದ ಬ್ರಮ್ಹಪುರಗೇರಿಯ ೪೨ ಜನ ಬ್ರಾಹ್ಮಣರಿಗೆ ೩೦x೧೨ ಅಳತೆಯ ಮನೆಯನ್ನು ಹಾಗೂ ೭೦ರ ಕೋಲಲ್ಲಿ ಅಳೆದು ೧೦ ಮತ್ತರ ಭೂಮಿಯನ್ನು ಇದಲ್ಲದೆ ಮಾರಿಯಬ್ಬೆಯ ಕೆರೆ ಕೆಳಗೆ ಹಾಗೂ ಗದ್ದವಾಡದಲ್ಲಿ ಒಂದೊಂದು ಮತ್ತರು ಮತ್ತು ಅಜ್ಜಗೇತವಾದಲ್ಲಿ ೪೫೦ ಕಮ್ಮ ಗದ್ದೆಗಳನ್ನು ದಾನನೀಡಿದ ಉಲ್ಲೇಖವಿದೆ.

ಅಕ್ಕಾದೇವಿಯ ವೈದಿಕ ಧರ್ಮದ ದಾನವನ್ನು ಸೂಚಿಸುವ ಉಲ್ಲೇಖವೊಂದು ಈ ಅರಸಿಬೀದಿಯಲ್ಲಿ ದೊರಕುತ್ತದೆ. ಚಾಲುಕ್ಯ ಅಕ್ಕಾದೇವಿಯ ರಾಜಧಾನಿ ವಿಕ್ರಮಪುರದ ಬ್ರಹ್ಮಪುರಿಯ ನಂದಿಯರ್ಣ್ಣಷಡಂಗಿ ಭಟ್ಟೋಪಾಧ್ಯಾಯರು ಪ್ರಮುಖ ೪೨ ಜನ ವಿದ್ವಾಂಸ, ಮಹಾಜನರಿಗೆ ಸರ್ವಮನಸ್ಯವಾಗಿ ಒಂದು ಕೆಯಿಮತ್ತರು, ಎಳ್ವತ್ತರ ಕೋಲಿನಿಂದ ೪೪ ಮತ್ತರು ತೋಟದ ಭೂಮಿ ೬೪ ಮತ್ತರು ಕಿಸುವಿನ ಭೂಮಿಯನ್ನು ಬಿಟ್ಟಿರುವಳು ಎಂದು ಇಲ್ಲಿಯ ೧೦೫೫ರ ಶಾಸನ ಹೇಳುತ್ತದೆ.

ರಾಣಿ ಅಕ್ಕಾದೇವಿಯು 'ಕಿಸುಕಾಡು ಎಪ್ಪತ್ತು' ಪ್ರದೇಶವನ್ನು ಆಳುತ್ತಿದ್ದಳೆಂದು ಸೂಡಿ ಮತ್ತು ಬೇಲೂರು (ಬಾದಾಮಿ) ಶಾಸನಗಳು ಹೇಳುತ್ತವೆ. ಕಿಸುಗಾಡು ಪ್ರದೇಶವನ್ನು ಆಳುವಾಗಿನ ರಾಜಧಾನಿ 'ವಿಕ್ರಮಪುರ' ತರುವಾಯ ಇದು 'ಅರಸಿಬೀದಿ ಎಂದು ಹೆಸರಾಗಿದೆ. ಇದನ್ನು ಇಂದಿಗೂ 'ಅರಸಿಬೀದಿ' ಎಂದು ಕರೆಯುತ್ತಾರೆ. ದೀನ, ಅನಾಥರ ಚಿಂತಾಮಣಿ, ಗುಣದ ಬೆಡಂಗಿ ಎನಿಸಿದ ರಾಣಿ ಅಕ್ಕಾದೇವಿಯು ರಾಜಧಾನಿ ಅರಸಿಬೀದಿಯಲ್ಲಿ ತನ್ನ ಹೆಸರಿನದಾದ 'ಗುಣದ ಬೆಡಂಗಿ ಜಿನಾಲಯ' ಮತ್ತು 'ತ್ರಿಕೂಟ ಜಿನಾಲಯ' ನಿರ್ಮಿಸಿದಳು. ಕ್ರಿ.ಶ. ೧೦೪೭ರಲ್ಲಿ ನಿರ್ಮಿಸಲಾದ ಈ ಜಿನಾಲಯಗಳು ಇಲ್ಲಿ ಇಂದಿಗೂ ನೋಡಲು ಸಿಗುತ್ತಿದ್ದು, ಆದರೆ ಇತಿಹಾಸದ ಕಾಲರಾಯನ ತುಳಿತಕ್ಕೆ ಸಿಕ್ಕು ಭಗ್ನಾವಶೇಷವಾಗಿ ಉಳಿದಿವೆ.

ಅರಸಿಬೀದಿಯ 'ಗುಣದ ಬೆಡಂಗಿ ಜಿನಾಲಯ' ವನ್ನು ಇಲ್ಲಿಯ ಜನ 'ಸುಳಿಗುಡಿ' ಎಂದೇ ಕರೆಯುತ್ತಾರೆ. ಸಂಪೂರ್ಣ ಭಗ್ನವಾಗಿರುವ ಈ ಗುಡಿಯ ಸಭಾಮಂಟಪದಲ್ಲಿ ಒಂದು ಶಾಸನವಿದ್ದು, ಸುಮಾರು ಕ್ರಿ.ಶ. ೧೦೪೭ರಲ್ಲಿ ಬರೆಯಲ್ಪಟ್ಟಿದ್ದು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಜಯಸಿಂಹನ ಸೋದರಿ ಅಕ್ಕಾದೇವಿ ಗುಣದ ಬೆಡಂಗಿ ಜಿನಾಲಯವೆಂದು ಕರೆಯುಲಾಯಿತೆಂದು ಈ ಶಾಸನದಿಂದ ತಿಳಿಯುತ್ತದೆ.

ಅರಸಿಬೀದಿಯ ಎತ್ತರವಾದ ಪ್ರದೇಶದಲ್ಲಿ ಮುಳ್ಳು ಮೊದೆಗಳ ನಡುವೆ ಅನಾಥವಾಗಿ ಬಿದ್ದಿರುವ ಅಮೂಲ್ಯ ಶಾಸನವೊಂದು 'ನನ್ನನ್ನು ಕಾಪಾಡಿ' ಎಂದು ರೋಧಿಸುತ್ತಿದ್ದರೂ ಯಾರೂ ಮಾತನಾಡಿಸುವವರಿಲ್ಲ. ಆದರೆ ಈ ಶಾಸನದ ಕೆಳಗಡೆ ನಿಧಿ ಇರಬಹುದೆಂದು ದುರುಳ ಜನ ಅಗೆದು ತೆಗ್ಗು ತೋಡಿಕೊಂಡಿದ್ದಾರೆ. ಇಂಥ ಜನ ಇಲ್ಲಿ ಆಗಾಗ ಬರುವುದು

ಹೋಗುವುದು ನಡೆದೇ ಇದೆ. ಇಲ್ಲಿಯ ಪ್ರತಿಯೊಂದು ಕಲ್ಲು ಕಲ್ಲಿಗೂ ಜೀವದ ಭಯವಿದೆ. ಏಕೆಂದರೆ ಇಲ್ಲಿ ರಕ್ಷಣೆ ಎಂಬುದೆ ಇಲ್ಲ.

ಮೂರು ನೂರು ವರ್ಷಗಳಷ್ಟು ಹಿಂದೆ ಅರಸಿಬೀದಿಯಲ್ಲಿ ಇನ್ನೂ ಜನವಸತಿ ಇತ್ತೆಂದೂ, ಭೂತ ಪ್ರೇತಗಳ ಚೇಷ್ಟೆಯಿಂದ ಜನ ಊರು ಬಿಟ್ಟು ಹೋಗಿ ಸಮೀಪದ ಗುಡೂರು ಮೊದಲಾದ ಕಡೆ ಸೇರಿದ್ದರಿಂದ ಈಗ ಇದು ಬಿಕೋ ಎನಿಸುತ್ತಿದೆ. ಯಾವಾಗ ಜನ ಇಲ್ಲಿಂದ ಗುಳೆ ಕಿತ್ತರೋ ಅಂದಿನಿಂದಲೇ ಇಲ್ಲಿ ಜಿನಾಲಯ ಮತ್ತು ಅಮೂಲ್ಯ ವಾಸ್ತುಶಿಲ್ಪಗಳಿಗೆ ಗ್ರಹಣ ಬಡೆಯಿತು.

ದೆವ್ವಗಳ ವಿಪರೀತ ಕಾಟದಿಂದ ಜನ ಅರಸಿಬೀದಿಯನ್ನು ತೊರೆದರೆಂದು ಗುಡೂರಿನಲ್ಲಿ ಈಗಲೂ ಮಾತನಾಡಿಕೊಳ್ಳುತ್ತಾರೆ. ಆದರೆ ಇರುವ ವಾಸ್ತವ ಸಂಗತಿಯೇ ಬೇರೆ. ವಿಚಿತ್ರ ರೀತಿಯ ರೋಗವೊಂದು ಇಲ್ಲಿ ವ್ಯಾಪಿಸಿ ಸಾವು, ನೋವುಗಳು, ಅಂಗವೈಕಲ್ಯ ಸಂಭವಿಸಿದ್ದರಿಂದ ಇದು ದೆವ್ವಗಳ ಕಾಟವಿರಬೇಕೆಂದು ಜನ ಊರು ಬಿಟ್ಟರೆಂದು ಹೇಳುತ್ತಾರೆ. ಈ ಕಾರಣವನ್ನು ಅಲ್ಲಗಳೆಯುವ ಕೆಲ ಪ್ರಗತಿಪರ ಚಿಂತಕರು 'ಅರಸಿಬೀದಿಯ ಜನ ಊರು ಬಿಡಲು ಪ್ರಮುಖ ಕಾರಣ ಇಲ್ಲಿಯ ಕೆರೆ; ಈ ಕೆರೆಯಲ್ಲಿ ನೀರು ಮಲೆತು ನಿಂತು ಇದೇ ನೀರನ್ನು ಜನ ಬಳಕೆಗೆ ಉಪಯೋಗಿಸತೊಡಗಿದಾಗ ಒಂದು ರೀತಿಯ ವಿಚಿತ್ರ ಭಯಾನಕ ರೋಗ ಜನತೆಯಲ್ಲಿ ವ್ಯಾಪಿಸಿ, ಜನರ ಹೊಟ್ಟೆ ಉಬ್ಬತೊಡಗಿತು. ಹುಟ್ಟುವ ಮಕ್ಕಳು ವಿಕಲಾಂಗವಾಗಿ ಅಕರಾಳ–ವಿಕರಾಳವಾಗಿ ಹುಟ್ಟುವುದು, ಇಡೀ ಊರಿನ ಜನ ಆರೋಗ್ಯದ ನೆಮ್ಮದಿಯನ್ನೇ ಈ ಕೆರೆ ಹಾಳುಮಾಡಿತು. ಆಗಿನ ಕಾಲಕ್ಕೆ ಯಾವ ವೈದ್ಯಕೀಯ ಸೌಲಭ್ಯಗಳೂ ಇಲ್ಲದ ಕಾರಣವಾಗಿ ಇದು ದೆವ್ವಗಳ ಕಾಟವೇ ಇರಬೇಕೆಂದು ಜನ ಇಡಿ ಊರನ್ನು ಬಿಟ್ಟು ಗುಡೂರು ಸೇರಿರಬಹುದೆಂದು ಹೇಳುತ್ತಾರೆ. ಈ ಊಹೆಗಳಲ್ಲಿ ಸತ್ಯವಿದೆ. ಒಂದು ನಾಗರಿಕತೆಯನ್ನೇ ಕಿತ್ತೆಸೆದ ಕೆರೆ ಈಗಲೂ ಅರಸಿಬೀದಿಯ ಎದುರಿಗೆ ಇದೆ. ರಾಣಿ ಅಕ್ಕಾದೇವಿಯ ಕಾಲಕ್ಕೆ ಕಟ್ಟಲಾದ ಈ ಕೆರೆಯನ್ನು ಈಗಲೂ ನೀರಾವರಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಇಂದು ಹಾಳು ಸುರಿಯುತ್ತಿರುವ ಈಗಿನ ಅರಸಿಬೀದಿಯನ್ನು ಸಂಪೂರ್ಣ ಉತ್ಖನನಕ್ಕೊಳಪಡಿಸಿ ಇಲ್ಲಿರುವ ಶಾಸನ, ಸ್ಮಾರಕಗಳನ್ನು ಸಂರಕ್ಷಿಸಿ ಐತಿಹಾಸಿಕ ರಾಜಧಾನಿಗೆ ಮರುಹುಟ್ಟು ನೀಡುವ ಕೆಲಸ ನಡೆಯಬೇಕಾಗಿದೆ. ಅಂದಾಗ ಚಾಲುಕ್ಯರ ರಾಣಿ ಅಕ್ಕಾದೇವಿಯ ಅರಸಿಬೀದಿ ಇಂದು ನಮ್ಮ ನಡುವಿನ ಹಾಗೂ ನಮ್ಮ ಮುಂದಿನ ಜನಾಂಗದ ಒಂದು ಪ್ರೇಕ್ಷಣೀಯ ಸ್ಥಳವಾದೀತು.

ದಮ್ಮೂರು ಕೆರೆ :

ಬಾದಾಮಿ ಚಾಲುಕ್ಯರ ಕಾಲದ ಪ್ರಮುಖ ಐತಿಹಾಸಿಕ ನೆಲೆಯಾದ ದಮ್ಮೂರು ಹುನಗುಂದ ತಾಲೂಕಿನಲ್ಲಿ ಬರುವ ಗ್ರಾಮವಾಗಿದೆ. ಊರು ಹಿಂದೆ ಇರುವ ಎರಡು ಬೆಟ್ಟಗಳ ನಡುವೆ ಪವಿತ್ರ ಸ್ಥಳದಲ್ಲಿ ದಿಡಿಗಿನ ಬಸವೇಶ್ವರರು ಹುಟ್ಟಿದ್ದಾರೆ. ಇದು ಆ ಊರಿನ ಪ್ರಮುಖ ಧಾರ್ಮಿಕ ನೆಲೆಯಾಗಿದೆ. ಈ ಕೆರೆ ಮತ್ತು ಇವುಗಳನ್ನು ರಕ್ಕಸಗಿ ದೇಸಾಯಿಯರು ಕಟ್ಟಿಸಿದ್ದಾರೆಂದು ಇಲ್ಲಿಯ ಸ್ಥಳೀಯರು ಹೇಳುತ್ತಾರೆ. ಆದರೆ ಅವುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಅವು ಬಹುಶ ೧೪-೧೫ ನೇ ಶತಮಾನದಲ್ಲಿ ಕಟ್ಟಿರಬಹುದೆಂದು ತಿಳಿದು ಬರುತ್ತದೆ.

ದಮ್ಮೂರ ಕೆರೆ (ದಿಡಿಗಿನ ಬಸವೇಶ್ವರ ಕೆರೆ):

ಎರಡು ಬೆಟ್ಟಗಳ ಸಂಗಮದಲ್ಲಿ ದಿಡಿಗಿನ ಬಸವೇಶ್ವರರು ಜನಿಸಿದ್ದಾರೆ. ಅವರ ದೇವಾಲಯದ ಮುಂದೆ ಗುಡ್ಡದ ನೀರು ಹರಿದು ಬರುತ್ತದೆ. ಅದಕ್ಕೆ ಒಂದು ಅಡ್ಡಲಾಗಿ ಏರಿ ಕಟ್ಟಿ ಅದರ ಒಳಮೈ ಕಲ್ಲುಗಳನ್ನು ಜೋಡಿಸಿ ನೀರು ಪೋಲಾಗದಂತೆ ಏರಿ ರಚನೆ ಮಾಡಿದ್ದಾರೆ. ಇದರ ಮಧ್ಯದಲ್ಲಿ ಹೊರಮೈ ಕಾಲುವೆ ರಚನೆ ಮಾಡಿದ್ದಾರೆ.




ದಮ್ಮೂರ ಕೆರೆ

ಕೆರೆ ತುಂಬಿದರೆ ಸುಮಾರು ೪೦ ಎಕರೆ ಭೂಮಿಗೆ ನೀರಾವರಿ ಉಣಿಸುತ್ತಿದೆ. ಏರಿಯ ಮುಂದೆ ಕಾಲುವೆಗಳನ್ನು ನಿರ್ಮಿಸಿ ಅದರ ಮೂಲಕ ನೀರು ಹೊರಹೋಗುತ್ತದೆ. ಈ ಕೆರೆಯ ಅಂಗಳವು ಸುಮಾರು

೮ ಎಕರೆ ವಿಸ್ತಾರವಾಗಿದೆ. ಇದನ್ನು ಇತ್ತೀಚೆಗೆ ಜನಸಂವರ್ಧನಾ ಯೋಜನಾ ಸಂಘದವರು ದುರಸ್ತಿ ಕಾರ್ಯ ಕೈಗೊಂಡಿದ್ದಾರೆ.

ಈ ಕೆರೆಯನ್ನು ಬಿಜಾಪುರ ಆದಿಲ್‌ಷಾಹಿ ಕಾಲದಲ್ಲಿ ಅವನ ಸಾಮಂತರು ಈ ಭಾಗದಲ್ಲಿ ಆಡಳಿತ ಮಾಡಿ ಅವರು ಇಲ್ಲಿರುವ ಬಿಡಿಗಿನಿಂದ ನೀರು ಹರಿಯುವುದನ್ನು ಮನಗಂಡು ಅದಕ್ಕೆ ಉತ್ತರದಲ್ಲಿ ಎತ್ತರವಾದ ತಡೆಗೋಡೆ ಕಟ್ಟಿ ನೀರು ನಿಲ್ಲಿಸಿ ಕರೆಯನ್ನು ನಿರ್ಮಾಣ ಮಾಡಿದ್ದಾರೆ ಹಾಗಾಗಿ ಇದಕ್ಕೆ ದಿಡಗಿನ ಕೆರೆ ಎಂದು ಕರೆಯುತ್ತಾರೆ.




ಕೆರೆಯ ಮುಂದಿರುವ ಫಲಕ

ಕೆರೆಯ ಹಿನ್ನಲೆ ಕುರಿತು ಅಧ್ಯಯನ ಕೈಗೊಂಡಾಗ ಇದರ ಸ್ಥಳವು ಹಿಂದೆ ಕಂದಾಯ ಅಧಿಕಾರಿಯಾದ ಕುಲಕರ್ಣಿಯವರ ಭೂಮಿ ಇತ್ತು. ಅಲ್ಲಿ ನೀರು ನಿಂತ ಹೋದ ಮೇಲೆ ಆತ ಬೆಳೆ ತೆಗೆಯುತ್ತಿದ್ದನು. ಬರಗಾಲ ಸಮಯದಲ್ಲಿ ಇದನ್ನು ರಾಜರು ಅವನಿಂದ ಕಸಿದುಕೊಂಡು ಒಂದು ಕೆರೆಯನ್ನು ಕಟ್ಟಿದರು. ಹೀಗೆ ಇದನ್ನು ವರ್ಷದಿಂದ ವರ್ಷಕ್ಕೆ ವಿಸ್ತರಣೆ ಮಾಡುತ್ತಾ ಬಂದರು. ಈಗ ೮ ಎಕರೆ ವಿಸ್ತೀರ್ಣ ಅಂಗಳಹೊಂದಿದೆ. ಬಸವೇಶ್ವರ ದೇವಾಲಯದ ಮುಂದೆ ಏರಿ ಕಟ್ಟಿದ್ದಕ್ಕೆ ದಿಡಗಿನ ಬಸವೇಶ್ವರ ಕೆರೆ ಎಂದು ಕರೆಯುವರು. ಇದನ್ನು ರಚನೆ ಮಾಡಿದವರ ಬಗ್ಗೆ ನಿಖರವಾದ ಮಾಹಿತಿ ಸಿಗುವುದಿಲ್ಲ. ಸ್ಥಳೀಯರ ಪ್ರಕಾರ ರಕ್ಕಸಗಿ ದೇಸಾಯಿಯರ ಕಾಲದಲ್ಲಿ ರಚನೆ ಮಾಡಿರುತ್ತಾರೆ ಎಂದು ತಿಳಿದು ಬರುತ್ತದೆ.

ಕೆಲೂರು ಕೆರೆ :

ಹುನಗುಂದ ತಾಲೂಕಿನ ಪ್ರಮುಖ ಐತಿಹಾಸಿಕ ಗ್ರಾಮವಾದ ಕೆಲೂರ ಇದು ತನ್ನದೇ ಆದ ಪ್ರಾಚೀನ ಪರಂಪರೆಯೊಂದಿಗೆ ಬೆಳೆದುಬಂದಿದೆ. ಬಾದಾಮಿ ಚಾಲುಕ್ಯರ ಮತ್ತು ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರ ಕಾಲದಲ್ಲಿ ಪ್ರಮುಖ ದೇವಾಲಯಗಳ

ಸಮುಚ್ಛಯವಾಗಿದೆ. ಇಂದು ಈ ಗ್ರಾಮದಲ್ಲಿ ಸಾವಿರಾರು ಪ್ರಾಚೀನ ಅವಶೇಷಗಳು ದೊರೆಯುತ್ತವೆ.



ಕೆಲೂರಿನ ಸಣ್ಣಕೆರೆ

ಈ ಗ್ರಾಮದ ಹಿನ್ನೆಲೆಯನ್ನು ಅವಲೋಕಿಸಿದಾಗ ಈ ಪ್ರದೇಶದಲ್ಲಿ ೭ ಗ್ರಾಮಗಳು ಕೂಡಿ ಒಂದು ಊರು ರಚನೆಯಾಗಿದೆ. ೭ ಹನುಮಪ್ಪನ ಗುಡಿಗಳನ್ನು ನಿರ್ಮಿಸಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ. ಹಲವು ಸಮುಚ್ಛಯಕ್ಕೆ ಕೇಂದ್ರವಾಗಿರುವ ಈ ಗ್ರಾಮಕ್ಕೆ ಕೆಲೂರು ಎಂಬ ಹೆಸರು ಬಂದಿರಬೇಕು.

ಹಳೆಕೆರೆ :

ಗ್ರಾಮದ ಹಿಂದೆ ಇರುವ ರಾಮಲಿಂಗ ದೇವಾಲಯ ಅದರಲ್ಲೂ ಪಂಚಲಿಂಗ ಪೀಠದ ದೇವಾಲಯ ಎದುರು ಒಂದು ಐತಿಹಾಸಿಕ ಹೊಂಡವಿದೆ. ಹಿಂದೆ ಈ ದೇವಾಲಯದ ಪೂಜಾ ಕಾರ್ಯಕ್ಕಾಗಿ ಇದನ್ನು ಕಟ್ಟಿದ್ದಾರೆಂದು, ಸುಮಾರು ೪ ಎಕರೆ ವಿಸ್ತಾರ ಹೊಂದಿದ ಇದರ ಸುತ್ತಲೂ ಕಲ್ಲಿನಿಂದ ನಿರ್ಮಿಸಿದ ಗೋಡೆ ಇದೆ. ಇನ್ನೊಂದು ವಿಶೇಷ ಏನೆಂದರೆ ನೈಸರ್ಗಿಕ ವಿಪತ್ತು ಎಂತಹ ಬರಗಾಲ ಬಂದರೂ ಕೂಡ ಅಲ್ಲಿಯ ನೀರು ಖಾಲಿಯಾಗುವುದಿಲ್ಲವೆಂದು ಸ್ಥಳೀಯರು ಹೇಳುತ್ತಾರೆ. ಪಂಚಲಿಂಗ ಹೊಂದಿದೆ. ರಾಮಲಿಂಗ ದೇವಾಲಯದ ಹಿಂದೆ ವಿಶಾಲವಾದ ಗುಡ್ಡದ ಪ್ರದೇಶದಲ್ಲಿ ನೀರು ಹರಿದು ಬರುತ್ತದೆ. ಹಿಂದೆ ಇದನ್ನು ನೀರಾವರಿಗೆ ಬಳಕೆ ಮಾಡುತ್ತಿದ್ದರು. ಇಂದು ಕೇವಲ ಜಾನುವಾರುಗಳಿಗೆ ಈ ಕೆರೆ ಉಪಯೋಗವಾಗುತ್ತಿದೆ. ಇದರ ಉತ್ತರ ದಡದಲ್ಲಿ ಗಂಗಾಮಾತೆಯ ಉಬ್ಬು ಶಿಲ್ಪವಿದ್ದು, ಪೂರ್ವದ ದಂಡೆಯಲ್ಲಿ ಬಸವಣ್ಣನವರ ಮೂರ್ತಿಯ ಕಟ್ಟೆ ಇದೆ. ವಿರುದ್ಧ ದಿಕ್ಕಿನಲ್ಲಿ ಅಂದರೆ ಪಶ್ಚಿಮದಂಡೆಯಲ್ಲಿ ವಿಶಾಲವಾದ ಬಂಡೆಗಳಿಂದ ಅದರ ಕೆಳಗಿನಿಂದ ನೀರು ಬರುವ ವ್ಯವಸ್ಥೆ ಇದೆ. ಈ ಕೆರೆಯು ಸುಮಾರು ೭-೮ನೇ ಶತಮಾನದಲ್ಲಿ ರಚನೆಗೊಂಡಿರಬಹುದೆಂದು ಹೇಳಲಾಗುತ್ತದೆ.

ದೊಡ್ಡ ಕೆರೆ (ಹೊಸಕೆರೆ):

ಐತಿಹಾಸಿಕ ಗ್ರಾಮದ ಹಿಂದುಗಡೆ ಅಂದರೆ ಐಹೊಳೆ ರಸ್ತೆಯ ಪಕ್ಕದಲ್ಲಿ ಬರುವ ಕೆರೆಗೆ ದೊಡ್ಡ ಕೆರೆ ಅಥವಾ ಹೊಸ ಕೆರೆ ಎಂದು ಕರೆಯುವರು. ಇದು ಎರಡು ಬೆಟ್ಟಗಳ ಮಧ್ಯದ ನೀರು ಹರಿದು ಬರುವ ಪ್ರದೇಶದಲ್ಲಿ ಏರಿ ಹಾಕಿ ಸುಮಾರು ೮ ಎಕರೆ ವಿಶಾಲವಾದ ಅಂಗಳದಲ್ಲಿ ಕೆರೆ ಕಟ್ಟಿದ್ದಾರೆ. ಇದಕ್ಕೆ ಎತ್ತರವಾದ ಏರಿ ರಚನೆ ಮಾಡಿ ಅದರ ಒಳಮೈಗೆ ಕಲ್ಲುಹಾಸು ಹಾಕಿ ಅದನ್ನು ಭದ್ರಪಡಿಸಿದ್ದಾರೆ. ಇದರ ಮಧ್ಯದಲ್ಲಿ ಕಬ್ಬಿಣದ ತೂಬು ರಚನೆ ಮಾಡಿ ಅದರ ಮೂಲಕ ಸುಮಾರು ೪೦ ಎಕರೆ ಭೂಮಿಗೆ ನೀರಾವರಿ ಕಾಲುವೆ ಮೂಲಕ ನೀರು ಬಳಸುತ್ತಿದ್ದರು. ಈಗ ಸಂಪೂರ್ಣ ಹಾಳಾಗಿದೆ. ಇದನ್ನು ಸುಮಾರು ೨-೩ ಶತಮಾನದ ಹಿಂದೆ ಕಟ್ಟಿದ ಕೆರೆ ಎಂದು ಅಲ್ಲಿಯ ಸ್ಥಳೀಯರು ಉಲ್ಲೇಖಿಸುತ್ತಾರೆ. ಇದು ಬೇಸಿಗೆಯಲ್ಲಿ ಸಂಪೂರ್ಣ ಬತ್ತಿ ಹೋಗಿರುತ್ತದೆ. ಅದರ ಅಂಗಳದ ಹೂಳು ತುಂಬಿ ಸಂಪೂರ್ಣವಾಗಿ ದುಸ್ಥಿತಿಯಲ್ಲಿದೆ. ಈ ಕೆರೆಯ ಪಕ್ಕದ ಗುಡ್ಡದಲ್ಲಿ ಮಳೆಗಾಲದಲ್ಲಿ ಹಲವಾರು ಜಲಪಾತಗಳು ಸೃಷ್ಟಿಯಾಗುತ್ತವೆ.

ಅಮೀನಗಡ ಕೆರೆ :

ಇವತ್ತಿನ ಅಮೀನಗಡದ ಗುಡ್ಡದ ಮೇಲೆ ಒಂದು ಗಡ ಅಥವಾ ಕೋಟೆಯಿದೆ ಅದನ್ನು ಕಾಯಲು ಅಮೀನ ಎಂಬ ಮುಸ್ಲಿಂ ವ್ಯಕ್ತಿಯನ್ನು ನೇಮಕ ಮಾಡಿದ್ದರು. ಮುಂದೆ ಅದನ್ನು ಆ ಕೋಟೆ ಇದ್ದದ್ದರಿಂದ ಅದಕ್ಕೆ 'ಅಮೀನ-ಗಡ' ಅಮೀನಗಡ ಎಂದು ಹೆಸರು ಬಂದಿದೆ ಎಂದು ಅಲ್ಲಿಯ ಸ್ಥಳೀಯರು ಹೇಳುತ್ತಾರೆ. ಇದು ರಾಷ್ಟ್ರಕೂಟರ ಕಾಲದ ಪ್ರಮುಖ ನೆಲೆಯಾಗಿತ್ತೆಂದು ತಿಳಿದು ಬರುತ್ತದೆ.



ಅಮೀನಗಡದ ಕೆರೆ (ಜಾನುವಾರು ಕೆರೆ)

ನಗರದ ಬಸ್ ನಿಲ್ದಾಣದ ಎದುರು ಅನತಿ ದೂರದಲ್ಲಿರುವ ಜಾನುವಾರು ಕೆರೆ ಎಂದು ಅಲ್ಲಿಯ ಸ್ಥಳೀಯರು ಕರೆಯುವರು. ಇದು ದನಕರುಗಳಿಗೆ ಮಾತ್ರ ಬಳಕೆಯಾಗುತ್ತಿರುವುದರಿಂದ ಈ ಹೆಸರು ಬಂದಿರಬಹುದು. ಇದರ ಏರಿಯನ್ನು ಕಪ್ಪು ಮಣ್ಣಿನಿಂದ ನಿರ್ಮಿಸಿದ್ದಾರೆ. ಮೊದಲು ಇದು ಚಿಕ್ಕ ಕೆರೆಯಾಗಿತ್ತು. ಮಳೆಗಾಲದಲ್ಲಿ ನೀರಿನ ರಭಸಕ್ಕೆ ಏರಿ ಒಡೆದು ಊರು ಒಳಕ್ಕೆ ನೀರು ಬರುತ್ತಿತ್ತು. ಆದಕಾರಣ ಇವತ್ತು ಏರಿಯನ್ನು ಸಾಕಷ್ಟು ದಪ್ಪ ಮತ್ತು ಎತ್ತರವಾಗಿ ನಿರ್ಮಿಸಿದ್ದಾರೆ. ಇದರಿಂದ ಈಗ ಯಾವುದೇ ಹಾನಿಯಾಗುವುದಿಲ್ಲವೆಂದು ಸ್ಥಳೀಯರು ಹೇಳುತ್ತಾರೆ.

ಏರಿಯ ಒಳಮೈ ಕಲ್ಲಿನಿಂದ ಜೋಡಿಸಿ ಭದ್ರಪಡಿಸಿದ್ದಾರೆ. ಇದರ ಅಂಗಳವು ಸುಮಾರು ೮ ಎಕರೆ ವಿಸ್ತಾರ ಹೊಂದಿದ ಕಪ್ಪು ಮಣ್ಣಿನ ಪ್ರದೇಶವಾಗಿದೆ. ಇದರ ನೀರನ್ನು ಇವತ್ತು ಮದ್ಯ ತಯಾರು ಮಾಡಲು ಬಳಸುತ್ತಿದ್ದಾರೆ.

ನಂದವಾಡಗಿ ಕೆರೆ :

ಹುನಗುಂದದಿಂದ ೨೪ ಕಿ.ಮೀ ದೂರದಲ್ಲಿರುವ ನಂದವಾಡಗಿಯು ಶಾಸನದಲ್ಲಿ ರಾಜಧಾನಿ ನಂದವಾಡಗಿ ಎಂದು ಉಲ್ಲೇಖಿತವಾಗಿದೆ.[೪೬] ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಐತಿಹಾಸಿಕ ಸ್ಥಳವಾದ ನಂದವಾಡಗಿಯು ಪ್ರಾಚೀನ ಕಾಲದಿಂದಲೂ ಇದಕ್ಕೆ ತನ್ನದೆಯಾದ ಹಿರಿಮೆ–ಗರಿಮೆ ಬೆಳೆಸಿಕೊಂಡು ಬಂದಿದೆ. ಇದಕ್ಕೆ ಈ ಊರಿನಲ್ಲಿರುವ ಪ್ರಾಚೀನ ನೂರಾರು ಅವಶೇಷಗಳು ಸಾಕ್ಷಿಯಾಗಿ ಇದರ ಚರಿತ್ರೆಯನ್ನು ಸಾರಿ ಸಾರಿ ಹೇಳುತ್ತವೆ. ಇಲ್ಲಿರುವ ಕೆರೆಯನ್ನು ರಾಷ್ಟ್ರಕೂಟರ ಕಾಲದಲ್ಲಿ ೧ ನೇ ಸೋಮೇಶ್ವರನ ಆಳ್ವಿಕೆಯಲ್ಲಿ "ಭಾವನಗಂಧಾರಣ"[೪೭] ಎಂಬ ಅಧಿಕಾರಿ ಹಲವಾರು ಕೆರೆಗಳನ್ನು ಕಟ್ಟಿಸಿದ ಮಾಹಿತಿಯನ್ನು ನಂದವಾಡಗಿ ಶಾಸನದಲ್ಲಿ ಉಲ್ಲೇಖಿಸಲಾಗುತ್ತದೆ. ಇದು ಜಿಲ್ಲೆಯ ಪ್ರಮುಖವಾದ ಐತಿಹಾಸಿಕ ಶಾಸನೋಕ್ತ ಕೆರೆಯಾಗಿದೆ. ಇದು ಸುಮಾರು ೯ ನೇ ಶತಮಾನದಲ್ಲಿ ನಿರ್ಮಾಣಗೊಂಡಿದ್ದು, ಇವತ್ತಿಗೂ ಇದರ ಬಳಕೆ ಉಪಯುಕ್ತವಾಗಿದೆ.

ಹುನಗುಂದದಿಂದ ೨೪ ಕಿ.ಮೀ. ದೂರದಲ್ಲಿರುವ ನಂದವಾಡಗಿಯು ನಂದರ ರಾಜಧಾನಿ ನಂದವಾಡಿ ಎಂದು ಉಲ್ಲೇಖಗೊಂಡಿದೆ. ರಾಷ್ಟ್ರಕೂಟರ ಚಕ್ರವರ್ತಿ ಎರಡನೇ ಕೃಷ್ಣನ ಕಾಲದಲ್ಲಿ ಪ್ರಮುಖ ಜೈನ ಕೇಂದ್ರವಾಗಿ ಬೆಳೆದು ಬಂದಿದೆ.

ಕೇಸರಭಾವಿ ಕೆರೆ :

ಹುನಗುಂದ ತಾಲೂಕಿನ ಕೇಸರಭಾವಿಯು ರಾಷ್ಟ್ರಕೂಟರ ಕಾಲದ ಪ್ರಮುಖ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿರುವ ಕೆರೆಯನ್ನು ರಾಷ್ಟ್ರಕೂಟರ ಪ್ರಸಿದ್ಧ ಚಕ್ರವರ್ತಿಯಾದ ಅಮೋಘವರ್ಷನಿಂದ ಕ್ರಿ.ಶ. ೮೩೭ ರಲ್ಲಿ ಇಲ್ಲಿರುವ ಕೆರೆ ಮತ್ತು ಅದರ ತೂಬು ಕಟ್ಟಿಸಿದ್ದನ್ನು ದಾಖಲಿಸುತ್ತದೆ.[೪೮] ಇಷ್ಟೇ ಅಲ್ಲದೇ ಆ ಶಾಸನ ಮುಂದುವರೆದು ಕೆರೆಯ

ದುರಸ್ಥಿ ಮತ್ತು ಅಭಿವೃದ್ಧಿಗಾಗಿ ಸ್ಥಳೀಯ ಜನರಿಂದ ಶೇ. ೧೦% ತೆರಿಗೆ ನೀಡುವ ಪದ್ಧತಿ ಬಗ್ಗೆ ಮಾಹಿತಿ ನೀಡುತ್ತದೆ. ಕೆರೆಯ ತೆರಿಗೆಯ ಬಗ್ಗೆ ಉಲ್ಲೇಖ ಮಾಡುವ ಪ್ರಮುಖ ಶಾಸನವಾಗಿದೆ ಮತ್ತೆ ಮುಂದುವರೆದು ಗ್ರಾಮದಲ್ಲಿ ವಾರಸುದಾರರಿಲ್ಲದ ಆಸ್ತಿಯನ್ನು ರಾಷ್ಟ್ರಕೂಟರು ಮುಟ್ಟುಗೋಲು ಹಾಕಿಕೊಂಡು ಅದನ್ನು ಕೆರೆ ನಿರ್ವಹಣೆ ಬಳಕೆ ಮಾಡುತ್ತಿದ್ದರು ಎಂದು ಶಾಸನದಲ್ಲಿ ಉಲ್ಲೇಖವಿದೆ.

ಕೆರೆಯ ಏರಿಯನ್ನು ಬೃಹತ್ ಕಲ್ಲುಗಳಿಂದ ನಿರ್ಮಾಣ ಮಾಡಿದ್ದಾರೆ. ಇದರ ಅಂಗಳವು ಕಪ್ಪು ಮಣ್ಣಿನಿಂದ ಆವೃತವಾಗಿದೆ. ಇದು ೮೦ ಎಕರೆ ವಿಸ್ತಾರ ಹೊಂದಿರುವ ಜಿಲ್ಲೆಯ ಪ್ರಾಚೀನ ಕೆರೆಯಾಗಿದೆ. ಇದು ತುಂಬಿದಾಗ ನೂರಾರು ಎಕರೆ ಕೃಷಿ ಭೂಮಿಗೆ ನೀರನ್ನು ಒದಗಿಸುತ್ತದೆ.

ಇಂದು ಕೆರೆಯನ್ನು ಸ್ಥಳೀಯರು ಆಕ್ರಮಿಸಿದ್ದರಿಂದ ಸರ್ಕಾರ ಮತ್ತು ಸ್ಥಳೀಯ ಪಂಚಾಯತಿಯವರು ಹಾಗೂ ಕೆರೆಯ ಪ್ರಾಧಿಕಾರದವರು ಅದರ ಮೂಲ ನಕ್ಷೆಯ ಪ್ರಕಾರ ಸರ್ವೇ ಮಾಡಿ ಅತಿಕ್ರಮಣ ನಿಲ್ಲಿಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಿ ಮುಂದೆ ಯಾರೂ ಕೂಡಾ ಅಕ್ರಮಣ ಮಾಡದಂತೆ ನೋಡಿಕೊಳ್ಳಬೇಕಾಗಿದೆ. ಇದರ ಜೊತೆಗೆ ಕೆರೆ ಹೂಳನ್ನು ತೆಗೆಸಿ ಹೆಚ್ಚು ಹೆಚ್ಚು ನೀರು ನಿಲ್ಲುವಂತೆ ಮಾಡುವ ಮೂಲಕ ಅಂತರ್‌ಜಲ ಮಟ್ಟವನ್ನು ವೃದ್ಧಿಗೊಳಿಸಬೇಕಾಗಿದೆ. ಇದರೊಂದಿಗೆ ಪ್ರಾಣಿ ಸಂಕುಲ ಜೀವಿಸಲು ಅನುಕೂಲವಾಗುತ್ತದೆ.

ಜಮಖಂಡಿಯ ಪ್ರಾಕೃತಿಕ ಸ್ವರೂಪ :

ಮಾನವನ ಇತಿಹಾಸವು ಆಯಾ ಪ್ರದೇಶದ ಭೌಗೋಳಿಕ ವಾತಾವರಣವನ್ನು ಅವಲಂಬಿಸಿರುತ್ತದೆ. ಈ ವಾತಾವರಣವು ಆ ಪ್ರದೇಶದಲ್ಲಿ ಬೆಳೆದು ಬಂದ ನಾಗರಿಕತೆಯ ವಿವಿಧ ಹಂತಗಳನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ವಾಯುಗುಣ, ಭೂಗುಣ, ನದಿಯ ಬೈಲು, ಪರ್ವತಗಳು, ಪ್ರಾಚೀನ ನಾಗರಿಕತೆಯ ಬೆಳವಣಿಗೆಗೆ ಪೂರಕವಾಗುವಂತೆ ಜಮಖಂಡಿಯ ಸ್ವಾಭಾವಿಕ ಲಕ್ಷಣಗಳು ಅಲ್ಲಿಯ ಸಂಸ್ಕೃತಿಯ ಬೆಳವಣಿಗೆಗೆ ಪೋಷಕವಾಗಿವೆ. ಭೌಗೋಳಿಕವಾಗಿ ಜಮಖಂಡಿಯ ಉತ್ತರ ಅಕ್ಷಾಂಶ ೭೫೦ ರಿಂದ ೭೫೦-೩೮ ವರೆಗೆ ಪೂರ್ವ ರೇಖಾಂಶ ೧೯೦-೨೪ ರಿಂದ ೧೯೦.೩೫ರ ವರೆಗೆ ಇದ್ದು ಸಮುದ್ರ ಮಟ್ಟದಿಂದ ೪೫೦ ಮೀಟರದಿಂದ ೮೦೦ ಮೀಟರ ವರೆಗೆ ಎತ್ತರವಿದೆ.

ಜಮಖಂಡಿ ಭಾಗದ ಹವಾಮಾನವು ಒಣ ಹಾಗೂ ಆರೋಗ್ಯಕರವಾಗಿದ್ದು, ಮಾರ್ಚ್ ತಿಂಗಳ ಮಧ್ಯದಿಂದ ಮೇ ತಿಂಗಳ ಕೊನೆಯವರೆಗೆ ಸರಾಸರಿ ಉಷ್ಣತಾಮಾನವು ೧೧೦ ಫ್ಯಾ. ದಿಂದ ೧೧೨ ಫ್ಯಾ. ವರೆಗೆ ಇರುತ್ತದೆ. ವಾರ್ಷಿಕ ಸರಾಸರಿ ಮಳೆಯ

ಪ್ರಮಾಣವು ೧೮ ರಿಂದ ೨೦ ಇಂಚಿನಷ್ಟಾಗುವುದು. ಮುಂಗಾರು ಮಳೆಯು ಜೂನ್ ತಿಂಗಳ ಮೊದಲನೇ ವಾರದಲ್ಲಿ ಪ್ರಾರಂಭವಾಗಿ ಜೂನ್, ಜುಲೈ, ಅಗಷ್ಟ ತಿಂಗಳಲ್ಲಿ ಸುಮಾರು ಒಂದೇ ಪ್ರಮಾಣದ ಮಳೆ ಇದ್ದು, ಸೆಪ್ಟಂಬರ್ ತಿಂಗಳಲ್ಲಿ ಮಳೆಯ ಪ್ರಮಾಣವು ಹೆಚ್ಚುವುದು ಕಂಡು ಬರುತ್ತದೆ. ಅಕ್ಟೋಬರ್, ನವ್ಹೆಂಬರ್ ತಿಂಗಳಲ್ಲಿ ಹಿಂಗಾರು ಮಳೆಯು ತೀವ್ರವಾಗಿದ್ದು, ವಾರ್ಷಿಕ ಮಳೆಯು ಶೇ.೨೧ ರಷ್ಟು ಆಗುತ್ತದೆ. ವರ್ಷದಲ್ಲಿ ಡಿಸೆಂಬರ್ ತಿಂಗಳು ಅತಿ ಚಳಿ ಇರುವ ತಿಂಗಳಾಗಿದೆ. ಅತಿ ಕಡಿಮೆ ಉಷ್ಣತೆಯು ೧೫.೨ ಡಿಗ್ರಿ ಸೆಲ್ಸಿಯಸ್ ಆಗಿರುತ್ತದೆ. ಫೆಬ್ರುವರಿ ತಿಂಗಳ ಉತ್ತರಾರ್ಧದ ನಂತರ ಉಷ್ಣತೆಯು ಏರುತ್ತಾ ಹೋಗುತ್ತದೆ. ಮುಂದೆ ಮುಂಗಾರು ಮಳೆಯ ಪ್ರಾರಂಭವಾದೊಡನೆ ಹವಾಗುಣವು ತಂಪಾಗುತ್ತದೆ.[೯]

ಬಂಗಾಳಕೊಲ್ಲಿಯಲ್ಲಿ ಅಪರೂಪವಾಗಿ ಆಗುವ ಸಮುದ್ರ ವಾಯುಭಾರ ಕುಸಿತದಿಂದ ಈ ಭಾಗದಲ್ಲಿ ಅಕ್ಟೋಬರ್ ಮತ್ತು ನವ್ಹೆಂಬರ್ ತಿಂಗಳುಗಳಲ್ಲಿ ವ್ಯಾಪಕವಾಗಿ ಭಾರಿ ಮಳೆ ಬೀಳುವುದು ಕಂಡು ಬರುತ್ತದೆ. ಈ ಅವಧಿಯಲ್ಲಿ ಬಿರುಗಾಳಿ ಬೀಸುವುದು ಸಾಮಾನ್ಯವಾಗಿರುತ್ತದೆ.

ಜಮಖಂಡಿಯ ಉತ್ತರಕ್ಕೆ ಕೃಷ್ಣಾ ನದಿಯು ಹರಿದುಬಂದು, ಪೂರ್ವವಾಹಿನಿಯಾಗಿದೆ. ದಕ್ಷಿಣಕ್ಕೆ ಘಟಪ್ರಭಾ ನದಿಯಿದೆ. ಪ್ರಾಚೀನ ಶಿಲಾಲೇಖನಗಳಲ್ಲಿ ಕೃಷ್ಣಾನದಿಗೆ ಕೃಷ್ಣವೇಣಿಯೆಂದು, ಕವಿಚಕ್ರವರ್ತಿ ರನ್ನನ ಕಾವ್ಯದಲ್ಲಿ ಪೆರ್ದೊರೆಯೆಂದು ಮತ್ತು ರೂಢಿಯಲ್ಲಿ ಹಿರಿಹೊಳೆಯೆಂದೂ ಕರೆಯುತ್ತಾರೆ. ಕೃಷ್ಣಾ ಮೇಲ್ದಂಡೆಯ ಈ ತಾಲೂಕಿನಲ್ಲಿ ಪ್ರಾಚೀನ ಸುಕ್ಷೇತ್ರ ಕಂಕಣವಾಡಿಯ ಗುಹೇಶ್ವರ ದೇವಾಲಯವು, ಶೂರ್ಪಾಲಿಯ ಲಕ್ಷ್ಮೀ ನರಸಿಂಹ ದೇವಾಲಯವು, ಕಡಕೋಳ ಗ್ರಾಮದ ಗುಬ್ಬೇಶ್ವರ ದೇವಾಲಯ, ಮುತ್ತೂರ ಗ್ರಾಮದ ಮಹಾಲಕ್ಷ್ಮೀ ದೇವಾಲಯಗಳು ಪ್ರಸಿದ್ಧಿಯನ್ನು ಪಡೆದಿವೆ. ಹಿಪ್ಪರಗಿ ಗ್ರಾಮದ ಹತ್ತಿರ ಕೃಷ್ಣಾನದಿಯ ಉತ್ತರವಾಹಿನಿಯಾಗಿದ್ದರಿಂದ, ಅದು ಪವಿತ್ರ ಸ್ಥಳವೆಂದು ಬಗೆದು, ಅನೇಕ ಜನ ಭಾವುಕರು, ಪ್ರತಿ ವರ್ಷ ಮಕರ ಸಂಕ್ರಮಣದ ದಿನ ಅಲ್ಲಿ ಪುಣ್ಯ ಸ್ನಾನ ಮಾಡಿ ಪುನೀತರಾಗುತ್ತಾರೆ. (ಉತ್ತರಾಯಣ ಪುಣ್ಯಕಾಲ ಎಂಬ ಭಾವನೆ). ಅಲ್ಲದೇ ಶ್ರಾವಣ ಮಾಸದಲ್ಲಿ ನದಿ ದೇವತೆಗೆ (ಹಿರಿಹೊಳೆದೇವಿಗೆ) ಬಾಗಿನ ಅರ್ಪಿಸುವ ಸಂಪ್ರದಾಯವಿದೆ. ಈ ನದಿಯ ಮಧ್ಯದಲ್ಲಿದ್ದ ಬಂಡೆಗಲ್ಲಿನ ಮೇಲೆ ಉತ್ತರೇಶ್ವರ (ಉತ್ತರಲಿಂಗ) ವೆಂಬ ಪುರಾತನ ದೇವಾಲಯವಿದೆ.

ನಗರದ ಭೌಗೋಳಿಕ ಮೇರೆ :

ಸುಮಾರು ಒಂದು ಸಾವಿರ ವರುಷಕ್ಕಿಂತಲೂ ಹಿಂದೆ ಜಮಖಂಡಿಯು ಒಂದು ಪ್ರಸಿದ್ಧ ನಗರವಾಗಿತ್ತು. ಅದಕ್ಕೆ ಹಳೆಯ ಜಮಖಂಡಿಯೆಂದು ಕರೆಯುವರು. ಈ ಹಳೆಯ ಜಮಖಂಡಿಯಲ್ಲಿಯೇ ಕೊಣ್ಣೂರು ದೇಸಾಯಿಯವರ ಪ್ರಚಂಡ ವಾಡೆಯಿತ್ತು. ಇವರು ಜಮಖಂಡಿಯನ್ನು ಬಹಳ ದಿವಸಗಳವರೆಗೆ ಆಳಿದ್ದಾರೆ. ಇಂದು ವಾಡೆಯು ಪೂರ್ಣ ನಶಿಸಿ ಹೋಗಿದೆ. ಅಲ್ಲದೇ ಅಲ್ಲಿ ಅನೇಕ ಮನೆಗಳು ನಿರ್ಮಾಣವಾಗಿ, ಅದರ ಮೂಲ ಸ್ವರೂಪವೇ ಕಣ್ಮರೆಯಾಗಿದೆ. ಇತ್ತೀಚಿಗೆ ಇದೇ ವಾಡೆಯಲ್ಲಿಯ ಸ್ಥಳದಲ್ಲಿ ಕಾಡಸಿದ್ದೇಶ್ವರ ಮಂಗಲ ಕಾರ್ಯಾಲಯವನ್ನು ನಿರ್ಮಿಸಲು ದೇಸಾಯಿಯವರ ವಂಶಸ್ಥರಾದ ವಿನೀತ ದೇಸಾಯಿಯವರು ಉದಾರ ದೇಣಿಗೆಗಳನ್ನು ಕೊಟ್ಟಿದ್ದಾರೆ. ಈ ವಾಡೆಯಲ್ಲಿರುವ ಬಾವಿಯಿಂದ ಕೊಣ್ಣೂರ ಗ್ರಾಮಕ್ಕೆ ಹೋಗಲು ಸುರಂಗ ಮಾರ್ಗವಿತ್ತೆಂದು ಜನಪ್ರತೀತಿಯಿದೆ.

ಜಮಖಂಡಿಯು, ಮೇಲಗಿರಿ ನಿಂಗಪ್ಪನ ಗುಡ್ಡದ ಪದತಲದಿಂದ ಆಗ್ನೇಯ ಮತ್ತು ವಾಯವ್ಯ ದಿಕ್ಕುಗಳಿಂದ ಹಾಯ್ದುಬರುವ ಗುಡ್ಡವು ಒಂದೇ ಸ್ಥಳದಲ್ಲಿ ಕೂಡಿ, ಒಂದು ಕೋನಾಕೃತಿಯಂತೆ, ಇದರ ಪಶ್ಚಿಮ ದಿಕ್ಕಿಗೆ ಹರಡಿದ ಗುಡ್ಡದ ಮತ್ತೊಂದು ಕೋನದಲ್ಲಿ ಮಧುರಖಂಡಿ ಎಂಬ ಹಳ್ಳಿಯಿದೆ.

ಮೇಲಗಿರಿ ನಿಂಗಪ್ಪನ ಗುಡ್ಡದ ಪಶ್ಚಿಮದ ತುದಿಯಲ್ಲಿ 'ವೇದಾದ್ರಿ' ಎಂಬ ಹೆಸರಿನಿಂದ ಪ್ರಸಿದ್ಧವಾದ ಶ್ರೀ ವೆಂಕಟೇಶ್ವರ ದೇವಾಲಯವು ಕಲ್ಲಳ್ಳಿ ಗ್ರಾಮದ ಗುಡ್ಡದ ಮೇಲಿದೆ. ಜಮಖಂಡಿಯ ಪಶ್ಚಿಮ ದಿಕ್ಕಿಗಿರುವ ಉನ್ನತ ಗಿರಿಯ ಮೇಲೆ ಮೇಲಗಿರಿ ನಿಂಗಪ್ಪನೆಂಬ ಪ್ರಾಚೀನ ದೇವಾಲಯವಿದೆ. ಆ ದೇವಾಲಯದಿಂದ ಸ್ವಲ್ಪ ಕೆಳಗೆ ಇಳಿದು ಬಂದರೆ ಅಲ್ಲಿ ಸನಾಳ ಗ್ರಾಮದಿಂದ ಕೃಷ್ಣಾ ನದಿಯ ನೀರನ್ನು ಸಂಗ್ರಹಿಸಿಡಲು ಮಾಡಿದ ದೊಡ್ಡ ನೀರಿನ ಟ್ಯಾಂಕ ಇದೆ. ನಗರದ ಪಶ್ಚಿಮ ಭಾಗದಲ್ಲಿ ೨ ಕಿ.ಮೀ. ಅಂತರದಲ್ಲಿದ್ದ ರಾಮತೀರ್ಥದಲ್ಲಿ ಹೊಯ್ಸಳಕಾಲದ ರಾಮೇಶ್ವರನ ದೇವಾಲಯವಿದೆ. ಮೇಲಗಿರಿ ನಿಂಗಪ್ಪನ ಗುಡ್ಡದ ಮೇಲಿಂದ ನಿಂತು ನೋಡಿದರೆ ಜಮಖಂಡಿಯ ಪಟ್ಟಣವು ಅತಿ ರಮ್ಯವಾಗಿ ಕಾಣುತ್ತದೆ. ಅಲ್ಲದೇ ಕೃಷ್ಣಾನದಿಯ ಇಕ್ಕೆಲಗಳಲ್ಲಿದ್ದ ಭೂಪ್ರದೇಶವು ಹಚ್ಚ ಹಸರಿನಿಂದ ಕಂಗೊಳಿಸುತ್ತದೆ. ಇದೇ ಗುಡ್ಡದಿಂದ ದಕ್ಷಿಣಾಭಿಮುಖವಾಗಿ ಇಳಿದು ಬಂದರೆ ವಾರಿಸಿದ್ದಪ್ಪನೆಂಬ ಪ್ರಾಚೀನ ದೇವಾಲಯವಿದೆ. ಈ ದೇವಾಲಯದ ಉತ್ತರಕ್ಕೆ ಕಲ್ಮೇಶ್ವರ ಮತ್ತು ಮಘೆಪ್ರಭು ಎಂಬ ಪುರಾತನ ದೇವಾಲಯಗಳಿವೆ. ಈ ದೇವಾಲಯಗಳ ಉತ್ತರ ದಿಕ್ಕಿಗೆ 'ಯೋಗನಾರಾಯಣನೆಂಬ' ವೈಷ್ಣವ ದೇವಾಲಯವಿದೆ.

ಹಳೆಯ ಜಮಖಂಡಿಯ ಜನವಸತಿಯು, ಜಂಬುಕೇಶ್ವರ ಗುಡಿಯ ದಕ್ಷಿಣ

ಮತ್ತು ಪೂರ್ವ ಭಾಗದಲ್ಲಿ ಮತ್ತು ಇಂದಿನ ಕಣ್ವಗಲ್ಲಿಯವರೆಗೆ ವಾಸಿಸುತ್ತಿತ್ತು. ಇದರ ಉತ್ತರ ಸೀಮೆಯು ಇಂದಿನ ಜಮಖಂಡಿಯ ಮಧ್ಯದಲ್ಲಿ ವ್ಯಾಸರಾಯರಿಂದ ಸ್ಥಾಪನೆಗೊಂಡ ಮಾರುತಿ ದೇವಾಲಯದ ವರೆಗೆ ಪಸರಿಸಿತ್ತು. ಈ ದೇವಾಲಯದ ಉತ್ತರ ಭಾಗದಲ್ಲಿ ಹಿರಿಯ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರ ಆಳ್ವಿಕೆಯಲ್ಲಿ ಜನರು ವಾಸಿಸುತ್ತಿದ್ದರು. ಇಂದು ಈ ನಗರವು ಬೆಳೆದು ಕಡಪಟ್ಟಿ ಗ್ರಾಮದವರೆಗೂ ಹರಡಿದೆ. ಕಡಪಟ್ಟಿಯೆಂದರೆ ಗುಡ್ಡದ ಕಡೆಯ ಭಾಗವೆಂದರ್ಥವಾಗುತ್ತದೆ. ಅಂದರೆ ಪೂರ್ವಕಾಲದಲ್ಲಿ ಮೇಲಗಿರಿ ನಿಂಗಪ್ಪ ಗುಡ್ಡವು ಕಡಪಟ್ಟಿ ಊರಿನವರೆಗೆ ಪಸರಿಸಿತ್ತೆಂದು ತೋರುತ್ತದೆ. ಮುಂದೆ ಆ ಗುಡ್ಡದ ಭಾಗವನ್ನು ಸಮಪಾತಳಿಯಾಗಿ ಮಾಡಿ, ಜನವಸತಿಗೆ ಅನುಕೂಲವನ್ನುಂಟು ಮಾಡಿಕೊಡಲಾಯಿತು. ಹಿಂದೆ ಜಮಖಂಡಿಯ ಸುತ್ತಲೂ ಒಂದು ಭದ್ರವಾದ ಕೋಟೆಯಿತ್ತು. ಅದರ ಪೂರ್ವ ದಿಕ್ಕಿಗೆ ನಂದಿಗೆಪ್ಪನ (ನಂದಿಕೇಶ್ವರ) ಗುಡಿ, ಉತ್ತರಕ್ಕೆ ಹನಮಂತ ದೇವರ ಗುಡಿ, ದಕ್ಷಿಣ ಮತ್ತು ಪಶ್ಚಿಮಕ್ಕೆ ಮೇಲಗಿರಿ ನಿಂಗಪ್ಪನ ಗುಡ್ಡವು ಹರಡಿದೆ. ನಂದಿಕೇಶ್ವರ ದೇವಾಲಯದ ಪೂರ್ವಕ್ಕೆ (ಕುಂಚನೂರು ರಸ್ತೆ) ಸದಾನಂದ ಸತ್ಪುರುಷನ ದೇವಾಲಯವಿದೆ.

ಪೌರಾಣಿಕ ಹಿನ್ನೆಲೆ :

ಸಾಂಸ್ಕೃತಿಕವಾಗಿ ಸಿರಿವಂತವಾಗಿರುವ ಜಮಖಂಡಿಯ ಪೌರಾಣಿಕ ಹಿನ್ನಲೆಯು ಅಷ್ಟೇ ಸಮೃದ್ಧವಾಗಿದ್ದು, ತಾಲೂಕಿನ ಅನೇಕ ಹಳ್ಳಿಗಳು ರಾಮಾಯಣ, ಮಹಾಭಾರತಗಳ ಸಂಬಂಧ ಕಲ್ಪಿಸುವ ಐತಿಹ್ಯಗಳನ್ನು ಹೊಂದಿವೆ. ಉತ್ತರಕ್ಕೆ ಹರಿಯುವ ಕೃಷ್ಣ ನದಿಯು ಪೌರಾಣಿಕ ಮಹತ್ವವನ್ನು ಪಡೆದಿದೆ. ಸ್ಕಂದ, ವಾಯು, ಪದ್ಮ ಹಾಗೂ ಬ್ರಹ್ಮಪುರಾಣಗಳಲ್ಲಿ ಮಹಾಭಾರತದ ಸಭಾ ಪರ್ವ ಹಾಗೂ ಭೀಷ್ಮ ಪರ್ವಗಳಲ್ಲಿ ಮಂಗಲಾಷ್ಟಕ ಹಾಗೂ ಜಾತಕ ಕಥೆಗಳಲ್ಲಿಯೂ ಉಲ್ಲೇಖಗೊಂಡಿರುವ ಕೃಷ್ಣಾ ನದಿಯು ಸ್ವರ್ಗದಿಂದ ಇಳಿದು ಬಂದ 'ದಕ್ಷಿಣ ಗಂಗೆ' ಎಂದೇ ಪ್ರಸಿದ್ಧವಾಗಿದೆ. ಈ ನದಿ ತೀರದಲ್ಲಿ ತಾಲೂಕಿನ ಗ್ರಾಮಗಳಾದ ಹಿಪ್ಪರಗಿ, ಮುತ್ತೂರ, ಕಂಕಣವಾಡಿ, ಶೂರ್ಪಾಲಿ, ಚಿಕ್ಕಪಡಸಲಗಿ ಮುಂತಾದ ಪುಣ್ಯ ತೀರ್ಥಕ್ಷೇತ್ರಗಳಿವೆ. [೫೦]

ಈ ಪ್ರದೇಶವು ರಾಮಾಯಣ ಕಾಲದ ದಂಡಕಾರಣ್ಯದ ಒಂದು ಭಾಗವಾಗಿತ್ತೆಂದು ಹೇಳುತ್ತಾರೆ. ಜಮಖಂಡಿ ನಗರದ ಪಶ್ಚಿಮ ಭಾಗದಲ್ಲಿ ೨ ಕಿ.ಮೀ. ಅಂತರದಲ್ಲಿ ರಾಮೇಶ್ವರನೆಂಬ ಪ್ರಾಚೀನ ದೇವಾಲಯವಿದೆ. ಪ್ರಭುವಾದ ರಾಮಚಂದ್ರ ದೇವನು ತನ್ನ ೧೪ ವರುಷದ ವನವಾಸದಲ್ಲಿ ಲಂಕಾಧಿಪತಿಯಾದ ರಾವಣನ ವಧೆ ಮಾಡಲು ಲಂಕೆಗೆ ಪ್ರಯಾಣಿಸುವ ಮಾರ್ಗ ಮಧ್ಯದಲ್ಲಿ ಈ ರಾಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನೆಂಬ

ಅಖ್ಯಾಯಿಕೆ ಇದೆ. ಆ ಸ್ಥಳಕ್ಕೆ ರಾಮತೀರ್ಥವೆಂದು ಹೆಸರು. ಈ ದೇವಸ್ಥಾನದ ಪ್ರಕಾರದಲ್ಲಿ ಪಟವರ್ಧನ ಸಂಸ್ಥಾನಿಕರಾದ ರಾಮಚಂದ್ರರಾವ ಅಪ್ಪಾಸಾಹೇಬರು ತಮ್ಮ ವಾಸ್ತವ್ಯಕ್ಕಾಗಿ ಒಂದು ಸುಂದರವಾದ ಅರಮನೆಯನ್ನು ಕಟ್ಟಿಸಿದ್ದಾರೆ. ಅದಕ್ಕೆ ರಾಮತೀರ್ಥ ಅರಮನೆಯೆಂದು ಕರೆಯುತ್ತಾರೆ.

ಜಮಖಂಡಿಯು ಮರಾಠಿ ಪಟವರ್ಧನರ ವಂಶಸ್ಥರ ರಾಜಧಾನಿಯಾಗಿತ್ತು.[೫೧] ಜಮಖಂಡಿಯಿಂದ ಉತ್ತರಕ್ಕೆ ೫ ಮೈಲು ಅಂತರದಲ್ಲಿ ಶೂರ್ಪಾಲಿ ಎಂಬ ಗ್ರಾಮವು ಕೃಷ್ಣಾ ನದಿಯ ಉತ್ತರದ ತಟಾಕದಲ್ಲಿದೆ. ಅಲ್ಲಿಯ ನಿಸರ್ಗದ ರಮಣೀಯತೆಯನ್ನು ಕಂಡು ಜಮದಗ್ನಿ ಋಷಿ ಹಾಗೂ ರೇಣುಕಾದೇವಿಯ ಪುತ್ರನಾದ ಪರಶುರಾಮನು ಆನಂದಭರಿತನಾಗಿ ಆನಂದಭಾಷ್ಪಗಳನ್ನು ಉದುರಿಸಿದನು. ಆ ಜಲಬಿಂದುವಿನಿಂದ ಚಿತ್ರ-ವಿಚಿತ್ರವಾದ ಎಲೆ-ಶಾಖೆಗಳಿಂದೊಡಗೂಡಿದ ಮತ್ತು ಆಶ್ಚರ್ಯಕರವಾದ ಅಶ್ವಥ ವೃಕ್ಷವು ಉತ್ಪನ್ನವಾಗಿದೆ ಎಂದು ಹೇಳಿಕೆಯುಂಟು.

ಈ ಕಲಿಯುಗದಲ್ಲಿ ಶ್ರೀ ರಾಮನು ಸೀತಾ-ಲಕ್ಷ್ಮಣರಿಂದೊಡಗೂಡಿ ಈ ಶೂರ್ಪಾಲಿಯ ಕ್ಷೇತ್ರಕ್ಕೆ ಬಂದು, ಇಲ್ಲಿಯ ಮಹಿಮೆಯನ್ನು ಕಂಡು ಇಲ್ಲಿ ಸದಾ ವಾಸವಾಗಿದ್ದಾನೆಂಬ ಮತ್ತು ಬಲರಾಮನು ಸಹ ಯಾತ್ರಾರ್ಥಿಯಾಗಿ ಈ ಕ್ಷೇತ್ರಕ್ಕೆ ಬಂದು ಹೋಗಿದ್ದಾನೆಂಬ ಆಖ್ಯಾಯಿಕೆ ಇದೆ.

ಈ ಮೇಲಿನ ದೃಷ್ಟಾಂತಗಳಿಂದ ಜಮಖಂಡಿಯ (ಪ್ರದೇಶವು) ತಾಲೂಕು ಸಮೃದ್ಧವಾದ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ತಾಲೂಕಿನ ಉದ್ದ ಅಗಲಕ್ಕೂ ಗ್ರಾಮೀಣ ಪ್ರದೇಶಗಳಲ್ಲಿಯ ಜನರು ರಾಮಾಯಣ ಮತ್ತು ಮಹಾಭಾರತಗಳ ಬಗೆಗೆ ಮೊದಲಿನಿಂದಲೂ ಒಂದು ಭಾವನಾತ್ಮಕವಾದ ಸಂಬಂಧವನ್ನು ಬೆಳೆಸಿಕೊಂಡು ಬಂದದ್ದು ಎದ್ದು ಕಾಣುತ್ತದೆ.

ಮೂಲಾಧಾರಗಳ ಅವಲೋಕನ :

ಯುಗಾಂತರಗಳಿಂದ ಬೆಳೆದು ಬಂದ ಮಾನವನ ಬದುಕು ಮತ್ತು ಪ್ರಗತಿಯನ್ನು ಚಿತ್ರಿಸುವ ಅಧ್ಯಯನವೇ ಇತಿಹಾಸ. ಇತಿಹಾಸ ರಚನೆಗೆ ಮೂಲಾಧಾರಗಳು ಅತ್ಯವಶ್ಯಕ. ಪ್ರಾಚೀನ ಕಾಲದಲ್ಲಿ ಬದುಕಿ ಬಾಳಿದ ಮನುಷ್ಯ ತನ್ನ ದೈನಂದಿನ ಚಟುವಟಿಕೆಗಳ ಕುರುಹುಗಳಾಗಿ ಅನೇಕ ದಾಖಲೆಗಳನ್ನು ಅವಶೇಷಗಳನ್ನು ಬಿಟ್ಟಿರುತ್ತಾನೆ. ಅವುಗಳನ್ನು ಸಂಶೋಧಿಸಿ, ಕಲೆ ಹಾಕುವುದು ಇತಿಹಾಸಕಾರನ ಪ್ರಯಾಸಕರವಾದ ಕಾರ್ಯ. ಇದರಿಂದ ಇತಿಹಾಸದ ರಚನೆ ಮತ್ತು ಪುನರ್ ರಚನೆ ಸಾಧ್ಯವಾಗುತ್ತದೆ. ಅದೇ ಪ್ರಕಾರ ಐತಿಹಾಸಿಕ ನಗರವಾದ ಜಮಖಂಡಿಯ ಚರಿತ್ರೆಯನ್ನು ತಿಳಿಸುವ ಅನೇಕ ಮೂಲಾಧಾರಗಳು ಲಭ್ಯವಾಗಿವೆ. ಈ ಮೂಲಾಧಾರಗಳನ್ನು ಮುಖ್ಯವಾಗಿ ಎರಡು ವಿಧವಾಗಿ ವಿಂಗಡಿಸಬಹುದು.

ಶಾಸನಗಳು :

ಶಾಸನಗಳ ಅಧ್ಯಯನ ಕರ್ನಾಟಕದಲ್ಲಿ ಸುಮಾರು ಇನ್ನೂರು ವರುಷಗಳ ಹಿಂದೆಯೇ ಪ್ರಾರಂಭವಾಯಿತು. ಕರ್ನಲ್ ಮೆಕೆಂಜಿ , ವಾಲ್ಟೆಯರ್ ಇಲಿಯಟ್ ಮುಂತಾದವರು ೧೮ ನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತು ೧೯ ನೇ ಶತಮಾನದ ಆರಂಭದಲ್ಲಿ ಶಾಸನಗಳನ್ನು ಸಂಗ್ರಹ ಮಾಡಿ, ಅಧ್ಯಯನವನ್ನು ಪ್ರಾರಂಭಿಸಿದರು. ಮುಂದೆ ಶಾಸನಗಳನ್ನು ಅಧ್ಯಯನ ಮಾಡಿ ವ್ಯವಸ್ಥಿತವಾಗಿ ಪ್ರಕಟಿಸಿದವರು ಬಿ.ಎಲ್.ರೈಸ್‌ರವರು. ಇವರು ಮೈಸೂರು ಸಂಸ್ಥಾನದ ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ಸಂಸ್ಥಾನದ ಸುಮಾರು ಹತ್ತು ಸಾವಿರ ಶಾಸನಗಳನ್ನು ಎಪಿಗ್ರಾಫಿಯಾ ಕರ್ನಾಟಕ ಸಂಪುಟ ಮಾಲೆಯಲ್ಲಿ ವ್ಯವಸ್ಥಿತವಾಗಿ ಪ್ರಕಟಿಸಿದರು. ಇದೇ ರೀತಿ ಉತ್ತರ ಕರ್ನಾಟಕದ ಶಾಸನಗಳನ್ನು ಅಧ್ಯಯನ ಮಾಡಿ ಪ್ರಕಟಿಸಿದವರು. ಜೆ.ಎಸ್.ಫ್ಲೀಟರು ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯ ಕರ್ನಾಟಕ ಇನ್ಸ್‌ಕ್ರಿಪ್ಸನ್ಸ್ (Karnataka Inscriptions) ಮಾಲೆಯಲ್ಲಿ ನೂರಾರು ಶಾಸನಗಳನ್ನು ಪ್ರಕಟಿಸಿ ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ.[೭]

ಇತಿಹಾಸ ತಜ್ಞರಾದ ಡಾ. ಪಿ.ಬಿ. ದೇಸಾಯಿ, ಶ್ರೀ ಆರ್.ಎಸ್. ಪಂಚಮುಖಿ, ಪ್ರೊ. ಕೆ.ಜಿ. ಕುಂದಣಗಾರ, ಡಾ. ಶ್ರೀನಿವಾಸ ರಿತ್ತಿ ಮುಂತಾದವರು ಈ ಮಾಲೆಯ ಪ್ರಕಟಣೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಅದೇ ರೀತಿ ಜಮಖಂಡಿಯ ಸಂಸ್ಥಾನವಿದ್ದ ಕಾಲದಲ್ಲಿ ಸಂಸ್ಥಾನದ ಎಲ್ಲ ಭಾಗಗಳಲ್ಲಿ ಅಂದರೆ ಜಮಖಂಡಿ ಮತ್ತು ಕುಂದಗೋಳ ತಾಲೂಕುಗಳಲ್ಲಿ ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ವಿಷಯವನ್ನು ಸಂಗ್ರಹಿಸುವ ಕಾರ್ಯವನ್ನು ಶ್ರೀಯುತ ಭಾವುರಾವ್ ಆಪ್ಟೆಯವರು ಮಾಡಿದ್ದು ಸ್ಮರಣೀಯ. ಅವರು ಜಮಖಂಡಿ ಮತ್ತು ಕುಂದಗೋಳ ತಾಲೂಕುಗಳಲ್ಲಿ ತಹಶೀಲ್ದಾರರೆಂದು ಕಾರ್ಯ ಮಾಡುವ ಕಾಲಕ್ಕೆ ಪ್ರತಿ ಹಳ್ಳಿಗಳಿಗೆ ಹೋಗುವ ಪ್ರಸಂಗ ಬಂದಾಗ ಅವರು ಅಲ್ಲಿಯ ಶಿಲಾಲೇಖ, ತಾಮ್ರಪಟ ಮತ್ತು ಹಳೆಯ ನಾಣ್ಯಗಳನ್ನು ಕೂಡಿಹಾಕಲು ಬಹಳ ಪ್ರಯತ್ನಪಟ್ಟರು. ಅದರ ಫಲವಾಗಿ ಜಮಖಂಡಿ ಹಾಗೂ ಕುಂದಗೋಳ ತಾಲೂಕುಗಳಲ್ಲಿ ಒಟ್ಟು ೮೫ ಶಿಲಾಶಾಸನಗಳನ್ನು ಶೋಧಿಸಿದರು. ಆದರೆ ಅವುಗಳನ್ನು ಅಚ್ಚು ಹಾಕಲು ಸಾಧನಗಳು ಲಭ್ಯವಿಲ್ಲದ್ದರಿಂದ ಅವರು ಅವುಗಳನ್ನು ಕ್ರಮಬದ್ಧವಾಗಿ ಜೋಡಿಸಿ ಮುಂದೆ ಧಾರವಾಡ ವಿಭಾಗದ ಪ್ರಾಚ್ಯವಸ್ತು ಸಂಶೋಧಕರಾದ ಶ್ರೀ ಆರ್.ಎಸ್. ಪಂಚಮುಖಿಯವರು ಕ್ರಿ.ಶ.೧೯೩೭-೩೮ ರಲ್ಲಿ ಜಮಖಂಡಿ ಹಾಗೂ ಕುಂದಗೋಳಕ್ಕೆ ಭೇಟಿಯಿತ್ತಾಗ ಅವರಿಗೆ ಎಲ್ಲ ಶಾಸನಗಳನ್ನು ತೋರಿಸಲಾಯಿತು. ಆಗ ಅವರು ಅಚ್ಚು ಮಾಡಿ "ಎಪಿಗ್ರಾಫಿಕ್ ಇಂಡಿಯಾ" ಮುದ್ರಣಕ್ಕಾಗಿ ಕಳಿಸಿದ್ದು ತಿಳಿದು ಬಂದಿದೆ.

ಜಲಾಶಯಗಳು :

ಹಿಂದೆ ಜಮಖಂಡಿಯನ್ನಾಳಿದ ಅರಸರು ತಮ್ಮ ಕಾಲದಲ್ಲಿ ಜನತೆಗೆ ನೀರಿನ ಸೌಕರ್ಯವನ್ನು ಒದಗಿಸಿಕೊಡುವುದಕ್ಕಾಗಿ ಅನೇಕ ಕೆರೆ– ಭಾವಿಗಳನ್ನು ಕಟ್ಟಿಸಿ ಮಹದುಪಕಾರ ಮಾಡಿದ್ದಾರೆ. ಜಲಾಶಯಗಳೇ ಮಾನವನ ಸಂಸ್ಕೃತಿಯ ಪ್ರಗತಿಗೆ ಪೋಷಕ ಎಂಬಂತೆ ನಗರದಲ್ಲಿದ್ದ ಪುರಾತನ ಬಾವಿಗಳಾದ ಅಕ್ಕತಂಗಿಯರಬಾವಿ, ರಾಟಲ್ ಬಾವಿ, ಅಪ್ಪಾಸಾಹೇಬರ ಬಾವಿ, ಧರ್ಮಟ್ಟಿ ಬಾವಿ, ಸರಕಾರ ದೊಡ್ಡ ಗುಂಡ ಬಾವಿ (ಕಾಟನ್ ಮಾರ್ಕೆಟ್ ಬಾವಿ) ಅಮರಾಯಿ ಬಾವಿ ಮೊದಲಾದವುಗಳು ಇಂದಿಗೂ ಸಹ ಸುಸ್ಥಿತಿಯಲ್ಲಿದ್ದು, ಜನರಿಗೆ ಸಾಕಷ್ಟು ನೀರನ್ನು ಪೂರೈಸುತ್ತಿವೆ. ಅದರಂತೆ ನಗರದಲ್ಲಿದ್ದ ಕಟ್ಟೆಯ ಕೆರೆ, ಲಕ್ಕಣಕೆರೆ, ಮಾದಪ್ಪನ ಕೆರೆ, ರಾಮತೀರ್ಥ ಕೆರೆ ಹಾಗೂ ಆನೆಯ ಕೆರೆಗಳಿದ್ದು ಜನರಿಗೆ ನೀರನ್ನೊದಗಿಸುವ ಪ್ರಮುಖ ಸಾಧನಗಳಾಗಿವೆ. ಈ ಜಲಾಶಯಗಳನ್ನು ಜಮಖಂಡಿಯನ್ನಾಳಿದ ಅರಸರು ನಿರ್ಮಿಸಿದರೆಂದು ತಿಳಿದುಬರುತ್ತದೆ. ಜಲ ಸಂರಕ್ಷಣೆಯ ಮಹತ್ವವನ್ನು ಹಿಂದಿನವರು ಚೆನ್ನಾಗಿ ಅರಿತುಕೊಂಡಿದ್ದರು. ಅಲ್ಲದೇ ಕೆರೆ–ಬಾವಿಗಳನ್ನು ನಿರ್ಮಿಸುವುದು ಒಂದು ಪುಣ್ಯದಾಯಕ ಕಾರ್ಯವೆಂದು ತಿಳಿದುಕೊಂಡಿದ್ದರು.

ಸಾಹಿತ್ಯದ ಮೂಲಾಧಾರಗಳು :

ಧಾರ್ಮಿಕ ಸಾಹಿತ್ಯದ ಕೃತಿಗಳಾದ ರಾಮಾಯಣ, ಮಹಾಭಾರತ, ಪುರಾಣಗಳಾದ ಮತ್ಸ್ಯ ವಾಯು, ಬ್ರಹ್ಮಾಂಡ ಅದರಂತೆ ರನ್ನ ಮಹಾಕವಿ ರಚಿಸಿದ ಅಜಿತನಾಥ ತೀರ್ಥಂಕರ ಪುರಾಣ ಮೊದಲಾದವುಗಳು ಸಾಂದರ್ಭಿಕವಾಗಿ ಜಮಖಂಡಿಯ ಚರಿತ್ರೆಯ ರಚನೆಗೆ ಸಹಾಯಕಾರಿಯಾಗುತ್ತವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಮಖಂಡಿಯ ಪಾತ್ರವನ್ನು ಗುರುತಿಸಲು ಹೋರಾಡಿದ ಸ್ವಾತಂತ್ರ್ಯ ವೀರರ ಸ್ಮೃತಿಗಳು, ಆಧುನಿಕ ಕಾದಂಬರಿ, ನಾಟಕ, ಪತ್ರಿಕೆಗಳು, ಜನಪರ ಲಾವಣಿಗಳೇ ಮುಂತಾದ ಆಕರಗಳಾಗಿದ್ದು, ಅವುಗಳ ನೆರವಿನಿಂದ ಈ ನಗರದ ಇತಿಹಾಸವನ್ನು ಅರಿತುಕೊಳ್ಳಬಹುದಾಗಿದೆ.

ಕ್ರಿ.ಶ. ೧೯ನೇ ಶತಮಾನದ ಮಧ್ಯದಲ್ಲಿ ರಚಿತವಾದ ಕೆಲವು ಗ್ರಂಥಗಳು ಜಮಖಂಡಿಯನ್ನಾಳಿದ ಪಟವರ್ಧನ ಮನೆತನದ ಅರಸರ ಬಗೆಗೆ ಅನೇಕ ಮಹತ್ವದ ವಿಷಯಗಳನ್ನು ವಿವರಿಸುತ್ತವೆ. ಕ್ರಿ.ಶ. ೧೮೬೯ ರಲ್ಲಿ ಕ್ಯಾಪ್ಟನ್ ಎಡ್ವರ್ಡ ಡಬ್ಲೂವೆಸ್ಟ್ (Capt. Edard W.West) ಎಂಬ ಆಂಗ್ಲ ಪಂಡಿತನು ಬರೆದ "Memoirs of the States of the Southern Maratha Count" ಎಂಬ ಗ್ರಂಥದಿಂದ ಪಟವರ್ಧನ ಅರಸರ ಬಗೆಗೆ ಕೆಲವು ವಿಷಯಗಳು ತಿಳಿದುಬರುತ್ತವೆ. ಅದರಂತೆ ಎಚ್.ಡಿ. ಪಾಠಕರವರು ರಚಿಸಿದ "ರಾಮಚಂದ್ರರಾವ ಜಮಖಂಡಿಕರ ಯಾಂಚಾ ಚರಿತ್ರೆ" ಎಂಬ ಮರಾಠಿ ಗ್ರಂಥವು ರಾಮಚಂದ್ರರಾವ್ ಅಪ್ಪಾಸಾಹೇಬರ ಜೀವನ ಮತ್ತು ಸಾಧನೆಗಳನ್ನು ಚಿತ್ರಿಸುತ್ತದೆ.

ಜಿ.ವ್ಹಿ.ಆಪ್ಟೆ ಅವರು ಬರೆದ "ಪಟವರ್ಧನ ಸಂಸ್ಥಾನ ಘರಾಣಾಂಚಿ ಇತಿಹಾಸ" ಎಂಬ ಮರಾಠಿ ಗ್ರಂಥವು ಸಾಂಗಲಿ, ಮಿರಜ, ತಾಸಗಾಂವ, ಮೊದಲಾದ ಪಟವರ್ಧನ ಮನೆತನದವರ ಚರಿತ್ರೆಯನ್ನು ವಿವರಿಸುತ್ತದೆ. ಅದರಂತೆ ಶ್ರೀ ಪಟವರ್ಧನ ಮನೆತನದ ಆರಂಭದ ಚರಿತ್ರೆಯನ್ನು ವಿವರಿಸುತ್ತದೆ. ಅಲ್ಲದೇ ಶ್ರೀ ಜಿ.ವ್ಹಿ.ಗೋಖಲೆಯವರು ಬರೆದ 'ಜಮಖಂಡಿ ಸಂಸ್ಥಾನಾಂಚಿ ಸಂಕ್ಷಿಪ್ತ ಇತಿಹಾಸ ಅಣಿ ಭೂಗೋಳ" ಎಂಬ ಪಠ್ಯಪುಸ್ತಕವು ಜಮಖಂಡಿಯ ಅಂದಿನ ಚರಿತ್ರೆಯನ್ನು ವಿವರಿಸುವುದರೊಂದಿಗೆ ಸಮಗ್ರ ಭೌಗೋಳಿಕ ಸ್ಥಿತಿಗತಿಯನ್ನು ವಿವರಿಸುತ್ತದೆ. ಕ್ರಿ.ಶ. ೧೯೩೫ ರಲ್ಲಿ ಶ್ರೀ ಎಂ.ಡಿ. ಖಾಡಿಲಕರರು ಬರೆದ "ಜಮಖಂಡಿ ಸಂಸ್ಥಾನಾಂಚಿ ಉತ್ಪತ್ತಿ, ಸ್ಥಿತಿ, ಲಯ" ಎಂಬ ಮರಾಠಿ ಗ್ರಂಥವು ಜಮಖಂಡಿ ಸಂಸ್ಥಾನವು ಉದಯಿಸಿದ ಬಗೆ, ಅದರ ಅಭಿವೃದ್ಧಿ ಮತ್ತು ಕೊನೆಗೆ ಅದು ಅಖಿಲ ಭಾರತದ ಒಕ್ಕೂಟದಲ್ಲಿ ವಿಲೀನವಾದ ಬಗೆಯನ್ನು ವಿವರಿಸುತ್ತದೆ. ಪುಣೆ ಮತ್ತು ಮುಂಬೈ ಸಾರ್ವಜನಿಕ (ದಪ್ತರಖಾನೆ) ಪತ್ರಾಗಾರದಲ್ಲಿದ್ದ ಕೆಲವು ಅಪ್ರಕಟಿತ ಲೇಖನಗಳು, ಪುಣೆಯ ವಸ್ತು ಸಂಗ್ರಹಾಲಯದಲ್ಲಿದ್ದ ಪಟವರ್ಧನ ಅರಸರಿಗೆ ಸಂಬಂಧಿಸಿದ ಕೆಲವು ಇಂಗ್ಲೀಷ್ ಪತ್ರಗಳು ಮತ್ತು ಪುಣೆಯಲ್ಲಿದ್ದ ಕೊಲ್ಲಾಪುರ ರಾಜ್ಯದ ಹಾಗೂ ಡೆಕ್ಕನ್ ಕಮೀಶನರವರ ಕಚೇರಿಯಲ್ಲಿಯ ಅನೇಕ ಲಿಖಿತ ದಾಖಲೆಗಳು ಲಭ್ಯವಾಗಿದ್ದು ಅವು ಜಮಖಂಡಿ ಸಂಸ್ಥಾನದ ಇತಿಹಾಸದ ರಚನೆಗೆ ಸಹಾಯಕಾರಿಯಾಗುತ್ತದೆ. ಈ ಸಂಸ್ಥಾನದ ಆಡಳಿತದ ಸಂದರ್ಭದಲ್ಲಿ ಇಲ್ಲಿಯ ಆಡಳಿತ ಭಾಷೆ ಈ ಭಾಗದ ಜನರ ಮಾತೃಭಾಷೆಯು ಮರಾಠಿಯಾಗಿತ್ತು. [೨೨]

ಜಮಖಂಡಿಯ ನಾಮ ವಿವೇಚನೆ ಮತ್ತು ಐತಿಹಾಸಿಕ ಹಿನ್ನೆಲೆ :

ಜಮಖಂಡಿಯ ಪೂರ್ವಕಾಲದ ಇತಿಹಾಸವು ಸುಮಾರು ೧೦ ನೆಯ ಶತಮಾನದ ಹಿಂದಿನದೆಂದು ಹೇಳಬಹುದು. ಇದರ ಪ್ರಥಮ ಉಲ್ಲೇಖವು ಕವಿಚಕ್ರವರ್ತಿ ರನ್ನನ ಅಜಿತನಾಥ ತೀರ್ಥಂಕರ ಪುರಾಣದ ೧೨ ನೇ ಆಶ್ವಾಸದಲ್ಲಿದೆ. ರನ್ನ ಕವಿಯು ಜಮಖಂಡಿಯ ಬಗೆಗೆ

"ಬೆಳುಗಲಿ ಐನೂರರೊಳ್
ಅಗ್ಗಳವೆನಿಸುವ ಜಂಬುಖಂಡಿ
ಎಪ್ಪತ್ತರ್ಕಳ್ ತಿಲಕಮೆನೆ
ನೆಗಳ್ದು... ಮುದುಪೋಳಲೋಳ್ ಪುಟ್ಟಿ,
ಸುಪುತ್ರನೆನಿಸಿದಂ ಕವಿ ರನ್ನಂ.

ಹೀಗೆ ಹೇಳಿದ್ದಾನೆ. ಜಮಖಂಡಿ ಎಪ್ಪತ್ತರ ನಾಡಾದ " ಮುದುವೊಳಲ್" ತನ್ನ ಜನ್ಮ ಸ್ಥಾನವೆಂದು ರನ್ನ ಹೇಳಿಕೊಂಡಿದ್ದಾನೆ.[೨೩] ರನ್ನನ ಜನ್ಮ ಕ್ರಿ.ಶ. ೧೦ ನೇ ಶತಮಾನದಲ್ಲಿ ಆಗಿರಬಹುದೆಂದು ಪಂಡಿತರ ಅಭಿಮತ. ಅವನ ಕಾಲಕ್ಕೆ ಜಮಖಂಡಿ ಒಂದು

ಅಗ್ರಹಾರವೆನಿಸಿಕೊಂಡು, ಅದರ ಅಧೀನದಲ್ಲಿ ಎಪ್ಪತ್ತು ಹಳ್ಳಿಗಳಿದ್ದಿರಬೇಕೆಂದರೆ ಅದು ಸುಮಾರು ಏಳು ಅಥವಾ ಎಂಟನೇ ಶತಮಾನದಲ್ಲಿಯೇ ಪ್ರವರ್ಧಮಾನಕ್ಕೆ ಬಂದ ಒಂದು ಪಟ್ಟಣವಾಗಿರಬೇಕು. ಈ ಹಿನ್ನೆಲೆಯಲ್ಲಿ ನಗರದ ಪ್ರಾಚೀನತೆ ಒಂದು ಸಹಸ್ರ ವರ್ಷಕ್ಕೂ ಮಿಕ್ಕಿದ್ದಾಗಿದೆ.

ಅದರಂತೆ ಗೋಕಾಕ ತಾಮ್ರ ಶಾಸನದಲ್ಲಿ ಜಮಖಂಡಿಯು ಎಪ್ಪತ್ತರ ಹಳ್ಳಿಯೆಂದು ಅದರ ಸಮೀಪದಲ್ಲಿದ್ದ ಮಧುರಖಂಡಿ ಮತ್ತು ಹುನ್ನೂರು ಗ್ರಾಮಗಳ ಉಲ್ಲೇಖವು ಇದೆ. ಹುನ್ನೂರನ್ನು ಹೂವಿನ ಗ್ರಾಮವೆಂದು ಕರೆಯಲಾಗಿದೆ. ಅದರಂತೆ ೧೨ ನೇ ಶತಮಾನದ ಕಡಕೋಳ ಶಿಲಾ ಲೇಖನದಲ್ಲಿಯೂ ಸಹ ಜಮಖಂಡಿಯ ಉಲ್ಲೇಖವು

"ಜಂಬುಖಂಡಿ" ಎಂದೇ ದಾಖಲುಗೊಂಡಿದೆ.. ಜಮಖಂಡಿ ತಾಲೂಕಿನ ಕೊಣ್ಣೂರಿನ ಕ್ರಿ.ಶ. ೧೧೮೫ರ ಶಾಸನ, ಶಿರೋಳ ಗ್ರಾಮದ ಬಿಜ್ಜಳನ ಕಾಲದ ಶಾಸನ, ಜಮಖಂಡಿಯ ಓಲೆಪ್ಪನ ಮಠದ ಕ್ರಿ.ಶ.೧೧೮೨ ಶಾಸನಗಳಲ್ಲಿ ಈ ಊರನ್ನು 'ಜಂಬುಖಂಡಿ' ಎಂದೇ ಕರೆದಿದ್ದಾರೆ.

ಜಮಖಂಡಿ ಹೆಸರಿನ ಉತ್ಪತ್ತಿಯ ಬಗೆಗೆ ಅನೇಕ ರೀತಿಯ ಊಹೆಗಳಿವೆ-

೧. ಜಂಬು ವೃಕ್ಷಗಳ (ನೀರಲ ಗಿಡಗಳ) ವನವು, ಈ ಊರಿನ ಸುತ್ತಲೂ ವಿಫಲವಾಗಿ ಬೆಳೆಯುತ್ತಿದ್ದರಿಂದ ಇದಕ್ಕೆ ಈ ಹೆಸರು ಪ್ರಾಪ್ತವಾಗಿರಬಹುದೆಂದು ಊಹಿಸಲಾಗಿದೆ. (ಜಂಬು ಅಂದರೆ ನೇರಲ, ಈ ನೇರಲ ವೃಕ್ಷಗಳಿಂದ ಆವೃತವಾದ ಖಂಡಿ- ಜಮಖಂಡಿ)

೨. ಈ ಭಾಗದಲ್ಲಿ ಜಂಬುಕಗಳು (ನರಿಗಳು) ವಾಸಿಸುವ ಖಂಡಿಗಳು ಅಥವಾ ಹೊದರುಗಳು, ಬಹಳವಿದ್ದುದ್ದರಿಂದ ಹೆಸರು ಬಂದಿರಬಹುದೆಂದು ಊಹಿಸಲಾಗಿದೆ. ಈ ಊಹೆಗೆ ಆಧಾರವಾಗಿ ಯೋಗನಾರಾಯಣನ, ಆರ್ಚಕರಾದ ಶ್ರೀ ಕಟ್ಟಿಯವರ ಮನೆಯಲ್ಲಿದ್ದ ಸುಧಾ ಎಂಬ ಹಸ್ತ ಲಿಖಿತ ಗ್ರಂಥದ ನಾಲ್ಕನೆಯ ಅಧ್ಯಾಯದ ಕೊನೆಗೆ, "ಗೋಮಾಯುಶ್ಚಿದ್ರ ಗ್ರಾಮಸ್ಯ ಶ್ರೀನಿವಾಚಾರ್ಯ, ಸುಲಿಖಿತ" ಗೋಮಾಯುಶ್ಚಿದ್ರ ಗ್ರಾಮಶ್ಯ ಎಂದರೆ ನರಿಯ ಛಿದ್ರದ ಊರು ಜಮಖಂಡಿಯ ಶ್ರೀನಿವಾಚಾರ್ಯನೆಂಬುವರ ಪುತ್ರನಿಂದ ಬರೆಯಲ್ಪಟ್ಟಿದ್ದು. ಈ ಆಧಾರವೊಂದು ಲಭ್ಯವಾಗಿದೆ.

೩. ಇಲ್ಲಿ "ಜಂಬುಕೇಶ್ವರ" ನೆಂಬ ಪ್ರಾಚೀನ ದೇವಾಲಯವಿದೆ. ಈ ಜಂಬುಕೇಶ್ವರನಿಂದ ಈ ಗ್ರಾಮಕ್ಕೆ ಜಂಬುಖಂಡಿ ಎಂಬ ಹೆಸರು ಬಂದಿರಬಹುದು ಎಂದು ಊಹಿಸಬಹುದು. ಜಂಬಕಗಳ ನೆಲೆ, ಜಂಬುಖಂಡಿ, ಜಂಬುಕಗಳ ಆ ವಾಸಸ್ಥಾನದಲ್ಲಿರುವ ಈಶ್ವರ ಜಂಬುಕೇಶ್ವರ.

೪. ಜಂಬು ಎಂಬ ಮುನಿಯು ಇಲ್ಲಿ ಇರುತ್ತಿದ್ದು ಅವನಿಂದ ಈ ಊರಿಗೆ ಜಂಬುಖಂಡಿ ಎಂದು ಹೆಸರು ಬಂದಿದೆ ಎಂಬುದು ಮತ್ತೊಂದು ಊಹೆ.

ಸಮೀಪದಲ್ಲಿ ಮಧುರಖಂಡಿಯೆಂಬ ಗ್ರಾಮದಲ್ಲಿ, ಮಧೂರಖಂಡೇಶ್ವರನೆಂಬ ಪುರಾತನ ಈಶ್ವರ ದೇವಾಲಯವಿದೆ. ಆ ಊರಿಗೆ ಈ ಮಧರುಖಂಡೇಶ್ವರನಿಂದಲೇ ಮಧುರಖಂಡಿಯೆಂಬ ಹೆಸರು ಬಂದಿತೆಂದು ಹೇಳುತ್ತಾರೆ. ಅದರಂತೆ ಜಮಖಂಡಿ ನಗರಕ್ಕೆ ಗ್ರಾಮದೇವತೆಯಾದ ಜಂಬುಕೇಶ್ವರನಿಂದ ಜಮಖಂಡಿಯೆಂದು ಹೆಸರು ಬಂದಿರಬೇಕೆಂದು ಊಹಿಸುವುದು ಹೆಚ್ಚು ಸಮಂಜಸವೆನಿಸುತ್ತದೆ. ಸುಮಾರು ೯ನೇ ಶತಮಾನದಿಂದ ೧೨ ನೇ ಶತಮಾನದವರೆಗೆ ಜಮಖಂಡಿ ಭಾಗದಲ್ಲಿ ಜೈನ ಧರ್ಮದ ಪ್ರಭಾವವಿದ್ದುದು ಕಂಡು ಬರುತ್ತದೆ. ಇಲ್ಲಿಂದ ೧೮ ಮೈಲು ಅಂತರದ ಮೇಲಿರುವ ತೇರದಾಳದಲ್ಲಿ ನೇಮಿನಾಥ ತೀರ್ಥಂಕರನ ಬಸದಿಯಲ್ಲಿದ್ದ ಶಕೆ ೧೧೧೯ ರ ಶಿಲಾಶಾಸನದ ಮೇಲಿಂದ, ಆ ಸಮಯಕ್ಕೆ ಈ ಭಾಗದಲ್ಲಿ ಜೈನಧರ್ಮದ ಪ್ರಾಬಲ್ಯವಿತ್ತೆಂದು ಗೊತ್ತಾಗುತ್ತದೆ. ಅಲ್ಲದೇ ಜಮಖಂಡಿ ಮತ್ತು ೨೦ ಹಳ್ಳಿಗಳ ಮೇಲೆ ಜೈನ ಉಪಾಧ್ಯಾಯರನ್ನು ನಿಯಮಿಸಲಾಗಿತ್ತು. ಅವರು ಮಧುರಖಂಡಿಯಲ್ಲಿದ್ದು, ಈ ಭಾಗದಲ್ಲಿ ಜೈನ ಧರ್ಮದ ಧಾರ್ಮಿಕ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಅದಕ್ಕಾಗಿ ಅವರಿಗೆ ಭೂಮಿಯನ್ನು ಉಂಬಳಿಹಾಕಿ ಕೊಡಲಾಗಿತ್ತು. ಆದರೆ ಇಂದು ಮಧುರಖಂಡಿ ಮತ್ತು ಅದರ ನೆರೆಯ ಹಳ್ಳಿಯಾದ ಕಲ್ಲಳ್ಳಿಯಲ್ಲಿ ಸ್ವಲ್ಪ ಜನ ಜೈನಧರ್ಮಿಯರಿದ್ದಾರೆ. ಆದರೆ ಜಮಖಂಡಿಯ ಪೂರ್ವಕ್ಕೆ ೬ ಮೈಲು ಅಂತರದಲ್ಲಿರುವ ಆಲಗೂರ ಗ್ರಾಮದಲ್ಲಿ ಹಾಗೂ ಉತ್ತರಕ್ಕೆ ೯ ಮೈಲು ಅಂತರ ಮೇಲಿದ್ದ ಮೈಗೂರು ಮತ್ತು ಮುತ್ತೂರು ಗ್ರಾಮಗಳಲ್ಲಿ ಜೈನಧರ್ಮಿಯರು ವಿಶೇಷವಾಗಿದ್ದಾರೆ. ಇತ್ತೀಚೆಗೆ, ಅಲ್ಲಿ ಜೈನಧರ್ಮದ ಅನೇಕ ಕಾರ್ಯಕ್ರಮಗಳು (ಪಂಚಕಲ್ಯಾಣ, ದಶಲಕ್ಷಣ ಪರ್ವ, ಮಹಾವೀರ ಜಯಂತಿ ಉತ್ಸವ) ನಡೆಯುತ್ತವೆ. ಆಲಗೂರ ಗ್ರಾಮದಲ್ಲಿ ಆದಿನಾಥ ತೀರ್ಥಂಕರನ ಪುರಾತನ ಬಸದಿಯಿದೆ. ಮುಂದೆ ೧೨ ನೇ ಶತಮಾನದಲ್ಲಿ ಬಸವಣ್ಣನವರ ವೀರಶೈವ ಧಾರ್ಮಿಕ ಕ್ರಾಂತಿಯ ಪರಿಣಾಮವಾಗಿ ಜೈನ ಧರ್ಮದ ಪ್ರಭಾವು ಕಳೆಗುಂದಿತು. ಆದರೂ ಸಹ ಇಂದು ಜಮಖಂಡಿಯ ಸುತ್ತಲಿನ ಕೆಲವು ಗ್ರಾಮಗಳಲ್ಲಿ ದಿಗಂಬರ ಪಂಥದ ಜೈನರು ಮತ್ತು ಜಮಖಂಡಿ ನಗರದಲ್ಲಿ ಶ್ವೇತಾಂಬರ ಪಂಥದ ಜೈನ ಧರ್ಮಿಯರು ಇದ್ದಾರೆ. ೧೨ ನೇ ಶತಮಾನದಲ್ಲಿ ಬಸವಣ್ಣವರ ವೀರಶೈವ ಕ್ರಾಂತಿಯ ಪರಿಣಾಮವಾಗಿ, ವೀರಶೈವ ಧರ್ಮವು ಜಮಖಂಡಿ ಭಾಗದಲ್ಲಿ ಪ್ರಬಲಗೊಂಡಿತು. ಇಲ್ಲಿ ಇಂದಿಗೂ ಸಹ ಮುತ್ತಿನಕಂತಿಮಠ, ಕಲ್ಯಾಣಮಠ, ಓಲೆಯ ಮಠ ಮುಂತಾದ ವೀರಶೈವ ಮಠಗಳಿವೆ. ಅಲ್ಲದೇ ನಂದಿಗೆಪ್ಪನ ಗುಡಿ, ಕಾಡಸಿದ್ದೇಶ್ವರ ಗುಡಿ, ಜಂಬುಕೇಶ್ವರ ಗುಡಿ, ಕಲ್ಮೇಶ್ವರ ಗುಡಿ, ಪ್ರಭುದೇವರ ಗುಡಿ,

ಪರ್ವತದೇವರ ಗುಡಿ ಇತ್ಯಾದಿ ಶೈವದೇವಾಲಯಗಳಿದ್ದು, ಆ ಧರ್ಮದ ಮಹತ್ವವನ್ನು ಎತ್ತಿ ತೋರಿಸುತ್ತದೆ. ೧೩ನೇ ಶತಮಾನದಲ್ಲಿ ಮುಸ್ಲಿಮರ ಆಳ್ವಿಕೆ ಪ್ರಾರಂಭವಾದಾಗ, ಜಮಖಂಡಿಯಲ್ಲಿ ಇಸ್ಲಾಂ ಧರ್ಮವು ಪ್ರಸಾರವಾಗಿತ್ತೆಂಬುದು, ಅಲ್ಲಿದ್ದ ಪ್ರಾಚೀನ ಜುಮ್ಮಾ ಮಸೀದಿ ಮತ್ತು ಅಬುಬಕರ ದರ್ಗಾಗಳ ಮೇಲಿಂದ ತಿಳಿದುಬರುತ್ತದೆ.

ಕ್ರಿ.ಶ.೧೮೧೧ ರಲ್ಲಿ ಶ್ರೀಪರಶುರಾಮ ಪಟವರ್ಧನ ಪುತ್ರರು ಬೇರೆ ಬೇರೆಯಾಗಲು ನಿರ್ಧರಿಸಿದಾಗ ಅವರ ಹಿರಿಯರು ಮಾತ್ರ ರಾಮಚಂದ್ರಪಂಥ ಪಟವರ್ಧನ ಅವರ ಪಾಲಿಗೆ ಜಮಖಂಡಿಭಾಗ ಬಂದಿತು.[೫೪] ಪೂರ್ವಕಾಲದಲ್ಲಿ ಕರ್ನಾಟಕವನ್ನಾಳಿದ ಪ್ರಮುಖ ಅರಸು ಮನೆತನದವರಾದ ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚುರಿಯರು ದೇವಗಿರಿ ಯಾದವರು (ಸೇವುಣರು), ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಬಿಜಾಪುರ ಆದಿಲ್‌ಶಾಹಿಗಳು, ನಂತರ ಮೊಗಲರು ಮತ್ತು ಮರಾಠರು ಈ ಪ್ರದೇಶವನ್ನು ಆಳಿಹೋಗಿದ್ದಾರೆಂದು ಕೆಲವು ಐತಿಹಾಸಿಕ ಘಟನೆಗಳ ಮೇಲಿಂದ ತಿಳಿದುಬರುತ್ತದೆ. ಅದರಂತೆ ಕೊಣ್ಣೂರ ದೇಸಾಯಿಯವರು ಸಹ ಈ ಜಮಖಂಡಿಯ ಭಾಗವನ್ನು ಬಹಳ ದಿವಸಗಳವರೆಗೆ ಆಳಿದ್ದಾರೆ. ಕ್ರಿ.ಶ. ೧೭೯೯ ರಿಂದ ಜಮಖಂಡಿ ಸಂಸ್ಥಾನವನ್ನು ಪೇಶ್ವೆಯ ಜಹಗೀರದಾರರಾದ ಪಟವರ್ಧನ ಮನೆತನದವರು ಆಳಿದರು. ಅದರಂತೆ ಜಮಖಂಡಿ ಸಂಸ್ಥಾನದ ಅಧೀನದಲ್ಲಿದ್ದ ಕುಂದಗೋಳ ತಾಲೂಕನ್ನು ಮೈಸೂರಿನ ಅರಸನಾದ ಹೈದರಲಿ, ಟಿಪ್ಪುಸುಲ್ತಾನ ಮತ್ತು ಸವಣೂರಿನ ನವಾಬರು ಆಳಿದ್ದಾರೆ. ಹೀಗೆ ಜಮಖಂಡಿಯು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಮೈಗೂಡಿಸಿಕೊಂಡಿದೆ.

ಕೆರೆ ಕಟ್ಟೆಗಳು–ಬಾವಿಗಳು:

ಹಿಂದಿನ ಕಾಲದಲ್ಲಿ ಅರಸರು, ಅಧಿಕಾರಿಗಳು ಜೀವನದ ಅಗತ್ಯಗಳನ್ನು ಮನಗಂಡು ಜನಗಳಿಗೆ ಸುಖ–ಸೌಲಭ್ಯಗಳನ್ನು ಒದಗಿಸುತ್ತಿದ್ದರು. ಕೆರೆ–ಬಾವಿಗಳನ್ನು ಕಟ್ಟಿಸಿ, ಕಾಲುವೆಗಳನ್ನು ನಿರ್ಮಾಣ ಮಾಡಿ ನೀರಿನ ಪೂರೈಕೆ ಮಾಡುತ್ತಿದ್ದರು. ಗ್ರಾಮ–ಗ್ರಾಮಕ್ಕೆ ಅನ್ನಸತ್ರ, ಸದಾವರ್ತಗಳನ್ನು ಏರ್ಪಡಿಸುತ್ತಿದ್ದರು. ಪ್ರಾಚೀನ ಕಾಲದಿಂದಲೂ ಆಳರಸರು ಮಾಡಬೇಕಾದ ಕರ್ತವ್ಯವೇ ಇದಾಗಿತ್ತು. ವಿದ್ಯಾರಣ್ಯರ ಸೋದರಳಿಯನು ವಿಜಯನಗರದ ಒಂದನೇ ದೇವರಾಯನ ಮಹಾಪ್ರಧಾನಿಯೂ ಆದ ಲಕ್ಷ್ಮೀಧರನು ಈ ವಿಷಯವನ್ನು ಬಾಲಬೋಧೆಯಾಗಿ ತಾಯಿ ಮಡಿಲಲ್ಲಿಯೇ ಕಲಿಸುತ್ತಿದ್ದನು.

ಕೆರೆಯಂ ಕಟ್ಟಿಸು ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು,
ಜ್ಜೆರೆಯೋಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಗೆಯ್ ನಂಬಿದ
ರ್ಗೆರೆವೆಟ್ಟಾಗಿರು, ಶಿಷ್ಟರಂ ಪೊರೆ, ಎನ್ನುತ್ತಂತೆಲ್ಲಂ ಪಿಂತೆ, ತಾ
ನೆರೆದಳ್, ಪಾಲರೆವಂದು ತೊಟ್ಟು ಕಿವಿಯೋಳ್ ಲಕ್ಷ್ಮೀಧರಾಮಾತ್ಯನಾ ॥

ಮೇಲಿನ ಪದ್ಯದಲ್ಲಿ ಹೇಳಿದಂತೆ ಒಂದೆ ಜಮಖಂಡಿಯನ್ನಾಳಿದ ಅರಸರು ಜೀವನದ ಅಗತ್ಯಗಳನ್ನು ಮನಗಂಡು ಜನತೆಗೆ ಸುಖ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಕೆರೆ-ಬಾವಿಗಳನ್ನು ಕಟ್ಟಿಸಿ. ಕಾಲುವೆಗಳನ್ನು ನಿರ್ಮಾಣ ಮಾಡಿ ನೀರಿನ ಪೂರೈಕೆ ಮಾಡಿದ್ದರು. ಅವರು ಅಂದು ನಿರ್ಮಿಸಿದ ಕೆರೆ-ಬಾವಿಗಳು ಇಂದಿಗೂ ಸಹ ನಗರದ ಜನಗಳಿಗೆ ಉಪಯೋಗಕಾರಿಯಾಗಿದೆ.

ಅ) ಕೆರೆಗಳು :

(೧) ಕಟ್ಟಿ ಕೆರೆ (ಕಟ್ಟೆಯ ಕೆರೆ) :

ಈ ಕೆರೆಯು ಜಮಖಂಡಿ ನಗರದ ದಕ್ಷಿಣ ದಿಕ್ಕಿಗೆ ಮುಧೋಳ ನಗರಕ್ಕೆ ಹೋಗುವ ಮಾರ್ಗದ ಬಲಬದಿಗಿದೆ. ಇದನ್ನು ಪೂರ್ವ ಪಶ್ಚಿಮ ಭಾಗದಲ್ಲಿ ಹಬ್ಬಿದ ಉನ್ನತವಾದ ಗುಡ್ಡದ ಎರಡೂ ತುದಿಗಳನ್ನು ಜೋಡಿಸಿ ಯೋಜನಾಬದ್ಧವಾಗಿ ಕಟ್ಟಲಾಗಿದೆ. ಗುಡ್ಡದ ಮೇಲಿಂದ ಹರಿದು ಬರುವ ಮಳೆಯ ನೀರನ್ನು ತಡೆಯಲು ಮಧ್ಯದಲ್ಲಿ ದೊಡ್ಡ ಒಡ್ಡನ್ನು ಹಾಕಿ ಒಳಬದಿಗೆ ಬಂಡೆಗಲ್ಲುಗಳನ್ನು ಜೋಡಿಸಿ ಭದ್ರವಾದ ಕಟ್ಟೆಯನ್ನು ಕಟ್ಟಿ ಕೆರೆಯನ್ನು ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ಈ ಕೆರೆಯು ತುಂಬಿ ತುಳುಕುತ್ತದೆ. ಹೆಚ್ಚಾದ ನೀರು ಬದಿಗಿದ್ದ ನಾಲೆಯ ಮುಖಾಂತರ ಹರಿದು ಹೋಗುವ ವ್ಯವಸ್ಥೆಯಿದೆ.

ಜಮಖಂಡಿಯ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ಕ್ರಿ.ಶ. ೧೮೭೪ ರಲ್ಲಿ ನಗರಕ್ಕೆ ನೀರನ್ನು ಪೂರೈಸುವುದಕ್ಕಾಗಿ ಈ ಕೆರೆಯನ್ನು ಕಟ್ಟಿಸಿದರು. ಈ ಕೆರೆಯ ಉತ್ತರ ಬದಿಗೆ ದೊಡ್ಡ ದೊಡ್ಡ ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸಿ ಪಾವಟಿಗಳನ್ನು ನಿರ್ಮಿಸಿ ಅದರಿಂದ ಇದಕ್ಕೆ ಕಟ್ಟಿದ ಕೆರೆ (ಕಟ್ಟೆಯ ಕೆರೆ) ಎಂದು ಕರೆಯಲಾಗಿದೆ. ಆದರೆ ರೂಢಿಯಲ್ಲಿ ಜನರು ಇದಕ್ಕೆ 'ಕೆಟ್ಟಿಕೆರೆ' ಎಂದು ಕರೆಯುತ್ತಾರೆ. ಇದರ ಕೆಳಭಾಗದಲ್ಲಿ ಗುಡ್ಡಕ್ಕೆ ಹೊಂದಿಕೊಂಡು ಒಂದು ದೊಡ್ಡ ನೀರಿನ ಟ್ಯಾಂಕ್‌ನ್ನು ಕಟ್ಟಿಸಿ ಕೆರೆಯ ನೀರನ್ನು ಪೈಪ್ ಮುಖಾಂತರ ಅದರಲ್ಲಿ ಸಂಗ್ರಹಿಸಿ, ಅಲ್ಲಿಂದ ನಗರಕ್ಕೆ ನೀರನ್ನು ಪೈಪ್ ಮೂಲಕ ಪೂರೈಸಲಾಗುತ್ತಿತ್ತು. ಅಂದು ಕಟ್ಟಿಸಿದ ನೀರನ ಟ್ಯಾಂಕಿನ ಅವಶೇಷಗಳನ್ನು ಇಂದು ನಾವು ಕಾಣಬಹುದು. (ಚೌಕಿ ಮಠದ ಹತ್ತಿರವಿದೆ.) ಈ ಕೆರೆಯ ಮೇಲ್ಭಾಗದಲ್ಲಿ ಒಂದು ಸುಂದರವಾದ ಪಕ್ಷಿಧಾಮವಿತ್ತೆಂದು ಹೇಳುತ್ತಾರೆ. ಇತ್ತೀಚಿನ ದಿನಮಾನಗಳಲ್ಲಿ ಮಳೆಯ ಪ್ರಮಾಣವು ಕಡಿಮೆಯಾಗುತ್ತಾ ಬಂದಿದ್ದರಿಂದ ಈ ಕೆರೆಯು ಮೈದರೆದು ನಿಂತಿದ್ದು ಕಂಡುಬರುತ್ತದೆ. ಮಳೆಗಾಲದಲ್ಲಿ ಅರಣ್ಯ ಇಲಾಖೆಯವರು ಇದರ ನೀರನ್ನು ಬಳಸಿ ಅನೇಕ ಸಸಿಗಳನ್ನು ಬೆಳೆಸುತ್ತಾರೆ.

(೨) ಲಕ್ಕಣ ಕೆರೆ :

ಈ ಕೆರೆಯನ್ನು ನಗರದ ಪಶ್ಚಿಮ ದಿಕ್ಕಿಗಿದ್ದ ಉನ್ನತ ಗುಡ್ಡದ ಬದಿಗೆ ಅಂದಿನ ಸಂಸ್ಥಾನಿಕರಾದ ರಾಮಚಂದ್ರನ್ ಅಪ್ಪಾಸಾಹೇಬರು ಒಂದು ಲಕ್ಷ ರೂ. ವೆಚ್ಚಮಾಡಿ ಕಟ್ಟಿಸಿದ್ದಾರೆ. ಗುಡ್ಡದ ಪಶ್ಚಿಮಕ್ಕೆ ಒರೆಯಿದ್ದು, ಉಳಿದ ಮೂರು ದಿಕ್ಕುಗಳಿಗೆ (ಉತ್ತರ ದಕ್ಷಿಣ ಮತ್ತು ಪೂರ್ವ) ಸುಭದ್ರವಾದ ಕಲ್ಲಿನ ಗೋಡೆಯನ್ನು ಕಟ್ಟಿ ಅದನ್ನು ನಿರ್ಮಿಸಿದ್ದಾರೆ. ಒಂದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳುತ್ತಿದ್ದರಿಂದ ವಾರಿಸಿದ್ದಪ್ಪನ ಗುಡ್ಡದ ಒರೆಯಿಂದ ಮಳೆಯ ನೀರಿನ ಝುರಿಗಳು ವರ್ಷದಲ್ಲಿ ಸುಮಾರು ೫-೬ ತಿಂಗಳುಗಳ ವರೆಗೆ ಸತತವಾಗಿ ರಭಸದಿಂದ ಹರಿದು ಬರುತ್ತಿದ್ದವು.

ಅಲ್ಲದೇ ಮೇಲಗಿರಿಯ ನಿಂಗಪ್ಪನ ಗುಡ್ಡದ ಮೇಲಿಂದ ಹರಿದು ಬರುತ್ತಿದ್ದ ಮಳೆಯ ನೀರಿನ ಪ್ರವಾಹವು ಊರಲ್ಲಿ ಪ್ರವೇಶಿಸಿ ಜನರಿಗೆ ಹಾನಿಯನ್ನುಂಟು ಮಾಡಬಾರದೆಂದು ತಿಳಿದು ಈ ಕೆರೆಯನ್ನು ಕಟ್ಟಿಸಿ ನೀರನ್ನು ಸಂಗ್ರಹಿಸಲಾಗಿದೆಯೆಂದು ಕೆಲವರು ಹೇಳುತ್ತಾರೆ. ಒಟ್ಟಾರೆ ನಗರದ ಜನರಿಗೆ ನೀರಿನ ಅನುಕೂಲತೆಗಾಗಿ ಈ ಕೆರೆಯನ್ನು ನಿರ್ಮಿಸಿದರೆಂದು ಹೇಳಬಹುದು. ಇದರ ಪೂರ್ವದಿಕ್ಕಿಗೆ ಕಲ್ಲಿನ ಪಾವಟಿಗೆಗಳನ್ನು ಕಟ್ಟಿಸಿದ್ದರಿಂದ ಜನರಿಗೆ ಕೆರೆಯಲ್ಲಿ ಪ್ರವೇಶಿಸಲು ಅನುಕೂಲವಾಗಿದೆ. ಆದ್ದರಿಂದ ಇಂದಿಗೂ ಸಹ ನಗರದ ಬಹುಸಂಖ್ಯಾತ ಜನರು ಬಟ್ಟೆ ಒಗೆಯಲು ಈ ಕೆರೆಗೆ ಆಗಮಿಸುತ್ತಿರುವುದನ್ನು ಕಾಣಹುದು.

ಈ ಕೆರೆಯನ್ನು ಲಕ್ಷಣಯುಕ್ತವಾಗಿ ಮೂರು ದಿಕ್ಕಿಗೂ ಕಲ್ಲನ್ನು ಜೋಡಿಸಿ ಅಂದವಾಗಿ ಕಟ್ಟಿಸಲಾಗಿದೆ. ಆದ್ದರಿಂದ ಇದಕ್ಕೆ ಲಕ್ಷಣ ಅಥವಾ ಲಕ್ಕಣ ಕೆರೆಯೆಂದು ಕರೆಯುತ್ತಾರೆ. ವಾರಿಸಿದ್ದಪ್ಪನ ಗುಡ್ಡದಿಂದ ಹರಿದು ಬರುವ ಮಳೆಯ ನೀರನ್ನು ಸಂಗ್ರಹಿಸಿ ಜನರಿಗೆ ಬಳಕೆಯಾಗಲೆಂದು ಸಂಸ್ಥಾನಿಕರು ಈ ಕೆರೆಯನ್ನು ೧೮೭೪ರಲ್ಲಿ ಕಟ್ಟಿಸಿದರು.

(೩) ಮಾದಪ್ಪನ ಕೆರೆ (ಕುಂಬಾರ ಕೆರೆ) :

ಜಮಖಂಡಿ ನಗರದ ಪೂರ್ವದಿಕ್ಕಿಗೆ (ಹಿಂದಿನ ಜಾನುವಾರ ಮಾರುಕಟ್ಟೆಯ ಬಲಬದಿಗೆ) ಕಟ್ಟಿದ ಕೆರೆಗೆ ಮಾದಪ್ಪನ ಕೆರೆಯೆಂದು ಕರೆಯುತ್ತಾರೆ. ಆದರೆ ಈ ಕೆರೆಯ ದಂಡೆಯ ಮೇಲೆ ಕುಂಬಾರ ಜನಾಂಗದವರು ತಮ್ಮ ಆವಿಗೆಗಳನ್ನು ನಿರ್ಮಿಸಿ ಮಣ್ಣಿ ಗಡಿಗೆ- ಮಡಿಕೆಗಳನ್ನು ತಯಾರಿಸುತ್ತಾರೆ. ಅಲ್ಲದೆ ಇಟ್ಟಂಗಿಗಳನ್ನು ಮಾಡುತ್ತಾರೆ. ಆದ್ದರಿಂದ ರೂಢಿಯಲ್ಲಿ ಜನರು ಈ ಕೆರೆಗೆ ಕುಂಬಾರ ಕೆರೆಯೆಂದು ಸಹ ಕರೆಯುತ್ತಾರೆ.

ಸದಾನಂದ ದೇವಸ್ಥಾನದ ಮೇಲ್ಭಾಗ ಮತ್ತು ನಂದಿಕೇಶ್ವರ ದೇವಾಲಯದ ಸಮುಚ್ಚಯದಲ್ಲಿ ದೊಡ್ಡ ಪ್ರಮಾಣದ ಮಣ್ಣಿನ ಒಡ್ಡನ್ನು ಹಾಕಿ ಈ ಕೆರೆಯನ್ನು ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ಊರಲ್ಲಿಯ ನೀರು ಹಾಗೂ ಮಹಾಲಿಂಗೇಶ್ವರ ಕೊಳ್ಳದಿಂದ ಹರಿದು

ಬರುವ ಮಳೆಯ ನೀರಿನಿಂದ ಈ ಕೆರೆಯು ತುಂಬಿ ತುಳುಕುತ್ತದೆ. ಇದರ ನೀರನ್ನು ದನಕರುಗಳಿಗೆ ಹಾಗೂ ಮಣ್ಣಿನ ಇಟ್ಟಿಗೆ, ಗಡಿಗೆ, ಮಡಿಕೆಗಳನ್ನು ತಯಾರಿಸಲು ಜನ ಇಂದಿಗೂ ಉಪಯೋಗಿಸುತ್ತಾರೆ. (ಇತ್ತೀಚೆಗೆ ಈ ಕೆರೆಯಲ್ಲಿಯ ಹೂಳನ್ನು ತೆಗೆದು ಇದರ ಆಳ–ಅಗಲವನ್ನು ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗುವಂತೆ ಮಾಡಲಾಗಿದೆ).

ಈ ಕೆರೆಯು ಪುರಾತನ ಕಾಲದ್ದೆಂದು ಹೇಳುತ್ತಾರೆ. ಈ ಕೆರೆಗೆ ಈ ಹೆಸರು (ಮಾದಪ್ಪನ ಕೆರೆಯೆಂದು) ಬರಲು ಒಂದು ನಂಬಿಕೆ ಇದೆ. ಹಿಂದೆ ಕುಂಚನೂರ ಗ್ರಾಮದಲ್ಲಿ ನೆಲೆಸಿದ ಮಾದಪ್ಪನೆಂಬ ಸಿದ್ಧಿಪುರುಷನು ದನಗಳನ್ನು ಮೇಯಿಸುತ್ತಾ ಬಂದು ಈ ಕೆರೆಯಲ್ಲಿ ನೀರನ್ನು ಕುಡಿಸಿಕೊಂಡು ಹೋಗಬೇಕೆಂದಾಗ ಅದರಲ್ಲಿಯ (ಕೆರೆಯಲ್ಲಿಯ) ನೀರು ನಿಲ್ಲದೆ ಹಾಕಿದ ಒಡ್ಡು ಹರಿದು ಹೋಗುತ್ತಿತ್ತಂತೆ. ಎಷ್ಟು ಸಲ ಪ್ರಯತ್ನ ಮಾಡಿದರೂ ದೊಡ್ಡ ಒಡ್ಡನ್ನು ಹಾಕಿ ಕಟ್ಟಿದರೂ ನಿಲ್ಲಲಿಲ್ಲವಂತೆ, ಆಗ ಮಾದಪ್ಪನು ತನ್ನ ಸಿದ್ಧಾಟಿಕೆಯಿಂದ ಕೆರೆಯ ನೀರು ಹರಿದು ಹೋಗುವುದನ್ನು ನಿಲ್ಲಿಸಿದನಂತೆ. ಆನಂತರ ಕೆರೆಗೆ ಎಷ್ಟು ನೀರು ಸಂಗ್ರಹವಾದರೂ ಅದು ಒಡೆಯಲಿಲ್ಲವಂತೆ ಹೀಗೆ ಮಾದಪ್ಪನ ತಪ:ಶಕ್ತಿಯಿಂದ ಈ ಕೆರೆಯು ಸುಭದ್ರವಾಗಿ ಉಳಿಯಿತೆಂದು ಹಿರಿಯರು ಹೇಳುತ್ತಾರೆ. ಆದ್ದರಿಂದ ಈ ಕೆರೆಗೆ ಮಾದಪ್ಪನ ಕೆರೆಯೆಂದು ಕೆರೆಯುತ್ತಾರೆ.

(೪) ರಾಮತೀರ್ಥ ಕೆರೆ :

ರಾಮೇಶ್ವರ ದೇವಾಲಯದ ಬಲಬದಿಗಿದ್ದ ಗುಡ್ಡದ ಮೇಲೆ ಈ ಕೆರೆಯನ್ನು ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ಕಟ್ಟಿಸಿದರು. ಗುಡ್ಡದ ಮೇಲಿನಿಂದ ಹರಿದು ಬರುವ ಮಳೆಯ ನೀರನ್ನು ಸಂಗ್ರಹಿಸಲು ಉತ್ತರ ಹಾಗೂ ಪೂರ್ವ ಬದಿಗೆ ಕಲ್ಲಿನ ಒಡ್ಡನ್ನು ಕಟ್ಟಿ ಈ ಕೆರೆಯನ್ನು ನಿರ್ಮಿಸಲಾಗಿದೆ. ಹಿಂದಿನ ಕಾಲದಲ್ಲಿ ರಾಮತೀರ್ಥದಲ್ಲಿ ವಾಸಿಸುವ ಜನರು ಇದರ ನೀರನ್ನು ಉಪಯೋಗಿಸುತ್ತಿದ್ದರು. ಮಳೆಗಾಲದಲ್ಲಿ ಗುಡ್ಡದಿಂದ ಹರಿದು ಬರುವ ನೀರಿನ ಝರಿಗಳು ಈ ಕೆರೆಯಲ್ಲಿ ಪ್ರವೇಶಿಸಿ ಹೆಚ್ಚಾದ ನೀರು ಹರಿದು ಬಂದು ರಾಮೇಶ್ವರ ದೇವಸ್ಥಾನದ ಮುಂದಿನ ಪುಷ್ಕರಣಿಯನ್ನು ಪ್ರವೇಶಿಸಿ ಅಲ್ಲಿಂದ ಮುಂದೆ ಹರಿದು ಹೋಗಿ ಅರಮನೆಯ ಬಲಬದಿಗಿದ್ದ ಆನೆಯ ಕೆರೆಯನ್ನು ಸೇರುತ್ತದೆ. ಈ ಕೆರೆಯನ್ನು ಯೋಜನಾಬದ್ಧವಾಗಿ ಕಟ್ಟಲಾಗಿದೆ. ಇದರ ನೀರನ್ನು ಜನ ಇಂದಿಗೂ ಉಪಯೋಗಿಸುತ್ತಾರೆ.

ಈ ಕೆರೆಯನ್ನು ಜಮಖಂಡಿ ಅಪ್ಪಾಸಾಹೇಬರು ಪೂರ್ವ ಪಶ್ಚಿಮ ಭಾಗದ ಗುಡ್ಡದ ನಡುವೆ ಬೃಹತ್ ದೊಡ್ಡ ದೊಡ್ಡ ಕಲ್ಲು (ಪಾಡೆಗಲ್ಲು/ದಿಂಡುಗಲ್ಲು)ಬಳಿಸಿ ವಿಶಿಷ್ಟ ತಾಂತ್ರಿಕ ಮಾದರಿ ಕೆರೆಯನ್ನು ನಿರ್ಮಿಸಿದ್ದಾರೆ. ಇದನ್ನು ಅರಮನೆಯ ಬಲಭಾಗದಲ್ಲಿ

ಎತ್ತರದ ಸ್ಥಳದಲ್ಲಿ ನಿರ್ಮಾಣಮಾಡಿ ಅದರ ಮೂಲಕ ಅರಮನೆಗೆ ಸದಾ ಕಾಲ ನೀರು ಕಾಲುವೆ ಮೂಲಕ ಹರಿದು ಬರುವ ಹಾಗೆ ವ್ಯವಸ್ಥೆ ಮಾಡಿದ್ದಾರೆ. ಇದಲ್ಲದೇ ಕೆರೆಯೊಳಗೆ ಇಳಿಯಲು ಎರಡು ಕಡೆ ಕಲ್ಲಿನಿಂದ ಮಾಡಿದ ಮೆಟ್ಟಲುಗಳಿವೆ. ಇದು ಯಾವುದೇ ರೀತಿಯ ಮಾನವ ಇಲ್ಲವೇ ಪಶು–ಪಕ್ಷಿ–ಪ್ರಾಣಿಗಳಿಂದಲೂ ಗಲೀಜು ಆಗದಂತೆ ನೀರಿನ ಪರಿಶುದ್ಧತೆಯನ್ನು ಸದಾ ಕಾಲ ಕಾಪಾಡುವಂತೆ ನಿರ್ಮಿಸಿದ್ದಾರೆ. ಇದು ಅದರ ವೈಶಿಷ್ಟ್ಯತೆಯಾಗಿದೆ, ಇಂದಿಗೂ ಸಾವಿರಾರು ಪ್ರಾಣಿ ಪಕ್ಷಿ ಸರಿಸೃಪಗಳಿಗೆ ಜೀವ ಜಲವಾಗಿದೆ. ಬೇಸಿಗೆಯಲ್ಲಿ ನೂರಾರು ಮಕ್ಕಳು ಈಜುಕೊಳವಾಗಿ ಬಳಕೆ ಮಾಡುತ್ತಾರೆ.

ಇದರ ಇನ್ನೊಂದು ವೈಶಿಷ್ಟ್ಯತೆ ಎಂದರೆ ಕೆರೆಯ ನೀರು ಅರಮನೆ ಬಳಕೆ ಮಾಡುತ್ತಾ ಇನ್ನೊಂದಿಷ್ಟು ನೀರನ್ನು ರಾಮೇಶ್ವರ ದೇವಾಲಯದ ಪುಷ್ಕರಣಿಗೆ ಬಂದು ಸೇರುತ್ತದೆ. ಈ ಪುಷ್ಕರಣಿಯ ಹೆಚ್ಚುವರಿ ನೀರು ಹೊರಗೆ ಹರಿದು ಪಕ್ಕದಲ್ಲಿರುವ ಆನೆಕೆರೆ (ಅಗಸರಕೆರೆ) ಗೆ ಬಂದು ತಲುಪುವಂತೆ ವ್ಯವಸ್ಥೆ ಮಾಡಿದ್ದಾರೆ. ಇಂತಹ ತಾಂತ್ರಿಕತೆ ಜಿಲ್ಲೆಯ ಯಾವ ಕೆರೆಯಲ್ಲೂ ಕಂಡುಬರುವುದಿಲ್ಲ.

(೫) ಆನೆಯ ಕೆರೆ (ಅಗಸರ ಕೆರೆ) :

ಜಮಖಂಡಿಯ ಸಂಸ್ಥಾನಿಕರಾದ ರಾಮಚಂದ್ರರಾವ್ ಅಪ್ಪಾಸಾಹೇಬರು ರಾಮತೀರ್ಥದಲ್ಲಿಯ ತಮ್ಮ ಅರಮನೆಯ ಬಲಬದಿಯ ಕೊಳ್ಳದಿಂದ ಹರಿದು ಬರುವ ಮಳೆಯ ನೀರನ್ನು ಸಂಗ್ರಹಿಸಲು ಒಂದು ಕೆರೆಯನ್ನು ಕಟ್ಟಿಸಿದ್ದಾರೆ. ಅರಮನೆಯ ಆನೆ, ಒಂಟೆ, ಕುದುರೆಗಳನ್ನು ದಿನನಿತ್ಯ ಆಳುಗಳು ಈ ಕೆರೆಗೆ ತಂದು ನೀರು ಕುಡಿಸಿ, ಮೈತೊಳೆದುಕೊಂಡು ಹೋಗುತ್ತಿದ್ದರು. ಈ ಕೆರೆಯಲ್ಲಿ ನೀರು ಬಹಳ ಆಳವಾಗಿದ್ದರಿಂದ ಇಲ್ಲಿ ಆನೆಗಳನ್ನು ಹಾಯಾಗಿ ಈಸಾಡಲು ಬಿಡುತ್ತಿದ್ದರಿಂದ ಇದಕ್ಕೆ ಆನೆಯ ಕೆರೆಯೆಂದು ಕರೆಯುತ್ತಾರೆ.

ಸಂಸ್ಥಾನವು ವಿಲಿನೀಕರಣ ಹೊಂದಿದ ನಂತರ ಈ ಕೆರೆಯಲ್ಲಿ ಅಗಸರು ಬಟ್ಟೆಗಳನ್ನು ಒಗೆಯಲಿಕ್ಕೆ ಪ್ರಾರಂಭಿಸಿದರು. (ಇಂದಿಗೂ ಸಹ ಅಲ್ಲಿಯ ನೀರನ್ನು ಅಗಸರು ಬಟ್ಟೆ ಒಗೆಯಲಿಕ್ಕೆ ಬಳಸುತ್ತಾರೆ) ಆದ್ದರಿಂದ ಈ ಕೆರೆಗೆ ಅಗಸರ ಕೆರೆಯೆಂದು ಕರೆಯುತ್ತಾರೆ. ಇತ್ತೀಚಿನ ದಿನಮಾನಗಳಲ್ಲಿ ಮಳೆಯ ಪ್ರಮಾಣವು ಬಹಳ ಕಡಿಮೆಯಾಗಹತ್ತಿದ್ದರಿಂದ ಈ ಕೆರೆಯಲ್ಲಿ ಸಾಕಷ್ಟು ನೀರು ಸಂಗ್ರಹವಾಗುತ್ತಿಲ್ಲ. ಈ ಕೆರೆಯಲ್ಲಿಯ ಹೂಳನ್ನು ತೆಗೆದು ಅದರ ಆಳ ಮತ್ತು ಅಗಲಳತೆಯನ್ನು ಹೆಚ್ಚಿಸಿದ್ದರಿಂದ ಹೆಚ್ಚು ನೀರನ್ನು ಸಂಗ್ರಹಿಸಲು ಅನುಕೂಲವಾಗಿದೆ. ಕಳೆದ ವರುಷ ಬೇಸಿಗೆಯಲ್ಲಿ ತೀರ ನೀರಿನ ಅಭಾವವುಂಟಾದಾಗ ಜಿ.ಎಲ್.ಬಿ.ಸಿ. ಕೆನಾಲದ ಮುಖಾಂತರ ನೀರನ್ನು ಹರಿಸಿ (ಪೈಪಿನ ಮೂಲಕ) ಈ ಕೆರೆಗೆ ನೀರನ್ನು ಬಿಟ್ಟು ತುಂಬಿಸಲಾಗಿತ್ತು. ಹೀಗೆ ಈ ಕೆರೆಯು ನೀರಿನಿಂದ ಬಹಳಷ್ಟು ಜನರಿಗೆ

ಉಪಯೋಗವಾಗುತ್ತಿದ್ದರಿಂದ ಇಂದಿಗೂ ಸಹ ಸುಸ್ಥಿತಿಯಲ್ಲಿರಿಸಲಾಗಿದೆ.

ನೀರಿನ ಅಭಾವವಿರುವ ಇಂದಿನ ದಿನಮಾನಗಳಲ್ಲಿ ಹಿಂದಿನವರು ನಗರದಲ್ಲಿ ನಿರ್ಮಿಸಿದ ಅನೇಕ (ಕೆರೆ-ಬಾವಿಗಳು) ಜಲಾಶಯಗಳು ಇಂದಿನವರೆಗೆ ಜೀವನಾಡಿಗಳಾಗಿವೆ. ಜಲ ಸಂರಕ್ಷಣೆಯ ಮಹತ್ವವನ್ನು ಹಿಂದಿನವರು ಚನ್ನಾಗಿ ಅರಿತುಕೊಂಡವರಾಗಿದ್ದರಿಂದಲೇ ಇಂಥಹ ಕೆರೆ-ಬಾವಿಗಳನ್ನು ನಿರ್ಮಿಸಿ ಇಂದಿನ ಜನಾಂಗಕ್ಕೆ ಮಹದುಪಕಾರ ಮಾಡಿದ್ದಾರೆ. ಇಂದಿನ ಸರಕಾರವು ಕೈಗೊಂಡ ಜಲ ಸಂರಕ್ಷಣಾ ಆಂದೋಲನ ಹುಟ್ಟು ಹಾಕಿದವರು ಹಿಂದಿನವರೆಂದು ಹೇಳಬಹುದು. ಅಂದು ಅವರು ನಿರ್ಮಿಸಿದ ಕೆರೆ-ಬಾವಿಗಳನ್ನು ಹಾಳುಗೆಡುಹದೆ ಸ್ಥಿತಿಯಲ್ಲಿಟ್ಟುಕೊಂಡು ಭೂಮಿಯ ಅಂತರ್ ಜಲಮಟ್ಟವನ್ನು ಕಾಯ್ದುಕೊಂಡು ಮುಂದಿನ ದಿನಮಾನಗಳಲ್ಲಿ ನೀರಿನ ಅಭಾವವುಂಟಾಗದಂತೆ ಮುಂಜಾಗ್ರತೆ ವಹಿಸಿಬೇಕಾದದ್ದು ಇಂದಿನವರ ಕರ್ತವ್ಯ.

ಹಲಗಲಿ :

ಜನತಂತ್ರಾತ್ಮಕ ವ್ಯವಸ್ಥೆಯಲ್ಲಿ ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಪೂರ್ವದ ಕೊನೆಯ ಗ್ರಾಮ ಹಲಗಲಿ. ಅಂದು ಆಳರಸರ ಕಾಲದಲ್ಲಿ ಮುಧೋಳದ ಘೋರ್ಪಡೆ ಸಂಸ್ಥಾನಿಕರ ಆಧೀನಕ್ಕೊಳಪಟ್ಟಿತ್ತು. ಇಂದಿನ ಸಂದರ್ಭದಲ್ಲಿ ಗ್ರಾಮ ಪಂಚಾಯತ್, ಮಂಡಳ ಪಂಚಾಯತ್, ಮತ್ತೆ ಗ್ರಾಮ ಪಂಚಾಯತ್ ಹೀಗೆ ಹಲವು ಮಜಲುಗಳನ್ನು ದಾಟುತ್ತಾ ಬಂದು, ಅಧುನಿಕತೆಗೆ ತನ್ನನ್ನು ಸಂಪೂರ್ಣವಾಗಿ ಒಡ್ಡಿಕೊಂಡಿದ್ದರೂ ಇಂದಿಗೂ ಕೂಡಾ ಅದು ಪುಟ್ಟ ಗ್ರಾಮವೇ ಆಗಿದೆ.

ಸ್ವಾತಂತ್ರ್ಯಾನಂತರದ ಇಷ್ಟು ದಿನಗಳ ನಂತರವೂ ಈ ಗ್ರಾಮ ಇಷ್ಟೊಂದು ಪುಟ್ಟ ಗ್ರಾಮವಾಗಿರಬೇಕಾದರೆ ಸ್ವಾತಂತ್ರ್ಯ ಪೂರ್ವದಲ್ಲಿ, ನೂರು ವರ್ಷಗಳ ಆಚೆ ಅಂದರೆ ಇಂದಿಗೆ ೧೫೩ ವರ್ಷಗಳ ಹಿಂದೆ (೧೮೫೭ರ ಸಂದರ್ಭದಲ್ಲಿ) ಹೇಗಿದ್ದಿರಬಹುದೆಂದು ಯೋಚಿಸುವುದೇ ಆಶ್ಚರ್ಯಕರ ಸಂಗತಿ.

ಗ್ರಾಮ ಪುಟ್ಟದಿದ್ದರೇನಾಯಿತು. ಅಂದಿನ ಆಳರಸರು ತಂದ ಕರಾಳ ಶಾಸನ ಘೂತ್ಕರಿಸಿ ಪ್ರತಿಭಟಿಸಿ "ನಿಮ್ಮ ಕರಾಳ ಶಾಸನವನ್ನು ನಾವು ಎಂದಿಗೂ ಒಪ್ಪುವುದಿಲ್ಲ" ವೆಂದು ಅಬ್ಬರಿಸಿ, ಆಳರಸಿಗೆ ತಮ್ಮ ಕೈಲಾದಷ್ಟು ಏಟುಕೊಟ್ಟು ಅವರನ್ನು ಹಣ್ಣುಗಾಯಿ, ನೀರುಗಾಯಿ ಮಾಡಿ ತಮ್ಮ ಧೈರ್ಯವನ್ನು ಪ್ರದರ್ಶಿಸಿದವರು ಈ ಪುಟ್ಟ ಗ್ರಾಮದ ಬೇಡ ಜನಾಂಗದವರು.

ಆಳರಸರು ಅವರನ್ನು ಬಂಧಿಸಿರಬಹುದು, ಗುಂಡಿಟ್ಟು ಕೊಂದಿರಬಹುದು, ಗಲ್ಲಿಗೇರಿಸಿರಬಹುದು ಆದರೆ ಅಂದು ಹಲಗಲಿ ಬೇಡರಪಡೆ ಆಂಗ್ಲರ ವಿರುದ್ಧ ಹಿಡಿಸಿದ ಕಿಡಿ ನಂದದೇ ದೇಶಾದ್ಯಂತ ದಾವಾನಲವಾಗಿ ಉರಿದು ಬ್ರಿಟಿಷ್ ಸಾಮ್ರಾಜ್ಯವನ್ನೇ ಬೂದಿ

ಮಾಡಿದ್ದು ಸುಳ್ಳೇನಲ್ಲ. ಅವರು ಹೊತ್ತಿಸಿದ ಸ್ವಾತಂತ್ರ್ಯದ ಸಣ್ಣ ಹಣತೆ ಇಂದು ನಂದಾದೀಪವಾಗಿ ನಮಗೆ ದಾರಿ ತೋರುತ್ತಾ ಕರೆದೊಯ್ಯುತ್ತಿದೆ. ಆ ಪುಟ್ಟ ಹಣತೆಗೆ ಎಣ್ಣೆ, ಬತ್ತಿಯಾಗಿ ಜೀವತೆತ್ತವರು, ನೆತ್ತರು ಹರಿಸಿದವರ ಸಾಲಿನಲ್ಲಿ ಅನಕ್ಷರಸ್ಥರಾದ ಹಲಗಲಿಯ ಬೇಡರು ಯಾರ ಬೆನ್ನಾಸರೆಯೂ ಇಲ್ಲದೆ ಹೋರಾಡಿದರು. ಆದ್ದರಿಂದ ಇತಿಹಾಸದಲ್ಲಿ ಹಲಗಲಿ ಬೇಡರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಹೀಗಾಗಿ ಭಾರತೀಯ ಸ್ವಾತಂತ್ರ್ಯದ ಇತಿಹಾಸದಲ್ಲಿ ಹಲಗಲಿ ಬೇಡರು' ಎಂಬ ಶಬ್ದಗಳು ತಮ್ಮವೇ ಆದ ಹೆಜ್ಜೆಗುರುತುಗಳನ್ನು ಮೂಡಿಸುತ್ತವೆ. ಇತಿಹಾಸದ ಪುಟಗಳಲ್ಲಿ ಒಂದಿಷ್ಟು ಸಾಲುಗಳನ್ನು ದಾಖಲಿಸುತ್ತವೆ. ಚಿರಸ್ಥಾಯಿಯಾಗಿ ನೆಲೆಸುತ್ತವೆ. ಬಾನಂಗಳದಲ್ಲಿ ಸ್ವಚ್ಛಂದವಾಗಿ ಇಂದು ಹಾರಾಡುತ್ತಿರುವ ನಮ್ಮ ಜನತಂತ್ರಾತ್ಮಕ ವ್ಯವಸ್ಥೆಯ ಪ್ರತೀಕವಾಗಿರುವ ತ್ರಿವರ್ಣಧ್ವಜದಲ್ಲಿ ಹಲಗಲಿಯದು ಒಂದಿಷ್ಟು ಪಾಲಿದೆ ಎಂದು ನೆನಪಿಸುತ್ತವೆ. ಹಾಗೆ ಹೇಳಿಕೊಳ್ಳುವುದು, ಅಂಥ ಛಾತಿಯುಳ್ಳ ವೀರರನ್ನು ನೆನಪಿಸಿಕೊಳ್ಳುವುದೇ ಭಾರತೀಯರಿಗೆ ಅಭಿಮಾನದ ದ್ಯೋತಕ. ಹೆಮ್ಮೆಯ ಸಂಗತಿ.

ಹಲಗಲಿ ಗ್ರಾಮ :

ಈ ಹಲಗಲಿ ಗ್ರಾಮಕ್ಕೆ 'ಹಗಲಿ' ಎಂದು ಹೆಸರು ಹೇಗೆ ಬಂತೆಂಬುದಕ್ಕೆ ನಿರ್ದಿಷ್ಟವಾಗಿ ಮಾಹಿತಿಗಳು ದೊರೆಯುತ್ತಿಲ್ಲ. ಒಂದಿಷ್ಟು ಜನ ಹೇಳುವಂತೆ ಹಲವು ಕಲಿಗಳ ನಾಡು ಹಲಗಲಿಯಾಯಿತು. ಇನ್ನಷ್ಟು ಜನ ವಿದ್ವಾಂಸರು ಹಲಗಲಿ ಬಂಡಾಯವನ್ನೇ ದೃಷ್ಟಿಕೋನದಲ್ಲಿಟ್ಟುಕೊಂಡು 'ಹಲ್ಲಾಗಲ್ಲಿ'ಯೇ ಇಂದಿನ ಹಲಗಲಿ ಎಂದು ಅಭಿಪ್ರಾಯ ಪಡುತ್ತಾರೆ. ಇವು ತೀರ ಇತ್ತೀಚಿನ ನಿಷ್ಪತ್ತಿಗಳೆಂಬುದು ಮತ್ತುಷ್ಟು ವಿದ್ವಾಂಸರ ವಾದ.

ಖ್ಯಾತ ಸಂಶೋಧಕರಾದ ಡಾ.ಎಂ.ಎಂ.ಕಲಬುರ್ಗಿಯವರು ಈ ಗ್ರಾಮನಾಮ ನಿಷ್ಪತ್ತಿಯನ್ನು ವ್ಯಕ್ತಿನಾಮದಲ್ಲಿ ಹುಡಕಬೇಕಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾ 'ಹಲಗ' ಎಂಬ ವ್ಯಕ್ತಿಯು ಹೆಸರಿನಲ್ಲಿ ಈ ಗ್ರಾಮ ಯಾವುದೋ ಒಂದು ಕಾಲಕ್ಕೆ ರೂಪತಾಳಿರಬಹುದೆಂದು ಹೇಳುತ್ತಾರೆ.

ಇದಕ್ಕೆ ಇಂಬುಗೊಡುವಂತೆ ಬೀಳಗಿ ತಾಲೂಕಿನಲ್ಲಿ ತೋಳಮಟ್ಟಿ, ತುಮ್ಮರಮಟ್ಟಿ, ಸುನಗ, ಅನಗವಾಡಿ, ಮನ್ನಿಕೇರಿ, ಜಾನಮಟ್ಟಿ ಎಂಬ ಹೆಸರಿನ ಗ್ರಾಮಗಳಿವೆ. ಆ ಗ್ರಾಮಸ್ಥರು ಇಂದಿಗೂ ಹೇಳುವುದು ತೋಳ, ತುಮರ, ಸುನಗ, ಅನಗ, ಜಿನಗ, ಮಣಗ ಎಂಬ ದೈತ್ಯರುಗಳು ಈ ಗ್ರಾಮಗಳನ್ನು ಹುಟ್ಟು ಹಾಕಿದ್ದರಿಂದ ಆ ದೈತ್ಯರ ಹೆಸರುಗಳೇ ಈ ಗ್ರಾಮಗಳಾಗಿ (ವ್ಯಕ್ತಿ ನಾಮಗಳೇ ಗ್ರಾಮನಾಮಗಳಾಗಿ) ಬಂದಿರುತ್ತವೆಂದು ಹೇಳುತ್ತಾರೆ. ಆ ದೈತ್ಯರ ಶಾಪವೇ ಈ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ ಉಂಟು ಮಾಡಿತ್ತೆಂದು ಹೇಳುತ್ತಾರೆ. ಶತಮಾನಗಳಿಂದ ಸತ್ಯವಾಗಿದ್ದ ಈ ನೀರಿನ ಅರಬು (Scarcity of

waer) ಕಳೆದ ದಶಕದವರೆಗೂ ಸಾಗಿ ಬಂದಿತ್ತು. ಹಾಗಾಗಿ ನೀರಿನ ತೊಂದರೆ ಅನುಭವಿಸಿದ್ಧ ಹಲಗಲಿ ಗ್ರಾಮವೂ ಕೂಡಾ ಮೇಲೆ ವಿವರಿಸಿದ ಆರು ಜನ ದೈತ್ಯರೊಡನೆ ಏಳನೆಯವನಾದ 'ಹಲಗ'ನೆಂಬ ದೈತ್ಯನು ಈ ಹಲಗಲಿಯನ್ನು ಸಂಸ್ಥಾಪಿಸಿರಬೇಕು ಎಂದು ನಂಬಬೇಕಾಗುತ್ತದೆ. ಹಾಗಾಗಿ ಹಲಗನೆಂಬ ದೈತ್ಯನ ಕಾರಣಕ್ಕಾಗಿಯೇ 'ಹಲಗಲಿ' ಎಂಬುದು ಯಾವದೋ ಕಾಲಕ್ಕೆ ರೂಪತಾಳಿರಬೇಕೆಂದು ಊಹಿಸಬೇಕಾಗುತ್ತದೆ.

ಈ ವ್ಯಕ್ತಿನಾಮವೇ ಗ್ರಾಮನಾಮವಾಗಿ ರೂಪತಾಳಿರುವುದಕ್ಕೆ ಚನ್ನಬಸಪ್ಪ ಎನ್ನುವರು ಬೇರೊಂದು ವಿವರಣೆ ನೀಡುತ್ತಾರೆ. ಹಲಗಲಿ ಬಂಡಾಯದಲ್ಲಿ ಆಂಗ್ಲರ ವಿರುದ್ಧ ಹೋರಾಟ ಮಾಡಿದವರು 'ಜಡಗಾ–ಬಾಲ' ಎಂಬ ಪರಾಕ್ರಮಿಗಳು. ಅವರ ಪೂರ್ವಜರ ಮೂಲಸ್ಥಳ ಸತ್ತಿಗೇರಿ–ಸಪ್ಪಡ್ಲ (ಇಂದಿನ ಬೆಳಗಾವಿ ಜಿಲ್ಲೆಯ ಗ್ರಾಮಗಳು) ಇವರ ಪೂರ್ವಜರು ಈ ಕಡೆಗೆ ವಲಸೆ ಬಂದಾಗ ಇಲ್ಲಿ ಊರಿರಲಿಲ್ಲ. ಅವರೇ ಇಲ್ಲಿ ನಿಂತು ಮನೆ ಮಾಡಿದರು. ಊರು ಕಟ್ಟಿದರು. ಮನೆ, ಊರಿನಿಂದ ಜನಸಂಖ್ಯೆ ಬೆಳೆಯಿತು. ಸತ್ತಿಗೇರಿ ಸಪ್ಪಡ್ಲದಿಂದ ವಲಸೆಬಂದ ಈ ವಂಶದ ಕುಡಿಯೇ ಬಂಡಾಯದ ಕಹಳೆ ಊದಿದ ಜಡಗಪ್ಪ. ಜಡಗಪ್ಪನ ಪೂರ್ವಜರಲ್ಲಿಯೇ (ವಲಸೆ ಬಂದವರಲ್ಲಿ) 'ಹಲಗ'ನೆಂಬಾತನೇ ಮುಂದಾಳುವಾಗಿರಬಹುದು. ಆತ ನೆಲೆನಿಂತು ಸಂಸ್ಥಾಪಿಸಿದ ಗ್ರಾಮಕ್ಕೆ 'ಹಲಗಲಿ' ಎಂಬ ಹೆಸರು ಬಂದಿರಬಹುದೆಂದು ಅವರು ವಿವರಣೆ ನೀಡುತ್ತಾರೆ.

ಗದ್ಯಾಳ :

ಜಮಖಂಡಿ ತಾಲೂಕಿನ ಐತಿಹಾಸಿಕ ಗ್ರಾಮವೇ ಗದ್ಯಾಳವಾಗಿದೆ.[೫೬] ಇದಕ್ಕೆ ತನ್ನ ಭೌಗೋಳಿಕ ಚರಿತ್ರೆಯಿಂದ ಮತ್ತು ಅದರ ಸುತ್ತಮುತ್ತಲಿನ ಪರಿಸರದಿಂದ ಬಂದಿರಬಹುದು ಅಂದರೆ ಫಲವತ್ತಾದ ಭೂಮಿಯಲ್ಲಿ ಬಂದು ನೆಲೆ ನಿಂತು ಅದಕ್ಕೆ ಗದ್ಯದ ಊರು ಎಂದು ಮುಂದೆ ಕಾಲಾಂತರದಲ್ಲಿ ಅದು ಗದ್ಯಾಳ ಎಂದು ಆಗಿರಬಹುದೆಂದು ಊಹಿಸುತ್ತಾರೆ.

ಇಲ್ಲಿ ಐತಿಹಾಸಿಕ ಮತ್ತು ಲಿಖಿತ ದಾಖಲೆಗಳು ಕಂಡುಬರುವುದಿಲ್ಲ. ಆದರೂ ಕೂಡಾ ವಿಶಿಷ್ಟ ಪರಂಪರೆಯೊಂದಿಗೆ ಬೆಳೆದು ಬಂದ ಗ್ರಾಮವಾಗಿದೆ.

ಗದ್ಯಾಳಕೆರೆ :

ಈ ಊರಿನ ಕೆರೆಯು ಗ್ರಾಮದಿಂದ ೧ ಕಿ.ಮೀ. ದೂರ ಸಾಗಿದರೆ ಗೋಟೆ ರಸ್ತೆಯ ಪಕ್ಕದಲ್ಲಿ ಬರುತ್ತದೆ. ಎರಡು ಬೆಟ್ಟಗಳಿಂದ ಹರಿದು ಹೋಗುವ ನೀರಿಗೆ ಅಡ್ಡಲಾಗಿ ಕಟ್ಟಿದ್ದಾರೆ. ಇದರ ಏರಿಯನ್ನು ಗರಸ್ಸಿನಿಂದ ನಿರ್ಮಿಸಿ ಅದರ ಮಧ್ಯದಲ್ಲಿ ಒಂದು ಚಿಕ್ಕ ನಿಯಂತ್ರಣ ವ್ಯವಸ್ಥೆ ಮಾಡಿ ಅದರ ಮೂಲಕ ನೀರಾವರಿಗೆ ಉಪಯೋಗಿಸುವರು.

ಇದರ ಅಂಗಳ ಸುಮಾರು ೮ ಎಕರೆ ವಿಸ್ತಾರವಾಗಿದ್ದು, ಏರಿ ಮುಂಭಾಗದಲ್ಲಿ ಕಾಲುವೆಗಳನ್ನು ಮಾಡಿ ಅದರ ಮೂಲಕ ಸುಮಾರು ೨೫ ಎಕರೆ ನೀರಾವರಿಗೆ ನೀರನ್ನು

ಉಪಯೋಗಿಸುವರು.

ಈ ಕೆರೆ ಇಂದು ದುಸ್ಥಿತಿಯಲ್ಲಿದೆ ಅದರ ಅಂಗಳದಲ್ಲಿ ಹೂಳು ಮತ್ತು ಗಿಡಗಳಿಂದ ತುಂಬಿಹೋಗಿದೆ. ನಿರ್ವಹಣೆ ಇಲ್ಲದೆ ಹಾಳಾಗುತ್ತಿದೆ. ಏರಿಯ ಒಳಮೈ ಕಲ್ಲನ್ನು ಜೋಡಿಸಿ ಹೆಚ್ಚು ನೀರು ನಿಲ್ಲುವಂತೆ ಮಾಡುವುದು ಅವಶ್ಯವಾಗಿದೆ. ಇದರಿಂದ ಅಂತರ್ಜಲ ಮತ್ತು ಪಶು, ಪಕ್ಷಿ, ಪ್ರಾಣಿಗಳಿಗೆ ಜೀವ ಜಲ ಒದಗಿಸಿದಂತಾಗುತ್ತದೆ.

ಜಮಖಂಡಿ ತಾಲೂಕಿನ ವಿಶಿಷ್ಟ ಗ್ರಾಮವಾದ ಇದು ತನ್ನ ವಿಭಿನ್ನವಾದ ಹಾಗೂ ಪರಂಪರೆ ಹಾಗೂ ಹಲವಾರು ಪ್ರಾಚೀನ ಅವಶೇಷಗಳೊಂದಿಗೆ ಬೆಳೆದು ಬಂದಿದೆ. ಇದರ ಹೆಸರನ್ನು ಅವಲೋಕನ ಮಾಡಿದಾಗ ಈ ಗ್ರಾಮಕ್ಕೆ ತನ್ನ ಭೌಗೋಳಿಕ ಪರಿಸರದಿಂದ ಈ ಹೆಸರು ಬಂದಿರಬಹುದು. ಅಂದರೆ ಫಲವತ್ತಾದ ಗದ್ದೆಗಳ ಪಕ್ಕದಲ್ಲಿ ಜನವಸತಿ ಆರಂಭಗೊಂಡು ನೆಲೆನಿಂತ ಪರಿಣಾಮವಾಗಿ ಗದ್ದೆಗಳ ಊರು ಮುಂದೆ ಕಾಲಾಂತರದಲ್ಲಿ ಅದು ಬೇರೊಂದು ರೂಪತಾಳಿ ಗದ್ಯಾಳ ಎಂದು ಆಗಿರಬಹುದೆಂದು ಸ್ಥಳೀಯರ ಅಭಿಪ್ರಾಯವಾಗಿದೆ.

ತೇರದಾಳ ಕೆರೆ :

ತೇರದಾಳಕ್ಕೆ ಮೊದಲು ಕಂಪನ ಎಂದು ಕರೆಯುತ್ತಿದ್ದರು.[೫೭] ಚಾಲುಕ್ಯದೊರೆಗಳ ಆದೀನದಲ್ಲಿ ನಡೆಸುತ್ತಿದ್ದ ತೇರದಾಳದ ಗೊಂಕರಸನು ರಟ್ಟರ ಅವಧಿಯಲ್ಲಿ ವಿಶಿಷ್ಟ ಹೆಸರು ಪಡೆದನು.[೫೮] ಜಮಖಂಡಿ ಪಟ್ಟಣದಿಂದ ೩೫ ಕಿ.ಮೀ. ದೂರದಲ್ಲಿರುವ ತೇರದಾಳ ತನ್ನದೆ ಆದ ಐತಿಹಾಸಿಕ ಜೈನ ಧರ್ಮದ ಪ್ರಮುಖ ಕೇಂದ್ರವಾಗಿ ನಿರ್ಮಾಣಗೊಂಡಿದೆ. ಈ ನಗರದ ಪಟ್ಟಣದ ಸುತ್ತಲೂ ಹಲವಾರು ಆದಿ ಮಾನವ ಶಿಲಾಗೋರಿಗಳು ಕಂಡುಬರುತ್ತವೆ. ಹಾಗಾಗಿ ಇದು ಆದಿಮಾನವನು ನೆಲೆಸಿದ ಪ್ರದೇಶವಾಗಿದೆ. ಇದರ ಜೊತೆಗೆ ಪ್ರಾಚೀನಕಾಲದಿಂದಲೂ ಈ ನಗರವು ಜೈನಧರ್ಮದ ಪ್ರಮುಖ ಕೇಂದ್ರವಾಗಿ ಬೆಳೆಯುವುದರ ಜೊತೆಗೆ ಇವತ್ತಿಗೂ ಜೈನ ತೀರ್ಥಂಕರರ ಮೂರ್ತಿ ಶಿಲ್ಪಗಳು ದೊರೆಯುತ್ತವೆ.

ಇಲ್ಲಿರುವ ಕೆರೆಗಳು ಬಹು ಪುರಾತನವಾದ ಹಾಗೂ ನಾನಾ ರಾಜಮನೆತನದವರು, ಸಾಮಂತರು ಪೋಷಣೆ ಮಾಡುತ್ತಾ ಬಂದಿದ್ದಾರೆ. ೧೬ ಎಕರೆ ವಿಸ್ತಾರಹೊಂದಿದ ಈ ಕೆರೆಯು ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಪ್ರಮುಖ ಕೆರೆಯಾಗಿದೆ. ಇದರ ಒಂದು ದಂಡೆಯಲ್ಲಿ ಗಣಪತಿ ಗುಡಿ ಇದೆ. ಏರಿಯು ಸಾಧಾರಣವಾಗಿ ನಿರ್ಮಾಣಗೊಂಡಿದ್ದು, ಶಿಥಿಲಾವ್ಯವಸ್ಥೆಗೆ ಬಂದಿದೆ. ಕೆರೆಗೆ ಊರಿನ ತ್ಯಾಜ್ಯಗಳು ಬಂದು ಸೇರ್ಪಡೆಯಾಗುತ್ತಿದ್ದು ಇದಲ್ಲದೆ ಕೆರೆಯ ಅಂಗಳವನ್ನು ನಾನಾ ಉದ್ದೇಶಗಳಿಗೆ ಆಕ್ರಮಿಸಿದ್ದಾರೆ. ಕೆರೆಯ ಮೇಲ್ಗಡೆ ತಡೆಗೋಡೆ ಇಲ್ಲದ ಕಾರಣ ಅನೇಕ ವಾಹನಗಳು ಕೆರೆಯಲ್ಲಿ ಅಪಘಾತವಾದಾಗ ತಡೆಗೋಡೆ ನಿರ್ಮಿಸಿ ಕರೆಯ ಮೂಲಕ ನೀರು ಮಲೀನಗೊಂಡಿದೆ.

ಇನ್ನಾದರೂ ಸರಕಾರ ಎಚ್ಚೆತ್ತುಕೊಂಡು ಸಂರಕ್ಷಣೆ ಮಾಡಬೇಕಿದೆ.

ಜಮಖಂಡಿಯಿಂದ ಪಶ್ಚಿಮಕ್ಕೆ ೨೯ ಕಿ.ಮೀ.ದೂರದಲ್ಲಿದ್ದು, ಚಾಲುಕ್ಯ ಚಕ್ರವರ್ತಿ ನಾಲ್ಕನೆಯ ವಿಕ್ರಮಾದಿತ್ಯನ ಸಾಮಂತನಾದ 'ಗೊಂಕದೇವ' ಹಾಗೂ ಆರನೇ ವಿಕ್ರಮಾದಿತ್ಯನ ಮಾಂಡಲೀಕನಾಗಿದ್ದ 'ರಟ್ಟಕಾರ್ತವೀರ್ಯನ' ರಾಜಧಾನಿಯಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಶಾಸನಗಳಲ್ಲಿ ಈ ಊರು ರಾಜಧಾನಿ ತೇರದಾಳ ಎಂದು ಉಲ್ಲೇಖಗೊಂಡಿದೆ. ಈ ಊರಿನ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳು, ಊರಿನ ಪಶ್ಚಿಮಕ್ಕೆ ೫ ಕಿ.ಮೀ.ದೂರದಲ್ಲಿ ಬೂದಿಮಣ್ಣು ಹಾಗೂ ಇತರೆ ಜನವಸತಿಯ ನೆಲೆಗಟ್ಟುಗಳು ಇದ್ದ ಅವಶೇಷಗಳಿರುವ ದಿಬ್ಬಗಳಿವೆ. ಅಲ್ಲದೇ ಇಲ್ಲಿರುವ ಹನಗಂಡಿ, ಹಳಿಂಗಳಿ, ಮದನಮಟ್ಟ ಮತ್ತು ಆಸಂಗಿ ಪರಿಸರದೊಂದಿಗೆ ನೂರಾರು ಬೃಹತ್ ಶಿಲಾಗೋರಿಗಳು ಕಂಡುಬರುತ್ತವೆ. ಇದು ಕಲ್ಯಾಣಿಚಾಲುಕ್ಯರ ಕಾಲದ ಪ್ರಮುಖ ಜೈನಧರ್ಮದ ಕೇಂದ್ರವಾಗಿ ಬೆಳೆದುಬಂದಿದೆ.

ತುಂಗಳ ಕೆರೆ :

ಜಮಖಂಡಿ ತಾಲೂಕಿನ ತುಂಗಳದ ಕೆರೆಯು ೭೧ ಎಕರೆ ವಿಸ್ತಾರ ಹೊಂದಿದ ಕೆರೆಯಾಗಿದೆ. ಇದರ ಅಂಗಳವು ಬಿಳಿ ಗರಸಿನಿಂದ ಆವೃತ್ತವಾಗಿದೆ. ಸುತ್ತಲೂ ಎತ್ತರವಾದ ಏರಿಯಿಂದ ನಿರ್ಮಾಣ ಮಾಡಿದ್ದಾರೆ. ಮಧ್ಯದಲ್ಲಿ ತೂಬು ಇದ್ದು ಅದರ ಮೂಲಕ ಕಾಲುವೆಗಳಿಗೆ ನೀರನ್ನು ಬಿಟ್ಟು ವ್ಯವಸಾಯಕ್ಕೆ ಬಳಸುತ್ತಾರೆ. ಇದು ಗ್ರಾಮದ ಐತಿಹಾಸಿಕ ಕೆರೆಯಾಗಿದ್ದು, ಪ್ರಾಚೀನ ಕಾಲದಿಂದಲೂ ನಾನಾ ರಾಜರು, ಸಾಮ್ರಾಜ್ಯಗಳು ಪೋಷಣೆ ಮಾಡುತ್ತಾ ಬಂದಿವೆ. ಮೊದಲು ಕುಡಿಯುವ ನೀರನ್ನು ಒದಗಿಸುತ್ತಿದ್ದ ಕೆರೆಯು ಇಂದು ನೀರಾವರಿಗೆ ಬಳಕೆಯಾಗುತ್ತದೆ. ಕೆರೆ ತುಂಬಿದಾಗ ಸುತ್ತಲೂ ಹತ್ತಾರು ಹಳ್ಳಿಗಳ ಬೋರವೆಲ್ ಅಂತರ್‌ಜಲಮಟ್ಟ ಹೆಚ್ಚಳವಾಗುತ್ತದೆ ಎಂದು ಗ್ರಾಮದ ಜನರು ಹೇಳುತ್ತಾರೆ. ಅದರಂತೆ ಊರ ಹಿಂದೆ ಸಣ್ಣದೊಂದು ಕೆರೆಯು ಇದೆ. ಒಟ್ಟಾರೆಯಾಗಿ ಈ ಗ್ರಾಮದ ಎರಡು ಕೆರೆಗಳು ಕಂಡು ಬರುತ್ತವೆ.

ತೊದಲಬಾಗಿ ಕೆರೆ :

ಎರಡು ಗುಡ್ಡಗಳ ನಡುವೆ ವಿಶಾಲ ಭಾಗದಲ್ಲಿ ಸುಮಾರು ೫೦ ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಪೂರ್ವ-ಪಶ್ಚಿಮದಲ್ಲಿ ಎತ್ತರವಾದ ಗುಡ್ಡವಿದ್ದು, ಉತ್ತರದಲ್ಲಿ ಎತ್ತರವಾದ ಏರಿ ನಿರ್ಮಿಸಿ ಅದರಲ್ಲಿನ ತೂಬಿನ ಮೂಲಕ ನೀರನ್ನು ವ್ಯವಸಾಯಕ್ಕೆ ಬಳಸುವವರು. ಇದರ ಅಂಗಳವು ಕೆಂಪು ಮತ್ತು ಕಪ್ಪು ಮಣ್ಣಿನಿಂದ ಆವೃತ್ತವಾಗಿದೆ. ಇದರ ಪಕ್ಕದಲ್ಲಿ ಒಂದು ಮಂದಿರವಿದ್ದು, ಕೆರೆ ನೋಡಲು ಬಹಳ ಸುಂದರವಾಗಿ ಕಾಣುತ್ತದೆ. ಸರ್ಕಾರ ಕೆರೆಯ ಪಕ್ಕದಲ್ಲಿ ಪಕ್ಷಿಧಾಮ ನಿರ್ಮಾಣ ಮಾಡಿ ಅದನ್ನು ಪಕ್ಷಿ ಪ್ರವಾಸಿ ಗಿರಿಧಾಮವನ್ನಾಗಿ ನಿರ್ಮಾಣ ಮಾಡಿದರೆ ಇದರ ಸೊಬಗು ಹೆಚ್ಚಳವಾಗುತ್ತದೆ.

ಬೀಳಗಿ ತಾಲೂಕಿನ ಕೆರೆಗಳು :

ಬೀಳಗಿ :

ಬೀಳಗಿಯು ಬಾಗಲಕೋಟೆಯಿಂದ ವಾಯವ್ಯಕ್ಕೆ ೨೦ ಕಿ.ಮೀ (ವಿಜಾಪುರದಿಂದ ೬೪ ಕಿಮೀ) ದೂರದಲ್ಲಿರುವ ತಾಲೂಕು ಕೇಂದ್ರವಾಗಿದೆ. ಈ ಊರಿನಲ್ಲಿ ಕಂಡುಬರುವ ಕೊಳವೆಗಳು ಮತ್ತು ದೇವಾಲಯಗಳು ದೇಸಾಯಿ ಮನೆತನದ ಕಾಲಕ್ಕೆ ಸೇರಿದ್ದು, ಸುಮಾರು ೪೦೦ ವರ್ಷಗಳು ಹಳೆಯದಿರಬೇಕೆಂದು ಹೇಳಬಹುದಾಗಿದೆ. ಊರಿನಲ್ಲಿ ಕ್ರಿಶ ೧೬೦೫ ರಲ್ಲಿ ನಿರ್ಮಿತವಾದ ರಾಯರ ಬಾವಿ ಆರೆತ್ತಿನ ಬಾವಿ ಅಥವಾ ಸುರಳಿಬಾವಿ ಎಂದು ಸ್ಥಳೀಯವಾಗಿ ಕರೆಯಲಾಗುವ ಸುಂದರ ಕಲ್ಲಿನ ಬಾವಿ ಇದೆ. ಇದರ ಗೋಡೆಯಲ್ಲಿ ಶಾಸನವಿದ್ದು, ಇಬ್ರಾಹಿಂ ಆದಿಲ್‌ಷಾಹಿ ಆಳ್ವಿಕೆಯ ಸಮಯದಲ್ಲಿ ಯಾಖೂತ್ ಖಾನನು ಬೀಳಗಿ ಸಮತು ಮೊಖಾಸಿಯಾಗಿದ್ದಾಗ ಇದೇ ಸ್ಥಳದ ಖಂಡೇರಾಯ ಪಂಡಿತನು ಊರಿನ ಪಶ್ಚಿಮ ಭಾಗದಲ್ಲಿ ಬಾವಿಯನ್ನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ.[೫೯] ಇದೇ ವಿಷಯವನ್ನು ಪ್ರತಿಪಾದಿಸುವ ಇಬ್ರಾಹಿಂ ಆದಿಲ್‌ಷಾಹಿ ಕಾಲದ (೧೬೦೫) ನಾಗರಿ ಲಿಪಿಯ ಶಾಸನವು ಇದೇ ಬಾವಿಯ ಗೋಡೆಯಲ್ಲಿ ಕಂಡುಬರುತ್ತದೆ. ಈ ಬಾವಿಯು ಒಳಭಾಗದಲ್ಲಿರುವ ಇದೇ ಕಾಲದ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾಗಿರುವ ಮಹದೇವ ದೇವಾಲಯವಿದೆ. ಇಲ್ಲಿರುವ ಶಾಸನಗಳು ಮಹಾದೇವ ದೇವಾಲಯವನ್ನು ಕ್ರಿಶ ೧೭೦೮ ರಲ್ಲಿ ನಿರ್ಮಿಸಲಾಯಿತೆಂದು ತಿಳಿಸುತ್ತದೆ. ಬೀಳಗಿಯೂ ದಕ್ಷಿಣ ಭಾಗದಲ್ಲಿ (ಒಂದು ಕಿ.ಮೀ ದೂರದಲ್ಲಿ) ದೊಡ್ಡದಾದ ಕಲ್ಯಾಣಿ ಇದ್ದು, ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿರುವ ಸಿದ್ದೇಶ್ವರ ದೇವಾಲಯವಿದೆ.

ಈ ದೇವಾಲಯವು ವಿಶೇಷವಾದ ದುರ್ಗಮ ಪ್ರದೇಶದಲ್ಲಿದ್ದು, ಕಲ್ಯಾಣ ಚಾಳುಕ್ಯರ ಕಾಲದ ರಚನೆಯಾಗಿದೆ. ಇದರಲ್ಲಿ ಗರ್ಭಗೃಹ, ಅಂತರಾಳ ಹಾಗೂ ಆಯತಾಕಾರವಾದ ನವರಂಗಗಳಿವೆ. ಅಂತರಾಳ ಹಾಗೂ ಗರ್ಭಗೃಹದ ಬಾಗಿಲುವಾಡಗಳು ಅಲಂಕೃತವಾಗಿವೆ. ಅಂತರಾಳದ ದ್ವಾರದ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ನವರಂಗದ ಮಧ್ಯದಲ್ಲಿರುವ ಕಲ್ಯಾಣ ಚಾಳುಕ್ಯ ಶೈಲಿಯ ನಾಲ್ಕು ಸ್ತಂಭಗಳು ಅಲಂಕೃತವಾಗಿವೆ. ಗರ್ಭಗೃಹದ ಮೇಲೆ ಕದಂಬನಾಗರ ಶಿಖರವಿದೆ. ಈ ದೇವಾಲಯವು ವಿಶಾಲವಾದ ಒಳಪ್ರಕಾರವನ್ನು ಹೊಂದಿದ್ದು, ಅಕ್ಕಪಕ್ಕಗಳಲ್ಲಿ ಪಾರ್ವತಿ ಮತ್ತು ವೀರಭದ್ರ ದೇವರುಗಳ ಚಿಕ್ಕದಾದ ಗುಡಿಗಳಿವೆ. ಮುಖ್ಯಗುಡಿಯ ಬಲಭಾಗದಲ್ಲಿ ನೀರಿನ ಝರಿಯಿದ್ದು ಪ್ರದಕ್ಷಿಣಾ ಪಥದಲ್ಲಿ ಅನೇಕ ಲಿಂಗಗಳ ಚಿಕ್ಕಗುಡಿಗಳಿವೆ.[೬೦] ಇವುಗಳ ಬಳಿಯೇ ಇದೇ ಕಾಲದ ಲಜ್ಜಾಗೌರಿಯ ಮೂರ್ತಿ ಹಾಗೂ ಇತರೆ ಪುರಾತನ ಶಿಲಾಕೃತಿಗಳು ಕಂಡುಬರುತ್ತವೆ. ಸಿದ್ದೇಶ್ವರ ದೇವಾಲಯವು ಚತುರ್ಭುಜಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಹೊರಭಾಗದಲ್ಲಿ ಚೌಕಾಕಾರದ ಕಂಬಗಳಿಂದ ಕೂಡಿರುವ

ಮೊಗಸಾಲೆಗಳಿವೆ. ಈ ದೇವಾಲಯದ ಪೂರ್ವದ ಮಹಾದ್ವಾರವನ್ನು ಕ್ರಿ.ಶ ೧೭೯೫ರಲ್ಲಿ ಖಂಡೇರಾವ್ ತಿಮ್ಮಾಜಿ ಎಂಬ ಹೈದರ್‌ಖಾನನ ಅಧಿಕಾರಿಯು ಕಟ್ಟಿಸಿದನೆಂದು ದೇವಾಲಯದ ಪಾವಟಿಗೆಯ ಮೇಲಿರುವ ಮರಾಠಿ ಶಾಸನದಿಂದ ತಿಳಿದುಬರುತ್ತದೆ.[೭೧] ದೇವಾಲಯವನ್ನು ಹೊರಭಾಗದಿಂದ ವೀಕ್ಷಿಸಿದರೆ ಹಿಂಭಾಗದ ಗುಡ್ಡದ ಮೇಲಿರುವ ದೀಪಸ್ತಂಭವು ಕಂಡುಬರುತ್ತದೆ. ಸುಮಾರು ೧೨ ಮೀಟರ್ ಎತ್ತರವಿರುವ ಈ ದೀಪಸ್ತಂಭವು ಕ್ರಿ.ಶ ೧೫೮೯ ರಲ್ಲಿ ಹೈದರ್‌ಖಾನನ ಅಧಿಕಾರಿ ಖಂಡೇರಾವ್ ತಿಮ್ಮಾಜಿಯಿಂದ ನಿರ್ಮಾಣಯಿತೆಂದು ಅದರ ಮೇಲಿರುವ ಮರಾಠಿ ಶಾಸನವು ತಿಳಿಸುತ್ತದೆ. ಈ ಗುಡ್ಡದ ಮೇಲಿರುವ ಮಲ್ಲಸಿದ್ದಪ್ಪನ ಗುಡಿ ಹಾಗೂ ಏಳುಮಠವು ಪ್ರಸಿದ್ಧವಾಗಿವೆ. ಸಿದ್ದೇಶ್ವರ ದೇವರ ಜಾತ್ರೆ ಶ್ರಾವಣ ಮಾಸದಲ್ಲಿ ಜರುಗುತ್ತದೆ. ಶ್ರಾವಣದ ಕೊನೆಯ ಸೋಮವಾರದಂದು ಸಿದ್ದೇಶ್ವರ ದೇವರ ರಥೋತ್ಸವವು ನಡೆಯುತ್ತದೆ. ಸ್ಥಳೀಯ ಕಲ್ಮಠದಲ್ಲಿ ಭಕ್ತರಿಗೆ ದಾಸೋಹ ನೀಡಲಾಗುತ್ತದೆ. ಈ ಬೆಟ್ಟಗಳಲ್ಲಿ ಕಲ್ಲು ಒಡೆಯುತ್ತಿದ್ದು, ದೇವಾಲಯಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆಗಳಿವೆ.

ಅರಕೇರಿ ತಾಂಡದ ಕೆರೆ :

ಬೀಳಗಿ ತಾಲೂಕಿನ ಐತಿಹಾಸಿಕ ಗ್ರಾಮವಾದ ಅರಕೇರಿ ವಿಶಿಷ್ಟವಾದ ಪರಂಪರೆಯನ್ನು ಒಳಗೊಂಡು ಬೆಳೆದು ಬಂದ ಪ್ರದೇಶವಾಗಿದೆ. ಇದು ಹಲವು ಸಾಮ್ರಾಜ್ಯ ಮತ್ತು ದೇಶಗತಿ ಸಂಸ್ಥಾನಗಳ ಆಡಳಿತಕ್ಕೆ ಒಳಪಟ್ಟು ಹಲವಾರು ಅವಶೇಷಗಳು ಕಂಡು ಬರುತ್ತವೆ. ಇದಲ್ಲದೆ ೧೮೫೭ ರ ಹಲಗಲಿ ಬೇಡರ ಬಂಡಾಯದಲ್ಲಿ ಹಲವಾರು ಬೇಡ ನಾಯಕರಿಗೆ ಬ್ರಿಟಿಷರ ವಿರುದ್ಧ ರಕ್ಷಣೆ ನೀಡುವುದರ ಮೂಲಕ ಅವರ ವಿರುದ್ಧದ ಹೋರಾಟಕ್ಕೆ ಆಂತರಿಕವಾಗಿ ಬೆಂಬಲ ನೀಡಿದ ವಿಶಿಷ್ಟ ಪ್ರದೇಶವಾಗಿದೆ.

ಇಲ್ಲಿರುವ ಕೆರೆಯು ಗ್ರಾಮದಿಂದ ೧ ಕಿ.ಮೀ. ಅಂತರದಲ್ಲಿ ಗ್ರಾಮದ ತಾಂಡಾದ ಹತ್ತಿರ ೩೫ ಎಕರೆ ವಿಸ್ತಾರಹೊಂದಿದ ಬಹು ವಿಶಾಲವಾಗಿ ಹಬ್ಬಿಕೊಂಡಿರುವ ಕೆರೆಯಾಗಿದೆ. ಇದರ ಅಂಗವು ಏರಿ ಮಣ್ಣಿನಿಂದ ನಿರ್ಮಾಣವಾಗಿದ್ದು, ಸುತ್ತಲೂ ಏರಿ ಬೃಹದಾಕಾರದಲ್ಲಿ ಕಲ್ಲು ಮಣ್ಣಿನಿಂದ ನಿರ್ಮಿಸಿ ಹೆಚ್ಚು ನೀರು ನಿಲ್ಲುವಂತೆ ಮಾಡಿದ್ದಾರೆ. ಇದರ ಲಕ್ಷಣ ಅವಲೋಕನ ಮಾಡಿದಾಗ ಈ ಕೆರೆಯು ಮಧ್ಯ ಕರ್ನಾಟದ ಅವಧಿಯಲ್ಲಿ ನಿರ್ಮಾಣ ಮಾಡಿರಬಹುದೆಂದು ತರ್ಕಿಸಲಾಗಿದೆ. ಕೆರೆಯು ತುಂಬಿದಾಗ ಸುತ್ತಲೂ ಇರುವ ಕಾತರಕಿ, ಸುನಗ, ಯಡಹಳ್ಳಿ, ಬಾವಲತ್ತಿ, ಅರಕೇರಿ, ಬೀಳಗಿ ದಕ್ಷಿಣದ ಜಮೀನುಗಳಲ್ಲಿರುವ ಬೋರ್‌ವೆಲ್‌ಗಳಿಗೆ ನೀರಿನ ಪೂರೈಕೆ ಹೆಚ್ಚಾಗುತ್ತದೆ. ಇದರಿಂದ ಸುತ್ತಮುತ್ತಲಿನ ಜನರು ಕೆರೆ ತುಂಬಿದಾಗ ಅಲ್ಲಿಗೆ ಬಂದು ಪೂಜೆ-ಬಲಿ ನೀಡುವುದರ ಮೂಲಕ ದೇವರನ್ನು ಸಂತೃಪ್ತಿಗೊಳಿಸುವರು. ಇದಲ್ಲದೆ ಜನರು ಕೆರೆಯ ನೀರನ್ನು ನೋಡಿಕೊಂಡು ಯಾವುದೇ ಬೆಳೆಯನ್ನು ಬೆಳೆಯಬೇಕೆಂದು ನಿರ್ಧರಿಸುವರು. ಅಲ್ಲಿಯ ಹಿರಿಯರು ಪ್ರತಿವರ್ಷ ಈ

ಕೆರೆಯು ತುಂಬಲಿ ಎಂದು ದೇವರಲ್ಲಿ ಪ್ರಾರ್ಥಿಸುವರು.

ಜಾನಮಟ್ಟಿ ಕೆರೆ :

ಬೀಳಗಿ ತಾಲೂಕಿನ ಪ್ರಮುಖ ಪ್ರದೇಶ ಜಾನಮಟ್ಟಿ. ಇಲ್ಲಿರುವ ಕೆರೆಯು ಸುಮಾರು ೧೩ ಎಕರೆ ವಿಸ್ತಾರ ಹೊಂದಿದ್ದು, ಇದರ ಏರಿಯು ಕಲ್ಲು ಮತ್ತು ಗರುಸಗಳಿಂದ ನಿರ್ಮಾಣ ಮಾಡಿದ್ದಾರೆ. ಇದರ ಅಂಗಳವು ಬಿಳಿ ಮತ್ತು ಕೆಂಪು ಗರಸುನಿಂದ ಆವೃತ್ತವಾಗಿದೆ. ಇದರ ಅಕ್ಕ-ಪಕ್ಕದಲ್ಲಿ ಒಂದು ಪ್ರಾಚೀನ ದೇವಾಲಯವಿದೆ. ಮೊದಲು ಈ ಕೆರೆಯ ನೀರನ್ನು ಕುಡಿಯಲು ಬಳಸುತ್ತಿದ್ದರು. ಈಗ ಬೋರ್‌ವೆಲ್‌ನ ಸೌಕರ್ಯದಿಂದ ಕೆರೆಯ ನೀರನ್ನು ಬಳಸುವುದಿಲ್ಲ. ಕೇವಲ ದನಕರುಗಳಿಗೆ ಮಾತ್ರ ಬಳಕೆ ಮಾಡುತ್ತಾರೆ. ಕೆರೆ ತುಂಬಿದಾಗ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಅಂತರ್‌ಜಲಮಟ್ಟವು ಹೆಚ್ಚಳವಾಗುತ್ತದೆ ಎಂದು ಸ್ಥಳೀಯರ ಅಭಿಪ್ರಾಯವಾಗಿದೆ. ಕೆರೆ ತುಂಬಿದಾಗ ನಾನಾ ರೀತಿಯ ಆಚರಣೆಗಳು ನಡೆಯುತ್ತವೆ. ಇದು ಅಲ್ಲದೆ ಇಲ್ಲಿ ಬೆಸ ಸಂಖ್ಯೆಯ ಪ್ರಾಣಿಗಳ ಬಲಿ ಕೊಡುವ ಪದ್ಧತಿ ಇದೆ.

ಮುಧೋಳ ತಾಲೂಕಿನ ಕೆರೆಗಳು :

ಮುಧೋಳ :

ಮಹಾಕವಿ ರನ್ನ ಹೇಳಿರುವಂತೆ ಮುಧೋಳ ನಾಡು ಪ್ರಾಚೀನ ಕಾಲದ 'ಬೆಳುಗಲಿ ೫೦೦' ಹಾಗೂ ಜಂಬುಖಂಡಿ ೭೦ರ ಭಾಗವಾಗಿತ್ತು. ಕರ್ನಾಟಕದ ಸಮೃದ್ಧ ತಾಲೂಕುಗಳಲ್ಲಿ ಒಂದಾದ ಈ ಪ್ರದೇಶವು ಉತ್ತಮವಾದ ಪ್ರಾಕೃತಿಕ, ಸಾಹಿತ್ಯ, ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಸೌದತ್ತಿಯ ರಟ್ಟರು, ದೇವಗಿರಿಯ ಯಾದವರು ಬಿಜಾಪುರದ ಆದಿಲ್‌ಶಾಹಿಗಳು, ಸ್ಥಳೀಯ ಘೋರ್ಪಡೆ ಮನೆತನದವರು ಆಳ್ವಿಕೆ ನಡೆಸಿದ್ದಾರೆ. [೬೩]

ಮುಧೋಳ, ಶಾಸನಗಳಲ್ಲಿ 'ಮುದುವೊಳಲ್' ಅಂದರೆ ಸುಂದರವಾದ ಪಟ್ಟಣ ಎಂದು ಉಲ್ಲೇಖಗೊಂಡಿದೆ. ಕನ್ನಡ ಭಾಷೆಯ ಅದ್ವಿತೀಯ ಕವಿಯೆಂದು ಹೆಸರು ಪಡೆದಿರುವ ರನ್ನನ ಜನ್ಮಸ್ಥಳವಾಗಿದೆ. ಈ ಪಟ್ಟಣವು ಘಟಪ್ರಭಾ ನದಿಯ ಎಡದಂಡೆಯ ಮೇಲೆ ಸುಂದರ ಪರಿಸರದಲ್ಲಿದೆ. ನಂತರದ ಅವಧಿಯಲ್ಲಿ ಮುಧೋಳ ಒಂದು ಸಂಸ್ಥಾನವಾಗಿದ್ದು ; ಇದನ್ನು ಆಳಿದವರು ಭೋಸಲೆ-ಘೋರ್ಪಡೆ ಮನೆತನ.

ಮಹಾರಾಣಿ ಕೆರೆ :

ಮುಧೋಳ ಪಟ್ಟಣದ ಪೂರ್ವಭಾಗದಲ್ಲಿ ಬರುವ ಇಡೀ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಏಕೈಕ ನೀರಿನ ಆಕರವಾದ ಮಹಾರಾಣಿ ಕೆರೆಯು ಈ ಪ್ರದೇಶದ ಐತಿಹಾಸಿಕ ಕೆರೆಯಾಗಿದೆ.[೬೩] ಇದು ಸುಮಾರು ೭೨ ಕೆರೆ ಪ್ರದೇಶದಲ್ಲಿ ವಿಶಾಲವಾಗಿ ಹರಡಿಕೊಂಡಿದೆ. ಇದರ ಅಂಗಳವು ಬಿಳಿ ಕಪ್ಪು ಮಿಶ್ರಿತವಾದ ಗರಸನ್ನು ಹೊಂದಿದ್ದು,

ಕೆರೆಯ ನಡುವೆ ಒಂದು ತಡೆಗೋಡೆಯಿದ್ದು ಅದರ ಮೂಲಕ ನಿಯಂತ್ರಿಸುವ ವ್ಯವಸ್ಥೆ ಮಾಡಿದ್ದಾರೆ. ಕೆರೆಯ ಪೂರ್ವ ಮತ್ತು ಉತ್ತರ, ದಕ್ಷಿಣಕ್ಕೆ ಎತ್ತರವಾದ ತಡೆಗೋಡೆಯಿದ್ದು ಪಶ್ಚಿಮದಲ್ಲಿ ದೊಡ್ಡ ತಡೆಗೋಡೆಯನ್ನು ದೊಡ್ಡ ದೊಡ್ಡ ಬೃಹತ್ತ ಕಲ್ಲುಗಳಾದ ಪಾಟಿ ಕಲ್ಲು ಅಥವಾ ದಿಂಡುಗಲ್ಲುಗಳಿಂದ ನಿರ್ಮಾಣಮಾಡಿದ್ದಾರೆ. ಅದರ ಮಧ್ಯದಲ್ಲಿ ಒಂದು ತೂಬು ನಿರ್ಮಾಣವಾಗಿದೆ. ಇದರ ಮೂಲಕ ಐತಿಹಾಸಿಕ ಪಟ್ಟಣಕ್ಕೆ ಪೂರೈಕೆ ಮಾಡುತ್ತದೆ. ಈ ಕೆರೆಯ ತಾಂತ್ರಿಕತೆ ವಿಶಿಷ್ಟವಾಗಿದೆ. ಕೆರೆಯ ಪಶ್ಚಿಮದಲ್ಲಿ ವಿಶಿಷ್ಟ ಮಾದರಿಯ ಕಲ್ಲುಗಳನ್ನು ಜೋಡಿಸಿ ನಿರ್ಮಾಣ ಮಾಡಿದ್ದಾರೆ. ಅದರ ಕಟ್ಟಡದ ಶೈಲಿ ಆಧುನಿಕ ಕಟ್ಟಡಗಳನ್ನು ಮೀರಿಸುವಂತೆ ವಿಭಿನ್ನ ರೂಪದಲ್ಲಿ ನೀರನ್ನು ಪೂರೈಕೆ ಮಾಡಲು ನಿರ್ಮಾಣ ಮಾಡಿದ್ದಾರೆ. ಪಟ್ಟಣದ ಪೂರ್ವಭಾಗದಲ್ಲಿ ಎತ್ತರವಾದ ವಿಶಾಲವಾದ ಸ್ಥಳದಲ್ಲಿ ಕೆರೆಯನ್ನು ನಿರ್ಮಿಸಿ ಅದರ ಅಂಗಳದ ಮೂಲಕ ಸ್ವಾಭಾವಿಕವಾಗಿ ಕುಡಿಯುವ ನೀರು ಪಟ್ಟಣಕ್ಕೆ ಹರಿದು ಬರುವ ತಾಂತ್ರಿಕತೆಯನ್ನು ಅಳವಡಿಸಿದ್ದಾರೆ. ಮಳೆಗಾಲದಲ್ಲಿ ಮಳೆಯಿಂದ ತುಂಬಿದರೆ ಬೇಸಿಗೆ ಅಥವಾ ಮಳೆಕೊರತೆ ಇದ್ದಾಗ ನವಿಲುತೀರ್ಥದ ನೀರನ್ನು ಕಾಲುವೆಗಳ ಮೂಲಕ ತುಂಬುವರು. ಇವತ್ತಿಗೂ ಕೂಡ ಕೆರೆ ಖಾಲಿಯಾಗದಂತೆ ನೋಡಿಕೊಳ್ಳುತ್ತ ಬಂದಿದ್ದಾರೆ. ಅದಲ್ಲದೆ ಇಲ್ಲಿ ಒಂದು ಸುಂದರವಾದ ಕೆರೆಯನ್ನು ನಿರ್ಮಾಣ ಮಾಡುವುದರ ಮೂಲಕ ಪಕ್ಷಿಧಾಮವನ್ನು ನಿರ್ಮಾಣ ಮಾಡಬೇಕಿದೆ.

ದತ್ತಾತ್ರೆಯ ಕೆರೆ :

ಮುಧೋಳ ಪಟ್ಟಣದ ಇನ್ನೊಂದು ಐತಿಹಾಸಿಕ ಕೆರೆ ದತ್ತಾತ್ರೆಯ ಕೆರೆಯಾಗಿದೆ. ಇದರ ಪಕ್ಕದಲ್ಲಿ ದತ್ತಾತ್ರೆಯ ದೇವಾಲಯ ಇರುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದು ಸುಮಾರು ೮ ಎಕರೆ ವಿಸ್ತಾರಹೊಂದಿದ್ದು, ಸುತ್ತಲೂ ಏರಿ ನಿರ್ಮಾಣಗೊಂಡಿದ್ದು, ನಗರದ ಯಾವುದೇ ತ್ಯಾಜ್ಯಗಳು ಕೂಡದಂತೆ ಅದರ ಪಾವಿತ್ರ್ಯತೆಯನ್ನು ಹೆಚ್ಚಿಸಿದ್ದಾರೆ. ಈ ಕೆರೆಯ ಪಶ್ಚಿಮ ಭಾಗದ ದಂಡೆಯಲ್ಲಿ ವೆಂಕಟೇಶ್ವರ ದೇವಾಲಯವು ಇದೆ. ಕೆರೆಯ ಸುತ್ತಲೂ ವಿಶಾಲವಾದ ಉದ್ಯಾನವನವನ್ನು ಜೊತೆಗೆ ಒಂದು ಸುಂದರವಾದ ಕೆರೆಯನ್ನು ನಿರ್ಮಾಣ ಮಾಡಿದ್ದಾರೆ.

ಈ ಕೆರೆಯು ಪಟ್ಟಣದ ಮಧ್ಯದಲ್ಲಿರುವುದರಿಂದ ಇದಕ್ಕೆ ಯಾವುದೇ ರೀತಿಯಿಂದ ಮಲೀನವಾಗದಂತೆ ನಗರದ ಚರಂಡಿನೀರು ಸೇರದಂತೆ ನಗರಾಡಳಿತ ಎಚ್ಚರ ವಹಿಸಿ ಸುವ್ಯವಸ್ಥಿತವಾಗಿ ಒಂದು ಸುಂದರ ಕೆರೆಯ ಉದ್ಯಾನವನ್ನು ನಿರ್ಮಾಣ ಮಾಡಿದ್ದಾರೆ. ಇಲ್ಲಿಗೆ ಸಾವಿರಾರು ಜನ ಪ್ರವಾಸಿಗರು, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಕುಟುಂಬದ ಸದಸ್ಯರು ಒಂದು ದಿನದ ಪಿಕ್‌ನಿಕ್‌ಗಾಗಿ ಬಂದು ಕೆರೆಯ ಸೌಂದರ್ಯವನ್ನು ಸವಿಯುತ್ತಾರೆ.

ಅಗಸರ ಕೆರೆ :

ಐತಿಹಾಸಿಕ ಮುಧೋಳ ಪಟ್ಟಣದ ಇನ್ನೊಂದು ಪ್ರಮುಖ ಕೆರೆಯೆಂದರೆ ಅದುವೇ ಅಗಸರ ಕೆರೆಯಾಗಿದೆ. ಇದು ನಗರದ ಮಂಟೂರು ರಸ್ತೆಪಕ್ಕದಲ್ಲಿ ಬರುತ್ತದೆ. ಇದರ ಇನ್ನೊಂದು ಬದಿಗೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಅಂಗಸಂಸ್ಥೆಯಾದ ಶ್ರೀ ಎಸ್.ಆರ್. ಕಂಠಿ ಮಹಾವಿದ್ಯಾಲಯದ ಆವರಣದಲ್ಲಿದೆ. ಇದರ ಮಧ್ಯದಲ್ಲಿ ೧೬ ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವುದು ಅಗಸರ ಕೆರೆಯಾಗಿದೆ. ಇದರ ಸುತ್ತಲೂ ಮಣ್ಣಿನ ತಡೆಗೋಡೆಯಿದ್ದು, ಮಳೆಗಾಲದಲ್ಲಿ ಸಂಪೂರ್ಣವಾಗಿ ನೀರು ನಿಲ್ಲುತ್ತದೆ. ಬೇಸಿಗೆಯಲ್ಲಿ ಬತ್ತಿ ಹೋಗುತ್ತದೆ.

ಈ ನಗರದಲ್ಲಿ ಕುಡಿಯುವ ನೀರಿಗಾಗಿ ಮಹಾರಾಣಿ ಕೆರೆ ಇದೆ. ಅದೇ ರೀತಿ ಅಗಸರ ಕಾರ್ಯಗಳಿಗೆ ಬೇರೆಯಾದ ಕೆರೆ ಇರುವುದು ಗಮನಾರ್ಹವಾಗಿದೆ. ಹಾಗಾಗಿ ಇದಕ್ಕೆ ಅಗಸರ ಕೆರೆ ಎಂದು ಹೆಸರು ಬಂದಿದೆ. ಇಂದು ಹಲವಾರು ಜನ ಅಗಸರು ಬಟ್ಟೆಗಳನ್ನು ತೊಳೆಯಲು ಇಲ್ಲಿಗೆ ಬರುತ್ತಾರೆ. ಹಾಗಾಗಿ ಅವರಿಗಾಗಿ ನಿರ್ಮಿತಗೊಂಡ ಬಹುಮುಖ್ಯವಾದ ಕೆರೆಯಾಗಿದೆ.

ಹೇಗಿದೆ ಹಲಗಲಿ?

ಮುಧೋಳ ತಾಲೂಕಿನ ಪೂರ್ವಭಾಗದ ಕೊನೆಯ ಹಳ್ಳಿಯಾಗಿರುವ ಹಲಗಲಿ ಪಶ್ಚಿಮದ ಮೇಳ್ಳಿಗೇರಿ ಗ್ರಾಮ (ಮುಧೋಳ ತಾಲೂಕು)ದ ಸೀಮೆ ಹೊರತುಪಡಿಸಿದರೆ ಉಳಿದಂತೆ ಬೀಳಗಿ ತಾಲೂಕಿಗೇನೆ ತೀರ ಹತ್ತಿರವಾದ ಗ್ರಾಮ. ಊರ ಉತ್ತರಕ್ಕಿರುವ ಕೆರೆಯ ಅಂಗಳದಿಂದಲೇ ದಟ್ಟವಾದ ಹಾಗೂ ವಿಸ್ತಾರವಾದ ಕಾಡು ಪ್ರಾರಂಭಗೊಳ್ಳುತ್ತದೆ. ಇದೇ ಗುಡ್ಡದಲ್ಲಿ ಹಾಯ್ದು ಕಾಲು ದಾರಿಯಿಂದ ಬೀಳಗಿ ತಾಲೂಕಿನ ತೆಗ್ಗಿ, ಸಿದ್ದಾಪೂರ, ಬಿಸನಾಳ, ಯಡಹಳ್ಳಿ, ನಾಗರಾಳ (ಉತ್ತರದ ದಾರಿಯಿಂದ) ಗಳಿಗೆ ಅರಕೇರಿ, ಜಾನಮಟ್ಟಿ, ಸುನಗ (ಪೂರ್ವದ ಕಡೆಯಿಂದ) ಗಳಿಗೆ ಹೋಗಬಹುದಾಗಿದೆ.

ಈ ಗುಡ್ಡದಲ್ಲಿಯೇ ಮಾನವ ನಿರ್ಮಿತ ನಾನಾ ಬಗೆಯ ಚಿತ್ರಗಳಿರುವ ಕಲ್ಲುಗಳು ದೊರೆಯುತ್ತವೆ. ಅಲ್ಲಲ್ಲಿ ಮನುಷ್ಯರು ಅತ್ಯಂತ ಸಲೀಸಾಗಿ ಓಡಾಡಿಕೊಂಡಿರುವಷ್ಟು ವಿಶಾಲವಾದ ಸ್ಥಳಾವಕಾಶವಿರುವ ಗವಿಗಳೂ ಕಂಡುಬರುತ್ತವೆ. ಆಂಗ್ಲರ ವಿರುದ್ಧ ಸಂಚು ರೂಪಿಸುತ್ತಿದ್ದ ಜಡಗಾ ಮತ್ತು ಬಾಲ ದಟ್ಟವಾದ ಅರಣ್ಯ ಪ್ರದೇಶಗಳಲ್ಲಿರುವ ಈ ಗವಿಗಳಲ್ಲಿಯೇ ವಾಸಿಸುತ್ತಿದ್ದರೆಂದೂ, ಸಿರಿವಂತರ ವಿರುದ್ಧ ಸಿಡಿದೆದ್ದು ಬಡಜನತೆಯ ಪರವಾಗಿ ಧ್ವನಿ ಎತ್ತಿದ ಸಿಂಧೂರಲಕ್ಷ್ಮಣನು ಕೂಡಾ ಈ ಗವಿಗಳಲ್ಲಿಯೇ ವಾಸಿಸುತ್ತಿದ್ದನೆಂದು ಹೇಳಲಾಗುತ್ತದೆ.[೧೧]


ಗ್ರಾಮಕ್ಕೆ ನೀರು ಪೂರೈಸುವ ಕೆರೆಗಳು :

ಊರಿನ ಉತ್ತರಕ್ಕಿರುವ ಕೆರೆಯೇ ಗ್ರಾಮದ ಜನತೆಗೆ ಕುಡಿಯಲು ನೀರು ಪೂರೈಸುವ ಕೆರೆ. ಮಳೆಗಾಲದಲ್ಲಿ ಗುಡ್ಡದಿಂದ ಹರಿದು ಬರುವ ನೀರೇ ಇಲ್ಲಿ ಸಂಗ್ರಹಗೊಳ್ಳುತ್ತದೆ.

ಆಧುನಿಕ ತಂತ್ರಜ್ಞಾನ ಬಳಸಿ ಕಟ್ಟುವ ಕೆರೆಗಳೇ ಕೆಲವೇ ದಿನಗಳಲ್ಲಿ ಮಾಯವಾಗಿ ಜನ ಜಾನುವಾರುಗಳನ್ನು ಕೊಚ್ಚಿಕೊಂಡು ಹೋಗುತ್ತಿರುವ ಇಂದಿನ ದಿನಮಾನಗಳಲ್ಲಿ ಯಾವುದೋ ಕಾಲದಲ್ಲಿ ನಿರ್ಮಾಣಗೊಂಡು ಎಲ್ಲಿಯೂ ಒಂದಿಂಚೂ ಹಾನಿಗೊಳಗಾಗದೇ ಅಚಲವಾಗಿ ನಿಂತಿರುವ ಹಲಗಲಿ ಕೆರೆಯನ್ನು ನಿರ್ಮಿಸಿದ ಚಾಣಾಕ್ಷ ಶಿಲ್ಪಿಗಳ ಕರಚಮತ್ಕೃತಿ ನಿಜಕ್ಕೂ ಬೆರಗುಗೊಳಿಸುವಂತಹದ್ದಾಗಿದೆ. ಇಲ್ಲಿ ಸಂಗ್ರಹಗೊಂಡ ನೀರು ವರ್ಷಪೂರ್ತಿ ಗ್ರಾಮಸ್ಥರಿಗೆ ಬಳಕೆಯಾಗುವಂತಹದ್ದಾಗಿದೆ. ನೀರು ಕೆಟ್ಟು ಹೋಗಿದೆ. ಹೊಲಸಾಗಿವೆ ಎಂಬ ಮಾತೇ ಇಲ್ಲಿ ಬರದು. ಶುದ್ಧ ಸ್ಫಟಿಕದಂತೆ ಸದಾ ಕಂಗೊಳಿಸುತ್ತದೆ. ಇದಕ್ಕೆ ಗ್ರಾಮಸ್ಥರು ಕೊಡುವ ವಿವರಣೆ " ಎಲ್ಲಾ ವನಸ್ಪತಿ ಬೇರಿನ ಬುಡಕ ಹರ್ದು ಬರೂಮುಂದ ವನಸ್ಪತಿ ಸತ್ವಾ ಹೀರಕೊಂಡ ಬರ್‍ತೈತ್ರಿ, ಅದಕ್ಕ ನಮ್ಮೂರ ಕೆರಿ ನೀರು ಕೆಡೂದಿಲ್ಲ" ಎನ್ನುತ್ತಾರೆ.

ಆಶ್ಚರ್ಯದ ಸಂಗತಿ ಎಂದರೆ ಮಹಾರಾಜನ ಹೆಂಡತಿಯೊಬ್ಬಳು ಗರ್ಭಿಣಿಯಾದಾಗ ಆಕೆಗೆ ಹಲಗಲಿ ಕೆರೆಯ ನೀರನ್ನು ಕುಡಿಯುವ ಬಯಕೆಯಾಗಿತ್ತಂತೆ. ಅಂಥಾ ನೀರು ನೋಡ್ರಿ ನಮ್ಮೂರ ಕೆರಿ ನೀರು ಎಂದು ಹಲಗಲಿ ಗ್ರಾಮಸ್ಥರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ಮಂಟೂರು



ಮಂಟೂರಿನ ರಟ್ಟಸಮುದ್ರ ಕೆರೆ, ತೆಪ್ಪೋತ್ಸವದ ಚಿತ್ರಣ

ಮುಧೋಳ ತಾಲೂಕಿನ ಮಂಟೂರ ಗ್ರಾಮವು ತನ್ನದೇಯಾದ ಐತಿಹಾಸಿಕ ಚಾರಿತ್ರಿಕ ಪಂಪರೆಯೊಂದಿಗೆ ಬೆಳೆದು ಬಂದಿದೆ. ಇದರ ಬಗ್ಗೆ ಸುಮಾರು ೯ ಮತ್ತು ೧೦ ನೇ ಶತಮಾನದಿಂದ ಲಿಖಿತವಾದ ಮಾಹಿತಿ ದೊರೆಯುತ್ತದೆ. ಇದು ಹಲವು ರಾಜ್ಯ - ಸಾಮ್ರಾಜ್ಯಗಳ ಆಡಳಿತ ಭಾಗವಾಗಿ ತನ್ನದೇ ಆದ ಕೊಡುಗೆ ನೀಡಿ ಇವತ್ತಿಗೂ ಭವ್ಯ



ಪರಂಪರೆ ಮುಂದುವರೆಸಿಕೊಂಡು ಬಂದಿದೆ.

ರಟ್ಟ ಸಮುದ್ರ ಕೆರೆ : ಬಾಗಲಕೋಟೆ ಜಿಲ್ಲೆಯ ಪ್ರಮುಖ ಐತಿಹಾಸಿಕ ಕೆರೆ ಪ್ರವಾಸಿ ಮಂದಿರ ಎಂದರೆ ಮಂಟೂರ ಎಂದು ಹೇಳಬಹುದು. ಇದು ೧ ನೇ ಜಗದೇಕಮಲ್ಲನ ಕಾಲಕ್ಕೆ ಸೇರಿದ್ದು, ಜಗದೇಕಮಲ್ಲನು ಹೊಟ್ಟಲಕೆರೆ ರಾಜಧಾನಿಯಿಂದ ಆಳುತ್ತಿದ್ದನೆಂದು ರಟ್ಟ ವಂಶಸ್ಥರ ಬಿರುದನ್ನು ಹೊಂದಿದ್ದ ಆತನ ಮಂಡಲಾಧಿಕಾರಿ ಸಾಮಂತ ಅಥವಾ ಎರೆಗನ ಹೆಸರನ್ನು ಇದು ತಿಳಿಸುತ್ತದೆ. ಈ ಕೆರೆಯನ್ನು ದಂಡದಿಂದ ಬಂದ ಆದಾಯವನ್ನು ದೈವಶ ಮಂಟೂರಿನ ಮಹಾರಾಜರಿಗೆ ಬಿಡುತ್ತಾನೆ. ಊರೊಡೆಯ ಮಧುಸೂದನಯ್ಯನೇ ಮೊದಲಾದ ಮಹಾಜನರು **"ರಟ್ಟ ಸಮುದ್ರ ಕೆರೆಯನ್ನು"** ತೋಡಿಸಿದರು ಎಂದು ೧೦೪೧ ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೬೫] ಇದನ್ನು ಶಾಸನೋತ್ತರ ಕೆರೆ ಎಂದು ಕರೆಯುತ್ತೇವೆ.

ಈ ಕೆರೆಯು ಸುಮಾರು ೧೦ ಎಕರೆ ವಿಸ್ತಾರದ ಅಂಗಳ ಹೊಂದಿದೆ ಸುತ್ತಲೂ ಮಣ್ಣಿನ ಏರಿಯಿಂದ ನಿರ್ಮಿಸಿ ಅದರ ಒಳಮೈ ಕಲ್ಲಿನಿಂದ ನಿರ್ಮಿಸಿದ್ದಾರೆ. ಮೊದಲು ಈ ಕೆರೆಯ ನೀರನ್ನು ಕುಡಿಯಲು ಬಳಸುತ್ತಿದ್ದರು. ನಂತರದಲ್ಲಿ ಬೋರವೆಲ್ ಸೌಕರ್ಯದಿಂದ ಇದು ಇಂದು ಕೇವಲ ದನಕರುಗಳಿಗೆ ಇತರೆ ಬಳಕೆಗೆ ಉಪಯೋಗಿಸಲಾಗುತ್ತದೆ. ಇದಕ್ಕೆ ಕಾಲುವೆಗಳ ಮೂಲಕ ಹಿಡಕಲ್ ಡ್ಯಾಂ ನಿಂದ ಘಟಪ್ರಭಾ ಕಾಲುವೆಗಳ ಮೂಲಕ ನೀರು ಪೂರೈಕೆಯಾಗುತ್ತದೆ.

ಇದರ ಚರಿತ್ರೆ ತೆಗೆದು ನೋಡಿದಾಗ ಅದು ಮೊದಲು ಸಾಮಾನ್ಯ ಕೆರೆಗಳಲ್ಲಿ ಒಂದಾಗಿತ್ತು. ಆದರೆ ಇತ್ತೀಚೆಗೆ ಕೇವಲ ೩ ವರ್ಷಗಳ ಹಿಂದೆ ಅದರ ಮಧ್ಯದಲ್ಲಿ ಒಂದು ಬೃಹತ್ತಾದ ೭೫ ಅಡಿ ಎತ್ತರದ ಶಿವನ ಮೂರ್ತಿ ನಿರ್ಮಿಸಿ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ಮಂದಿರವಾಗಿ ನಿರ್ಮಿಸಿದ್ದಾರೆ.

ಈ ಕೆರೆಗೆ ವರ್ಷದಲ್ಲಿ ಎರಡು ಸಾರಿ ಜಾತ್ರೆ ನಡೆಯುವುದು ವಿಶೇಷವಾಗಿದೆ. ಇದರಲ್ಲಿ ಸುತ್ತಲಿನ ಹತ್ತಾರು ಹಳ್ಳಿಯ ಜನರು ಊರಿನ ಎಲ್ಲ ಜನರು ಕೂಡುವರು. ಇದರ ಇನ್ನೊಂದು ವಿಶೇಷತೆ ಎಂದರೆ ಪ್ರತಿವರ್ಷ ಇಲ್ಲಿ ತೆಪ್ಪದತೇರು ಎಳೆಯುತ್ತದೆ. ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಮುಖವಾಗಿ ಎರಡು ಕೆರೆಗಳಲ್ಲಿ ತೆಪ್ಪದ ತೇರು ಎಳೆಯುತ್ತದೆ ಅದರಲ್ಲಿ ಇದು ಒಂದಾಗಿದೆ.

೩.೨ ಜಿಲ್ಲೆಯ ವಿವಿಧ ರಾಜ ಮನೆತನಗಳ ಕಾಲದಲ್ಲಿ ನಿರ್ಮಾಣಗೊಂಡ ಕೆರೆಗಳು

ಬಾಗಲಕೋಟ ಜಿಲ್ಲಾ ಪ್ರದೇಶವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಹಿರಿಮೆ–ಗರಿಮೆಯೊಂದಿಗೆ ಬೆಳೆದು ಬಂದಿದೆ. ಶಿಲಾಯುಗದಿಂದಲೂ ಆದಿ ಮಾನವ ಇಲ್ಲಿ ಬೆಳೆದು ಬಂದಿರುವ ಹಲವಾರು ಸ್ಥಳಗಳಿವೆ. ಉದಾಹರಣೆಗೆ ವಾತಾಪಿ, ಥಾಣಕ ಶಿರೂರ, ಐಹೊಳೆ, ಕಿಸುವೊಳಲು, ಹೊನ್ನಗುಂದ, ಜಮಖಂಡಿ, ತೇರದಾಳ ಮುಂತಾದ ಹಲವಾರು ಸ್ಥಳಗಳಲ್ಲಿ ಮಾನವನ ಪ್ರಾಚೀನ ಅವಶೇಷಗಳು ಕಂಡು ಬರುತ್ತವೆ.[೬೬] ಶಿಲಾಯುಗದ ಆದಿಮಾನವನಿಂದ ಆರಂಭಗೊಂಡು ಬ್ರಿಟಿಷರವರೆಗೂ ಅವರ ಆಡಳಿತದ ಅವಧಿಯಲ್ಲಿ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಅದರಲ್ಲೂ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಬಹು ಪ್ರಾಮುಖ್ಯವಾದ ಕೊಡುಗೆಗಳನ್ನು ನೀಡುವುದರ ಮೂಲಕ ಜಿಲ್ಲೆಯ ಕೀರ್ತಿ ಪತಾಕೆಯನ್ನು ಉತ್ತುಂಗಕ್ಕೆ ಕೊಂಡೊಯ್ದಿದ್ದಾರೆ. ಇದರ ಜೊತೆಗೆ ಪ್ರಜೆಗಳ ಕಲ್ಯಾಣಕ್ಕಾಗಿ ಮಹತ್ವದ ಕಾರ್ಯ ನಿರ್ವಹಿಸಿದ್ದಾರೆ. ಪ್ರತಿ ರಾಜ್ಯ ಮನೆತನಗಳು ಅಥವಾ ಸಾಮ್ರಾಜ್ಯಗಳು ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಕೆರೆಗಳನ್ನು ನಿರ್ಮಾಣ ಮಾಡಿ ಜನತೆಗೆ ನೀರಿನ ಬವಣೆ ನೀಗಿಸುವ ಕಾರ್ಯ ಮಾಡುತ್ತಾ ಬಂದಿದ್ದಾರೆ. ಅವರವರ ಕಾಲದಲ್ಲಿ ನಿರ್ಮಾಣ ಮಾಡಿದ ಪ್ರತಿಯೊಂದು ರಾಜಮನೆತನಗಳ ಕಾಲದ ಕೆರೆಗಳ ಅಂಕಿ–ಸಂಖ್ಯೆಗಳ ಅವಲೋಕನ ಈ ಕೆಳಗಿನಂತಿದೆ.

ಜಿಲ್ಲೆಯ ಇತಿಹಾಸವು ಶಿಲಾಯುಗದ ಮಾನವನಿಂದ ಆರಂಭಗೊಂಡು ಇದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಈ ಪ್ರದೇಶವು ಮಹಾನ್ ಸಾಮ್ರಾಟಕನಾದ ಅಶೋಕ ಮಹಾಶಯನ ಆಡಳಿತಕ್ಕೊಳಪಟ್ಟಿತ್ತು. ಆತ ಸುವರ್ಣಗಿರಿ ಮೂಲಕ ದಕ್ಷಿಣಭಾರತದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಇದರೊಂದಿಗೆ ಜಿಲ್ಲೆಯ ಐತಿಹಾಸಿಕ ಚರಿತ್ರೆ ಮೂಡಿ ಬರುತ್ತದೆ. ಇತಿಹಾಸದ ಪುಟಗಳಲ್ಲಿ ಮೌರ್ಯರ ಕಾಲದಿಂದಲೂ ಕೆರೆ ನಿರ್ಮಾಣದ ಪ್ರಕ್ರಿಯೆ, ಅದರ ದುರಸ್ತಿ, ನಿರ್ವಹಣೆ ದಾಖಲಾತಿಗೊಂಡಿರುವುದು ಸ್ಪಷ್ಟವಾಗುತ್ತದೆ. ದಕ್ಷಿಣ ಭಾರತದಲ್ಲಿ ಮೌರ್ಯರು ಹಲವಾರು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಅವರ ಆ ಕಾಲದ ಕೆರೆಗಳು ಈ ಪ್ರದೇಶದಲ್ಲಿ ಎಲ್ಲಿಯೂ ಕೂಡ ಕಂಡುಬರುವುದಿಲ್ಲ. ಆದರೂ ಕೂಡಾ ಅವರನ್ನೇ ಕೆರೆ ನಿರ್ಮಾಣದ ಪ್ರಾಚೀನ ಕಾಲದ ನಿರ್ಮಾಪಕರೆಂದು ಕರೆಯುತ್ತಾರೆ. ಇವರ ನಂತರದಲ್ಲಿ ಬಂದ ಶಾತವಾಹನರು ಪೈಠಾಣ ಎಂಬ ಪ್ರದೇಶವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದರು. ಇವರು ಕೂಡಾ ಹಲವಾರು ಕೆರೆಗಳನ್ನು ಕರ್ನಾಟಕದ ತುಂಬೆಲ್ಲಾ ನಿರ್ಮಾಣ ಮಾಡಿದ್ದಾರೆ. ಆದರೆ ಈ ಭಾಗಗಳಲ್ಲಿ ಅವರ ಕಾಲದ ಕೆರೆಗಳು ಕಂಡುಬರುವುದಿಲ್ಲ. ಕದಂಬರ ಆಡಳಿತದ ಅವಧಿಯಲ್ಲಿ ಬನವಾಸಿ, ಹಲಸಿಗಳಲ್ಲಿ ಕೆರೆಗಳ ನಿರ್ಮಾಣ ಮಾಡಿದ ಪ್ರದೇಶಗಳು ಕೂಡಾ ಕಂಡು ಬರುವುದಿಲ್ಲ.

ಕರ್ನಾಟಕವನ್ನು ಆಳಿದ ರಾಜವಂಶಗಳ ಪೈಕಿ ಬಾದಾಮಿ ಚಾಲುಕ್ಯರಿಗೆ ವಿಶೇಷವಾದ ಮತ್ತು ವಿಶಿಷ್ಟವಾದ ಸ್ಥಾನವಿದೆ.[೬೬] ಈ ಜಿಲ್ಲೆಯ ಐತಿಹಾಸಿಕ ಸಾಮ್ರಾಜ್ಯವಾದ ಬಾದಾಮಿ ಚಾಲುಕ್ಯರ ಆಡಳಿತದ ಅವಧಿಯಲ್ಲಿ ಪ್ರಜೆಗಳ ಸರ್ವತೋಮುಖ ಬೆಳವಣಿಗೆಗಾಗಿ ಹಾಗೂ ಕಲ್ಯಾಣಕ್ಕಾಗಿ ಕೃಷಿ, ನೀರಾವರಿಗೆ, ಕುಡಿಯಲು ಇವರು ಸಾಮ್ರಾಜ್ಯದ ಉದ್ದಗಲಕ್ಕೂ ನೂರಾರು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇದೂ ಅಲ್ಲದೆ ತಮ್ಮ ಸಾಮ್ರಾಜ್ಯದ ನಾಲ್ಕೂ ದಿಕ್ಕುಗಳಲ್ಲಿ ಕೆರೆಗಳನ್ನು ನಿರ್ಮಾಣ ಮಾಡಿ ಅದರ ಮೂಲಕ ಗಡಿ ಭಾಗಗಳಲ್ಲಿ ಅಂತರ್‌ಜಲ ಹೆಚ್ಚಳ ಮಾಡುವುದು ಮತ್ತು ಗಡಿ ಭಾಗಗಳನ್ನು ಕೆರೆಯ ಅಂಚಿನ ಮೂಲಕ ಗುರುತಿಸುವ ಕಾರ್ಯ ಮಾಡಿದ್ದಾರೆ. ಇವರ ಜೊತೆಗೆ ೭೦೦ (ಏಳು ನೂರು) ಕೆರೆಗಳನ್ನು ನಿರ್ಮಾಣ ಮಾಡಿರುವುದು ಶಾಸನಗಳಲ್ಲಿ ಉಲ್ಲೇಖವಿದೆ. ಅದರಲ್ಲಿ ಈ ಭಾಗಕ್ಕೆ ಸಂಬಂಧಿಸಿದ ಕೆರೆಗಳು ಈ ಕೆಳಗಿನಂತಿವೆ.

ಜಿಲ್ಲೆಯ ಐತಿಹಾಸಿಕ ಮತ್ತು ಪ್ರಾಚೀನ ಕೆರೆಯಾದ ಬಾದಾಮಿ ಚಾಲುಕ್ಯರ ಆಡಳಿತದ ಅವಧಿಯಲ್ಲಿ ನಿರ್ಮಾಣ ಮಾಡಿದ ಬಾದಾಮಿಯ ಗುಹೆಯ ಮುಂದುಗಡೆ ಇರುವ ಅಗಸ್ತ್ಯತೀರ್ಥದ ಕೆರೆಯು ಬಹು ವಿಶಿಷ್ಟ ಮಾದರಿಯಾಗಿದೆ.[೬೭] ಅದರಂತೆ ಬಾದಾಮಿ ತಾಲೂಕಿನ ನಂದಿಕೇಶ್ವರ ಕೆರೆ, ಕೆಂದೂರು ಕೆರೆ,[೬೮] ಮಂಗಳೂರು ಕೆರೆ, ಪರ್ವತಿ ಕೆರೆ, ಖಾನಾಪೂರ ಕೆರೆ ಮುಂತಾದ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇದರ ಜೊತೆಗೆ ಬಾಗಲಕೋಟ ತಾಲೂಕಿನ ಪ್ರಮುಖ ಕೆರೆಗಳಾದ ಹಳ್ಳೂರ ಕೆರೆ, ನೀರಲಕೇರಿ ಕೆರೆ, ಭಗವತಿ ಕೆರೆ ಹಾಗೂ ಹುನಗುಂದ ತಾಲೂಕಿನ ತುಸ್‌ಬರ್ ಕೆರೆ ಇಂತಹ ಹಲವಾರು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇದರ ಜೊತೆಗೆ ಸಾಮ್ರಾಜ್ಯದ ಉದ್ದಗಲಕ್ಕೂ ಹಲವಾರು ದೇವಾಲಯಗಳನ್ನು ಆ ದೇವಾಲಯಗಳ ಮುಂದುಗಡೆ ವಿಶಾಲವಾದ ಪುಷ್ಕರಣಿಗಳನ್ನು ಕೂಡಾ ನಿರ್ಮಾಣ ಮಾಡಿದ್ದಾರೆ. ಇದರಲ್ಲಿ ಬನಶಂಕರಿ, ಮಹಾಕೂಟ, ಐಹೊಳೆ, ಪಟ್ಟದಕಲ್ಲು, ನಂದಿಕೇಶ್ವರ, ಹಳ್ಳೂರು, ಬೇವೂರ ಪ್ರಮುಖವಾದವುಗಳು. ಇವು ಸದಾಕಾಲ ನೀರಿನಿಂದ ತುಂಬಿರುತ್ತವೆ. ಇದರ ಹೆಚ್ಚುವರಿ ನೀರನ್ನು ಕೃಷಿಗೆ ಬಳಕೆ ಮಾಡುತ್ತಾರೆ.

ಬಾದಾಮಿ ಚಾಲುಕ್ಯರ ತರುವಾಯ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಬಾಗಲಕೋಟ ತಾಲೂಕಿನ ಶಿರೂರ ಎಂಬ ಗ್ರಾಮದಲ್ಲಿ ೩ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ.[೬೯] ಇದರ ಜೊತೆಗೆ ಹುನಗುಂದ ತಾಲೂಕಿನ ಕೇಸರಬಾವಿ[೭೦] ಎಂಬಲ್ಲಿ ಕೆರೆಯನ್ನು ಹಾಗೂ ಹಲವಾರು ಪ್ರದೇಶಗಳ ದೇವಾಲಯಗಳ ಪಕ್ಕದಲ್ಲಿ ಪುಷ್ಕರಣಿಗಳನ್ನು ನಿರ್ಮಿಸಿ ಕೃಷಿ ಮತ್ತು ಅಂತರ್‌ಜಲ ಮಟ್ಟವನ್ನು ವೃದ್ಧಿಗೊಳಿಸಲು ಸಾಕಷ್ಟು ಪ್ರಯತ್ನಪಟ್ಟಿದ್ದಾರೆ. ಇದರ ಮೂಲಕ ಕೃಷಿಗೆ ನೀರು ಒದಗಿಸುತ್ತಾರೆ.

ರಾಷ್ಟ್ರಕೂಟರ ತರುವಾಯ ಕಲ್ಯಾಣ ಚಾಲುಕ್ಯರ ಆಡಳಿತದ ಅವಧಿಯಲ್ಲಿ ಬಾದಾಮಿ ತಾಲೂಕಿನ ಕೆಲವಡಿ,[೭೧] ಅರಸಿಬೀದಿ,[೭೨] ಕಟಗೇರಿ, ಬಾಗಲಕೋಟ ತಾಲೂಕಿನ ಬೇವೂರ ಗ್ರಾಮದಲ್ಲಿ ಒಂದು ಕೆರೆಯನ್ನು ನಿರ್ಮಾಣ ಮಾಡಿದ್ದಾರೆ. ಇವರ ನಂತರದಲ್ಲಿ ಸೌದತ್ತಿಯ

ರಟ್ಟರು ತಮ್ಮ ಆಡಳಿತದ ಅವಧಿಯಲ್ಲಿ ಮುಧೋಳ ತಾಲೂಕಿನ ಮಂಟೂರು ಗ್ರಾಮದಲ್ಲಿ ೧೦೪೧ ರಲ್ಲಿ ರಟ್ಟ ಸಮುದ್ರ ಎಂಬ ಕೆರೆಯನ್ನು ನಿರ್ಮಿಸಿದ್ದಾರೆ.[೨೩] ಇದರ ಜೊತೆಗೆ ಜಮಖಂಡಿ ತಾಲೂಕಿನ ಗದ್ಯಾಳ, ತೊದಲಬಾಗಿ, ತೇರದಾಳ ಮುಂತಾದ ಭಾಗಗಳಲ್ಲಿ ವಿಶಾಲವಾದ ಕೆರೆಗಳನ್ನು ನಿರ್ಮಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಆಡಳಿತದ ಅವಧಿಯಲ್ಲಿ ಅನೇಕ ಕೆರೆ-ಕಟ್ಟೆಗಳನ್ನು, ಭಾವಿಗಳನ್ನು, ತಾಜ್‌ಬೌಡಿಗಳನ್ನು ಸ್ಥಾಪನೆ ಮಾಡಿದ್ದಾರೆ. ಅದರಲ್ಲೂ ಬಾದಾಮಿ ತಾಲೂಕಿನ ಕೆರೂರ ಕೆರೆ, ಜಲಗೇರಿ ಕೆರೆ, ಹೂಲಗೇರಿ ಕೆರೆ, ಗದ್ದನಕೇರಿ ಕೆರೆ, ಕೆರಕಲಮಟ್ಟಿ ಕೆರೆ, ತುಳಸಿಗೇರಿ ಕೆರೆ, ಹಲಗಲಿ[೨೪], ಅನಗವಾಡಿ ಕೆರೆ ನಿರ್ಮಿಸಿದ್ದಾರೆ.

ಇವರ ನಂತರದಲ್ಲಿ ಬ್ರಿಟಿಷ್ ಸರ್ಕಾರದ ಆಡಳಿತ ಕಾಲದಲ್ಲಿ ಬಾಗಲಕೋಟ ತಾಲೂಕಿನ ಹೊನ್ನಾಕಟ್ಟಿ, ಮುಚಖಂಡಿ ಮುಂತಾದ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇವರ ನಂತರದಲ್ಲಿ ಅಧಿಕಾರಕ್ಕೆ ಬಂದ ಸಂಸ್ಥಾನಗಳು ತಮ್ಮ ಆಡಳಿತದ ಅವಧಿಯಲ್ಲಿ ಘೋರ್ಪಡೆ ಸಂಸ್ಥಾನ ಮುಧೋಳದಲ್ಲಿ ಮಹಾರಾಣಿ ಕೆರೆ, ದತ್ತಾತ್ರೇಯ ಕೆರೆ, ಅಗಸರ ಕೆರೆ, ಅದೇ ರೀತಿ ಜಮಖಂಡಿಯ ಪಟವರ್ಧನಾ ಆಡಳಿತದ ಅವಧಿಯಲ್ಲಿ ಹಲವಾರು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ.

ವಿವಿಧ ರಾಜ ಮನೆತನಗಳ ಕಾಲದಲ್ಲಿ ಕೆರೆಗಳ ನಿರ್ಮಾಣ ಮತ್ತು ಅವುಗಳ ಸಂಖ್ಯೆ

ಕೋಷ್ಟಕ -೨

ಕ್ರಸಂ	ರಾಜ ಮನೆತನಗಳು	ಕೆರೆಗಳ ಹೆಸರು	ಗ್ರಾಮ	ಕಾಲ ಮಾನ
೧	ಬಾದಾಮಿ ಚಾಲುಕ್ಯರ	ಅಗಸ್ತ್ಯತೀರ್ಥ ಕೆರೆ ನಂದಿಕೇಶ್ವರ ಕೆರೆ ಹಳ್ಳೂರು ಕೆರೆ ಕೆಂದೂರು ಕೆರೆ ನೀರಲಕೇರಿ ಕೆರೆ ಮಂಗಳೂರು ಕೆರೆ ತುಸ್‌ಬುರ್‌ಚಿ ಕೆರೆ ಭಗವತಿ ಕೆರೆ ಖಾನಾಪೂರ ಕೆರೆ ಪರ್ವತಕೆರೆ	ಬಾದಾಮಿ ನಂದಿಕೇಶ್ವರ ಹಳ್ಳೂರ ಕೆಂದರು ನೀರಲಕೇರಿ ಮಂಗಳೂರು ಬೆಸನವರೆ ಭಗವತಿ ಖಾನಾಪೂರ ಪರ್ವತಿ	೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ ೭ನೇ ಶತಮಾನ
೨	ರಾಷ್ಟ್ರಕೂಟರ (ಮಾರಸಿಂಗನ)	ಬಾಚಿಶೆಟ್ಟಿ ಕೆರೆ ಅಕ್ಕತಂಗಿಯರ ಕೆರೆ ಕೇಸರಬಾವಿ ಕೆರೆ	ಶಿರೂರ ಶಿರೂರ ಕೇಸರಬಾವಿ	ಕ್ರಿ.ಶ.೧೦೪೯ ಕ್ರಿ.ಶ.೧೦೪೯ ಕ್ರಿ.ಶ.೮೩೭
೩	ಕಲ್ಯಾಣಿ ಚಾಲುಕ್ಯರು (ತ್ರೈಲೋಕ್ಯ ಮಲ್ಲದೇವ ಹಾಗೂ ೬ನೇ ವಿಕ್ರಮಾದಿತ್ಯ)	ಜೇವೂರ ಕೆರೆ ಕೆಲುಡಿ ಕೆರೆ ಮಾರಿಕಬ್ಬೆಯ ಕೆರೆ ಅರಸಿಬೀದಿ ಕೆರೆ	ಜೇವೂರು ಕೆಲವಡಿ ಸೂಳಿಬಾವಿ ಅರಸಿಬೀದಿ	ಕ್ರಿ.ಶ.೧೧ನೇ ಕ್ರಿ.ಶ.೧೦೫೩ ಕ್ರಿ.ಶ.೧೧೮೭ ಕ್ರಿ.ಶ.೧೦೮೭
೪	ಕಳಚೂರಿಗಳು	ಕಟಗೇರಿ ಕೆರೆ	ಕಟಗೇರಿ	ಕ್ರಿ.ಶ.೧೧೦೧
೫	ರಟ್ಟ ಸಾಮ್ರಾಜ್ಯ	ರಟ್ಟಸಮುದ್ರ ಕೆರೆ	ಮಂಟೂರ	ಕ್ರಿ.ಶ.೧೦೪೧
೬	ಚಾಲುಕ್ಯರು	ನಂದವಾಡಗಿ ಕೆರೆ	ನಂದವಾಡಗಿ	ಕ್ರಿ.ಶ.೧೦೬೮
೭	ವಿಜಯನಗರ ಸಾಮ್ರಾಜ್ಯ (ಮಾಳಿಗಪ್ಪನ ಮಗ ಮೋನಪ್ಪ)	ಗದ್ದನಕೇರಿ ಕೆರೆ	ಗದ್ದನಕೇರಿ	೧೪.೧೫ನೇ ಶತಮಾನ
೮	ಬಿಜಾಪುರ ಆದಿಲ್‌ಷಾಹಿಗಳು	ಕೆರೂರ ಕೆರೆ	ಕೆರೂರ	೧೫ನೇ ಶತಮಾನ
೯	ಬ್ರಿಟೀಷ್ ಸರಕಾರ (ಗೋಪಾಲಪ್ಪ)	ಹೊನ್ನಾಕಟ್ಟಿ ಕೆರೆ	ಹೊನ್ನಾಕಟ್ಟಿ	ಕ್ರಿ.ಶ.೧೮೨೮

ಮೂಲ ಆಧಾರ -ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ-೯ ಬಾಗಲಕೋಟ ಜಿಲ್ಲೆ.

೩. ಜಿಲ್ಲೆಯ ಶಾಸನೋಕ್ತ ಕೆರೆಗಳು

ಜಿಲ್ಲೆಯ ಐತಿಹಾಸಿಕ ಸಾಮ್ರಾಜ್ಯವಾದ ಬಾದಾಮಿ ಚಾಲುಕ್ಯರು ಸುಮಾರು ಎರಡುವರೆ ಶತಮಾನ ಕಾಲ ಸುದೀರ್ಘ ಆಡಳಿತ ಮಾಡುವುದರ ಮೂಲಕ ವಿಶಿಷ್ಟವಾದ ಹಾಗೂ ಸಾಂಸ್ಕೃತಿಕ ಭದ್ರಬುನಾದಿ ಹಾಕಿದ್ದಾರೆ. ಅದರಲ್ಲೂ ಕಲೆ, ವಾಸ್ತುಶಿಲ್ಪ, ಕೆರೆ–ಕಟ್ಟೆಗಳು, ಪುಷ್ಕರಣಿಗಳು, ತಟಾಕಗಳು, ದೇವಾಲಯಗಳ ನಿರ್ಮಾಣದಲ್ಲಿ ಅದ್ವಿತೀಯ ಕೊಡೆಗೆಯನ್ನು ಜಗತ್ತಿಗೆ ನೀಡಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಸೇವುಣರು, ಸೌದತ್ತಿಯ ರಟ್ಟರು, ಬಹುಮನಿ ಮತ್ತು ಬಿಜಾಪೂರ ಆದಿಲ್‌ಶಾಹಿಗಳು, ವಿಜಯ ನಗರ ಸಾಮ್ರಾಜ್ಯ ಹಾಗೂ ಅವರ ಸಾಮಂತರು ಇತರೆ ಸಂಸ್ಥಾನಗಳು, ಬ್ರಿಟೀಷರು ತಮ್ಮ ಅಡಳಿತದ ಅವಧಿಯಲ್ಲಿ ನಾಡಿನುದ್ದಕ್ಕೂ ನಿರ್ಮಾಣಮಾಡಿ ಕುಡಿಯಲು ಮತ್ತು ಕೃಷಿಗೆ ಕೆರೆಗಳ ಮೂಲಕ ನೀರನ್ನು ಒದಗಿಸಿದ್ದಾರೆ. ಜಿಲ್ಲೆಯನ್ನಾಗಿಟ್ಟುಕೊಂಡು ಆಡಳಿತ ಮಾಡಿದ ವಿವಿಧ ರಾಜರು/ಸಾಮ್ರಾಜ್ಯಗಳು ಪ್ರಜಾ ಕಲ್ಯಾಣಕ್ಕಾಗಿ ಕೆರೆಗಳನ್ನು ಕಟ್ಟಿಸಿ ಅವುಗಳನ್ನು ತಮ್ಮ ಆಡಳಿತಾವಧಿಯಲ್ಲಿ ಪ್ರಕಟಗೊಳಿಸಿದ ಶಾಸನಗಳಲ್ಲಿ ಉಲ್ಲೇಖಿಸಿದ್ದಾರೆ. ಇವುಗಳನ್ನು ಶಾಸನೋಕ್ತ ಕೆರೆಗಳೆಂದು ಕರೆಯುತ್ತೇವೆ.

ಜಿಲ್ಲೆಯ ಐತಿಹಾಸಿಕ ಹಾಗೂ ಪ್ರಾಚೀನ ಕೆರೆಯಾದ ಬಾದಾಮಿ ಅಗಸ್ತ್ಯತೀರ್ಥ ಎಂಬ ಕೆರೆಯನ್ನು ಬಾದಾಮಿ ಚಾಲುಕ್ಯರು ನಿರ್ಮಾಣ ಮಾಡಿದ್ದಾರೆ. ಅವರು ಹೊರಡಿಸಿದ ಬಾದಾಮಿ ಹಲವಾರು ಶಾಸನಗಳಲ್ಲಿ ಇದರ ಬಗ್ಗೆ ಉಲ್ಲೇಖವಿದೆ.

ಅಗಸ್ತ್ಯತೀರ್ಥದ ಪಕ್ಕದಲ್ಲಿ ಪುಷ್ಪಗಿರಿಯಲ್ಲಿ ಮಲ್ಲಿಕಾರ್ಜುನ ದೇವರ ಪ್ರತಿಷ್ಠೆ ಮಾಡಿಸಿದರಂತೆ ಎಂದು ಒಂದು ಶಾಸನ ಉಲ್ಲೇಖಿಸಿದೆ. ಇನ್ನೊಂದು ಶಾಸನದಲ್ಲಿ ಹರಿಯುವ ನೀರಿನಿಂದ ಈ ಸ್ಥಳವು ಹೂ ಬಿಟ್ಟು ಮರಗಳಿಂದ ನಲಿಯುವ ನವಿಲುಗಳಿಂದ ಕೂಡಿದೆ. ಇನ್ನೊಂದು ಶಾಸನದಲ್ಲಿ ಇಂತಹ ಪವಿತ್ರ ತೀರ್ಥದ ಬಳಿ ಮಲ್ಲಿಕಾರ್ಜುನ ನೆಲೆಸಿದ ಎಂದು ತಿಳಿದು ಬರುತ್ತದೆ. ಬಾದಾಮಿ ಚಾಲುಕ್ಯರ ಹಲವಾರು ಶಾಸನಗಳಲ್ಲಿ ಅಗಸ್ತ್ಯತೀರ್ಥದ ವರ್ಣನೆಯು ತಿಳಿದು ಬರುತ್ತದೆ. ಇವರ ಆಡಳಿತದ ಕಾಲದಲ್ಲಿ ಐಹೊಳೆ ಒಂದು ಶಾಸನದಲ್ಲಿ ಮೂರು ಬನ್ನಿಕೇರಿ ಹೊಲ, ಮಾದವಕೆರೆ ಹೊಲ ಮೂರು ಮತ್ತರು ಭೂಮಿ ನೀಡಿದವರ ವರ್ಣನೆ ಬರುತ್ತದೆ. ಇನ್ನೊಂದು ಐಹೊಳೆ ಶಾಸನದಲ್ಲಿ 'ಬೆಸಕನವರೆ' ಎಂಬ ಗ್ರಾಮದ ತುಸ್‌ಬುರ್‌ಚಿ ಕೆರೆಯ ಸ್ಥಳವನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಅದೇ ರೀತಿ ಕಪ್ಪಡಿ ಕೆರೆಯ ದಕ್ಷಿಣದಲ್ಲಿ ೫೦ ಮತ್ತರು ಭೂಮಿಯನ್ನು ದಾನ ನೀಡಿದ ವಿವರಣೆ ಇದೆ. ಇದರ ಜೊತೆಗೆ ಬಾದಾಮಿ ಚಾಲುಕ್ಯರು ತಮ್ಮ ಸಾಮ್ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕೆರೆಗಳನ್ನು ನಿರ್ಮಾಣ ಮಾಡಿದ ಉಲ್ಲೇಖ ಶಾಸನಗಳಲ್ಲಿ ಕಂಡುಬರುತ್ತದೆ.

ಜಿಲ್ಲೆಯಲ್ಲಿ ವಿವಿಧ ಶಾಸನಗಳಲ್ಲಿ ಉಲ್ಲೇಖಗೊಂಡ ಕೆರೆಗಳು ಈ ಕೆಳಗಿನಂತಿವೆ

ಕೋಷ್ಟಕ–೩

ಕ್ರಸಂ.	ಕೆರೆಗಳ ಹೆಸರು	ಗ್ರಾಮ	ತಾಲೂಕು	ರಾಜಮನೆತನಗಳು	ಕಾಲಮಾನ	ಕೆರೆಗಳ ಸಂಖ್ಯೆ	ಶಾಸನ
೧	ಅಗಸ್ತ್ಯತೀರ್ಥ ಕೆರೆ	ಬಾದಾಮಿ	ಬಾದಾಮಿ	ಬಾದಾಮಿ ಚಾಲುಕ್ಯರು	೭ನೇ ಶತಮಾನ	೦೧	ಬಾದಾಮಿ ಶಾಸನ
೨	ತುಸ್‌ಬುರ್‌ಚಿ ಕೆರೆ	ಐಹೊಳೆ	ಹುನಗುಂದ	ಬಾದಾಮಿ ಚಾಲುಕ್ಯರು	೭ನೇ ಶತಮಾನ	೦೧	ಐಹೊಳೆ ಶಾಸನ
೩	ರಟ್ಟ ಸಮುದ್ರ ಕೆರೆ	ಮಂಟೂರು	ಮುಧೋಳ	ರಟ್ಟರು	ಕ್ರಿ.ಶ.೧೦೪೧	೦೧	ಮಂಟೂರಿನ ಶಾಸನ
೪	ಕೇಸರಬಾವಿ ಕೆರೆ	ಕೇಸರಬಾವಿ	ಹುನಗುಂದ	ರಾಷ್ಟ್ರಕೂಟರು	ಕ್ರಿ.ಶ.೮೩೭	೦೧	ಕೇಸರಬಾವಿ ಶಾಸನ
೫	ಬಾಚಿಶೆಟ್ಟಿಕೆರೆ	ಶಿರೂರ	ಬಾಗಲಕೋಟ	ರಾಷ್ಟ್ರಕೂಟರು	ಕ್ರಿ.ಶ.೧೦೪೯	೦೩	ಶಿರೂರಿನ ಶಾಸನ
೬	ಕೆಲವಡಿ ಕೆರೆ	ಕೆಲವಡಿ	ಬಾದಾಮಿ	ಕಲ್ಯಾಣಿ ಚಾಲುಕ್ಯರು	ಕ್ರಿ.ಶ.೧೦೫೩	೦೧	ಕೆಲವಡಿ ಶಾಸನ
೭	ಅರಸಿಬೀದಿ ಕೆರೆ	ಅರಸಿಬೀದಿ	ಹುನಗುಂದ	ಕಲ್ಯಾಣಿ ಚಾಲುಕ್ಯರು	ಕ್ರಿ.ಶ.೧೦೮೭	೦೧	ಅರಸಿಬೀದಿ ಶಾಸನ
೮	ನಂದವಾಡಗಿ ಕೆರೆ	ನಂದವಾಡಗಿ	ಹುನಗುಂದ	ಕಲ್ಯಾಣಿ ಚಾಲುಕ್ಯರು	ಕ್ರಿ.ಶ.೧೦೬೮	೦೧	ನಂದವಾಡಗಿ ಶಾಸನ
೯	ಕಟಗೇರಿ ಕೆರೆ	ಕಟಗೇರಿ	ಬಾದಾಮಿ	ಕಲಚೂರಿಗಳು	ಕ್ರಿ.ಶ.೧೧೦೧	೦೧	ಕಟಗೇರಿ ಶಾಸನ
೧೦	ಮಾರಿಕಬ್ಬೆಯ ಕೆರೆ	ಸೂಳಿಬಾವಿ	ಹುನಗುಂದ	ಕಲ್ಯಾಣಿ ಚಾಲುಕ್ಯರು	ಕ್ರಿ.ಶ.೧೧೮೭	೦೧	ಸೂಳಿಬಾವಿ ಶಾಸನ
೧೧	ಗದ್ದನಕೇರಿ ಕೆರೆ	ಗದ್ದನಕೇರಿ	ಬಾಗಲಕೋಟ	ವಿಜಯನಗರ ಸಾಮ್ರಾಜ್ಯ	೧೪–೧೫ನೇ ಶತಮಾನ	೦೧	ಗದ್ದನಕೇರಿ ಶಾಸನ
೧೨	ಹೊನ್ನಾಕಟ್ಟಿ ಕೆರೆ	ಹೊನ್ನಾಕಟ್ಟಿ	ಬಾಗಲಕೋಟ	ಬ್ರಿಟೀಷ್ ಸರಕಾರ	ಕ್ರಿ.ಶ.೧೮೨೮	೦೧	ಹೊನ್ನಾಕಟ್ಟಿ ಶಾಸನ

ಮೂಲ ಆಧಾರ –ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ–೯ ಬಾಗಲಕೋಟ ಜಿಲ್ಲೆ.

ಅದರಲ್ಲಿ ಒಂದು ಭಾಗ ಖಾನಾಪೂರ ಕೆರೆ ಎಂದು ಇತಿಹಾಸಕಾರರು ಗುರುತಿಸಿದ್ದಾರೆ.

ಬಾದಾಮಿ ಚಾಲುಕ್ಯರ ತರುವಾರು ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಶಿರೂರ ಎಂಬ ಗ್ರಾಮದಲ್ಲಿ ಬಾಚಿಶೆಟ್ಟಿ ಕೆರೆ , ಅಕ್ಕತಂಗಿಯರ ಕೆರೆ, ಕುಡಬೆಂಚಿ ಕೆರೆ ಎಂದು ಮೂರು ಕೆರೆಗಳನ್ನು ಕ್ರಿ.ಶ.೧೦೪೯ರಲ್ಲಿ ಮಾರಸಿಂಗನು ಸಿದ್ದೇಶ್ವರ ದೇವಾಲಯ ಅದರ ಪಕ್ಕದಲ್ಲಿ ಕೆರೆ ನಿರ್ಮಿಸಿದ ಬಗ್ಗೆ ಶಿರೂರಿನ ಒಂದು ಶಾಸನದಲ್ಲಿ ಉಲ್ಲೇಖಗೊಂಡಿದೆ.[೨೫] ಇದರ ಜೊತೆಗೆ ಹುನಗುಂದ ತಾಲೂಕಿನ ಕೇಸರಬಾವಿ ಎಂಬ ಗ್ರಾಮದಲ್ಲಿ ಕ್ರಿ.ಶ.೮೩೭ರಲ್ಲಿ ಅಮೋಘವರ್ಷನ ಮಗಳು ಎರೆಗಂಗನ ಪತ್ನಿ 'ರೇವಕ್ಕ ನಿರ್ಮಡಿ' ಎಂಬುವವರು ಇಲ್ಲಿ ಕೆರೆಗಳನ್ನು ಕಟ್ಟಿಸಿದ್ದಾರೆ.[೨೬]

ಕಲ್ಯಾಣ ಚಾಲುಕ್ಯರ ಮತ್ತು ಕಲಚೂರಿಗಳ ಆಡಳಿತದಲ್ಲಿ ಕ್ರಿ.ಶ.೧೦೫೩ರಲ್ಲಿ ಕೆಲವಡಿ ಕೆರೆ[೨೭] ಹುನಗುಂದ ತಾಲೂಕಿನ ಕ್ರಿ.ಶ. ೧೦೮೭ ರಲ್ಲಿ ಗುಡೂರು ಹತ್ತಿರವಿರುವ ಅರಸಿಬೀದಿ ಕೆರೆಯನ್ನು ಅಕ್ಕಾದೇವಿ ನಿರ್ಮಾಣ ಮಾಡಿದ್ದಾಳೆ.[೨೮] ನಂದವಾಡಗಿಯಲ್ಲಿ ಕ್ರಿ.ಶ.೧೦೬೮ರಲ್ಲಿ ಕೆರೆಯನ್ನು ನಿರ್ಮಾಣಮಾಡಿದ್ದಾರೆ.[೨೯] ಇವರಂತಹ ಬಂದ ಕಲಚೂರಿಗಳ ಕಾಲದಲ್ಲಿ ಅಂದರೆ ಕ್ರಿ.ಶ.೧೧೭೬ರಲ್ಲಿ ಬಾದಾಮಿ ತಾಲೂಕಿನ ಕಟಗೇರಿ ಎಂಬಲ್ಲಿ ಕೆರೆ ನಿರ್ಮಿಸಿದ್ದಾರೆ.[೩೦] ಅದು ಅಲ್ಲಿನ ಶಾಸನದಲ್ಲಿ ಉಲ್ಲೇಖವಾಗಿದೆ. ಅದೇರೀತಿ ೧೪-೧೫ನೇ ಶತಮಾನದಲ್ಲಿ ಗದ್ದನಕೇರಿ ಗ್ರಾಮದಲ್ಲಿ ಐತಿಹಾಸಿಕ ಕೆರೆ ನಿರ್ಮಿಸಿ ಪ್ರಜಾ ಕಲ್ಯಾಣ ಮಾಡಿದ್ದಾರೆ.[೩೧] ಅದೇ ರೀತಿ ಮುಂದೆ ಅಧಿಕಾರಕ್ಕೆ ಬಂದ ಬ್ರಿಟಿಷರು ತಮ್ಮ ಆಡಳಿತದ ಅವಧಿಯಲ್ಲಿ ಕ್ರಿ.ಶ.೧೮೨೮ರಲ್ಲಿ ಹೊನ್ನಾಕಟ್ಟಿ ಕೆರೆ ದೇವಾಲಯಗಳನ್ನು ನಿರ್ಮಿಸಿದ ಉಲ್ಲೇಖವಿದೆ. ಒಟ್ಟಾರೆಯಾಗಿ ಬಾಗಲಕೋಟೆ ಜಿಲ್ಲೆಯಲ್ಲಿ ೧೨ ಶಾಸನೋಕ್ತ ಕೆರೆಗಳು ಇರುವದು ಸಂಶೋಧನೆಯಿಂದ ತಿಳಿದು ಬಂದಿದೆ.

೩.೪ ಕೆರೆಗಳ ಸಂರಕ್ಷಣಾ ಕ್ರಮಗಳು :

ಈವರೆಗೆ ನಾವು ಅತೀ ಪ್ರಾಚೀನ ಕಾಲದಿಂದ ಇವೊತ್ತಿನ ವರೆಗಿನ ಕೆರೆ ನೀರಾವರಿಯ ಇತಿಹಾಸವನ್ನು ಗುರುತಿಸಿದ್ದೇವೆ. ಹಿಂದಿನ ಕಾಲದಲ್ಲಿ ಹಾಗೂ ಈಗ ಆ ಕೆಲಸಗಳ ನಿರ್ಮಾಣ ಹಾಗೂ ಸಂರಕ್ಷಣೆಗಾಗಿ ಮತ್ತು ನಿರ್ವಹಣೆಗಾಗಿ ಅನುಸರಿಸಲಾದ ಕ್ರಮಗಳು, ಅವುಗಳ ನಿರ್ವಹಣೆಗಾಗಿ ಮಾಡಲಾದ ವ್ಯವಸ್ಥೆಗಳು, ಅವುಗಳಲ್ಲಿ ನೀರು ಹಂಚಿಕೆಯ ವಿಧಾನ, ನಿರ್ಮಾಣದ ವೆಚ್ಚ ಹಾಗೂ ಫಲಾನುಭವಿಗಳಿಗೆ ವಿಧಿಸಬೇಕಾದ ನೀರು ತೆರಿಗೆ ದರಗಳು- ಇವುಗಳನ್ನೆಲ್ಲ ತಿಳಿದುಕೊಳ್ಳದೇ ಇದ್ದರೆ ಅಧ್ಯಯನ ಪೂರ್ಣವಾಗುವುದಿಲ್ಲ. ನೀರಾವರಿ ಆಡಳಿತದ ಈ ಅಧ್ಯಯನ, ಹಿಂದಿನ ವಿಧಾನಗಳಿಂದ ನಾವು ಪಾಠಗಳನ್ನು ಅರಿಯಲು ಸಹಾಯಕವಾಗುತ್ತದೆ. ಮೊದಲು ನಾವು ನಿರ್ಮಾಣ ವಿಧಾನಗಳನ್ನು

ತಿಳಿದುಕೊಳ್ಳೋಣ.

ನಮ್ಮ ಹಿಂದಿನವರು ಕಟ್ಟಿದ ಬಹುಪಾಲು ಕೆರೆಗಳು ಸಣ್ಣ ಸಣ್ಣವು. ಅವುಗಳಲ್ಲಿ ಅನೇಕ ಕೆರೆಗಳು ಕೈ ಬಿಟ್ಟು ಹೋಗಿವೆ, ಇಲ್ಲವಾಗಿವೆ. ಕಾಲಕಾಲಕ್ಕೆ ದುರಸ್ತಿಯಾದ ಹಾಗೂ ಜೀರ್ಣೋದ್ಧಾರವಾದಂಥ ಕೆಲವು ದೊಡ್ಡ ಕೆರೆಗಳು ಉಳಿದುಕೊಂಡಿವೆ. ಅವು ಸಹ ಕಳೆ ಹೂಳು ತುಂಬಿಕೊಂಡು ಅಸಡ್ಡೆಗೆ ಒಳಗಾಗಿವೆ. ಭಾರಿ ನೀರಾವರಿ ಕಾಲುವೆ ವ್ಯೂಹದ ಅಚ್ಚುಕಟ್ಟು ಪ್ರದೇಶಗಳಲ್ಲಿರುವ ಕೆರೆಗಳಾದರೂ ಆ ಕಾಲುವೆ ವ್ಯೂಹದಿಂದ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಹರಿದು ಬರುವ ಜಲಪ್ರವಾಹದ ದೆಸೆಯಿಂದಾಗಿ ಇನ್ನೂ ಉಪಯುಕ್ತವಾಗಿವೆ. ಕೆರೆ, ಏರಿ ಇತ್ಯಾದಿಗಳ ವಿನ್ಯಾಸ ಹಾಗೂ ರಚನೆ ಬಗ್ಗೆ ನಿರ್ಮಾಪಕರಿಗೆ ಇದ್ದ ಜ್ಞಾನಕ್ಕೆ ಸಾಕ್ಷಿಯಾಗಿವೆ. ಇನ್ನೂರು ಮುನ್ನೂರು ವರ್ಷಗಳಿಂದಲೂ ಬಳಕೆಯಲ್ಲಿರುವ
ಹಲವಾರು ಕೆರೆಗಳು ಬಳಕೆಯಲ್ಲಿವೆ.

ಒಳ್ಳೆಯ ಕೆರೆಯ ಮಾನದಂಡಗಳು :

ಒಂದು ಕೆರೆಯನ್ನು ಕಟ್ಟಲು ಹನ್ನೆರಡು ಅಗತ್ಯಗಳನ್ನು ಅಥವಾ ಸಾಧನಗಳನ್ನು ಪೂರೈಸಬೇಕು ಎಂದು ಶಾಸನ ವಿವರಿಸುತ್ತದೆ. ಅಂಥ ಕೆಲಸಗಳಲ್ಲಿ ಆರು ಬಗೆಯ ದೋಷಗಳು ಆಗದಂತೆ ಎಚ್ಚರಿಕೆ ವಹಿಸಬೇಕೆಂದೂ ಹೇಳುತ್ತದೆ.

ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಮೊದಲು ಹಳೆಯ ಕೆರೆಗಳನ್ನು ದುರಸ್ತಿ ಮಾಡುವುದು ಯೋಗ್ಯ. ನಮ್ಮ ಪೂರ್ವಜರು ಈ ಕ್ರಮವನ್ನು ಅನುಸರಿಸುತ್ತಿದ್ದರು. ಹಾಗೆ ಮಾಡಿದ್ದರಿಂದಲೇ ನಮ್ಮಲ್ಲಿ ಸಾವಿರಾರು ಕೆರೆಗಳು ಇನ್ನೂ ಜೀವಂತವಾಗಿವೆ. [೮]

ಈ ಶಾಸನದ ಪ್ರಕಾರ, ಒಂದು ಒಳ್ಳೆಯ ಕೆರೆಯ ನಿರ್ಮಾಣಕ್ಕೆ ಇರಬೇಕಾದ ಹನ್ನೆರಡು ಅಗತ್ಯಗಳು ಇವು.

೧. ಧರ್ಮಶೀಲನೂ, ಶ್ರೀಮಂತನೂ, ಸುಖಿಯೂ ಹಾಗೂ ಶಾಶ್ವತ ಸಂಪತ್ತು ಅಥವಾ ಕೀರ್ತಿಯನ್ನು ಬಯಸುವವನೂ ಆದ ದೊರೆ.
೨. ಜಲಶಾಸ್ತ್ರ (ಪಾಠಸ್‌ಶಾಸ್ತ್ರ) ಪಾರಂಗತನಾದ ಬ್ರಾಹ್ಮಣ
೩. ಗಟ್ಟಿ ಜೇಡಿಮಣ್ಣಿನಿಂದ ಕೂಡಿದ ಭೂಮಿ
೪. ಸಿಹಿ ನೀರನ್ನು ತರುವ ನದಿ, ತನ್ನ ಮೂಲದಿಂದ ಮೂರು ಯೋಜನೆ ದೂರದಲ್ಲಿರುವಂಥದು.
೫. ಏರಿಗೆ ತಗುಲಿದಂತಿರುವ ಬೆಟ್ಟದ ಭಾಗಗಳು.
೬. ಈ ಬೆಟ್ಟಗಳ ಭಾಗಗಳ ನಡುವೆ ಕಟ್ಟಿದ ಬಿಗಿಯಾದ ಕಲ್ಲು ಗೋಡೆಯ ಏರಿ. ಅತಿ ಉದ್ದವಲ್ಲದ್ದು ಆದರೆ ಭದ್ರವಾದದ್ದು.

೭. ಫಲವೀಯುವ ಭೂಮಿಯಿಂದ (ಫಲ-ಸ್ಥಿರ) ಹೊರಮುಖವಾಗಿರುವ ಎರಡು ಕೊನೆಗಳು (ಶೃಂಗ)

೮. ವಿಸ್ತಾರವೂ ಆಳವೂ ಆದ ಕೆರೆ ಅಂಗಳ

೯. ನೇರವಾದ ಉದ್ದನೆಯ ಕಲ್ಲು ಇರುವ ಕಲ್ಲುಗಣಿ

೧೦. ಸಮತಟ್ಟಾದ ಫಲಭರಿತ ಮರಗಳಿಂದ ಕೂಡಿದ ನೆರೆಯ ಭೂಮಿ (ಅಚ್ಚುಕಟ್ಟು)

೧೧. ಬೆಟ್ಟದ ಸ್ಥಾನದಿಂದಾಗಿ (ಅಡವಿಸ್ಥಾನ) ಬಲವಾದ ಸುಳಿಗಾಳಿ ಇರುವ (ಬ್ರಹ್ಮ) ಜಲ ಹರಿವು (ತೂಬು)

೧೨. ಕೆರೆಯ ನಿರ್ಮಾಣದಲ್ಲಿ ಕುಶಲರಾದ ಕೆಲಸಗಾರರ ತಂಡ.

ಸಂಭವಿಸದಂತೆ ಎಚ್ಚರವಿರಬೇಕಾದ ಆರು ದೋಷಗಳು ಹೀಗಿವೆ.

೧. ಕಟ್ಟೆಯಿಂದ ನೀರು ಜಿನುಗುವಿಕೆ.

೨. ಕ್ಷಾರೀಯ ಮಣ್ಣು

೩. ಎರಡು ರಾಜ್ಯಗಳ ಸರಹದ್ದಿನಲ್ಲಿ ಕೆರೆ ಇರುವಿಕೆ

೪. ಕೆರೆ ಅಂಗಳದ ನಡುವಿನ ದಿಬ್ಬ (ಕೂರ್ಮ)

೫. ಅತ್ಯಲ್ಪ ಲಭ್ಯತೆ ಹಾಗೂ ವಿಸ್ತಾರವಾದ ಅಚ್ಚುಕಟ್ಟು

೬. ಅಲ್ಪ ಭೂಮಿ ಮತ್ತು ಅತಿಯಾದ ನೀರು.

ಗಟ್ಟಿಯಾದ ಅಭೇದ್ಯವಾದ ಜೇಡಿಮಣ್ಣಿನ ನೆಲೆಗಟ್ಟಿನ ಮೇಲೆ ಏರಿಗಳನ್ನು ನಿರ್ಮಿಸುವುದು ಹಾಗೂ ಏರಿಯ ತುದಿಗಳಲ್ಲಿ ತೂಬುಗಳನ್ನು ಕಟ್ಟಿ, ಹೆಚ್ಚುವರಿ ನೀರು ಹೊರ ಹೋಗಲು ವ್ಯವಸ್ಥೆ ಮಾಡುವುದು ಚೆನ್ನಾಗಿ ತಿಳಿದಿತ್ತು ಎಂದು ಈ ಶಾಸನದಲ್ಲಿನ ನಾನಾ ಹೇಳಿಕೆಗಳಿಂದ ಊಹಿಸಬಹುದು. ಕೆರೆಗೆ ಸಾಕಷ್ಟು ಜಲಾನಯನ ಭೂಮಿ ಇರಬೇಕು (ಮೂರು ಯೋಜನ), ನೀರಾವರಿಗೆ ಬಳಸುವ, ನೀರು ಕುಡಿಯಲು ಯೋಗ್ಯವಾಗಿರಬೇಕು. ಹಾಗೂ ಕೆರೆಯ ಅಚ್ಚುಕಟ್ಟು ಪ್ರದೇಶ ಸಮತಟ್ಟಾಗಿ ಫಲವತ್ತಾಗಿರಬೇಕು. ಈ ಬಗ್ಗೆಯೂ ಎಚ್ಚರ ವಹಿಸಲಾಗುತ್ತಿತ್ತು ಎನ್ನುವುದನ್ನು ಕಾಣಬಹುದು. ಏರಿಯಿಂದ ನೀರು ಜಿನುಗದಂತೆ ಸಾಕಷ್ಟು ಕ್ರಮ ಕೈಗೊಳ್ಳಲಾಗುತ್ತಿತ್ತು ಎನ್ನುವುದೂ ಸ್ಪಷ್ಟ. ಆದರೆ ಕಣಿವೆ ಪಾರ್ಶ್ವದಲ್ಲಿ ಏರಿಯನ್ನು ಹೇಗೆ ಮುಚ್ಚುತ್ತಿದ್ದರು ಎಂಬುದು ಸ್ಪಷ್ಟವಾಗುವುದಿಲ್ಲ. ಆದರೂ ೨೫-೩೦ ಅಡಿಯ ಮಣ್ಣು ಕಟ್ಟೆಯನ್ನು ಅಷ್ಟು ಉದ್ದವಾಗಿ ಕಟ್ಟುವ ತಂತ್ರ ಹಾಗೂ ಎರಡು ಮಳೆಗಾಲಗಳ ಅವಧಿ ಪೂರಾ ಇರುತ್ತಿದ್ದ ನಿರ್ಮಾಣ ಕಾಲದಲ್ಲಿ ನದಿಯ ದಿಕ್ಕನ್ನು ಬದಲಾಯಿಸುವಿಕೆ ಚೆನ್ನಾಗಿ ತಿಳಿದಿತ್ತು ಸಾಕಷ್ಟು ಕುಶಲಕರ್ಮಿಗಳು ಸಿಗುತ್ತಿದ್ದರು ಎನ್ನುವುದಂತೂ ನಿಶ್ಚಿತ. ಕೆರೆಗಳನ್ನು ತೋಡಿಸುವುದು ಅವುಗಳ ದುರಸ್ತಿ ಮಾಡಿಸುವುದು ಇವು ಪುಣ್ಯಕಾರ್ಯಗಳೆಂದು

ಪರಿಗಣಿಸಲಾಗಿದೆ.[೮೩]

ಕೆರೆಗಳ ಇತರ ಅಂಶಗಳು :

ಸಣ್ಣ ಕೆರೆಗಳಲ್ಲಿ ನೀರಾವರಿಗೆ ನೀರನ್ನು ಹೊರಬಿಡಲು ಇದ್ದ ಮಾರ್ಗವೆಂದರೆ ಮಣ್ಣು ದಂಡೆಯಲ್ಲಿ ಮಾಡಿದ ಒಂದು ಸೀಳು. ನೀರು ಬೇಕಾದಾಗ ಸೀಳನ್ನು ತೆಗೆಯುವುದು ಬೇಡವಾದಾಗ ಮಣ್ಣು ತುಂಬಿ ಮುಚ್ಚುವುದು. ಪ್ರಾಯಶ: ಕೆರೆಯ ಸಾಮರ್ಥ್ಯವನ್ನು ಹೆಚ್ಚಿಸಿದಾಗ ಅಥವಾ ದಂಡೆಯ ಅಂಥ ತಾತ್ಕಾಲಿಕ ಸೀಳುಗಳು ಸರಿಯಾಗಿ ಕೆಲಸ ಮಾಡದೇ ಹೋದಾಗ, ತೂಬನ್ನು ಕಟ್ಟಲಾಯಿತು.

ಬಸವಣ್ಣ ಎಂಬಾತ ಕೆರೆಯನ್ನು ವಿಸ್ತಾರಗೊಳಿಸಿದ ಹಾಗೂ ಕಲ್ಲು ಕಟ್ಟೆಯನ್ನು ಕಟ್ಟಿಸಿದ ಎಂದು ನುಗ್ಗೆಹಳ್ಳಿ ಶಾಸನ ಹೇಳುತ್ತದೆ. ಕಲ್ಲುಕಟ್ಟೆ ಎಂದರೆ ಏರಿಯ ಕಲ್ಲು ಕಟ್ಟಡವೇ ಇರಬೇಕು. ಕೆರೆಯ ಗಾತ್ರ ಹೆಚ್ಚಾದಾಗ ನೀರಿನ ಹರವು ವಿಸ್ತಾರವಾಯಿತು. ಅಂತೆಯೇ ದೊಡ್ಡ ಕೆರೆಗಳಿಗೆ ಕಲ್ಲು ಕಟ್ಟಡ ಒದಗಿಸಲಾಯಿತು. ಅರಳುಗುಪ್ಪೆ ಕೆರೆಯನ್ನು (೧೦೯೧) ಕಲ್ಲಿನಿಂದಲೇ ಕಟ್ಟಲಾಯಿತು ಎನ್ನುತ್ತದೆ ಶಾಸನ.

ದಾಖಲೆ ಪತ್ರಗಳ ಸಾಕ್ಷ್ಯ :

ಶಾಸನಗಳಲ್ಲಿನ ಮಾಹಿತಿಯ ಈ ಕೊರತೆಯನ್ನು ಮೈಸೂರಿನ ಮುಖ್ಯ ಇಂಜನಿಯರುಗಳಾಗಿದ್ದ ಕರ್ನಲ್ ಚಾರ್ಲ್ಸ್ ಹಾಗೂ ಮೇಜರ್ ಸ್ಯಾಂಕಿ ಅವರು ತಮ್ಮ ವರದಿಗಳಲ್ಲಿ ೧೯ನೆಯ ಶತಮಾನಕ್ಕೂ ಹಿಂದೆ ನಿರ್ಮಿಸಲಾದ ಕೆರೆಗಳ ಬಗ್ಗೆ ಕೊಟ್ಟಿರುವ ವರ್ಣನೆ ಬಹು ಮಟ್ಟಿಗೆ ತುಂಬಿಕೊಡುತ್ತದೆ.

ವರದಿಗಳ ಪ್ರಕಾರ ಆಗ ಬಹುತೇಕ ಕೆರೆಗಳ ಉದ್ದ ಒಂದರಿಂದ ಒಂದೂವರೆ ಮೈಲಿ ಇರುತ್ತಿತ್ತು. ಅಲ್ಲೊಂದು ಇಲ್ಲೊಂದು ಕೆರೆ ಹೊರುತು ಪಡಿಸಿದರೆ ಉಳಿದ ಎಲ್ಲಕ್ಕೂ ಒರಟುಗಲ್ಲಿನ ಕಲ್ಲು ಕಟ್ಟಡ ಇತ್ತು. ಅದರ ಇಳಿಜಾರು ಸಮತಲದ ಒಂದು ಪ್ರಮಾಣಕ್ಕೆ ಲಂಬ ಎರಡು ಪ್ರಮಾಣದಲ್ಲಿರುತ್ತಿತ್ತು. ಕಲ್ಲು ಕಟ್ಟಡದ ಎದುರುವರಸೆಯ ದಪ್ಪ ಒಂದು ಗಜದಿಂದ ಅರ್ಧಗಜದ ವರೆಗೂ ಇರುತ್ತಿತ್ತು. ಮುಂಭಾಗದ ದೊಡ್ಡ ಕಲ್ಲುಗಳ ಕಟ್ಟಡದ ದಪ್ಪಕ್ಕೆ ಸಮವಾಗಿರುವಂತೆ ಹಿಂಭಾಗಕ್ಕೆ ಬಿಡಿ ಕಲ್ಲುಗುಂಡುಗಳನ್ನು ಜೋಡಿಸಲಾಗುತ್ತಿತ್ತು. ಒಮ್ಮೊಮ್ಮೆ ಏರಿಯ ಹಿಂಬದಿಯ ಇಳಿಜಾರಿನಲ್ಲೂ ಕಡಿಮೆ ಅಳತೆಯ ಕಟ್ಟಡ ಇರುತ್ತಿತ್ತು.

ಮಣ್ಣು, ಏರಿಯ ಅಗಲ-ಎತ್ತರಕ್ಕೆ ತಕ್ಕ ಪ್ರಮಾಣದಲ್ಲಿರುತ್ತಿತ್ತು. ಏರಿಯ ನಡು ಭಾಗದಲ್ಲಿ ಅತ್ಯಂತ ಹೆಚ್ಚು ಅಗಲವಾಗಿರುತ್ತಿತ್ತು. ಸಾಧಾರಣ ಒಂದು ಏರಿಯ ಅಗಲ ತಲೆಯಲ್ಲಿ ೧೨ ಅಡಿ, ಬುಡದಲ್ಲಿ ೬೦ ಅಡಿ ಹಾಗೂ ಎತ್ತರ ೧೮ ಅಡಿ ಇರುತ್ತಿತ್ತು. ಈ ಅಳತೆಗಳಿಗೆ ಮೀರಿದ ಕೆಲವು ಕೆರೆಗಳು ಇದ್ದುದೂ ಉಂಟು.

ತೂಬುಗಳು :

ಒಂದೊಂದು ಕೆರೆಗೂ ಒಂದು ಅಥವಾ ಎರಡು ತೂಬು ಇರುತ್ತಿದ್ದವು. ಕೆಲವೊಮ್ಮೆ ಮೂರು ಇದ್ದುದೂ ಉಂಟು. ಅವುಗಳಿಂದ ನೀರನ್ನು ಜಮೀನಿಗೆ ಬಿಡಲಾಗುತ್ತಿತ್ತು. ತೂಬು ಇರುತ್ತಿದ್ದುದು ಸಾಮಾನ್ಯವಾಗಿ ಕೆರೆಯ ಅಂಗಳದ ಮಟ್ಟದಲ್ಲೇ. ಆದರೆ ನೀರಾವರಿಯಾಗಬೇಕಾದ ಯಾವುದೇ ಭೂಮಿ ಆ ಮಟ್ಟಕ್ಕಿಂತ ಮೇಲೆ ಇದ್ದಲ್ಲಿ ಇನ್ನೂ ಒಂದೋ ಎರಡೋ ತೂಬುಗಳನ್ನು ತದನುಗುಣವಾದ ಮಟ್ಟದಲ್ಲಿ ಇಡಲಾಗುತಿತ್ತು. ಕೆರೆ ತೂಬು ದೊಡ್ಡದೂ ಧೃಡವೂ ಆಗಿದ್ದು ದುಬಾರಿಯ ಕೆಲಸವೇ ಆಗಿರುತ್ತಿತ್ತು. ಅದರಲ್ಲಿ ೨ ಅಡಿ ಚದರ ಇಟ್ಟಿಗೆ ಅಥವಾ ಕಲ್ಲಿನ ತೊಟ್ಟಿ, ಮರಳು ಬಾರದಂತೆ ಒಂದು ಗಜ ಎತ್ತರವಾಗಿ ಇರುತ್ತಿತ್ತು. ಅದರ ಬಿರಡೆಯನ್ನು ಕೆರೆ ನೀರಿನ ಮಟ್ಟಕ್ಕಿಂತ ಮೇಲಿನವರೆಗೂ ಇರುವಂಥ ಒಂದು ಉದ್ದನೆಯ ಗಳುವಿಗೆ ಜೋಡಿಸಲಾಗಿರುತ್ತಿತ್ತು. ೯ ಅಂಗುಲ ಅರ್ಧಗಜ ಚದರದ ಅಳತೆಯ ಎರಡು ಅಥವಾ ನಾಲ್ಕು ಲಂಬ ಕಲ್ಲು ಕಂಬಗಳು ಅದನ್ನು ಸ್ವಸ್ಥಾನದಲ್ಲಿ ಹಿಡಿದಿಟ್ಟಿರುತ್ತಿದ್ದವು. ಆ ಕಂಬಗಳಿಗೆ ತಲೆಯಲ್ಲಿ ಒಂದು, ನಡುವೆ ಒಂದು ಹೀಗೆ ಎರಡು ಸಮತಲದ ಅಡ್ಡ ಕಲ್ಲುಗಳು ಇರುತ್ತಿದ್ದವು. ಬಿರಡೆಯ ಕೊಂತವೊಂದು ಮೂರು ಅಡ್ಡಕಲ್ಲಗಳಲ್ಲಿನ ರಂಧ್ರದೊಳಗಿಂದ ಹಾದು ಹೋಗುತ್ತಿತ್ತು. ಬೇಕಾದಾಗ ಬಿರಡೆಯನ್ನು ಎತ್ತಲು ಹಾಗೂ ನೀರು ಹರಿಯುವುದನ್ನು ನಿಯಂತ್ರಿಸಲು ಕೊಂತವನ್ನು ಒಂದು ದಪ್ಪ ಸರಪಳಿ ಹಾಗೂ ಗೂಟದ ನೆರವಿನಿಂದ ಚಲಿಸಲಾಗುತ್ತಿತ್ತು. ನೀರು ಹಾಯುವುದನ್ನು ತಡೆಯಲು ಬಿರಡೆಯನ್ನು ಕೆಳಗಿಳಿಸಿದಾಗ, ಅದರ ಮೇಲುಪಾರ್ಶ್ವದ ಮೇಲಿರುವ ನೀರಿನ ಒತ್ತಡ ಬಿರಡೆಯನ್ನು ಸಾಕಷ್ಟು ಬಿಗಿಯಾಗಿ ಹಿಡಿದು ಇರಿಸುತ್ತಿತ್ತು.

ಏರಿಯ ಹಿಂಬದಿಯಲ್ಲಿ ಸುಮಾರು ಅದೇ ಅಳತೆಯ ಇನ್ನೊಂದು ತೊಟ್ಟಿಯನ್ನು ಸಾಮಾನ್ಯವಾಗಿ ಇಟ್ಟಿಗೆ ಗಾರೆಗಳಿಂದ ಕಟ್ಟಲಾಗುತ್ತಿತ್ತು. ತೊಟ್ಟಿಯ ಮೂರು ಪಾರ್ಶ್ವಗಳಲ್ಲಿ ಚೌಕಾಕಾರದ ಕಂಡಿಗಳಿದ್ದು, ಬೇಕಾದ ದಿಕ್ಕಿಗೆ ನೀರನ್ನು ಬಿಡುವಂತೆ ಅವುಗಳಿಗೆ ಬಾಗಿಲು ಇರುತ್ತಿದ್ದವು. ಎರಡು ತೊಟ್ಟಿಗಳಿಗೂ ನಡುವೆ ಏರಿಗೆ ಅಡ್ಡಲಾಗಿ ಒಂದು ಸುರಂಗ ಇರುತ್ತಿತ್ತು. ಏರಿಯ ಅಗಲಕ್ಕೆ ಅನುಗುಣವಾಗಿ ಅದರ ಉದ್ದ ಸಾಮಾನ್ಯವಾಗಿ ೧೦ ರಿಂದ ೩೦ ಅಥವಾ ೪೦ ಗಜ. ನೀರು ಹಾಯುವ ಸುರಂಗದ ಒಳ ಅಳತೆ ಸುಮಾರು ೨.೫ ಅಡಿ. ಎತ್ತರ, ೨ ಅಡಿ ಅಗಲ. ಒಳಗೆ ಏನಾದರೂ ಅಡಚಣೆ ಆದಲ್ಲಿ ಒಬ್ಬ ಹುಡುಗ ಒಳಗೆ ಹೋಗಿ ಅದನ್ನು ತೆಗೆದುಹಾಕಲು ಅಥವಾ ಸುರಂಗದ ಸ್ಥಿತಿಯನ್ನು ಪರಿಶೀಲಿಸಲು ಅನುಕೂಲವಾಗುವಂತೆ ಸುರಂಗದ ಒಳ ಅಳತೆ ಇರುತ್ತಿತ್ತು. ಸುರಂಗದ ಒಳ ಭಾಗ ಸಾಮಾನ್ಯವಾಗಿ ಆಯಾಕಾರದ್ದು. ೬ ರಿಂದ ೯ ಅಂಗುಲ ದಪ್ಪದ ಕಲ್ಲು ಚಪ್ಪಡಿಗಳ ಗೋಡೆ ಇರುತಿತ್ತು.

ಕೋಡಿ :

ಪ್ರತಿಯೊಂದು ಕೆರೆಯಲ್ಲೂ, ತೂಬಿನ ಜೊತೆಗೆ ಕಲ್ಲು ಕಟ್ಟಡದ ಕೋಡಿಯೂ ಇರುತಿತ್ತು. ಅದರ ಮೂಲಕ ಕೆರೆಯಲ್ಲಿನ ಹೆಚ್ಚುವರಿ ನೀರು ಕೆಳಗಿನ ಇತರ ಕೆರೆಗಳಿಗೆ ಹರಿದುಹೋಗುತ್ತಿತ್ತು. ಕೋಡಿಗಳ ಅಗಲ ೧೦ ರಿಂದ ೧೦೦ ಗಜದ ವರೆಗೂ ಇರುತ್ತಿತ್ತು. ಬಲವಾದ ಕಟ್ಟಡ ಇಲ್ಲವಾದರೆ ಕೋಡಿಯ ಮೇಲೆ ಹರಿಯುವ ನೀರಿನ ರಭಸಕ್ಕೆ ಎಲ್ಲವೂ ಕೊಚ್ಚಿಕೊಂಡು ಹೋಗುವುದು. ಆದ್ದರಿಂದ ಕೋಡಿಗಳನ್ನು ಸುತ್ತಮುತ್ತ ಸಿಗುವ ಅತ್ಯಂತ ಭಾರಿ ಆಕಾರದ ಒರಟು ಕಲ್ಲುಗಳಿಂದ ಭದ್ರಗೊಳಿಸಲಾಗುತ್ತಿತ್ತು.

ಕೋಡಿಗಳ ಆಕಾರ ಸಾಮಾನ್ಯವಾಗಿ ಚೌಕ. ಉದ್ದ ಎಷ್ಟೊ ಅಗಲವೂ ಅಷ್ಟು. ಮುಂಭಾಗದಲ್ಲಿ ಒಂದು ಮಜುಬೂತಾದ ಕಲ್ಲು ಗೋಡೆ. ಒಂದರಿಂದ ಎರಡು ಅಥವಾ ಮೂರು ಅಡಿ ಆಲದ ಗೋಡೆ. ಮಣ್ಣಿನ ಗುಣಕ್ಕೆ ತಕ್ಕಂತೆ ಅದರ ಆಳ, ಅದಕ್ಕೆ ಅನುಗುಣವಾಗಿ ದಪ್ಪ. ಅದಕ್ಕೆ ಒಂದೂವರೆ ಗಜ ಮುಂಚಾಚುವಂತೆ ದೊಡ್ಡ ಕಲ್ಲುಗಳು. ಗೋಡೆಯ ತಲೆಯ ಭಾಗಕ್ಕೆ ಒಂದೊಂದು ಗಜಕ್ಕೆ ಒಂದರಂತೆ ಬಲವಾಗಿ ಜೋಡಿಸಲಾದ ಕಲ್ಲುಗಳು. ಒಂದಷ್ಟುಗಳು ಹುಲ್ಲು ಹಾಗೂ ಹುಲ್ಲಿನ ಹೆಪ್ಪುಗಳನ್ನು ರೈತರು ಕಲ್ಲು ಕಂಬಗಳ ಮುಂದೆ ಒಟ್ಟಿ, ಮಳೆಗಾಲವಾದ ಮೇಲೆಯೂ ಕೆರೆಯಲ್ಲಿ ಸಾಮಾನ್ಯ ಮಟ್ಟಕ್ಕಿಂತ ಸುಮಾರು ಎರಡು ಅಡಿ ಎತ್ತರವಾಗಿಯೇ ನೀರನ್ನು ತಡೆದಿಡಲು ಸಾಧ್ಯವಿತ್ತು. ಹಾಗೂ ಹೆಚ್ಚು ಕಾಲವು ನೀರನ್ನು ತಡೆಹಿಡಿಯಬಹುದಾಗಿತ್ತು. ಕೋಡಿಯ ಪಕ್ಕಗಳಲ್ಲಿ ಪಾರ್ಶ್ವಗೋಡೆಗಳ ರಕ್ಷಣೆ ಇರುತ್ತಿತ್ತು. ಅವು ಒಂದರಿಂದ ಎರಡು ಗಜ ಎತ್ತರ ಒರಟುಗಲ್ಲು ಅಥವಾ ಇಟ್ಟಿಗೆಯ ಗೋಡೆಗಳು. ಕಮರಿಯ ಗೋಡೆಯ ಬಳಿ ಪರಸ್ಪರ ಸೇರುವಂತೆ ಮೇಲೆ ಹಾಗೂ ಕೆಳಗೆ ಅಗಲವಾಗಿದ್ದು ಸುರಂಗದ ಹಾಗೆಯೇ ಇರುತ್ತಿದ್ದವು. ಕೋಡಿಯ ಗೋಡೆಯ ಕೆಳಪಾರ್ಶ್ವಕ್ಕೆ (ಹೊರಪಾರ್ಶ್ವ) ಕಲ್ಲುಗಳನ್ನು ಸೂಕ್ತವಾದ ತಳಹದಿಯ ಮೇಲೆ ಇಳಿಜಾರಾದ ಹೊದಿಕೆಯಂತೆ ಕೋಡಿಯ ತಲೆಯಿಂದ ಕಂದರದ ಅಡಿಯವರೆಗೂ ಜೋಡಿಸಲಾಗುತ್ತಿತ್ತು. ಇದರಿಂದ ನೀರಿನ ರಭಸ ತಗ್ಗುತ್ತಿತ್ತು. ಅಂಥ ವ್ಯವಸ್ಥೆ ಸಾಧ್ಯವಿಲ್ಲದ ಕಡೆಗಳಲ್ಲಿ ಕೋಡಿಯ ಗೋಡೆಯ ಬುಡದಲ್ಲಿ (ಅದರ ಎತ್ತರ ಎಷ್ಟೇ ಇರಲಿ) ಒಂದು ಮಟ್ಟಸವಾದ ನೆಲಗಟ್ಟನ್ನು ನಿರ್ಮಿಸಲಾಗುತ್ತಿತ್ತು. ನೀರು ತೆರೆ ತೆರೆಯಾಗಿ ಹರಿದು ಹೋಗುವಂತೆ ಮಜಬೂತಾದ ಕಬ್ಬಿಣದ ಹಿಡಿಗೈ (ಕ್ಲಾಂಪ್) ಗಳನ್ನು ಮೆಟ್ಟಿ, ಕಡೆದ ಕಲ್ಲುಗಳಿಂದ ಒಳ್ಳೆ ಭದ್ರವಾದ ಜಗಲಿ ನಿರ್ಮಿಸಲು ಎಚ್ಚರವಹಿಸಲಾಗುತಿತ್ತು.

ಕೆಲವು ಸಲ ಕೋಡಿ ಕೆಳಗಿನ ಹಳ್ಳದಲ್ಲಿ ಒರಟುಗಲ್ಲಿನ ಇನ್ನೊಂದು ಸಣ್ಣ ಕಟ್ಟೆಯನ್ನು ಕಟ್ಟಲಾಗುತ್ತಿತ್ತು. ಆ ಕಟ್ಟೆಯಿಂದ ಇನ್ನೊಂದು ನೀರಾವರಿ ಕಾಲುವೆಯೂ ಹೊರಡುತ್ತಿತ್ತು. ಕೆರೆ ಭದ್ರ ಎನಿಸಬಹುದಾದ ಅತ್ಯಂತ ಹೆಚ್ಚಿನ ಮಟ್ಟದ ನೀರನ್ನು ಕೋಡಿ ತಡೆಹಿಡಿಯುತ್ತಿತ್ತು.

ಕೆಳಗಿನ ಕಟ್ಟೆಯಾದರೂ ಕೋಡಿಯಿಂದ ಬಂದ ಹೆಚ್ಚುವರಿ ನೀರನ್ನು ನಷ್ಟವಾಗಿ ಹೋಗದಂತೆ ಹಿಡಿದಿಡುತ್ತಿತ್ತು.

ವರ್ಷದಲ್ಲಿ ೧೦-೧೫ ದಿನ ಕೋಡಿಯ ಮೇಲೆ ಅಪಾರ ನೀರು ಹರಿದು ಬರುತ್ತಿದ್ದುದರಿಂದ ಕೆಳಗಿನ ಕಟ್ಟೆಗೆ ಅದರ ರಭಸದಿಂದ ಭಾರಿ ಹೊಡೆತ ಬೀಳುತ್ತಿತ್ತು. ಆದ್ದರಿಂದ ಕಟ್ಟೆಯ ನಿರ್ಮಾಣ ಬಲವಾಗಿರಬೇಕಾಗಿತ್ತು. ನದಿಯ ಆಣೆಕಟ್ಟುಗಳಂತೆಯೆ ಕೋಡಿ ಕಟ್ಟೆಗಳನ್ನು ಎಚ್ಚರದಿಂದ ನಿರ್ಮಿಸಲಾಗುತಿತ್ತು.

ಹೂಳು ತೆಗೆಯುವುದು :

ಮಳೆಗಾಲದ ಉರುಬಿನಲ್ಲಿ ಹೊಳೆ ಭಾರಿ ಪ್ರಮಾಣದ ಹೂಳನ್ನು ತರುತ್ತದೆ. ಇದು ನೀರಿನೊಂದಿಗೆ ತೂಬಿನ ಮೂಲಕ ಕಾಲುವೆಗಳಿಗೆ ಸಾಗಿ ಹೋಗುತ್ತದೆ. ಪ್ರವಾಹದ ಬಿರುಸು ಇಳಿದಂತೆ ಹೂಳು ನೀರಿನಿಂದ ಬೇರ್ಪಟ್ಟು ಕಾಲುವೆಯ ಅಡಿಯಲ್ಲಿ ಪದರಗಟ್ಟುತ್ತದೆ. ಮುಂದಿನ ಮಳೆಗಾಲ ಮೊದಲಾಗುವುದಕ್ಕೆ ಮುಂಚೆಯೆ ಇದನ್ನು ತೆಗೆದುಹಾಕಬೇಕು. ನೆರೆಯ ಉಕ್ಕಿನಲ್ಲಿ ನೀರು ಈ ತೊಂದರೆ ಉಂಟು ಮಾಡುತ್ತಿತ್ತು. ಬೇಸಾಯ ಮುಗಿದನಂತರ ಹೊಳೆ ಮೆಲ್ಲನೆ ಹರಿಯುವಾಗ ನೀರನ್ನೆ ನಿವಾರಣೋಪಾಯ ಸಾಧನವಾಗಿ ಮಾಡಿಕೊಳ್ಳಲಾಗುತ್ತಿತ್ತು. ಮೊದಲು ಭಾಗಶ: ಮಾತ್ರ ತೆರೆದಿದ್ದ ತೂಬನ್ನು ಪೂರ್ಣ ತೆಗೆಯಲಾಗುತ್ತಿತ್ತು. ನೀರು ಕಾಲುವೆಯಲ್ಲಿ ನುಗ್ಗಿ ಬಂದು ಹೂಳನ್ನು ಕೊಚ್ಚಿಕೊಂಡು ಹೋಗುತ್ತಿತ್ತು.ಇದರಿಂದ ಹೂಳು ತೆಗೆಯಲು ಪಡಬೇಕಾಗಿದ್ದ ಎಷ್ಟೋ ಶ್ರಮ ತಪ್ಪುತ್ತಿತ್ತು.

ಕೆರೆಯ ಅಂಗಳದಿಂದಲೂ ಹೂಳು ತೆಗೆಯಲು ಇದೇ ಕ್ರಮವನ್ನು ಅನುಸರಿಸಲಾಗುತ್ತಿತ್ತು. ಆದರೆ ಆರಿಸಿಕೊಳ್ಳುತ್ತಿದ್ದ ಕಾಲ, ಬೇರೆ, ಮಳೆಗಾಲದ ಮುಕ್ತಾಯಕ್ಕೆ ಬದಲಾಗಿ ಆರಂಭವನ್ನೇ ಆರಿಸಿಕೊಳ್ಳಲಾಗುತಿತ್ತು. ಮಳೆ ಆರಂಭವಾಯಿತೊ ಇಲ್ಲವೊ ರೈತರು ಕೆರೆಯಲ್ಲಿ ತೂಬಿನ ತಲೆಯ ಬಳಿ ಸಾಲುಗಟ್ಟಿ ನಿಲ್ಲುತ್ತಿದ್ದರು (ಮಳೆಗಾಲದ ಆರಂಭವಾದ್ದರಿಂದ ನೀರಿನ ಮಟ್ಟ ಕಡಿಮೆ), ಕೆರೆಯಲ್ಲಿ ನೀರು ಬಗ್ಗಡವಾಗುವ ವರೆಗೂ ಜಾಲಾಡುತ್ತಿದ್ದರು. ನೀರಿನ ಜೊತೆಗೆ ಹೂಳು ಆ ಬಗ್ಗಡದಲ್ಲಿ ತೂಬಿನ ಮೂಲಕ ಹೊರಟು ಹೋಗುತ್ತಿತ್ತು. ಭಾಗಶ: ಪರಿಹಾರವಷ್ಟೆ. ಆದರೂ ತೂಬಿನಲ್ಲಿ ಹೂಳು ಇರದಂತೆ ಸಹಾಯಕವಾಗಿತ್ತು.

ಕೆರೆಗೆ ನೀರು ತರುವ ಹೊಳೆ ಭಾರಿ ಪ್ರಮಾಣದಲ್ಲಿ ಹೂಳನ್ನು ತಂದಾಗ ಅನುಸರಿಸುತ್ತಿದ್ದ ಉಪಾಯ, ಹೊಳೆಗೆ ಅಡ್ಡಲಾಗಿ ಆಣೆಕಟ್ಟೆಯಂತಹ ಒಂದು ಒರಟುಗಲ್ಲಿನ ಕಟ್ಟೆ ಕಟ್ಟುವುದು. ಇದರ ಪರಿಣಾಮವಾಗಿ ನೀರಿನ ವೇಗ ತಗ್ಗುತ್ತಿತ್ತು. ಹೂಳು ಅಲ್ಲೆ ನಿಲ್ಲುತ್ತಿತ್ತು. ಈ ಅಪೇಕ್ಷಣೀಯ ಪರಿಣಾಮವನ್ನು ಮುಂದುವರೆಸಬೇಕಾದಲ್ಲಿ ಕಟ್ಟೆಯನ್ನು ಒಳ್ಳೆ ದುರಸ್ತಿ ಸ್ಥಿತಿಯಲ್ಲಿ ಇಟ್ಟಿರುವುದು ಅಗತ್ಯ. ಹೂಳನ್ನು ದೂರವಿರಿಸುವ ಈ

ಉಪಾಯಗಳನ್ನೆಲ್ಲ ಅಸಡ್ಡೆ ಮಾಡಲಾಗಿ ಕೆರೆ ಅಂಗಳಗಳೆಲ್ಲ ಹೂಳಿಗೆ ನೆಲೆಗಳಾದವು.

ಬಹುಪಾಲು ಸಣ್ಣ ಕೆರೆಗಳಿಗೆ ನೀರು ಬರುತ್ತಿದ್ದುದು, ಸುತ್ತಮುತ್ತಲ ದಿಣ್ಣೆಗಳಿಂದ ಹಾಗೂ ಅವುಗಳ ಕೆಳಗೆ ನೀರಾವರಿಯಲ್ಲಿದ್ದ ಭತ್ತದ ಗದ್ದೆ ಅಥವಾ ತೋಟಗಳಿಂದ. ಆದರೆ ಗುಡ್ಡಗಳ ಪಕ್ಕಗಳಿಂದ ಮಳೆಯ ನೀರನ್ನೆಲ್ಲ ಸಾಗಿಸಿಕೊಂಡು ಬರುತ್ತಿದ್ದ ಉದ್ದನೆಯ ಅಂಕುಡೊಂಕಾದ ನಾಲೆಗಳಿಂದ ಅನೇಕ ಕೆರೆಗಳಿಗೆ ಭಾಗಶಃ ನೀರು ಒದಗುತ್ತಿತ್ತು.

ಅಲ್ಲಲ್ಲಿ ಮಳೆ ಬಿದ್ದಾಗ ಮಾತ್ರ ಹರಿಯುತ್ತಿದ್ದ ನೀರಿನ ಜಾಡು ಅಥವಾ ಸಣ್ಣ ಹೊಳೆಗಳಿಗೆ ಅಡ್ಡಗಟ್ಟೆ ಹಾಕಿ, ಅಲ್ಲೇ ನಿಲ್ಲುತ್ತಿದ್ದ ನೀರನ್ನು ಅದೇ ರೀತಿ ಕೆರೆಗಳಿಗಾಗಿ ಬಳಸಿಕೊಳ್ಳಲಾಗುತ್ತಿತ್ತು. ಅವೆಲ್ಲವನ್ನೂ ಒಳ್ಳೆ ದುರಸ್ತಿಯಲ್ಲಿ ಇಟ್ಟಿರುತ್ತಿದ್ದರು. ಅದೇ ರೀತಿ ನೀರಾವರಿ ಆಗಬೇಕಾದ ಭೂಮಿಯು ಆಗಾಗ ಕೆರೆಯಿಂದ ದೂರ ಇರುತ್ತಿತ್ತು. ಕಾಲುವೆಗಳೆಲ್ಲವನ್ನೂ ಒಳ್ಳೆ ದುರಸ್ತಿಯ ಸ್ಥಿತಿಯಲ್ಲಿ ಇರಿಸಲಾಗುತ್ತಿತ್ತು. ಏಕೆಂದರೆ ಬೆಳೆಯ ಯಶಸ್ಸಿಗೆ ಅದೇ ಆಧಾರ.

ನಮ್ಮ ಹಿರಿಯರ ವಿವೇಕ ನಾಡಿಗೆ ಅತ್ಯಂತ ಉಪಯುಕ್ತವೂ ಶ್ಲಾಘ್ಯವೂ ಆದ ಕೆಲವು ಕೆರೆಗಳನ್ನು ನೀಡಿತ್ತು. ಕೆಲವು ಕೆರೆಗಳು ಬೃಹದಾಕಾರವಾದವು, ಆದರೂ ಅವುಗಳಲ್ಲಿ ದಕ್ಷತೆ ಬಾಳಿಕೆ ಎರಡೂ ಅಗತ್ಯಗಳನ್ನು ಜೊತೆಗೂಡಿಸಿಕೊಳ್ಳುವ ಹಿರಿಮೆ ಇತ್ತು.

ಸಂರಕ್ಷಣೆಯ ಮಹತ್ವ :

ಪ್ರತಿಯೊಂದು ನೀರಾವರಿ ಕಾಮಗಾರಿಯೂ ನಿರ್ದಿಷ್ಟ ಅವಧಿಗೆ ಮಾತ್ರ ಉಪಯುಕ್ತವಾಗಿರುತ್ತದೆ. ಸೂಕ್ತವೂ ಸಕಾಲಿಕವೂ ಆದ ಸಂರಕ್ಷಣೆ ಹಾಗೂ ದುರಸ್ತಿಗಳಿಂದ ಈ ಅವಧಿಯನ್ನು ಹೆಚ್ಚಿಸಲು ಸಾಧ್ಯ. ಅಂಥ ಪ್ರಯತ್ನಗಳ ಅಭಾವದ ಪರಿಣಾಮವಾಗಿ ಕೆರೆ ಹೂಳಿನಿಂದ ತುಂಬಿ ಹೋಗುತ್ತದೆ. ಅಥವಾ ಅದರ ಏರಿ ದುರ್ಬಲವಾಗಿ, ಒಡೆದು ಹೋಗುತ್ತದೆ. ಇಲ್ಲವೆ ಕೆರೆಯಲ್ಲಿ ನಿಲ್ಲುವ ನೀರು ಒಡಕು ತೂಬುಗಳಲ್ಲಿ ಸೋರಿ ಹೋಗುತ್ತದೆ. ನೀರಾವರಿ ಕಾಲುವೆ ಅಸಡ್ಡೆಗೆ ಗುರಿಯಾದರೆ ಈ ಎಲ್ಲ ದುಷ್ಪರಿಣಾಮಗಳು ಅದಕ್ಕೂ ಅಷ್ಟೇ ಮಟ್ಟಿಗೆ ಸಂಭವಿಸುತ್ತವೆ. ನೀರಾವರಿ ಕಾರ್ಯದ ಸೂಕ್ತ ಸಂರಕ್ಷಣೆ ಅದರ ನಿರ್ಮಾಣದಷ್ಟೆ ಮುಖ್ಯ. ಇದನ್ನು ನಮ್ಮ ಹಿರಿಯರು ಕಂಡುಕೊಂಡಿದ್ದರು. ಅವರು ನಿರ್ಮಾಣಕ್ಕಿಂತಲೂ ಸಂರಕ್ಷಣೆಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದರು. ಹಳೆಯ ಕೆಲಸವನ್ನು ಸಂರಕ್ಷಿಸುವುದು ಹೊಸದೊಂದನ್ನು ಕಟ್ಟುವುದಕ್ಕಿಂತ ಹೆಚ್ಚು ಶ್ಲಾಘನೀಯ ಎನ್ನುತ್ತಿದ್ದರು. ದೇವಾಲಯಗಳಲ್ಲದೇ ಪ್ರಭುತ್ವ ಆಡಳಿತಾಂಗ ಸಮಿತಿಗಳು ಪ್ರಭುತ್ವದ ಪ್ರತಿನಿಧಿಗಳು ಸಹ ಕೆರೆಗಳ ಸಂರಕ್ಷಣೆಯ ಕೆಲಸದಲ್ಲಿ ನಿರತರಾಗಿದ್ದರು. [೮೪]

ಸಂರಕ್ಷಣೆಗೆ ನೀಡಲಾಗಿದ್ದ ಮಹತ್ವ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿಧಿಸಲಾಗಿರುವ ನಿಯಮಗಳಿಂದ ಸ್ಪಷ್ಟವಾಗುತ್ತದೆ. ಕಂದಾಯ ಮಾಫಿ ಕುರಿತು ಹೇಳುತ್ತ ಅರ್ಥಶಾಸ್ತ್ರ

ಹೀಗೆನ್ನುತ್ತದೆ. "ಕೆರೆ ಇತ್ಯಾದಿಗಳ ಕೆಳಗೆ ಬೇಸಾಯ ಮಾಡುವ ವ್ಯಕ್ತಿಗಳು ಅಥವಾ ಯಾವುದೇ ರೀತಿಯ ಕಂದಾಯವೂ ಇಲ್ಲದೆ ಅಂಥ ಭೂಮಿಯನ್ನು ಅನುಭವಿಸಲು ಅನುಮತಿ ಪಡೆದ ವ್ಯಕ್ತಿಗಳು ಕೆರೆ ಇತ್ಯಾದಿಗಳನ್ನು ಒಳ್ಳೆಯ ದುರಸ್ತಿಯಲ್ಲಿ ಇಟ್ಟಿರಬೇಕು. ಇಲ್ಲವಾದರೆ ಅವರಿಗೆ ನಷ್ಟದ ಎರಡರಷ್ಟು ಜುಲ್ಮಾನೆಯ ಶಿಕ್ಷೆ ವಿಧಿಸಬೇಕು" ಸಂರಕ್ಷಣೆಗೆ ಮಹತ್ವ ಕೊಟ್ಟಿದ್ದು ಮಾತ್ರವಲ್ಲ ನೀರಾವರಿ ಕೆಲಸ ಸಂರಕ್ಷಣೆಯ ಜವಾಬ್ದಾರಿ, ಆ ಕೆಲಸದಿಂದ ಫಲಾನುಭವ ಪಡೆಯುವ ವ್ಯಕ್ತಿಗಳ ಮೇಲೆ ಮಾತ್ರವೇ ಇರತಕ್ಕದ್ದು ಎನ್ನವುದು ಅಂಗೀಕೃತ ನೀತಿಯಾಗಿತ್ತು.

ಸಾಮಾನ್ಯ ಸಂರಕ್ಷಣಾ ಕ್ರಮಗಳು :

ಸಾಮಾನ್ಯವಾಗಿ ಕೆರೆಯ ಸಂರಕ್ಷಣೆ ಹೀಗಿರುತ್ತದೆ.

೧. ಕೆರೆ ಅಂಗಳ ಹಾಗೂ ನಾಲೆಯ ತಳದಿಂದ ಕಾಲಕಾಲಕ್ಕೆ ಹೂಳು ತೆಗೆಯುವುದು
೨. ಮಳೆಯಿಂದಾಗಲಿ ಇತರ ಕಾರಣಗಳಿಂದಾಗಲಿ ಮಣ್ಣು ಕಟ್ಟೆಗೆ ಎಲ್ಲಿಯಾದರೂ ಹಾನಿಯಾಗಿದ್ದಲ್ಲಿ ಮಣ್ಣು ಕೆಲಸಮಾಡಿ ಅದನ್ನು ಸರಿಪಡಿಸುವುದು.
೩. ತೂಬು, ಕೋಡಿಗಳಿಗೆ ಏನಾದರೂ ಹಾನಿಯಾಗಿದ್ದರೆ ಕಾಲಕಾಲಕ್ಕೆ ಅದನ್ನು ದುರಸ್ತಿ ಮಾಡುವುದು.
೪. ಜಲಾನಯನ ಪ್ರದೇಶ ಒತ್ತುವರಿಯಾಗದಂತೆ ಇಟ್ಟುಕೊಳ್ಳುವುದು.
೫. ಕೆರೆಯಾಳಕ್ಕೆ ಹರಿದು ಬರುವ ಹೂಳನ್ನು ತಡೆಯಲು ವ್ಯವಸ್ಥೆ ಮಾಡುವುದು.

ಸಂರಕ್ಷಣಾ ಕ್ರಮಗಳನ್ನು ನಡೆಸಲು ವ್ಯವಸ್ಥೆ :

ಹಿಂದೆ ಕೆರೆ ಅಥವಾ ನಾಲೆಯ ಸಂರಕ್ಷಣೆ ಮುಖ್ಯವಾಗಿ ಗ್ರಾಮ ಸಮುದಾಯದ ಹೊಣೆ ಆಗಿತ್ತು. ಫಲಾನುಭವಿಗಳು ಆ ಸಮುದಾಯದ ಪ್ರಮುಖ ಭಾಗವಾಗಿದ್ದರು. ಅವರು ಈ ಕೆಲಸವನ್ನು ಹಳ್ಳಿಯ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ತಂಡಕ್ಕೆ ವಹಿಸುತ್ತಿದ್ದರು. ಅವರು ಸಂರಕ್ಷಣಾ ಕಾರ್ಯವನ್ನು ನಡೆಸುವ ಸಲುವಾಗಿ ಅವರಿಗೆ ಕೆಲವು ಭೂಮಿಗಳನ್ನು ಬಿತ್ತುವಟ್ಟ ಅಥವಾ ದಶವಂದವಾಗಿ ನೀಡುತ್ತಿದ್ದರು. ಇಲ್ಲವೆ ಕಂದಾಯದಲ್ಲಿ ರಿಯಾಯಿತಿ ನೀಡುತ್ತಿದ್ದರು. ಭಾರಿ ನೀರಾವರಿ ಕಾರ್ಯಗಳಲ್ಲಿ ದುರಸ್ತಿ ಕಾರ್ಯವನ್ನು ನಡೆಸುವುದಕ್ಕಾಗಿ ಕೆಲವು ಸ್ಥಳೀಯ ತೆರಿಗೆಗಳ ಬಳಕೆಯ ಸೌಲಭ್ಯವನ್ನು ಸ್ಥಳೀಯ ಸಂಸ್ಥೆಗಳಿಗೆ ದೊರೆಗಳು ನೀಡುತ್ತಿದ್ದರು. ದುರಸ್ತಿ ಕಾರ್ಯಗಳನ್ನು ನಡೆಸಲು ಸ್ಥಳೀಯ ಸಂಸ್ಥೆಗಳಿಗೆ ನಗದು ಅನುದಾನವನ್ನು ಕೊಡಲಾಗುತ್ತಿತ್ತು. ಇನ್ನೂ ಕೆಲವು ಕಡೆಗಳಲ್ಲಿ (ಸರ್ಕಾರಿ) ಭೂಮಿಯನ್ನು ನೀಡಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಕೆರೆ ಸಂರಕ್ಷಣೆಗಾಗಿ ಬಂಡಿಗಳನ್ನು ಭೂಮಿಯನ್ನು ಕೊಡಲಾಗುತ್ತಿತ್ತು. ಬಂಡಿಗಳನ್ನು ಕೊಡುತ್ತಿದ್ದುದು ಕೆರೆಯಿಂದ ಮತ್ತು ಕೆರೆ ಮಣ್ಣನ್ನು ಸಾಗಿಸುವುದಕ್ಕೆ.

ಶಾಸನಗಳ ಸಾಕ್ಷ್ಯ :

ಸಂರಕ್ಷಣೆ ಹಾಗೂ ದುರಸ್ತಿ ಕಾರ್ಯಗಳಿಗೆ ನೀಡಲಾಗಿದ್ದ ಮಹತ್ವವನ್ನು ಸೂಚಿಸುವ ಅನೇಕ ಶಾಸನಗಳಿವೆ. ಕೆಲೂಡಿ, ಮಂಟೂರು, ಶಿರೂರು ಶಾಸನಗಳು ಸಂರಕ್ಷಣೆ ದುರಸ್ತಿಗಳಿಗಾಗಿ ಕೆಲವು ಸ್ಥಳೀಯ ತೆರಿಗೆಗಳನ್ನು ನೀಡಿದ್ದನ್ನು ದಾಖಲು ಮಾಡಿಕೊಂಡಿವೆ.

ಹೊನ್ನಾಕಟ್ಟಿ, ಅರಸೀಬೀದಿ, ಐಹೊಳೆ ಹಾಗೂ ಬೇವೂರ ಶಾಸನಗಳು ಸಂರಕ್ಷಣಾ ಕಾರ್ಯಕ್ಕಾಗಿ ನಗದು ದಾನ ಇಲ್ಲವೆ ಭೂಮಿ ದಾನ ಮಾಡಿದ್ದನ್ನು ದಾಖಲು ಮಾಡಿವೆ. ಶಿರೂರಿನ ಬಾಸಿಶೆಟ್ಟಿ ಕೆರೆ ಕಟ್ಟಿಸಿದ ದೇವಿಕೆರೆ ಹಾಗೂ ಪಡಲಗೇರಿ ಕೆರೆಗಳ ಸಂರಕ್ಷಣೆಗಾಗಿ ನಾಲ್ಕು ಖಂಡುಗ ಭೂಮಿಯನ್ನು ಬಿತ್ತುವಟ್ಟವೆಂದು ದಾನಮಾಡಿದ್ದನ್ನು ಐಹೊಳೆ ಶಾಸನ ದಾಖಲಿಸುತ್ತದೆ.[೮೫] ಕೆಲವಡಿ ಕೆರೆಯ ಸಂರಕ್ಷಣೆಗಾಗಿ ೪೦ ಗದ್ಯಾಣಗಳನ್ನು ದಾನವಿತ್ತುದನ್ನು ದಾಖಲು ಮಾಡುತ್ತದೆ.[೮೬] ಬ್ರಹ್ಮಪುರಿಯ ಮಹಾಜನರಿಗೆ ಮಾರಿಯಬ್ಬೆಯ ಕೆರೆಯ ಕೆಳಗೆ ಕೆಲವು ಭೂಮಿಗಳನ್ನು ನೀಡಿದ್ದನ್ನು ಹುನಗುಂದ ತಾಲ್ಲೂಕಿನ ಅರಸೀಬಿದಿ ಶಾಸನ (ಕ್ರಿ.ಶ.೧೦೮೭) ದಾಖಲಿಸಿದೆ.[೮೭] ಪ್ರಾಯಶ: ಅದು ಕೆರೆಯ ಸಂರಕ್ಷಣೆಗಾಗಿಯೇ ಇರಬೇಕು. ಒಂದು ಕೆರೆಯ ಸಂರಕ್ಷಣೆಗಾಗಿ ಹತ್ತು ಖಂಡುಗ ಭೂಮಿಯನ್ನು ದಾನವಿತ್ತುದು ಶಿರೂರು ಶಾಸನದಲ್ಲಿ ದಾಖಲಾಗಿದೆ. ಪಳಗೆಯ ಚಾವುಂಡಮಯ್ಯ ಹಾಗೂ ಆತನ ಹೆಂಡತಿ ಶಾಂತಕಬ್ಬೆ ತಾವು ಕಟ್ಟಿಸಿದ ಮುತ್ತಲಗೆರೆಯ ಸಂರಕ್ಷಣೆಗಾಗಿ ಭೂಮಿಯನ್ನು ನೀಡಿದರು.

ದಶವಂಶ ಮತ್ತರು ಸಂರಕ್ಷಣಾ ಕಾರ್ಯಕ್ಕಾಗಿ ನೀಡಿದ ವಿಶಿಷ್ಟ ಕ್ರಮವನ್ನು ಕೆಲವಡಿ ಶಾಸನಗಳಲ್ಲಿ ದಾಖಲು ಮಾಡಲಾಗಿದೆ. ಕೆರೆಯ ನಿರ್ಮಾಣದ ಸಲುವಾಗಿ ಬಂಡಿ ಸಾಮಗ್ರಿ, ಕೂಲಿ, ಬಂಡಿ ಹೊಡೆಯುವವ, ಬಂಡಿಗಳಿಗಾಗಿ, ಕೆರೆ ತೋಡುವ ಕೆಲಸದ ಮೇಲುಸ್ತುವಾರಿಗಾಗಿ, ಎರಡು ತೂಬುಗಳನ್ನು ಕಟ್ಟಿದ ಕಲ್ಲು ಕೆಲಸದವನಿಗಾಗಿ ಹಾಗೂ ಇತರೆ ಸಾದಲವಾರು ವೆಚ್ಚಕ್ಕಾಗಿ ಮಹಾಪ್ರಧಾನ ಮಾರಿಗದೇವ ದಣ್ಣಾಯಕ ೨೨೦೦ ಗದ್ಯಾಣಕಗಳನ್ನು, ೮ ಪಣಗಳನ್ನು ಖರ್ಚು ಮಾಡಿದ ಎಂದು ಶಿರೂರಿನ ಶಾಸನ ಹೇಳುತ್ತದೆ. ಬಂಡಿಗಳ ಸಂರಕ್ಷಣೆಗಾಗಿಯೇ ೮೦೦ ಗದ್ಯಾಣಗಳನ್ನು ನಿಗದಿ ಮಾಡಿದ್ದು ಕೆರೆ ನಿರ್ಮಾಣಕಾಲದಲ್ಲಿಯೇ ಅದರ ಸಂರಕ್ಷಣೆಯ ಬಗ್ಗೆಯೂ ಯೋಚಿಸಲಾಗಿತ್ತು ಎನ್ನುವುದನ್ನು ನಿಚ್ಚಳವಾಗಿ ತೋರಿಸುತ್ತದೆ. ಒಂದು ಕೆರೆಯ ದುರಸ್ತಿಗೆ ಮಣ್ಣು ಸಾಗಿಸಲು ಬಂಡಿಯೊಂದನ್ನು ನೀಡಿದ್ದು ತಿಳಿದು ಬರುತ್ತದೆ. ಕೆರೆಯ ಸಲುವಾಗಿ ಬಂಡಿಗಳನ್ನು ಇಟ್ಟುಕೊಳ್ಳಲು ಹಳ್ಳಿಯ ಕೆಲವು ಮಂದಿಗೆ ಭೂಮಿಯನ್ನು ತೆರಿಗೆಗಳನ್ನು ಇತ್ತುದು ದಾಖಲಾಗಿದೆ. ಕೆಲವು ಸುಂಕಗಳನ್ನು ಮಾಫಿ ಮಾಡಲಾಯಿತು. ಬಂಡಿಗಳಿಗೆ ಬೇಕಾದ ಕೋಣ, ಮರ (ಕಿರುಮುಟ್ಟು), ಕಬ್ಬಿಣ ಹಾಗೂ ಕೀಲೆಣ್ಣೆಗಳ ವೆಚ್ಚವನ್ನು ದಾನಪಡೆದವರೇ ತಮ್ಮ ಸ್ವಂತ ಹಣದಿಂದ ನಿಭಾಯಿಸಬೇಕೆಂದು ಶಾಸನಗಳಿಂದ ತಿಳಿದು ಬರುತ್ತದೆ.

ಕೆರೆಗಳ ಸಂರಕ್ಷಣೆಗಾಗಿ ಭೂಮಿ, ಹಣ ನೀಡುವುದನ್ನು ಈ ಶಾಸನಗಳು ತಿಳಿಸುತ್ತವೆ. ಇಷ್ಟೇ ಅಲ್ಲದೇ ೧೫ ನೆಯ ಶತಮಾನದ 'ಮಿರ್ಲೆ ಶಾಸನ' ಹಂಪಾಪುರದ ಮಹಾಜನರು ತಮ್ಮ ಹಳ್ಳಿಯ ನಾಲೆ ಎಂಟು ಹತ್ತು ಕಡೆಗಳಲ್ಲಿ ಒಡೆದು ಹೋಗಿದ್ದಾಗ ಅದನ್ನು ಸರಿಪಡಿಸಲು ತಮಗೆ ಶಕ್ತಿ ಇಲ್ಲದೆ, ನಾಲೆಯ ಸಂರಕ್ಷಣೆಯ ಕೆಲಸವನ್ನು ಹಳ್ಳಿ ಹಿರಿಯೂರಿನ ಗೌಂಡ ಪ್ರಜೆಗಳಿಗೆ ವಹಿಸಲು ತೀರ್ಮಾನಿಸಿದರು ಎಂದು ತಿಳಿಸುತ್ತದೆ. ಆ ಸಲುವಾಗಿ, ಅವರು ಒಂದು ಮನೆ, ೧೨ ಖಂಡುಗ ತರಿ ಭೂಮಿ ಹಾಗೂ ೧೫೦ ಕಂಬ ಖುಷ್ಕಿ ಭೂಮಿಗಳನ್ನು ಮಾರಿದರು. (ಈ ಮಾರಾಟ ನಾಲೆ ಸಂರಕ್ಷಣೆಗಷ್ಟೆ ಅಲ್ಲ. ತಮ್ಮ ಊರಿನಲ್ಲಿ ಒಂದು ಛತ್ರವನ್ನು ಕಟ್ಟಿಸಲು ಕೂಡ.) ಈ ಶಾಸನ ನಮಗೆ ಸ್ಪಷ್ಟವಾಗಿ ಹೇಳುತ್ತದೆ, ನೀರಾವರಿ ಕೆಲಸದ ಸಂರಕ್ಷಣೆ ಹಾಗೂ ದುರಸ್ತಿ ಕಾರ್ಯ ಗ್ರಾಮ ಸಮುದಾಯದ ಸದಸ್ಯರ ಆದ್ಯ ಜವಾಬ್ದಾರಿ ಎಂದು ಪರಿಗಣಿತವಾಗಿತ್ತು. ಈ ಸಂಬಂಧವಾಗಿ ಅವರು ತಮ್ಮ ಕರ್ತವ್ಯವನ್ನು ನಿಭಾಯಿಸಲು ಅಶಕ್ತರಾಗಿದ್ದರೆ ಅದನ್ನು ಇತರರಿಗೆ ವಹಿಸಲಾಗುತ್ತಿತ್ತು.[೨೦]

ಒಂದು ಕೆರೆಯ ಸಂರಕ್ಷಣೆಗಾಗಿ ಇದ್ದ ಪೂರಾ ವ್ಯವಸ್ಥೆಯನ್ನು ವಿವರವಾಗಿ ತಿಳಿಸುವ ಇನ್ನೊಂದು ಸ್ವಾರಸ್ಯಕರ ಶಾಸನ ಮುಳುಬಾಗಿಲು ತಾಲ್ಲೂಕಿನ ಕ್ರಿ.ಶ. ೧೮೯೬ರ ರಾಜಗುಂಡ್ಲಹಳ್ಳಿ ಶಾಸನ. ಆ ಶಾಸನ; ಕೆರೆಯ ನಿರ್ಮಾತೃವಿಗೂ ಕೆರೆ ಕೆಳಗಿನ ಪ್ರಧಾನ ಫಲಾನುಭವಿಗೂ (ದೇವಾಲಯ) ನಡುವೆ ಆದ ಒಪ್ಪಂದ. ಅದು ಹೀಗೆನ್ನುತ್ತದೆ.

"ಗುಂಡ್ಲನಹಳ್ಳಿ ಹಳೆಯ ಕೆರೆಯ ಪಶ್ಚಿಮಕ್ಕೆ ಮಾವಿನಹಳ್ಳದಲ್ಲಿ ನೀವು ಹಣ ವ್ಯಯಿಸಿ ಕನ್ನೆಗೆರೆ (ಹೊಸ ಕೆರೆ) ಯನ್ನು ಕಟ್ಟಿಸಿದ್ದರ ಸಲುವಾಗಿ ಅವುಗಳ ಹುಟ್ಟುವಳಿಯಲ್ಲಿ ನಾಲ್ಕು ಭಾಗ ಅಕ್ಕಿಯನ್ನು ನೀವು ಸುಂಕವಿಲ್ಲದೆ ಅನುಭವಿಸಬಹುದು. ಈ ನಾಲ್ಕು ಭಾಗಗಳು ಮುಗಿದ ಮೇಲೆ ಈ ಕೆರೆಯ ಕೆಳಗೆ ಮಾಡಲಾಗುವ ಭತ್ತದ ಗದ್ದೆಗಳಲ್ಲಿ ಹತ್ತರಲ್ಲಿ ಮೂರರಷ್ಟನ್ನು ದಶವಂದವಾಗಿ, ಕಟ್ಟು ಕೊಡುಗೆಯಾಗಿ ನಿಮಗೆ ನೀಡುತ್ತೇವೆ. ಉತ್ತಮ, ಮಧ್ಯಮ ಹಾಗೂ ಅಧಮ ಭೂಮಿಯನ್ನು ಕಲ್ಲು ನೆಡಸಿ, ವಿಂಗಡಿಸಿಕೊಡುತ್ತೇವೆ. ಅಲ್ಲದೇ ಈಗ ರಾಗಿ ಬೇಸಾಯದಲ್ಲಿರುವ ಖುಷ್ಕಿ ಭೂಮಿಯನ್ನು ಈ ಕೆರೆಯ ಕೊಟ್ಟು ಕೊಡಿಗೆ ಮಾನ್ಯವಾಗಿ ನೀಡುತ್ತೇವೆ. ಒಂದು ಖಂಡುಗ ಭೂಮಿಯನ್ನು ನಿಮಗೆ ಕಟ್ಟುಕೊಡಿಗೆ ಮಾನ್ಯವಾಗಿ ಕೊಡುತ್ತೇವೆ."[೨೧]

"ನೀವು ಕಟ್ಟುವ ಕೆರೆಗೆ ಏನಾದರೂ ಹಾನಿ ಉಂಟಾದಲ್ಲಿ ನೀವು ನಿಮ್ಮ ಪಾಲಿನ ನಾಲ್ಕು ಭಾಗ ಮಾನ್ಯದಿಂದ ಸರಿಮಾಡಿಸಬೇಕು. ಅದೂ ಮುಗಿದ ಮೇಲೆ, ಯಾವುದೇ ಸಣ್ಣ ದೋಷವು ಉಂಟಾದರೆ ನಾವು ನಿಮ್ಮ ದಸವಂದವೂ ಸೇರಿದಂತೆ ಕೆರೆಯ ಮೇಲೆ ಹಣವನ್ನೂ ಭತ್ತದ ಗದ್ದೆಗಳಿಂದ ಧಾನ್ಯವನ್ನೂ ವಸೂಲು ಮಾಡಿ ಅದರಿಂದ ಕೆರೆಯನ್ನು ದುರಸ್ತಿ ಮಾಡಿಸುತ್ತೇವೆ".

"ನಿಮ್ಮ ಕಟ್ಟುಕೊಡಿಗೆಯ ಭತ್ತದ ಖುಷ್ಕಿ ಭೂಮಿ ಹಾಗೂ ಒಣ ಬಯಲುಗಳಲ್ಲಿ ನಮ್ಮ ದೇವಾಲಯದ ಸಲುವಾಗಿ ನಾನಾ ಬಾಬಿನ ಯಾವುದೇ (ನಿರ್ದಿಷ್ಟ) ಪಾವತಿಯೂ ಆಗಿಲ್ಲ.

'ಈ ಕಟ್ಟುಕೊಡುಗೆ ಭತ್ತದ ಗದ್ದೆ ಹಾಗೂ ಹೊಲಗಳನ್ನು ನಿಮಗೆ ವಂಶಪಾರಂಪರ್ಯವಾಗಿ ಹಾಗೂ ಮುಂದಿನವರಿಗೆ ಬಿಟ್ಟುಕೊಡುವ ಇಲ್ಲವೆ ಮಾರುವ ಹಕ್ಕು ಸಮೇತ ನೀಡಲಾಗಿದೆ".

ಕೆರೆ ನಿರ್ಮಾಣದ ಪರಿಹಾರವಾಗಿ ಮಾತ್ರವಲ್ಲ, ಅದನ್ನು ಒಳ್ಳೆಯ ದುರಸ್ತಿಯಲ್ಲಿ ಇಡುವ ಸಲುವಾಗಿ ಕೆರೆಯ ನಿರ್ಮಾತೃವಿಗೆ ಕೆರೆಯಿಂದ ನೀರಾವರಿ ಆಗುವ ಭೂಮಿಯ ಹುಟ್ಟುವಳಿಯಲ್ಲಿನ ನಾಲ್ಕು ಭಾಗ ಅಕ್ಕಿಯನ್ನು ದಶವಂದವಾಗಿಯೂ, ತರಿ ಹಾಗೂ ಖುಷ್ಕಿ ಭೂಮಿಯ ಹತ್ತರಲ್ಲಿ ಮೂರರಷ್ಟನ್ನು ಕಟ್ಟುಕೊಡಿಗೆ ಮಾನ್ಯವಾಗಿಯೂ ಈ ಶಾಸನ ದುರಸ್ತಿ ಕಾರ್ಯಕ್ಕೆ ಹಣ ಕೊಡಲು ಬಾಧ್ಯಸ್ಥನಾಗಿರಬೇಕಾಗುತ್ತದೆ.

ಫ್ರಾನ್ಸಿಸ್ ಬುಕಾನನ್ನನ ಅಭಿಪ್ರಾಯೋಕ್ತಿ :

೧೮ನೆಯ ಶತಮಾನದ ಕೊನೆಯಲ್ಲೂ ಇಂಥದೊಂದು ವ್ಯವಸ್ಥೆ ರೂಢಿಯಲ್ಲಿತ್ತು ಎನ್ನುವದು ೧೮೦೦ರಲ್ಲಿ ಮೈಸೂರಿನಲ್ಲಿ ಪ್ರವಾಸ ಮಾಡಿದ ಫ್ರಾನ್ಸಿಸ್‌ಬುಕಾನನ್ನನ ಅಭಿಪ್ರಾಯೋಕ್ತಿಗಳಿಂದ ತಿಳಿದು ಬರುತ್ತದೆ. ಆತ ಹೇಳುತ್ತಾನೆ– ಕೋಲಾರ ಸೀಮೆಯಲ್ಲಿ ನೀರಾವರಿ ಆಗುವುದು ಬಹುಮಟ್ಟಿಗೆ ಜಲಾಶಯಗಳಿಂದಲೆ. ಯಾವುದೇ ಶ್ರೀಮಂತ ಒಂದು ಜಲಾಶಯವನ್ನೂ ಅಥವಾ ಕೆರೆಯನ್ನು ಕಟ್ಟಿಸಿದಾಗ ಅವನಿಗೆ ಹಾಗೂ ಅವನ ಉತ್ತರಾಧಿಕಾರಿಗಳಿಗೆ ಕೆರೆ ನೀರು ಒದಗಿಸುವ ಭೂಮಿಯ ಹತ್ತನೆಯ ಒಂದು ಪಾಲನ್ನು ಕಂದಾಯವಿಲ್ಲದೇ ಕೊಡುವುದು ರೂಢಿಯಾಗಿತ್ತು. ಅಲ್ಲದೆ, ಹಾಗೆ ನೀರಾವರಿಯಾದ ಪ್ರತಿ ಖಂಡುಗ ಭೂಮಿಗೂ ನಿರ್ಮಾತೃ ಆರು ಸೇರು ರಾಗಿ ಬಿತ್ತನೆಯ ಭೂಮಿಯನ್ನು ಕಂದಾಯವಿಲ್ಲದೆ ಪಡೆಯುವ ಹಕ್ಕನ್ನು ಹೊಂದಿದ್ದ. ಇದು ಪ್ರತಿ ೧೦೦೦೦ ಎಕರೆ ನೀರಾವರಿ ಭೂಮಿಗೆ ಸುಮಾರು ೧೪೬ ಎಕರೆ ಖುಷ್ಕಿ ಭೂಮಿಯಷ್ಟು ಆಗುತ್ತಿತ್ತು. ಆತ ಇವುಗಳನ್ನು ಅನುಭವಿಸುತ್ತಿರುವವರೆಗೂ ಕೆರೆಯ ದುರಸ್ತಿ ಅವನಿಗೆ ಕಡ್ಡಾಯವಾಗಿತ್ತು. ಕೆರೆ ವಿಸ್ತಾರವೂ ಆಗಿದ್ದಲ್ಲಿ ಅದನ್ನು ಕಟ್ಟಿದಾತನಿಗೆ ಹಾಗೂ ಆತನ ಉತ್ತರಾಧಿಕಾರಿಗಳಿಗೆ ಕೆರೆಯಿಂದ ನೀರಾವರಿಯಾಗುವ ಭೂಮಿಯಲ್ಲಿ ಕಾಲುಭಾಗ ಸಿಗುತ್ತಿತ್ತು. ಆದರೆ ಖುಷ್ಕಿ ಭೂಮಿ ಸಿಗುತ್ತಿರಲಿಲ್ಲ. ಮೂಲ ನಿರ್ಮಾತೃವಿನ ವಂಶ ನಿಂತು ಹೋದಲ್ಲಿ ಆ ಮಾನ್ಯದ ಭೂಮಿಯನ್ನು ಸರಕಾರವೇ ವಹಿಸಿಕೊಳ್ಳುತ್ತಿತ್ತು. ಕೆರೆಯನ್ನು ದುರಸ್ತಿಯಲ್ಲಿ ಇಟ್ಟಿರುತ್ತಿತ್ತು.[೨೨]

ಬಿತ್ತುವಟ್ಟ, ದಶವಂದ, ಕಟ್ಟುಕೊಡಿಗೆ :

ಕೆರೆಯ ನಿರ್ಮಾಣ, ಅದರ ಸಂರಕ್ಷಣೆಯ ಕೆಲಸ ಮಾಡಿದ್ದಕ್ಕಾಗಿ, ಕಟ್ಟಿದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಭೂಮಿಯನ್ನು ದಾನವೀಯುವುದಕ್ಕೆ ಬಿತ್ತುವಟ್ಟ, ಎಂದು ಅರ್ಥಮಾಡಲಾಗಿದೆ. ದಾನವಿತ್ತ ಭೂಮಿ ಯಾವಾಗಲೂ ಆ ಕೆರೆಯ ನೀರಿನಿಂದಲೇ ನೀರಾವರಿ ಆಗುತ್ತಿದ್ದ ಭೂಮಿ. ಹತ್ತನೆಯ ಒಂದು ಪಾಲು ಭೂಮಿಯೇ (ದಶ್ಯವ) "ಬಿತ್ತುವಟ್ಟ" ಎಂದು ಕ್ರಿ.ಶ.೯೩೭ರ ಸೂಳಿಭಾವಿ ಶಾಸನ ಸೂಚಿಸುತ್ತದೆ. ಇತರ ಶಾಸನಗಳಲ್ಲಿ ನೀಡಲಾದ ಭೂಮಿಯ ವಿಸ್ತಾರ ಸೂಚಿತವಾಗಿದೆ. ಆದರೆ ಅದು ಅಚ್ಚುಕಟ್ಟು ಭೂಮಿಯಲ್ಲಿ ಎಷ್ಟು ಪ್ರಮಾಣದ್ದು ಎಂಬುದನ್ನು ಹೇಳುವುದಿಲ್ಲ. ಆದರೂ ಅರಣಿ ಶಾಸನದಲ್ಲಿ ಯಾವುದೇ ಭೂಮಿದಾನದ ಉಲ್ಲೇಖವಿಲ್ಲ ಮತ್ತು ಬಿತ್ತುವಟ್ಟ ಎಂದರೆ ಕೆರೆಯ ಸಂರಕ್ಷಣೆಗಾಗಿ ಹುಟ್ಟುವಳಿಯ ಒಂದು ಭಾಗವನ್ನು ನೀಡುವುದು ಎಂದು ಅರ್ಥಮಾಡಲಾಗಿದೆ. ರೈಸ್‌ನ ಪ್ರಕಾರ ಅದು "ಬಿತ್ತು ಅಂದರೆ ಬೀಜ ಬಿತ್ತುವಿಕೆ ಅಥವಾ ಬೇಸಾಯದ ಮೇಲಿನ ವಟ್ಟ ಎಂದರೆ ಸೋಡಿ ಅಥವಾ ರಿಯಾಯಿತಿ ಎಂದಿರಬಹುದು. ಆದ್ದರಿಂದ ಬಿತ್ತುವಟ್ಟ ಎಂದರೆ ಕೆರೆಯ ನಿರ್ಮಾಣ ಅಥವಾ ಸಂರಕ್ಷಣೆಯ ಕಾರ್ಯಕ್ಕೆ ಪ್ರತಿಫಲವಾಗಿ ಕೆರೆಯ ಕೆಳಗೆ ಕೊಂಚ ಭೂಮಿಯನ್ನು ಕಡಿಮೆ ಕಂದಾಯದ ಮೇಲೆ ನೀಡುವುದು ಎಂದು ಅರ್ಥೈಸಬಹುದು.

ಬಿತ್ತುವಟ್ಟದ ಹಾಗೆಯೆ 'ದಶವಂದ' ವೂ ಕೆರೆಯ ದುರಸ್ತಿ ಅಥವಾ ನಿರ್ಮಾಣಕ್ಕಾಗಿ ನೀಡಲಾಗುವ ಭೂಮಿಯನ್ನು ಸೂಚಿಸಲು ಸಾಮಾನ್ಯವಾಗಿ ಬಳಸುವ ಶಬ್ದ. ರೈಸ್‌ನ ಪ್ರಕಾರ ಅದರ ಅರ್ಥ, ಒಬ್ಬಾತ ಕೆರೆಯನ್ನು ನಿರ್ಮಿಸಿದ ಅಥವಾ ದುರಸ್ತಿ ಮಾಡಿದುದರ ಪ್ರತಿಫಲವಾಗಿ ಸಾಮಾನ್ಯ ಕಂದಾಯದ ಹತ್ತನೆಯ ಒಂದರಷ್ಟು ಕಂದಾಯಕ್ಕೆ ಭೂಮಿಯನ್ನು ಆತನಿಗೆ ನೀಡುವುದು. ಕೆರೆಗೋಡು ಶಾಸನ ದಶವಂದ ಸುಂಕದ ನೀಡಿಕೆಯನ್ನು ಪ್ರಸ್ತಾಪಿಸುತ್ತದೆ. ಹಿಂದಿನ ಹೈದರಾಬಾದು ಸಂಸ್ಥಾನದಲ್ಲಿ ೨೦ ನೇ ಶತಮಾನದ ಮೊದಲಲ್ಲಿ ದಸ್ತಬಂದ್ ಪದ್ಧತಿ ಜಾರಿಯಲ್ಲಿತ್ತು. ಕೆರೆಯ ಸಂರಕ್ಷಣೆ ಮಾಡುತ್ತಿದ್ದ ವ್ಯಕ್ತಿಗೆ ಪ್ರತಿಫಲವಾಗಿ ಭೂಕಂದಾಯದ ಹತ್ತರಲ್ಲಿ ಒಂದು ಪಾಲನ್ನು ನೀಡುವುದು ಎಂದ ಅರ್ಥ. ಅದಕ್ಕೆ ನಕ್ಕೇರಹಾಳು ಶಾಸನ ದಶವಂದದ ಪಾವತಿಯ ನಿಷ್ಕರ್ಷೆಯನ್ನು ದಾಖಲು ಮಾಡುತ್ತದೆ. ಅದರ ಅರ್ಥ ಹಣದ ರೂಪದಲ್ಲಾಗಲಿ ವಸ್ತುರೂಪದಲ್ಲಾಗಲಿ ಹುಟ್ಟುವಳಿಯ ಹತ್ತನೆಯ ಒಂದರಷ್ಟನ್ನು ಅಥವಾ ನಿರ್ದಿಷ್ಟ ಪಾಲನ್ನು ಸಲ್ಲಿಸಬೇಕೆಂಬ ಷರತ್ತಿನ ಮೇಲೆ ಭೂಮಿಯನ್ನು ನೀಡುವುದು. ಬಿತ್ತುವಟ್ಟದಂತೆಯೇ ದಶವಂದವೂ ಭೂಮಿದಾನ ಅಥವಾ ಕಂದಾಯದಲ್ಲಿ ರಿಯಾಯಿತಿ ಅಥವಾ ಹಳೆಯ ಹೈದರಾಬಾದು ಸಂಸ್ಥಾನದಲ್ಲಿದ್ದಂತೆ ಭೂಕಂದಾಯದ ಹತ್ತನೆಯ ಒಂದರಷ್ಟು ನೀಡಿಕೆಯನ್ನು ಸೂಚಿಸುತ್ತದೆ.[೮೮]

ಕೊಡಿಗೆ ಅಥವಾ ಕಟ್ಟುಕೊಡಿಗೆ ಇನ್ನೊಂದು ಸಾಮಾನ್ಯ ಬಳಕೆಯ ಶಬ್ದ– ಬಿತ್ತುವಟ್ಟ ಹಾಗೂ ದಶವಂದಗಳ ಹಾಗೆಯೇ ಇದೂ ಕೊಡುಗೆ ಅಥವಾ ಕೊಡಿಗೆ ಬಹುಮಾನ ಅಥವಾ ದಾನ, ಕೆರೆಯ ಜೀರ್ಣೋದ್ಧಾರ ಇಲ್ಲವೆ ನಿರ್ಮಾಣ ಅಥವಾ ಅದನ್ನು ಸುಸ್ಥಿತಿಯಲ್ಲಿ ರಕ್ಷಿಸಿದ ಸೇವೆಗಾಗಿ ನೀಡಲಾದ ಭೂಮಿದಾನ. ಕೊಡಿಗೆ ಭೂಮಿಗಳು ಮುಂದೆ ಇನಾಂ ಭೂಮಿಗಳೆಂದು ಪರಿಗಣಿತವಾದವು. ಅವು ಕಂದಾಯವಿಲ್ಲದೆ ಅಥವಾ ಅಲ್ಪ ಕಂದಾಯದ ಮೇಲೆ ನೀಡಲಾದ ದಾನ ಭೂಮಿಗಳು. ಕೆರೆ ದುರಸ್ತಿ ಕೈಗೊಂಡಿದಕ್ಕೆ 'ಕೆರೆಬಂದಿ' ಹಾಗೂ 'ಕೆರೆ ಕೂಲಿಗೆ' ಇನಾಂಗಳು ಇದ್ದುದೂ ಕಂಡುಬರುತ್ತದೆ.

ಟಿಪ್ಪುಸುಲ್ತಾನನ ಕಾಲದಲ್ಲಿ ಸಂರಕ್ಷಣೆ :

೧೭೮೮ರಲ್ಲಿ ಟಿಪ್ಪುಸುಲ್ತಾನನು ಹೊರಡಿಸಿದ ಕಂದಾಯ ಆದೇಶಗಳಿಂದಲೂ ಕೆರೆಗಳ ಕಾಲಕಾಲದ ಸಂರಕ್ಷಣೆಗೆ ನೀಡಿದ್ದ ಮಹತ್ವವನ್ನು ಕಾಣಬಹುದು. (ರೈಸ್ ಪ್ರಕಾರ, ಈ ಆದೇಶಗಳು ಚಿಕ್ಕದೇವರಾಯ ಹೊರಡಿಸಿದವ– ೧೬೭೨–೧೭೦೪, ಅವೇ ಸುಲ್ತಾನ ಮರು ಪ್ರಕಟಣೆ ಮಾಡಿದ್ದು). ಸ್ಥಳೀಯರೆ ಕಟ್ಟಿ, ಇನಾಂ ಕಟ್ಟುಕೊಡಿಗೆಯಾಗಿ ಇಟ್ಟುಕೊಂಡಿದ್ದ ಕೆರೆಗಳನ್ನು ಇನಾಂದಾರರೇ ಸಂರಕ್ಷಿಸಬೇಕಾಗಿತ್ತು. ಅವರೇ ಕೆರೆಯಿಂದ ಹೂಳನ್ನು ಅಗೆದು ತೆಗೆದು ಏರಿಗೆ ಬಳಸಬೇಕಾಗಿತ್ತು. ಹಾಳು ಬಿದ್ದ ಕೆರೆಗಳ ದುರಸ್ತಿ ಮಾಡಲು ಇನಾಂದಾರನಲ್ಲಿ ಸಾಧನ ಇಲ್ಲದಿದ್ದರೆ ಅದನ್ನು ಸರ್ಕಾರ ಮಾಡಬೇಕಾಗಿತ್ತು ಮತ್ತು ದುರಸ್ತಿಯ ವೆಚ್ಚಕ್ಕೆ ಅನುಗುಣವಾಗಿ ವಾರ್ಷಿಕ ಕಂದಾಯವನ್ನು ಇನಾಂದಾರನ ಮೇಲೆ ಹಾಕಬೇಕಾಗಿತ್ತು.[೨೪]

ಸರ್ಕಾರವೇ ನಿರ್ಮಿಸಿದ ಕೆರೆಗಳ ಬಗ್ಗೆ ಅಮಲದಾರ, ಮುತ್ಸದ್ದಿ, ಹಾಗೂ ಹರಿಕಾರ ಮುಂತಾದ ಕಂದಾಯ ಅಧಿಕಾರಿಗಳು ತಾವೇ ಹೋಗಿ ಕೆರೆಗಳನ್ನು ಪರಿಶೀಲಿಸಬೇಕು ಮತ್ತು ದುರಸ್ತಿ ಮಾಡಿಸುವುದರಲ್ಲೂ ಅವುಗಳಿಂದ ಸರ್ಕಾರಕ್ಕೆ ಸಿಗುವ ಲಾಭ ಮತ್ತು ಉತ್ಪನ್ನದ ಹೆಚ್ಚಳ ಇವುಗಳ ಬಗ್ಗೆ ವಿಶೇಷ ಗಮನ ನೀಡಬೇಕು ಎಂದು ಈ ಆದೇಶಗಳಲ್ಲಿ ವಿಧಿಸಲಾಗಿತ್ತು. ಮಣ್ಣನ್ನು ಏರಿಯ ಮೇಲಕ್ಕೆ ಸಾಗಿಸಲು ಎಮ್ಮೆಗಳನ್ನು ಬಳಸಬೇಕು ಮತ್ತು ಏರಿಯ ಸುತ್ತ ಪ್ರತಿನಿತ್ಯವೂ ಹಾಕಲಾದ ಮಣ್ಣಿನ ಪ್ರಮಾಣದ ಲೆಕ್ಕವನ್ನು ಶಾನುಭೋಗ (ಗ್ರಾಮ ಲೆಕ್ಕಿಗ) ಇಡಬೇಕು ಎನ್ನುವ ಅಪ್ಪಣೆಯಿಂದ ಅಂಥ ದುರಸ್ತಿ ವರ್ಷಪ್ರತಿ ನಡೆಯುತ್ತಿತ್ತು ಎನ್ನುವದು ಸ್ಪಷ್ಟವಾಗುತ್ತದೆ.

ಸಂರಕ್ಷಣೆಯ ಅವನತಿ :

ಹಿಂದಿನ ಕಾಲದಲ್ಲಿ ಹಳ್ಳಿಯ ಸಮುದಾಯದಲ್ಲಿ ಬಂಧು ಬಳಗದವರೇ ಇರುತ್ತಿದ್ದರು. ಸಾಮಾನ್ಯವಾಗಿ ಗ್ರಾಮದ ಕೃಷಿಕ ಸಮುದಾಯ ಬೇಸಾಯಮಾಡುತ್ತಿತ್ತು. ಆ ಪೈಕಿ ಬಹುಜನಕ್ಕೆ ನೀರಾವರಿ ಭೂಮಿಯಲ್ಲಿ ಪಾಲು ಇರುತ್ತಿತ್ತು. ಆದ್ದರಿಂದ ಕೆರೆಗಳನ್ನು ಕಾರ್ಯದಕ್ಷವಾಗಿ,

ಒಳ್ಳೆ ದುರಸ್ತಿಯಲ್ಲಿ ಇರಿಸುವುದರಲ್ಲಿ ಅವರ ಹಿತದೃಷ್ಟಿಯೇ ಇರುತ್ತಿತ್ತು. ಕಾಲ ಸರಿದಂತೆ ಪ್ರವಾಹಗಳು ಏರಿಗಳನ್ನು ಹಾಳುಮಾಡಿದವು. ಬರ, ಯುದ್ಧಗಳು ಹಳ್ಳಿಯ ಸಮುದಾಯಗಳನ್ನು ಕರಗಿಸಿದವು. ದೊರೆಗಳು ತಮ್ಮ ಯುದ್ಧಗಳ ವೆಚ್ಚಕ್ಕಾಗಿ ಭಾರವಾದ ಇಲ್ಲವೆ ದಮನಕಾರಿಯಾದ ತೆರಿಗೆಗಳನ್ನು ವಿಧಿಸಿದರು. ಬಹುಶ: ಈ ಎಲ್ಲ ಅಂಶಗಳಿಂದಲೂ ಹಳ್ಳಿಗರು ಕೆರೆಗಳನ್ನು ಅಸಡ್ಡೆ ಮಾಡುವಂತೆ ಆಯಿತು. ೧೯ನೇ ಶತಮಾನದ ಆದಿಯಲ್ಲಿ ಟಪ್ಪುವಿನ ಪತನಾನಂತರ ಮೈಸೂರು ಸಂಸ್ಥಾನವನ್ನು ಬ್ರಿಟಿಷರು ಸ್ವಾಧೀನ ಪಡಿಸಿಕೊಂಡಾಗ ಸಂಸ್ಥಾನದ ಸರ್ಕಾರ ಬ್ರಿಟಿಷರ ಸೇನೆಯ ವೆಚ್ಚಕ್ಕೆ ವಾರ್ಷಿಕ ಪೊಗದಿ ಸಲ್ಲಿಸಬೇಕಾಯಿತು. ಯಾವಾಗಲೂ ರಾಜ್ಯದ ಮುಖ್ಯ ಆದಾಯದ ಮೂಲ ಭೂಮಿಯಷ್ಟೆ. ಆಹಾರೋತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಅಷ್ಟೇ ಅಲ್ಲ, ನೀರಾವರಿ ಬೇಸಾಯದ ಭೂಮಿಯಿಂದ ಹೆಚ್ಚಿನ ಕಂದಾಯ ಬರುವುದಕ್ಕಾಗಿ, ನೀರಾವರಿ ಕಾರ್ಯಗಳನ್ನು ಜೀರ್ಣೋದ್ಧಾರ ಮಾಡಲು ಹಾಗೂ ದುರಸ್ತಿ ಮಾಡಲು ಸರ್ಕಾರ ಸರ್ವಪ್ರಯತ್ನ ಮಾಡಿತು. ಸಂಸ್ಥಾನ ಬ್ರಿಟಿಷ್ ಆಡಳಿತಕ್ಕೆ ನೇರವಾಗಿ ಒಳಗಾದ ಮೇಲೆ ನೀರಾವರಿ ಕೆಲಸಗಳ ದುರಸ್ತಿಗಾಗಿ ನೀರಾವರಿ ಸುಂಕವನ್ನು ವಿಧಿಸಲಾಯಿತು. ದಿವಾನ್ ಶೇಷಾದ್ರಿ ಅಯ್ಯರ್ (೧೮೯೪) ಅವರ ಮಾತಿನಲ್ಲಿ ಹೇಳುವುದಾದರೆ, " ಕೆರೆಗಳ ಸಂರಕ್ಷಣೆಯಲ್ಲಿ ಸರ್ಕಾರದ ಜವಾಬ್ದಾರಿಗೆ ವಿಪರೀತ ಪ್ರಾಮುಖ್ಯತೆ ಕೊಡಲಾಯಿತು. ರೈತರ ಹೊಣೆಯನ್ನು ಪೂರ್ಣ ಅಲಕ್ಷ್ಯಮಾಡಲಾಯಿತು.. ತನ್ನ ಬಂಡವಾಳಕ್ಕೆ ಸಾಕಷ್ಟು ಲಾಭ ಸಿಗುವ ಸಂಭವ ಇಲ್ಲವಾದರೆ ಕೆರೆಗಳ ನಿರ್ವಹಣೆಯನ್ನು ತನ್ನ ದುಬಾರಿ ಕಾರ್ಯವ್ಯವಸ್ಥೆ ವಹಿಸಿಕೊಳ್ಳುವುದು ಅಸಾಧ್ಯ ಎಂದು ಸರ್ಕಾರಕ್ಕೆ ತೋರಿತು. ಆಗ ಬಹುಪಾಲು ಕೆರೆಗಳನ್ನು ರೈತರೇ ವಹಿಸಿಕೊಳ್ಳಬೇಕೆಂದು ಹೇಳಿತು. ಆದರೆ ಆ ವೇಳೆಗೆ ರೈತ ಸಾರ್ವಜನಿಕ ಉಪಯೋಗದ ಕಾರ್ಯಗಳಿಗೆ ಕಾಣಿಕೆ ನೀಡುವ ರೂಢಿಯನ್ನೆಲ್ಲ ಕಳೆದುಕೊಂಡಿದ್ದ. ಅಲ್ಲದೆ ಸಿವಿಲ್ ಅಧಿಕಾರಿಗಳು ರೈತರ ಹೊಣೆಗಾರಿಕೆಯನ್ನು ಪರಿಣಾಮಕಾರಿ ರೀತಿಯಲ್ಲಿ ಜಾರಿಮಾಡಿಸುವ ಸ್ಥಿತಿಯಲ್ಲಿ ಇರಲಿಲ್ಲ. ರೈತರು ಸಂರಕ್ಷಿಸಬೇಕಾದುದಕ್ಕೆ ಕೊಡಮಾಡಲಾಗಿದ್ದ ನಾನಾ ಇನಾಂಗಳು ಸವಲತ್ತುಗಳೂ ಕೊಚ್ಚಿ ಹೋಗಿದ್ದವು. ಸರ್ಕಾರ ತಾನೆ ಕೆಲಸವನ್ನು ಮಾಡಿಸುವುದು ಎಂಬ ತಿಳುವಳಿಕೆ ಮೇರೆಗೆ ಸುಂಕಗಳನ್ನು ವಿಧಿಸಲಾಗಿತ್ತು."

"ನಮ್ಮ ಕೆರೆಗಳ ವ್ಯೂಹವ್ಯವಸ್ಥೆಯ ಸುಧಾರಣೆ ಈ ವಾಸ್ತವಾಂಶದ ನಿಚ್ಚಳ ಅರಿವಿನಿಂದ ಆರಂಭವಾಗಬೇಕು. ಏನೆಂದರೆ ಪ್ರಾಂತ್ಯದಲ್ಲಿನ ಎಲ್ಲ ಕೆರೆಗಳ ದುರಸ್ತಿ ಹಾಗೂ ಸಂರಕ್ಷಣೆಯನ್ನು ಅಖೈರಾಗಿ ಲಾಭದಾಯಕ ರೀತಿಯಲ್ಲಿ ನಿರ್ವಹಿಸುವುದು ಸರ್ಕಾರದ ಸಾಮರ್ಥ್ಯಕ್ಕೆ ಮೀರಿದ್ದು. ಅಲ್ಲದೇ ಗ್ರಾಮ ವ್ಯವಸ್ಥೆ ಅಥವಾ ಅದರ ಅಂಶ ಏನು ಉಳಿದಿತ್ತೋ ಅದು ಮುರಿದು ಹೋಗಿದೆಯಾಗಿ ಮತ್ತು ಕೆರೆ ದುರಸ್ತಿಗಾಗಿ ವಿಶೇಷ ಸುಂಕಗಳನ್ನು ವಿಧಿಸಿ ರೈತನನ್ನು ಹೊಣೆಗಾರಿಕೆ ಯಿಂದ ಬಿಡಿಸಿದ ಮೇಲೆ ಈಗ ರೈತನಿಗೆ ಭಾರವನ್ನು ಹೇರುವುದು ನ್ಯಾಯವಾಗಲಾರದು".

ಹಳ್ಳಿಯ ಮುಖ್ಯಸ್ಥನ ಪಾತ್ರ :

ಹಿಂದೆ ಗ್ರಾಮದ ಮುಖ್ಯಸ್ಥನಾದ ಪಟೇಲ ಹಳ್ಳಿಯ ಮೇಲೆ ಪೂರಾ ಅಧಿಕಾರವನ್ನು ಹೊಂದಿದ್ದ ಮತ್ತು ತಕ್ಕಷ್ಟು ಸ್ಥಿತಿವಂತನೂ ಆಗಿದ್ದ. ಕೆರೆ ಕೆಳಗೆ ತನಗೂ ಜಮೀನು ಇದ್ದುದರಿಂದ ಆತ ಕೆರೆ ಒಳ್ಳೆಯ ದುರಸ್ತಿಯಲ್ಲಿ ಇರುವಂತೆ ಎಚ್ಚರವಹಿಸುತ್ತಿದ್ದ ರೈಸ್ ಪ್ರಕಾರ ೧೬೫೪ ರಲ್ಲಿ ಕಂಠೀರವ ನರಸರಾಜ, ಪಟೇಲರ ಇನಾಂಗಳನ್ನು ಕಡಿಮೆ ಮಾಡಿ ಅವರ ಅಧಿಕಾರಿಗಳಿಗೆ ಪ್ರಹಾರಮಾಡಿದ. ಅವರ ಭತ್ಯೆಗಳನ್ನು ಚಿಕ್ಕದೇವರಾಜ (೧೬೭೨) ಕೊಂಚ ಮಟ್ಟಿಗೆ ಮತ್ತೆ ಕೊಡಿಸಿದ. ಆದರೆ ಅವನ ಮಗನು ಉತ್ತರಾಧಿಕಾರಿಯೂ ಆದ ಕಂಠೀರವರಾಜ, ಪಟೇಲರ ಪಾಲುಗಳನ್ನು ಮುಟ್ಟುಗೋಲು ಹಾಕಿಕೊಂಡ. ಪಟೇಲರ ಭತ್ಯೆಗಳನ್ನು ಹಿಂದಿರುಗಿಸಲು ಹೈದರಾಲಿ ಏನೂ ಕ್ರಮ ಕೈಗೊಳ್ಳಲಿಲ್ಲ. ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಅವರ ಇನಾಂ ಭೂಮಿಗಳ ಮೇಲೆ ಕಂದಾಯವನ್ನು ವಿಧಿಸಲಾಯಿತು.

"ಪಟೇಲರ ಅವನತಿ ೧೮೦೦ರಲ್ಲಿ ಪೂರ್ಣಯ್ಯನಿಂದ ಪೂರ್ಣವಾಗಿ ಆಯಿತು. ಆತನ ಆಳ್ವಿಕೆಯವರೆಗೂ, ಪಟೇಲರ ಇನಾಂಗಳನ್ನು ಸ್ವಾಧೀನ ಪಡಿಸಿಕೊಂಡಿದ್ದರೂ ಅದನ್ನು ನಮೂದು ಮಾಡಲಾಗುತ್ತಿತ್ತು. ಇದರಿಂದ ಅವುಗಳನ್ನು ಮೂಲ ಅನುಭೋಗಸ್ಥರಿಗೆ ವಾಪಸ್ಸು ಮಾಡುವುದು ಸುಲಭವಾಗಿತ್ತು. ಆದರೆ ಪೂರ್ಣಯ್ಯ, ಈ ಎಲ್ಲ ಭತ್ಯೆಗಳನ್ನು ನಾಡಿನ ಒಟ್ಟು ಆದಾಯದಲ್ಲಿ ಸೇರಿಸಿಬಿಟ್ಟು, ಅಂಥ ನಿರೀಕ್ಷೆಗಳನ್ನು ಒಂದೆ ಏಟಿಗೆ ತೊಡೆದು ಹಾಕಿದ. ಇದೇ ವ್ಯವಸ್ಥೆ ಮುಂದಿನ ಮಹಾರಾಜರುಗಳ ಕಾಲದಲ್ಲಿ ಮುಂದುವರೆಯಿತು.

ಬ್ರಿಟಿಷರ ಕಾಲದಲ್ಲಿ ಬೇಸಾಯ ಸಮಯದಲ್ಲಿ ಶೇಕದಾರ ತನ್ನ ವಲಯದಲ್ಲಿನ ಹಳ್ಳಿಗಳಿಗೆ ಪ್ರವಾಸ ಹೋಗಿ ಶ್ಯಾನುಭೋಗರಿಗೆ ಕಂದಾಯ ನಿಗದಿ ಬಗ್ಗೆ ತಿಳುವಳಿಕೆಯನ್ನು ಸೂಚನೆಗಳನ್ನು ಕೊಡುತಿದ್ದ. ಕೆರೆಗಳ ಕೆಳಗಿನ ಭೂಮಿಯ ವಿಚಾರದಲ್ಲಿ, ಕಬ್ಬಿನ ಸಾಗುವಳಿ ಎಷ್ಟರಲ್ಲಿ, ಭತ್ತ ಎಷ್ಟರಲ್ಲಿ ಎನ್ನುವುದನ್ನು ಕೇಳಿ ತಿಳಿದುಕೊಳ್ಳುತ್ತಿದ್ದ. ಒಂದು ವೇಳೆ ಸರ್ಕಾರಿ ಭೂಮಿಯನ್ನೆಲ್ಲ ಪೂರಾ ತರಿ ಬೇಸಾಯಕ್ಕೆ ತರಲು ನೀರು ಸಾಲದೆ ಹೋದ ಪಕ್ಷದಲ್ಲಿ ಯಾವ ಭೂಮಿ ಪೂರಾ ಅಥವಾ ಭಾಗಶ: ನೀರಾವರಿ ಇಲ್ಲದೆ ಇರುವುದೊ ಅಲ್ಲಿ ಅತ್ಯಂತ ಹೆಚ್ಚು ಲಾಭ ನೀಡುವ ಒಣ ಬೆಳೆಯನ್ನು ಇಡಲು ಏರ್ಪಡಿಸುತ್ತಿದ್ದ. ತನ್ನ ತಾಲ್ಲೂಕಿನಲ್ಲಿನ ಕೆರೆಗಳನ್ನು, ಹೊಳೆ ದಂಡೆಗಳನ್ನು ತನಿಖೆ ಮಾಡುವುದು ಹಾಗೂ ಅವುಗಳ ಸ್ಥಿತಿಗಳನ್ನು ಅಧೀಕ್ಷಕನಿಗೆ (ಸೂಪರಿಂಟೆಂಡೆಂಟ್) ಸದಾ ತಿಳಿಸುತ್ತಿರುವುದು ಅಮಲದಾರನ ಒಂದು ಮುಖ್ಯ ಕರ್ತವ್ಯವಾಗಿತ್ತು. ಅಮಲದಾರರು ತಾಲ್ಲೂಕು ಕಂದಾಯ ನಿರ್ಣಯವನ್ನು ಮುಗಿಸಿಯಾದ ಮೇಲೆ ಸಾಮಾನ್ಯವಾಗಿ ಅಧೀಕ್ಷಕ, ನವೆಂಬರ್ ಆದೊಡನೆ ಸಾಧ್ಯವಾದಷ್ಟು ಶೀಘ್ರದಲ್ಲಿ ತನ್ನ ಜಮಾ ಬಂದಿ ಪ್ರವಾಸ ಕೈಗೊಳ್ಳುತ್ತಿದ್ದ. ಪ್ರತಿಯೊಬ್ಬ ರೈತನ ಹಿಡುವಳಿ

ಬಗ್ಗೆ ಆ ಮೊದಲೇ ಸಿದ್ಧ ಪಡಿಸಿದ್ದ ಪಟ್ಟಾಗಳನ್ನು ರೈತರಿಗೆ ಆಗ ವಿತರಿಸಲಾಗುತಿತ್ತು.

ಈ ಪಟ್ಟಾ ವಿತರಣೆ ಪದ್ಧತಿಯಿಂದ ಪ್ರತಿಯೊಬ್ಬ ಕಂದಾಯದಾರನಿಗೂ ಅಧೀಕ್ಷಕನ ವೈಯಕ್ತಿಕ ಸಂಪರ್ಕ ಉಂಟಾಗುತ್ತಿತ್ತು. ಮತ್ತು ತಮ್ಮ ತಮ್ಮ ಪಟ್ಟಾಗಳನ್ನು ಪಡೆಯಲು ಎಲ್ಲರೂ ಬರಬೇಕಾಗಿದ್ದರಿಂದ ಪ್ರತಿಯೊಬ್ಬನಗೂ ತನ್ನ ಕುಂದು ಕೊರತೆ ಏನಿದ್ದರೂ ಅದಕ್ಕೆ ಪರಿಹಾರವನ್ನು ಪಡೆಯಲು ಅವಕಾಶವಾಗುತ್ತಿತ್ತು.

ಪಟೇಲ ಅಥವಾ ಶ್ಯಾನುಭೋಗರ ಇನಾಂಗಳ ಖೋತಾ ಹಾಗೂ ಸರ್ಕಾರವೇ ನೇರವಾಗಿ ನಡೆಸಿದ ಕಂದಾಯ ನಿಗದಿ ಇವುಗಳಿಂದ ಹಳ್ಳಿಯಲ್ಲಿ ಪಟೇಲನ ಘನತೆಗೂ ಸ್ಥಾನಕ್ಕೂ ಚ್ಯುತಿ ಉಂಟಾಯಿತು. ಆತ ಕೇವಲ ಸರ್ಕಾರದ ಸಂಬಳದ ನೌಕರರ ಮಟ್ಟಕ್ಕೆ ಇಳಿದುಬಿಟ್ಟ. ಹಳ್ಳಿಗರನ್ನು ಕೆರೆ ರಿಪೇರಿ ಕೆಲಸ ಕೈಗೊಳ್ಳುವಂತೆ ಒತ್ತಾಯಿಸಲಾರದೆ ಹೋದ. ಅಂಥ ಕೆಲಸಗಳನ್ನು ಮಾಡುವುದರಲ್ಲಿ ವೈಯಕ್ತಿಕ ಉತ್ಸಾಹವನ್ನು ಅಥವಾ ಆಸಕ್ತಿಯನ್ನು ಸಹ ಕಳೆದುಕೊಂಡ. ಬ್ರಿಟಿಷರು ಜಾರಿಗೆ ತಂದ ವ್ಯವಸ್ಥೆ ಹಳೆಯ ವ್ಯವಸ್ಥೆಯ ಸರ್ವಾಧಿಕಾರಿ ಅಥವಾ ಕೆಲವೊಮ್ಮೆ ದಮನಕಾರಿ ನಿರ್ವಹಣೆಯನ್ನು ತೊಡೆದು ಹಾಕಿತು. ಆದರೂ ಅದು ಹಳ್ಳಿಯ ಸಮುದಾಯಕ ಹಿತಾಸಕ್ತಿಯ ಬುಡಕ್ಕೆ ಏಟು ಹಾಕಿತು. ಹಳ್ಳಿಯ ಕೆರೆಗಳ ಸಂರಕ್ಷಣೆಯ ಜವಾಬ್ದಾರಿಯನ್ನು ಗ್ರಾಮ ಸಮುದಾಯದಿಂದ ಸರ್ಕಾರಕ್ಕೆ ವರ್ಗಾಯಿಸಿತು.

ಬ್ರಿಟಿಷರು ಅನುಸರಿದ ವಿಧಾನಗಳು :

ಎಲ್ಲ ಕೆರೆಗಳ ದುರಸ್ತಿ ಅಥವಾ ಜೀರ್ಣೋದ್ಧಾರವನ್ನು ನಿರ್ವಹಿಸುವುದು ಕಷ್ಟದ ಕೆಲಸವಾಯಿತಾದ್ದರಿಂದ ೧೮೬೩ರಲ್ಲಿ ಮೈಸೂರು ಮುಖ್ಯ ಕಮೀಷನರ್ ಒಂದು ಘೋಷಣೆಯನ್ನು ಹೊರಡಿಸಿದ. ಅದರಂತೆ ಬಹುಕಾಲದಿಂದ ನಿರುಪಯುಕ್ತವಾಗಿದ್ದ ಕೆರೆಯ ದುರಸ್ತಿ ಅಥವಾ ಜೀರ್ಣೋದ್ಧಾರವನ್ನು ಕೈಗೊಳ್ಳುವ ಖಾಸಗಿ ವ್ಯಕ್ತಿ ಕೆಳಕಾಣಿಸಿರುವ ರಿಯಾಯಿತಿ ದರದ ಮೇಲೆ ಭೂಮಿ ಇಟ್ಟುಕೊಳ್ಳಲು ಅನುಮತಿ ನೀಡಲಾಯಿತು.

ಅ. ತಾಲೂಕಿನ ಸರಾಸರಿ ಕಂದಾಯಲ್ಲಿ ಕಾಲುಭಾಗ ಕಡಿಮೆ

ಅಥವಾ

ಆ. ಆ ವ್ಯಕ್ತಿಯ ಸ್ವಂತ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಚಾಲ್ತಿಯಲ್ಲಿರುವ ಖುಷ್ಕಿ ಭೂಮಿಯ ಗರಿಷ್ಠ ದರ

ಅಥವಾ

ಇ. ಶ್ರಯ ಅಥವಾ ಕೌಲು ಪದ್ಧತಿಯಂತೆ ಕೆಲವು ಸಾಲು ವರ್ಷಗಳಲ್ಲಿ ಗರಿಷ್ಠ ಕಂದಾಯದ ದರವಾಗುವಂತೆ ಇದ್ದ ತಾಲ್ಲೂಕಿನ ಸರಾಸರಿ ತರಿ ಕಂದಾಯ

೧೮೭೧ರಲ್ಲಿ ಹೊರಡಿಸಲಾದ ಇನ್ನೊಂದು ಆಜ್ಞೆಯಲ್ಲಿ, ೧೮೭೧ಕ್ಕೆ ಮೊದಲು ಕೈಗೊಂಡಿದ್ದ ಕಾರ್ಯಗಳ ಬಗ್ಗೆ ಈ ರಿಯಾಯಿತಿಗಳನ್ನು ಮೂವತ್ತು ವರ್ಷಕ್ಕೆ ಮೀರದ

ಅವಧಿಗೆ ಮಿತಗೊಳಿಸಲಾಯಿತು. ಮತ್ತೆ ೧೮೭೬ ರಲ್ಲಿ ಇನ್ನೊಂದು ಆಜ್ಞೆ ಹೊರಡಿಸಿ, ಕೆಲಸದ ನಿರ್ಮಾತೃ ಅಥವಾ ದುರಸ್ತಿದಾರನಲ್ಲದೆ ಬೇರೆಯವರ ಸ್ವಾಧೀನದಲ್ಲಿದ್ದ ಸರ್ಕಾರಿ ಭೂಮಿಗಳಿಗೆ ಸ್ವಾಧೀನದಾರರಿಂದ ಪೂರ್ಣ ಕಂದಾಯವನ್ನು ವಸೂಲು ಮಾಡಿ, ಅದರಲ್ಲಿ ಕಾಲುಭಾಗವನ್ನು ನಿರ್ಮಾಣ ಅಥವಾ ದುರಸ್ತಿ ಮಾಡಿಸಿದ ವ್ಯಕ್ತಿಗೆ ಕೊಡತಕ್ಕದ್ದು ಎಂದು ಸೂಚಿಸಲಾಯಿತು. ಇನಾಂ ಜಮೀನುಗಳ ಬಗ್ಗೆ ವಿಧಿಸಿದ ಸುಂಕದ ನಾಲ್ಕನೆಯ ಒಂದು ಭಾಗವನ್ನು ನಿರ್ಮಾತೃವಿಗೆ ಕೊಡಲಾಗುವುದು ಎಂದು ನಿಗದಿಮಾಡಲಾಯಿತು.

ಆದರೂ ಕೆರೆ ದುರಸ್ತಿಯ ಸ್ಥಿತಿ ಅಷ್ಟೇನೂ ಪ್ರೋತ್ಸಾಹದಾಯಕವಾಗಲಿಲ್ಲ. ಆದ್ದರಿಂದ ೧೮೬೩ರ ಘೋಷಣೆಗೆ ಅನುಸಾರವಾಗಿ ನಿರ್ಮಿತವಾದ ಇಲ್ಲವೆ ದುರಸ್ತಿಯಾದ ಕೆರೆಗಳ ಬಗ್ಗೆ ತರಿ ಕಂದಾಯದ ನಾಲ್ಕನೆಯ ಒಂದು ಭಾಗದ ರಿಯಾಯಿತಿಯನ್ನು ಖಾಯಂ ರಿಯಾಯಿತಿಯಾಗಿ ನೀಡಲಾಗುವುದು ಎಂದು ೧೮೮೪ ರಲ್ಲಿ ಸಾರಲಾಯಿತು.

ಭೂ ಹಿಡುವಳಿದಾರರಿಂದ ಕೆರೆಗಳ ಸಂರಕ್ಷಣೆ :

ಈ ಮಧ್ಯೆ ೧೮೭೩ರಲ್ಲಿ ಸಂಸ್ಥಾನದಲ್ಲಿ ಇದ್ದ ಸಾವಿರಾರು ಕೆರೆಗಳ ದುರಸ್ತಿ ಹಾಗೂ ಸಂರಕ್ಷಣೆಯನ್ನು ವಹಿಸಿಕೊಳ್ಳುವುದು ಸರ್ಕಾರಕ್ಕೆ ಅಸಾಧ್ಯ ಎಂದು ತಿಳಿದು ಬಂದಿತು. ಅಂತೆಯೇ ಯಾವ ಕೆರೆಗಳು ಆಗಲೇ ದುರಸ್ತಿ ಸ್ಥಿತಿಯಲ್ಲಿ ಇದ್ದವೊ ಅಥವಾ ಅವಶ್ಯ ಮಟ್ಟಕ್ಕೆ ಜೀರ್ಣೋದ್ಧಾರ ಮಾಡಲ್ಪಟ್ಟಿದ್ದವೋ ಅಂಥ ಕೆರೆಗಳನ್ನು ಹಳ್ಳಿಯವರಿಗೆ ವಹಿಸುವುದು ಅಗತ್ಯ ಎಂದು ಭಾವಿಸಲಾಯಿತು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲವು ನಿಯಮಗಳನ್ನು ಘೋಷಿಸಲಾಯಿತು.[೮೯]

ಈ ನಿಯಮಗಳನ್ನು ಜಾರಿಮಾಡುವುದನ್ನು ಆಯಾ ಕೆರೆಗಳಿಗೆ ಸಂಬಂಧಿಸಿದ ಹಳ್ಳಿಗಳ ಪಟೇಲರಿಗೆ ವಹಿಸಲಾಯಿತು. ಈ ಕೆಲಸದಲ್ಲಿ ಆಯಾ ಹೋಬಳಿಯ ಶೇಕ್ದಾರನು ಪಟೇಲನಿಗೆ ಸಹಾಯ ಮಾಡಬೇಕಾಗಿತ್ತು. ಕೆರೆಗಳ ಸಂರಕ್ಷಣೆಗೆ ಹೊಣೆಗಾರರೆನೆಸಿಕೊಂಡವರು ಹಳ್ಳಿಯಲ್ಲಿನ ಖುಷ್ಕಿ ಅಥವಾ ತರಿ ಭೂಮಿ ಉಳ್ಳಂಥ ಪಟ್ಟೆದಾರರು, ಶಿಖ್ಮಿದಾರರು, ಇನಾಂದಾರರು ಮತ್ತು ಕೆರೆಯಿಂದ ಪ್ರತ್ಯಕ್ಷವಾಗಿಯೋ ಪರೋಪಕ್ಷವಾಗಿಯೋ ಪ್ರಯೋಜನ ಪಡೆಯುತ್ತಿದ್ದ ಇವರೆಲ್ಲರೂ, ಅಂಥ ಪ್ರತಿಯೊಬ್ಬ ವ್ಯಕ್ತಿಯೂ ಹಳ್ಳಿಗೆ ಸೇರಿದ ತನ್ನ ಭೂಮಿ ಮನೆ ಅಥವಾ ಇತರ ಆಸ್ತಿಗಳ ಮೇಲೆ ಸರ್ಕಾರಕ್ಕೆ ಸಲ್ಲಿಸುತ್ತಿದ್ದ ಕಂದಾಯದ ಮೊಬಲಗನ್ನು ಅನುಸರಿಸಿ ವ್ಯಕ್ತಿಗಳು ಮಾಡಬೇಕಾಗಿದ್ದ ಕೆಲಸದ ಪ್ರಮಾಣವನ್ನು ಪಟೇಲ ಮತ್ತು ಶೇಕ್ದಾರರು ತೀರ್ಮಾನಿಸಬೇಕಾಗಿತ್ತು.

ಕೆರೆಗಳಿಗೆ ಮತ್ತು ಅವುಗಳ ಕೆಳಗಿನ ಉಪಕಾರ್ಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಣ್ಣು ಕೆಲಸ ಹಾಗೂ ಎಲ್ಲ ಬಗೆಯ ದುರಸ್ತಿ, ಇವು ಕೆರೆ ಸಂರಕ್ಷಣೆಯಲ್ಲಿ ಸೇರುತ್ತಿದ್ದ ಕಾರ್ಯಗಳು. ಗೊತ್ತು ಮಾಡಿದ ಅವಧಿಗಳಲ್ಲಿ ಗ್ರಾಮಾಧಿಕಾರಿಗಳು ಕೆಲಸಗಳನ್ನು

ನಡೆಸಬೇಕಾದುದು ನಿಯಮವಾಗಿತ್ತು. ಆದರೆ ಅಗತ್ಯವಾದಾಗ ಒಡನೆಯೆ ದುರಸ್ತಿ ಮಾಡಬೇಕಾಗಿತ್ತು. ಯಾವುದೇ ವ್ಯಕ್ತಿ ತನ್ನ ಹೊಣೆಯನ್ನು ನಿರ್ವಹಿಸದೆ ಹೋದಲ್ಲಿ ಆತ ಮಾಡಬೇಕಾಗಿದ್ದ ಕಾರ್ಯಭಾಗವನ್ನು ಕೂಲಿಕೊಟ್ಟು ಮಾಡಿಸಲು ಗ್ರಾಮಾಧಿಕಾರಿಗಳಿಗೆ ಅಧಿಕಾರವಿತ್ತು. ಅದು ಕಡ್ಡಾಯವೂ ಆಗಿತ್ತು. ಆ ಕೂಲಿ ವೆಚ್ಚವನ್ನು ಕೆಲಸ ಬಾಕಿ ಉಳಿಸಿದವನಿಂದ ಕಂದಾಯ ಸುಸ್ತಿಯಂತೆ ವಸೂಲು ಮಾಡಬೇಕಾಗಿತ್ತು.

ಪ್ರತಿಯೊಂದು ಕೆರೆಯನ್ನು, ಅದಕ್ಕೆ ನಿಗದಿಮಾಡಿದ ಮಟ್ಟಕ್ಕೆ ಸರಿಯಾಗಿ ಸಂರಕ್ಷಣೆ ಮಾಡುವಂತೆ ನೋಡಿಕೊಳ್ಳುವುದು ಪಟೇಲನ ಆದ್ಯ ಜವಾಬ್ದಾರಿಯಾಗಿತ್ತು. ಇದು ನಡೆದಿದೆಯೇ ಎನ್ನುವುದನ್ನು ಪ್ರತಿಯೊಂದು ಕೆರೆಯನ್ನು ಅಮಲದಾರನೇ ಖುದ್ದಾಗಿ ತಪ್ಪದೇ ವಿಶೇಷವಾಗಿ ತನಿಖೆ ಮಾಡಬೇಕಾಗಿತ್ತು. ಹಾಗಿಲ್ಲವಾದರೆ ಅಮಲದಾರನು ಸದರಿ ಕೆಲಸಕ್ಕೆ ವಿಶೇಷವಾಗಿ ನಿಯುಕ್ತಿಗೊಳಿಸಿದ ಪೇಷ್ಕಾರ, ಶಿರಸ್ತೇದಾರ ಅಥವಾ ತಾಲ್ಲೂಕು ಮೇಸ್ತ್ರಿ ತನಿಖೆ ಮಾಡಬೇಕಾಗಿತ್ತು. ಅಂಥ ತನಿಖೆಯ ಫಲಿತಾಂಶವನ್ನು ನಿಗದಿಯಾದ ದಫ್ತರದಲ್ಲಿ (ರಿಜಿಸ್ಟರ್) ದಾಖಲು ಮಾಡಬೇಕಾಗಿತ್ತು. ತನಿಖೆಯಲ್ಲಿ ಏನಾದರೂ ಕೆರೆ ಸರಿಯಾದ ಮಟ್ಟಕ್ಕೆ ಇಲ್ಲದೆ ಇದ್ದುದು ಕಂಡುಬಂದಲ್ಲಿ ಏಪ್ರೀಲ್‌ಗೆ ಮೊದಲು ಎರಡನೆಯ ತನಿಖೆ ಮಾಡಬೇಕಿತ್ತು. ಆ ವೇಳೆಗೆ ದುರಸ್ತಿ ಕಾರ್ಯವನ್ನು ಮಾಡಿರಬೇಕಾಗಿತ್ತು. ಅದು ತಪ್ಪಿದಲ್ಲಿ ಅಮಲದಾರನೇ ದುರಸ್ತಿ ಕಾರ್ಯವನ್ನು ಮಾಡಿಸಿ, ವೆಚ್ಚವನ್ನು ತಮ್ಮ ಕೆಲಸ ನಿರ್ವಹಿಸದ ಬಾಕಿದಾರರಿಂದ ಕಂದಾಯ ಬಾಕಿಯಂತೆ ವಸೂಲು ಮಾಡಬೇಕಾಗಿತ್ತು.[೬೦]

ದಫ್ತರದ ದ್ವಿಪ್ರತಿಯೊಂದನ್ನು ಅಮಲಾದಾರ ಜಿಲ್ಲಾ ಕಂದಾಯ ಅಧಿಕಾರಿಗೆ ಜೂನ್ ಒಂದರೊಳಗಾಗಿ ರವಾನಿಸಬೇಕಾಗಿತ್ತು. ಆ ತಾರೀಖಿನ ವೇಳೆಗೆ ಎಲ್ಲಾ ಕೆರೆಗಳ ದುರಸ್ತಿ ಕಾರ್ಯವೂ ಪೂರೈಸಿರಬೇಕಾಗಿತ್ತು.

ಆಯಾ ಉಪವಿಭಾಗಗಳ ಸಹಾಯಕ ಕಮೀಷನರುಗಳು ಜಮಾಬಂದೀ ಹಾಗೂ ಇತರ ಸೂಕ್ತ ಸಂದರ್ಭಗಳಲ್ಲಿ ಆದಷ್ಟು ಸಂಖ್ಯೆ ಕೆರೆಗಳನ್ನು ಖುದ್ದಾಗಿ ತನಿಖೆ ಮಾಡಿ ವರದಿಯ ನಿಖರತೆಯನ್ನು ಪರೀಕ್ಷೆ ಮಾಡಿ ಕೆರೆ ದಫ್ತರದಲ್ಲಿ ತನಿಖೆಯ ತಾರೀಖನ್ನು ತಮ್ಮ ಟಿಪ್ಪಣಿಗಳನ್ನು ದಾಖಲು ಮಾಡಬೇಕಾಗಿತ್ತು. ಅವರ ತನಿಖೆಯ ಫಲಿತಾಂಶವು ಡೆಪ್ಯೂಟಿ ಕಮೀಷನರಿಗೆ ವರದಿ ಮಾಡಬೇಕಾಗಿತ್ತು.

ಡೆಪ್ಯೂಟಿ ಕಮೀಷನರ್ ಇಂಥದೇ ಕೆಲಸಗಳನ್ನು ಮಾಡಬೇಕಾಗಿತ್ತು. ಈ ನಿಯಮಗಳನ್ನು ಪೂರ್ಣವಾಗಿ ಹಾಗೂ ಜಾಣ್ಮೆಯಿಂದ ಪಾಲಿಸಲಾಗಿದೆ. ಕೇವಲ ಕಾಟಾಚಾರವಾಗಿ ಅಲ್ಲ ಎಂಬುದನ್ನು ನೋಡಿಕೊಳ್ಳುವುದಕ್ಕೆ ಆತ ಜವಾಬ್ದಾರನಾಗಿರುತ್ತಿದ್ದ.

ಲೋಕೋಪಯೋಗಿ ಇಲಾಖೆಯ ಇಂಜನೀಯರ್ ದರ್ಜೆಯ ಅಧಿಕಾರಿ, ನಡೆಸಲು ಆಜ್ಞೆ ಮಾಡಿದ ಯಾವುದೇ ಕರೆಯ ಏನೇ ಕೆಲಸವನ್ನು ಅದೇ ಅಧಿಕಾರಿಯ ಜವಾಬ್ದಾರಿಯ

ಮೇಲೆಯೇ ನಡೆಸಬೇಕಾಗಿತ್ತು ಸದರಿ ಕಾರ್ಯದ ಯಾವುದೇ ಭಾಗ ರೈತರ ಕರ್ತವ್ಯ ಭಾಗವಾಗಿರದೆ ಇದ್ದಲ್ಲಿ ಅದರ ಮಂಜೂರಾತಿಯ ಇಸ್ತಿಹಾರವನ್ನು (ನೋಟಿಫಿಕೇಶನ್) ಅಮಲದಾರ ಸೂಕ್ತ ಮಾರ್ಗದ್ವಾರಾ ಸಲ್ಲಿಸಬೇಕಾಗಿತ್ತು. ಕೆಳದರ್ಜೆಯ ಒಬ್ಬ ಲೋಕೋಪಯೋಗಿ ಅಧಿಕಾರಿಗೆ ಯಾವುದೇ ವಿಳಂಬವಿಲ್ಲದೇ ವರದಿ ಮಾಡಬೇಕಾಗಿತ್ತು. ತುರ್ತು ಪರಿಸ್ಥಿತಿಯಲ್ಲಿ ಅಮಲದಾರನಿಗೂ ನೇರವಾಗಿ ವರದಿ ಮಾಡಬೇಕಾಗಿತ್ತು. ಸಹಾಯಕ ಕಮೀಷನರ ತನಿಖಾ ವರದಿ ಈ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕಾಗಿತ್ತು.

ಅ) ಏರಿ ಮಟ್ಟ ಸಮವಾಗಿದೆಯೆ, ಪೂರಾ ಅಗಲವಾಗಿದೆಯೆ, ಕಾಡು ಗಿಡ ಕಳೆಗಳು ಇರಲಿಲ್ಲವೆ, ಡೊಗರುಗಳು ಇರಲಿಲ್ಲವೆ.

ಆ) ಇಳಿಜಾರು ಪೂರ್ಣವಾಗಿದೆಯೆ, ಬಂಡಿಜಾಡಿನಲ್ಲಿ ಮುಕ್ತವಾಗಿದೆಯೆ, ಹುಲ್ಲು ಹಾಸು ಚೆನ್ನಾಗಿದೆಯೆ ಅಥವಾ ಚೆನ್ನಾಗಿಲ್ಲವೆ

ಇ) ಹೊರ ಮುಖದ ಕಲ್ಲು ಕಟ್ಟಡ ಸುಸ್ಥಿತಿಯಲ್ಲಿದೆಯೇ

ಈ) ತೂಬು ಒಳ್ಳೆಯ ಸ್ಥಿತಿಯಲ್ಲಿದೆಯೆ ಅಥವಾ ಒಳ್ಳೆಯ ಸ್ಥಿತಿಯಲ್ಲಿಲ್ಲವೆ.

ಉ) ಕೋಡಿ ಪೂರ್ಣವಾಗಿ ಭದ್ರವಾಗಿದೆಯೆ, ರಂಧ್ರಗಳಿಲ್ಲದೆ ಇದೆಯೆ.

ಅನೇಕ ಕೆರೆಗಳನ್ನು ಅಗತ್ಯವಾದ ಮಟ್ಟಕ್ಕೆ ದುರಸ್ತಿ ಮಾಡಿ ಸುಸ್ಥಿತಿಗೆ ತಂದು ಮುಂದಿನ ರಕ್ಷಣೆಗೆ ರೈತರಿಗೆ ವಹಿಸಿಕೊಡಬೇಕೆಂದು ಸರ್ಕಾರ ಮಾಡಿದ ಪ್ರಯತ್ನಗಳು ಎಷ್ಟೋ ಇದ್ದರೂ ಕೆರೆಗಳ ಸಂರಕ್ಷಣೆಯನ್ನು ರೈತರು ಅಲಕ್ಷ್ಯ ಮಾಡಿದರು. ಸಂರಕ್ಷಣಾ ನಿಯಮಗಳನ್ನು ಜಾರಿಗೊಳಿಸುವುದರಲ್ಲಿ ಕಂದಾಯ ಅಧಿಕಾರಿಗಳು ವಿಫಲರಾದರು. ಈ ಅಲಕ್ಷ್ಯದ ಸಲುವಾಗಿ ಕೆರೆಗಳನ್ನು ಪೂರ್ಣ ವಿನಾಶದಿಂದ ಉಳಿಸಲು ಸರ್ಕಾರವೇ ಜೀರ್ಣೋದ್ಧಾರ ಮಾಡುವುದು ಅಗತ್ಯವಾಯಿತು. ಅನೇಕ ವರ್ಷಗಳಿಂದಲೂ ಸಂರಕ್ಷಣೆಯ ಒಟ್ಟು ಅಲಕ್ಷ್ಯದ ಫಲವಾಗಿ ಅಗತ್ಯವಾದ ಮಣ್ಣು ಕೆಲಸದ ವೆಚ್ಚಕ್ಕೆ ರೈತರು ಹೊಣೆಗಾರರೇ? ಎಂಬ ಪ್ರಶ್ನೆಗಳು ಎದ್ದವು.

ಇಡೀ ವಿಷಯದ ಬಗ್ಗೆ ತೃಪ್ತಿಕರವಾಗಿ ನಿರ್ವಹಿಸಲು ಸರ್ಕಾರಕ್ಕೆ ಸಹಾಯಕವಾಗಲೆಂದು ಈ ಎಲ್ಲ ಅಂಶಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಸಮಿತಿಯ ವರದಿಯ ಆಧಾರದ ಮೇಲೆ ೧೯೦೪ ರಲ್ಲಿ ಮೈಸೂರು ಸರ್ಕಾರ ಹೊರಡಿಸಿದ ಆಜ್ಞೆಯಲ್ಲಿ ಈ ಕೆಳಕಾಣಿಸಿರುವ ಕ್ರಮಗಳನ್ನು ಸಲಹೆ ಮಾಡಲಾಗಿತ್ತು.

ಅ) ಸಂರಕ್ಷಣೆಯನ್ನು ಅಲಕ್ಷಿಸಿದ್ದರಿಂದ ಹಾಳುಬಿದ್ದಿರುವ ಕೆರೆಗಳ ದುರಸ್ತಿ ಬಗ್ಗೆ ರೈತರ ಹೊಣೆಗಾರಿಕೆಯನ್ನು ಕೆರೆಯ ಅಚ್ಚುಕಟ್ಟಿನ ಭೂಮಿಯ ಸಾಲಿಯಾನ ಕಂದಾಯಕ್ಕೆ ಮಿತಗೊಳಿಸಬೇಕು.

ಆ) ಮಣ್ಣು ಕೆಲಸವನ್ನು ರೈತರು ಮಾಡಬೇಕು. ಕಲ್ಲು ಕಟ್ಟಡದ ಕೆಲಸವನ್ನು ಸರ್ಕಾರ ಮಾಡಿಸಬೇಕು ಎನ್ನುವುದು ಸಾಮಾನ್ಯ ನಿಯಮ, ಆದರೂ ಆಗಬೇಕಾದ ಮಣ್ಣು

ಕೆಲಸ ರೈತರ ಮೇಲೆ ಅತಿಯಾದ ಭಾರವಾಗುವಷ್ಟು ಇದೆ ಎನಿಸಿದಲ್ಲಿ ಡೆಪ್ಯೂಟಿ ಕಮೀಷನರರು ಸರ್ಕಾರದ ಒಪ್ಪಿಗೆ ಪಡೆದು ನಿಯಮವನ್ನು ತನ್ನ ವಿಶೇಷ ವಿವೇಚನೆಯ ಮೇರೆಗೆ ಸಡಿಲಿಸಬಹುದು.

ಇ) ೩೦೦ ಹಾಗೂ ಕಡಿಮೆ ರೂಪಾಯಿ ಅಚ್ಚುಕಟ್ಟು ಉಳ್ಳ ಕೆರೆಯ ಅಭಿವೃದ್ಧಿಗೆ ಹೆಚ್ಚು ಅನುದಾನ.

ಈ) ೧೦೦ ರೂ ಅಚ್ಚು ಕಟ್ಟಿನ ಕೆರೆ ಹಾಗೂ ೧೦೦ ರೂ ಗಿಂತ ಹೆಚ್ಚು ಅಚ್ಚುಕಟ್ಟಿನ ಕೆರೆ ಎಂಬ ವ್ಯತ್ಯಾಸವನ್ನು ತೆಗೆದು ಹಾಕಿ, ಸಣ್ಣ ನೀರಾವರಿ ಕೆರೆಗಳು ಎಂದು ವರ್ಗೀಕರಿಸಲಾದ ಎಲ್ಲವನ್ನು ಒಂದೇ ರೀತಿಯಲ್ಲಿ ಪರಿಗಣಿಸಲಾಯಿತು.

ರೈತರು ಮಾಡಬೇಕಾದ ಸಂರಕ್ಷಣಾ ಕಾರ್ಯಗಳನ್ನು ಕೆಳಕಾಣಿಸಿರುವಂತೆ ಸ್ಪಷ್ಟವಾಗಿ ನಿಯಮಿಸಲಾಯಿತು.

ಅ) ಏರಿಯನ್ನು ನಿರ್ದಿಷ್ಟ ಪ್ರಮಾಣದ ಮಟ್ಟದಲ್ಲಿ ಹಾಗೂ ಸೂಚಿತವಾದ ಇಳಿಜಾರು ಇರುವಂತೆ ಇರಿಸಬೇಕು.

ಆ) ಮಳೆಯಿಂದ ಹಾಗೂ ದನಕರುಗಳ ತುಳಿತದಿಂದ ಕೆರೆ ಏರಿಯ ಮೇಲೆ ಹಾಗೂ ನಾಲೆಗಳ ದಂಡೆಯ ಮೇಲೆ ಉಂಟಾಗಿರುವ ಕೊರಕಲು ಅಥವಾ ಇತರ ಏರು ಪೇರುಗಳನ್ನು ತುಂಬಿ ಸರಿಮಾಡಬೇಕು.

ಇ) ಏರಿಗಳ ಮೇಲೆ ಪಾಪಾಸುಕಳ್ಳಿ ಮುಂತಾದ ಕಾಡುಗಿಡಗಳು, ಅಪಾಯಕರ ಕಳೆಗಳು ಬೆಳೆಯುವುದನ್ನು ತೆಗೆದು ಹಾಕಬೇಕು.

ಈ) ಕೆರೆ ಏರಿಗಳ ಮೇಲಿನ ಕುರುಚುಲು ಗಿಡಗಳು ಅಪಾಯಕಾರಿಯಾಗಿದ್ದಲ್ಲಿ ತೆಗೆದು ಹಾಕಬೇಕು.

ಉ) ಕೆರೆಯ ತೂಬುಗಳಲ್ಲಿ ಹಾಗೂ ಅಲ್ಲಿಂದ ಹೊರಡುವ ಎಲ್ಲ ಕಾಲುವೆಗಳಲ್ಲಿ ನೀರು ಹರಿಯಲು ಅಡ್ಡವಾಗಿರುವ ಪದಾರ್ಥ ಸಂಗ್ರಹವನ್ನು ತೆಗೆದು ಹಾಕಬೇಕು. ಸಣ್ಣ ಪುಟ್ಟ ಹಾಗೂ ಶಾಖಾ ನಾಲೆಗಳ ಮಣ್ಣು, ಕಟ್ಟೆಗಳನ್ನು ಚೊಕ್ಕಟಮಾಡಿ ಸರಿಪಡಿಸಬೇಕು.

ಊ) ಕೆರೆಗೆ ನೀರು ತರುವ ತೊರೆಗಳನ್ನು ಸುಸ್ಥಿತಿಯಲ್ಲಿ ಇಟ್ಟಿರಬೇಕು.

ಋ) ಮಳೆಗಾಲದಲ್ಲಿ ಎಲ್ಲಾ ಕೆರೆಗಳ ಏರಿಗಳ ಮೇಲೂ ನಿಗಾ ಇಟ್ಟಿರಬೇಕು. ನೀರಿನ ಅಲೆಗಳ ಹೊಡೆತಕ್ಕೆ ಸಿಕ್ಕಿದ ಏರಿಯ ಭಾಗಗಳಲ್ಲಿ ಹುಲ್ಲು ಹಾಸು ಹಾಕಬೇಕು. ತೂಬುಗಳನ್ನು ತೆಗೆಯುವುದಕ್ಕೂ ಮುಚ್ಚುವುದಕ್ಕೂ ಸಹಾಯವಾಗುವಂತೆ ಇಟ್ಟಿರಬೇಕು

ಎ) ಬಿರುಕು ಮತ್ತಿತರ ಆಕಸ್ಮಿಕ ಅನಾಹುತಗಳನ್ನು ತಡೆಯಲು ಎಲ್ಲ ಸಣ್ಣ ಪುಟ್ಟ ಕೆಲಸ ಮಾಡಬೇಕು.

ನೀರು ಒದಗಿಸುವ ಹಾಗೂ ನೀರು ಹಂಚಿಕೆಯ ನಾಲೆಗಳ ಉಪಕಾರ್ಯಗಳ ಸ್ಥಿತಿ ಕುರಿತಂತೆಯೂ ಒಂದು ಹೆಚ್ಚುವರಿ ಕೆಲಸವನ್ನು ತನಿಖಾ ವರದಿಯಲ್ಲಿ ಸೇರಿಸಬೇಕು. (ಆದರೆ ಕೆರೆಯ ಅಂಗಳದಿಂದ ಹೂಳನ್ನು ತೆಗೆಯುವ ಬಗ್ಗೆ ಯಾವ ಸೂಚನೆಯೂ ಈ ನಿಯಮಾವಳಿಯಲ್ಲಿ ಕಾಣಸಿಗುವುದಿಲ್ಲ. ಇದನ್ನು ಅಲಕ್ಷಿಸಿರುವಂತೆ ತೋರುತ್ತದೆ.

ಕೆರೆ ಪಂಚಾಯಿತಿ ಶಾಸನ–೧೯೧೧ :

ಈ ನಿಯಮಗಳಿದ್ದರೂ ಹಳ್ಳಿಯವರಲ್ಲಿ ಸಾಮುದಾಯಿಕ ಭಾವನೆ ಮಾಯವಾಗಿದ್ದರಿಂದ ಹಾಗೂ ನಿಯಮಗಳನ್ನು ಜಾರಿ ಮಾಡಲು ನಿಯುಕ್ತರಾಗಿದ್ದ ಅಧಿಕಾರಿಗಳ ಅಲಸ್ಯದಿಂದ ಕೆರೆಗಳ ಸಂರಕ್ಷಣೆ ಅಲಕ್ಷ್ಯಕ್ಕೆ ಒಳಗಾದುದು ಗಮನಕ್ಕೆ ಬಂತು. ತಮ್ಮ ಕೆರೆಯ ಸಂರಕ್ಷಣೆಗೆ ಬೇಕಾದ ಕ್ರಮಗಳಲ್ಲಿ ಹಳ್ಳಿಯ ಜನರ ಸಹಕಾರವನ್ನು ಪಡೆಯಲು ಅವರ ಮಾತಿಗೂ ಅವಕಾಶ ಕೊಡುವುದು, ಆ ಉದ್ದೇಶಕ್ಕಾಗಿ ಗೊತ್ತು ಮಾಡಿ ಇರಿಸಲಾದ ಹಣವನ್ನು ವ್ಯಯಿಸಿ ಕೆಲಸವನ್ನು ಮಾಡಲು ಅಧಿಕಾರ ನೀಡುವುದು ಇದಕ್ಕೆ ಪರಿಹಾರ ಎಂದು ಸರ್ಕಾರ ಭಾವಿಸಿತು. ಇದರಿಂದ ಈ ಕೆಲಸ ಸರ್ಕಾರಕ್ಕೆ ಮಾತ್ರ ಕಾಳಜಿ ಇರುವಂಥದಲ್ಲ ಎಂದು ಆ ಜನ ಭಾವಿಸಿಯಾರು. ಈ ಉದ್ದೇಶದಿಂದ ಸರ್ಕಾರ ೧೯೧೧ ರಲ್ಲಿ ಕೆರೆ ಪಂಚಾಯಿತಿ ಶಾಸನವನ್ನು ಮಾಡಿತು.[೨೭]

ಈ ಶಾಸನದ ಪ್ರಕಾರ ಯಾವುದೇ ಹಳ್ಳಿಯಲ್ಲಿ ಕೆರೆ ಕೆಳಗಿನ ತರಿ ಭೂಮಿಯಲ್ಲಿ ಅರ್ಧಕ್ಕೆ ಕಡಿಮೆ ಇಲ್ಲದಷ್ಟು ಒಟ್ಟು ಹಿಡುವಳಿ ಉಳ್ಳಂಥ ರೈತರ ಪೈಕಿ ಮೂರನೆಯ ಎರಡಕ್ಕೆ ಕಡಿಮೆ ಇಲ್ಲದಷ್ಟು ಮಂದಿ ಒಪ್ಪಿದಲ್ಲಿ ಅಲ್ಲಿ ಒಂದು ಕೆರೆ ಪಂಚಾಯಿತಿಯನ್ನು ರಚಿಸತಕ್ಕದ್ದು. ಪಂಚಾಯಿತಿಯಲ್ಲಿ ಹಳ್ಳಿಯ ಪಟೇಲ, ಶ್ಯಾನುಭೋಗ ಹಾಗೂ ರೈತರಿಂದ ಆರಿಸಲಾದ ಸುಮಾರು ಮೂವರು ಅಥವಾ ಹೆಚ್ಚಿಗೆ ಸದಸ್ಯರು ಇರತಕ್ಕದ್ದು. ಚುನಾಯಿತ ಸದಸ್ಯರಲ್ಲಿ ನಾಲ್ಕರಲ್ಲಿ ಒಂದರಷ್ಟು ಮಂದಿ, ತರಿ ಅಥವಾ ಬಾಗಾಯತು ಜಮೀನು ಉಳ್ಳವರು ಆಗಿರತಕ್ಕದ್ದು. ಚುನಾಯಿತ ಸದಸ್ಯರ ಅಧಿಕಾರದ ಅವಧಿ ಮೂರುವರ್ಷ. ಹಳ್ಳಿಯ ಪಟೇಲನೇ ಪಂಚಾಯಿತಿಯ ಅಧ್ಯಕ್ಷ.

ಪಂಚಾಯಿತಿ ಕೆಳಕಾಣಿಸಿರುವ ಬಾಬುಗಳಿಂದ ಆದ ನಿಧಿಯನ್ನು ನಿಯಂತ್ರಿಸತಕ್ಕದ್ದು.

ಅ) ತಮಗೆ ವಹಿಸಿದ ಕೆಲಸವನ್ನು ನಿರ್ವಹಿಸಲು ವಿಫಲರಾದ ಅಥವಾ ತಮ್ಮ ಪಾಲಿನ ಶ್ರಮವನ್ನು ಹಣ ಪಾವತಿಯಾಗಿ ಪರಿವರ್ತಿಸಲು ಬಯಸುವ ರೈತರಿಂದ ವಸೂಲಿ ಮಾಡಿದ ಮೊಬಲಗು.

ಆ) ಕೆರೆಯಲ್ಲಿ ಮೀನು ಹಿಡಿಯುವ ಹಕ್ಕು, ಕೆರೆ ಅಂಗಳದಲ್ಲಿ ದನಕರುಗಳನ್ನು ಮೇಯಿಸುವ ಹಕ್ಕು, ಕೆರೆಯ ಏರಿಯ ಮೇಲಿನ ಹುಲ್ಲನ್ನು ಕೊಯ್ದು ಒಯ್ಯುವ ಹಕ್ಕು ಹಾಗೂ ಕೆರೆಯಲ್ಲಿ ಅದರ ಏರಿಯಲ್ಲಿ ಇರುವ ಮರಗಳ ಉತ್ಪನ್ನವನ್ನು

ಒಯ್ಯುವ ಹಕ್ಕು ಇವುಗಳ ಬಿಕರಿಯಿಂದ ಬಂದ ಮೊಬಲಗು.

ಇ) ಕೆರೆ ಅಂಗಳದಲ್ಲಿ ತಾತ್ಕಾಲಿಕವಾಗಿ ಅಲ್ಪಕಾಲಿನ ಬೆಳೆಗಳನ್ನು ಬೆಳೆಯುವದಕ್ಕೆ ನೀಡುವ ಅವಕಾಶ ಪಡೆಯುವ ಬಾಡಿಗೆ ಹಣ ಅಥವಾ ಉತ್ಪನ್ನದ ಪಾಲು.

ಈ) ಸರ್ಕಾರ ನೀರಾವರಿ ಸುಂಕನಿಧಿಯಿಂದ ನೀಡುವ ಅನುದಾನ.

ಉ) ಪಂಚಾಯಿತಿ ಬಯಸಿದಲ್ಲಿ ಕೆರೆಯ ಜೀರ್ಣೋದ್ಧಾರ ಅಥವಾ ಅಭಿವೃದ್ಧಿಗೆ ಸರ್ಕಾರ ಕೊಡುವ ಮುಂಗಡ ಹಣ.

ಊ) ಸರ್ಕಾರ ಪಂಚಾಯಿತಿಗೆ ನೀಡಬಹುದಾದ ಇತರ ಯಾವುದೇ ಅನುದಾನ ಅಥವಾ ಸಾಲ.

ಕೆರೆಯಿಂದ ನೀರು ಬಿಡುವುದನ್ನು ನಿಯಂತ್ರಿಸುವ ಅಧಿಕಾರ ಪಂಚಾಯಿತಿಗೆ ಇತ್ತು. ಅಲ್ಲದೆ ಯಾವುದೇ ವರ್ಷದಲ್ಲಿ ಕೆರೆಯಲ್ಲಿ ಸಿಗುವ ನೀರಿನ ಪ್ರಮಾಣವನ್ನು ನೋಡಿಕೊಂಡು ಎಷ್ಟು ಭೂಮಿಯಲ್ಲಿ ತರಿ ಬೆಳೆ ಇಡಬೇಕು, ಎಷ್ಟರಲ್ಲಿ ಕಬ್ಬು ಬೆಳೆಯಬಹುದು ಎಂಬುದನ್ನು ಗೊತ್ತು ಮಾಡಲು ಪಂಚಾಯಿತಿಗೆ ಅಧಿಕಾರ ನೀಡಲಾಗಿತ್ತು. ಕೆರೆ ಪಂಚಾಯತಿ ಅಸ್ತಿತ್ವಕ್ಕೆ ಬಂದ ಮೇಲೆ ೧೮೭೩ ಹಾಗೂ ೧೯೦೪ ನಿಯಮಗಳಲ್ಲಿ ವಿಧಿಸಿದಂತೆ ಎಲ್ಲ ಕೆರೆಗಳ ಸಂರಕ್ಷಣೆ ಕುರಿತಂತೆ ರೈತರ ಮೇಲೆ ಇದ್ದ ಸಾಂಪ್ರದಾಯಿಕ ಹೊಣೆಗಾರಿಕೆಯ ಚಾಲನೆಯು ಪಂಚಾಯಿತಿಯ ಪಾಲಿಗೆ ಬಂತು.

ಅಡಿಟಿಪ್ಪಣಿ :

೧. ವೆಂಕಟರಂಗೋ ಕಟ್ಟಿ (ಅನು), ಗೆಜೆಟಿಯರ್ ಮುಂಬೈ ಇಲಾಖೆಗೆ ಸೇರಿದ ಕನ್ನಡ ಭಾಗದ್ದು, (ಧಾರವಾಡ, ಬೆಳಗಾವಿ, ಬಿಜಾಪೂರ). ಪ್ರಕಟಣೆ, ಗೌರ್ಮೆಂಟ್ ಸೆಂಟ್ರಲ್ ಬುಕ್ ಡಿಪೋ, ಮುಂಬೈ , ೧೮೯೩, ಪು, ೪೩೩

೨. ಮುನಿಸ್ವಾಮಿ ಆರ್. (ಸಂ) ಕರ್ನಾಟಕ ಗೆಜೆಟಿಯರ್, ಬಿಜಾಪೂರ ಜಿಲ್ಲೆ, ಪು ೧೧೦೬, ೧೯೯೯

೩. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೧೦೭

೪. ಕೋಟೆ ಎಸ್.ಜಿ., ಶಿವಾನಂದ ಪೂಜಾರ, ಮೈನುದ್ದೀನ ರೇವಡಿಗಾರ, ತಮೋಸಿರಿ, ಬಾಗಲಕೋಟ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಶಿರೂರ, ೨೦೧೧, ಪು.೪೧

೫. ದೇವರಕೊಂಡಾರೆಡ್ಡಿ, (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೯ ಬಾಗಲಕೋಟ ಜಿಲ್ಲೆ, ಪ್ರಕಾಶಕರು ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬ ಪು, ೪೪

೬. ದಯಾನಂದ ಯಾವಗಲ್ಲ, ಬಾಗಲಕೋಟ ಪರಿಸರದ ವಾಸ್ತುಶಿಲ್ಪಗಳು , ಬ.ವಿ.ವಿ.ಸಂಘದ ಶ್ರೀ ಬೀಳೂರುಗುರುಬಸವ ವಸ್ತುಸಂಗ್ರಹಾಲಯ, ಪು, ೩೭

೭. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೪೭

೮. ಮುನಿಸ್ವಾಮಿ ಆರ್. ಪೂರ್ವೋಕ್ತ,ಪು. ೧೧೦೭

೯. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟ ಜಿಲ್ಲಾ ಸಂಸ್ಕೃತಿ, ಬಾಗಲಕೋಟ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ನಾಲ್ಕನೇ ಕನ್ನಡಸಾಹಿತ್ಯ ಸಮ್ಮೇಳನ, ಮುಧೋಳ, ೨೦೧೪, ಪು, ೧೩೯

೧೦. ಅದೇ, ಪು

೧೧. ಮಲ್ಲಿಕಾರ್ಜುನ ಹಿರೇಮಠ (ಪ್ರ.ಸಂ.) ಬಾಗಿಲು, ಅಖಿಲ ಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೦, ಪು, ೨೮೫

೧೨. ದಯಾನಂದ ಯಾವಗಲ್ಲ, ಪೂರ್ವೋಕ್ತ, ಪು.೧೦೮

೧೩. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ೧೩, ಶಾಸನ, ಸಂ, ೨೦

೧೪. ದಯಾನಂದ ಯಾವಗಲ್ಲ, ಪೂರ್ವೋಕ್ತ, ಪು.೬೭

೧೫. ಮಲ್ಲಿಕಾರ್ಜುನ ಹಿರೇಮಠ ಪುರ್ವೋಕ್ತ, ಪು. ೨೮೦

೧೬. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು.೧೩

೧೭. ಅದೇ, ಪು, ೩೨, ಶಾಸನ ಸಂ, ೨೦

೧೮. ದಯಾನಂದ ಯಾವಗಲ್ಲ, ಪೂರ್ವೋಕ್ತ, ಪು.೯೬

೧೯. ಮಲ್ಲಿಕಾರ್ಜುನ ಹಿರೇಮಠ, ಪೂರ್ವೋಕ್ತ, ಪು. ೨೮೬

೨೦. ದಯಾನಂದ ಯಾವಗಲ್ಲ, ಪೂರ್ವೋಕ್ತ, ಪು.೮೦

೨೧. ವಿಜಯಕುಮಾರ ಕಟಗಿಹಳ್ಳಿಮಠ, ಪೂರ್ವೋಕ್ತ , ಪು. ೧೩೯

೨೨. ದಯಾನಂದ ಯಾವಗಲ್ಲ, ಪೂರ್ವೋಕ್ತ, ಪು.೮೨

೨೩. ನೀರಾವರಿ ಇಲಾಖೆ ವರದಿ, ೨೦೧೦-೧೧

೨೪. ದಯಾನಂದ ಯಾವಗಲ್ಲ, ಪೂರ್ವೋಕ್ತ, ಪು.೭೪

೨೫. ಮುನಿಸ್ವಾಮಿ, ಆರ್. ಪೂರ್ವೋಕ್ತ, ಪು. ೧೧೨೨

೨೬. ಸಿದ್ಧರಾಜ ಮನ್ನಳ್ಳಿ, ಎಸ್.ಡಿ.ಕೋಟಿ, (ಸಂ) , ಐಹೊಳೆ , (ಪ್ರ) , ಅಧ್ಯಕ್ಷರು ಚಾಲುಕ್ಯ ಉತ್ಸವ ಸಮಿತಿ, ಬಾಗಲಕೋಟ, ೨೦೧೧

೨೭. ನಂದಿಕೋಲಮಠ ಜಿ.ಐ., ಉಮೇಶ ತಿಮ್ಮಾಪೂರ, (ಸಂ), ಕೋಟೆ-ಕಟ್ಟೆ, ಸ್ವಾಗತ ಸಮಿತಿ ಬಾಗಲಕೋಟ, ತಾಲೂಕು ನಾಲ್ಕನೇ ಸಾಹಿತ್ಯ ಸಮ್ಮೇಳನ, ಬೆನಕಟ್ಟಿ, ೨೦೧೪, ಪು, ೧೦

೨೮. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು.೫೨, ಶಾಸನ, ಸಂ.೪೬

೨೯. ಮಲ್ಲಿಕಾರ್ಜುನ ಹಿರೇಮಠ, ಪೂರ್ವೋಕ್ತ, ಪು. ೨೮೫

೩೦. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೪೩೨

೩೧. ಕೊಟೆ ಎಸ್.ಜಿ., ಕೃಷ್ಣಗೌಡರ ಎಸ್ ಬಿ, ಲೋಕಸಿರಿ, ಪ್ರ,ಕನ್ನಡ ಸಾಹಿತ್ಯ ಪರಿಷತು, ಜಿಲ್ಲಾ ಘಟಕ, ಬಾಗಲಕೋಟ, ೨೦೧೦, ಪು, ೧೭

೩೨. ಶ್ರೀ ಸಥನ್ ಬಿ.ಎನ್., ಮೈಸೂರು ಸ್ಟೇಟ್ ಗೆಜಿಟಿಯರ್, ಗೌರ್ಮೆಂಟ್ ಪ್ರೆಸ್ ಬೆಂಗಳೂರು, ೧೯೬೬, ಪು, ೧೦೮

೩೩. ತೊಂಡಿಹಾಳ ಎಸ್.ಬಿ., ಶ್ರೀ ಬನಶಂಕರಿದೇವಿ ಮಹಾತ್ಮೆ, ಪ್ರ, ಪಾರು ಪ್ರಕಾಶನ ಗದಗ-೨೦೧೨, ಪು , ೩೭

೩೪. ಅದೇ , ಪು , ೩೮

೩೫. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು.೧೬೮

೩೬. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೧೨೯

೩೭. ಬಿರದಾರ ಶಂ.ಗು. , ಶಿ.ಸು.ಸಂಗಮೇಶ, ಎನ್.ಜಿ.ಕರೂರ, ರನ್ನಗನ್ನಡಿ, ಅಖಿಲ ಭಾರತ ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮುಧೋಳ, ೧೯೯೫. ಪು, ೩೫

೩೮. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೧೨೯

೩೯. ಅದೆ, ಪು, ೧೦೭೯

೪೦. ಅದೆ, ಪು, ೧೮೩

೪೧. ಸಣ್ಣ ನೀರಾವರಿ ಇಲಾಖೆ ವರದಿ, ೨೦೧೦-೧೧

೪೨. ಬಿರದಾರ ಶಂ.ಗು., ಶಿ.ಸು.ಸಂಗಮೇಶ, ಎನ್.ಜಿ.ಕರೂರ , ರನ್ನಗನ್ನಡಿ, ಅಖಿಲ ಭಾರತ ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮುಧೋಳ-೧೯೯೫. ಪು, ೨೯

೪೩. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೦೩೪

೪೪. ವಿಶ್ವನಾಥ ವಂಶಾಕೃತಮಠ, ಮಲಪಹಾರಿ, ಚಾಲುಕ್ಯ ಉತ್ಸವ ಸಮಿತಿ , ೨೦೦೮, ಪು, ೫೪

೪೫. ಅದೇ, ಪು

೪೬. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೪೨೨, ಶಾಸನ ಸಂ, ೧೦೮

೪೭. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೧೯೫

೪೮. ಅದೇ, ಪು,೪೨೯

೪೯. ಮಾಟೊಳ್ಳಿ ಎಸ್.ಪಿ., ಜಮಖಂಡಿ ಇತಿಹಾಸ ದರ್ಪಣ, ಗೆಳೆಯರ ಬಳಗ, ತುಂಗಳ, ತಾಲೂಕು ಜಮಖಂಡಿ, ೨೦೦೮, ಪು. ೧

೫೦. ಅದೆ. ಪು ೪

೫೧. ಶಂ.ಗು.ಬಿರದಾರ, ಶಿ.ಸು.ಸಂಗಮೇಶ, ಎನ್.ಜಿ.ಕರೂರ , ರನ್ನಗನ್ನಡಿ, ಅಖಿಲ ಭಾರತ ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮುಧೋಳ, ೧೯೯೫ , ಪು ೩೪

೫೨. ಸಿದ್ಧರಾಜ ಮನಹಳ್ಳಿ, ಸಿಡಲಪಡಿ, ಚಾಲುಕ್ಯ ಉತ್ಸವ ಸಮಿತಿ ಬಾಗಲಕೋಟ, ೨೦೦೯, ಪು.೨೭

೫೩. ಮಾಟೊಳ್ಳಿ ಎಸ್.ಪಿ., ಪೂರ್ವೋಕ್ತ, ಪು.೧೭

೫೪. ವಿಶ್ವನಾಥ ವಂಶಾಕೃತಮಠ , ಮಲಪಹಾರಿ, ಚಾಲುಕ್ಯ ಉತ್ಸವ ಸಮಿತಿ , ೨೦೦೮, ಪು. ೭

೫೫. ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೧

೫೬. ಅದೇ, ಪು

೫೭. ವಿಶ್ವನಾಥ ವಂಶಾಕೃತಮಠ, ಪೂರ್ವೋಕ್ತ, ಪು. ೫೯

೫೮. ಅದೇ, ಪು

೫೯. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೧೨೧

೬೦. ಅದೇ, ಪು

೬೧. ಅದೇ, ಪು

೬೨. ಮುನಿಸ್ವಾಮಿ ಆರ್. ಪೂರ್ವೋಕ್ತ, ಪು. ೧೧೩೫

೬೩. ಅದೇ, ಪು

೬೪. ಅದೇ, ಪು, ೧೩೯

೬೫. ಅದೇ, ಪು

೬೬. ವಿಶ್ವನಾಥ ವಂಶಾಕೃತಮಠ, ಪೂರ್ವೋಕ್ತ, ಪು. ೩೫೯

೬೭. ಅದೇ, ಪು

೬೮. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೭೭

೬೯. ಶಿವಾನಂದ ಪೂಜಾರಿ, ಪೂರ್ವೋಕ್ತ ಪು.೪೩

೭೦. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು ೪೨೮, ಶಾಸನ ಸಂ, ೧೧೪

೭೧. ಅದೇ, ಪು, ೧೫೫, ಶಾಸನ ಸಂ, ೧೪

೭೨. ಅದೇ, ಪು, ೪೨೨, ಶಾಸನ ಸಂ, ೧೦೮

೭೩. ಅದೇ, ಪುಟ, ೧೩೮, ಶಾಸನ ಸಂ, ೧೦

೭೪. ಶ್ರೀರಾಮ ಇಟ್ಟಣ್ಣವರ, 'ಹಲಗಲಿ: ಗ್ರಾಮ ಜಾನಪದ', ಲಿಂಗಾಯತ ಸಂಶೋಧನಾ

ಕೇಂದ್ರ ಗ್ರಂಥಾಲಯ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ ೧೯೯೫, ಪು ೯

೭೫. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು.೩೯, ಶಾಸನ ಸಂ, ೧೩

೭೬. ಅದೇ ಪು, ೪೨೮, ಶಾಸನ ಸಂ, ೧೧೪

೭೭. ಅದೇ ಪು, ೧೫೫, ಶಾಸನ ಸಂ, ೧೪

೭೮. ಅದೇ ಪು, ೧೭೫, ಶಾಶನ ಸಂ, ೩೦

೭೯. ಅದೇ ಪು, ೪೩೬, ಶಾಸನ ಸಂ, ೧೧೦

೮೦. ಅದೇ ಪು, ೧೩, ಶಾಸನ ಸಂ, ೨೦

೮೧. ಅದೇ ಪು, ೫೨, ಶಾಸನ ಸಂ, ೪೬

೮೨. ರಾಜಾರಾಂ ಹೆಗಡೆ, ಪೂರ್ವೋಕ್ತ, ಪು.೧

೮೩. ಗೋಪಾಲಸ್ವಾಮಿ, (ಸಂ), ಕರ್ನಾಟಕ ಕೈಪಿಡಿ, ಕರ್ನಾಟಕ ಗೆಜೆಟಿಯರ್ ಇಲಾಖೆ, ಬೆಂಗಳೂರು ,೧೯೯೬, ಪು.೯೫

೮೪. ವಾಸುದೇವನ್ ಸಿ.ಎಸ್., ಹಂಪಿಪರಿಸರದ ಕೆರೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೭೭

೮೫. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು.೩೯, ಶಾಶನ ಸಂ, ೨೨

೮೬. ಅದೇ, ಪು ೧೫೫, ಶಾಸನ ಸಂ, ೧೪

೮೭. ಅದೇ, ಪು ೧೩, ಶಾಸನ ಸಂ, ೨೦

೮೮. ದಿಕ್ಷೀತ ಜಿ.ಎಸ್. ,(ಅನು) ನೀಲಹತ್ತಳ್ಳಿ ಕಸ್ತೂರಿ, ಕರ್ನಾಟಕದಲ್ಲಿ ಕೆರೆ ನೀರಾವರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪು. ೧೨೪

೮೯. ಅದೇ, ಪು, ೧೨೯

೯೦. ಅದೇ, ಪು, ೧೩೦

ಅಧ್ಯಾಯ : ೪

ವಿಜಯನಗರದ ಪೂರ್ವ ಮತ್ತು ನಂತರದ ಕೆರೆಗಳು

ಅಧ್ಯಾಯ-೪

ವಿಜಯನಗರ ಕಾಲದ ಪೂರ್ವ ಮತ್ತು ನಂತರದ ಕೆರೆಗಳು

೪.೧ ವಿಜಯನಗರ ಸಾಮ್ರಾಜ್ಯದ ಪೂರ್ವದ ಕೆರೆಗಳು

ಬಾಗಲಕೋಟೆ ಜಿಲ್ಲೆಯ ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲೇ ನಾನಾ ಸಾಮ್ರಾಜ್ಯದ ಆಡಳಿತದಲ್ಲಿ ಜಿಲ್ಲೆಯ ಹಲವಾರ ಕೆರೆಗಳ ನಿರ್ಮಾಣ ಮಾಡಲಾಗಿತ್ತು. ಅವರು ವಿಭಿನ್ನ ಆಕಾರದ ಸಣ್ಣಮಟ್ಟ ಕೆರೆಗಳನ್ನು ಅಗತ್ಯಕ್ಕೆ ತಕ್ಕಂತೆ ನೀರಿನ ಬಳಕೆ ಮಾಡುವುದರ ಮೂಲಕ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಇದರಲ್ಲಿ ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರ ಕಾಲದಲ್ಲಿ ಕೆರೆಗಳು ಅತಿ ಹೆಚ್ಚು ನಿರ್ಮಾಣಗೊಂಡವು. ಅವು ಈ ಕೆಳಗಿನಂತಿವೆ.

ವಿಜಯನಗರ ಸಾಮ್ರಾಜ್ಯದ ಪೂರ್ವದ ಕೆರೆಗಳು

ಕ್ರ.ಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು
೧	ಅಗಸ್ತ್ಯತೀರ್ಥ ಕೆರೆ	ಬಾದಾಮಿ	ಬಾದಾಮಿ
೨	ಕೆಲವಡಿ ಕೆರೆ	ಕೆಲವಡಿ	ಬಾದಾಮಿ
೩	ತಿಮ್ಮಸಾಗರ ಕೆರೆ	ತಿಮ್ಮಸಾಗರ	ಬಾದಾಮಿ
೪	ಕಟಗೇರಿ ಕೆರೆ	ಕಟಗೇರಿ	ಬಾದಾಮಿ
೫	ಪರ್ವತಿ ಕೆರೆ	ಪರ್ವತಿ	ಬಾದಾಮಿ
೬	ಖಾನಾಪೂರ ಕೆರೆ	ಖಾನಾಪೂರ	ಬಾದಾಮಿ
೭	ಹುಲ್ಲಿಕೇರಿ ಕೆರೆ	ಹುಲ್ಲಿಕೇರಿ	ಬಾದಾಮಿ
೮	ಕೋಟೆಕಲ್ಲ ಕೆರೆ	ಕೋಟೆಕಲ್ಲ	ಬಾದಾಮಿ
೯	ಸೂಳಿಕೇರಿ ಕೆರೆ	ಸೂಳಿಕೇರಿ	ಬಾದಾಮಿ
೧೦	ಬಾಚಿಶೆಟ್ಟಿ ಕೆರೆ	ಶಿರೂರ	ಬಾಗಲಕೋಟ
೧೧	ಪಡಲಗಿ ಕೆರೆ	ಶಿರೂರ	ಬಾಗಲಕೋಟ
೧೨	ಗುಡಗಂಜಿ ಕೆರೆ	ಶಿರೂರ	ಬಾಗಲಕೋಟ
೧೩	ಹಳ್ಳೂರ ಕೆರೆ	ಹಳ್ಳೂರ	ಬಾಗಲಕೋಟ
೧೪	ಬೇವೂರ ಕೆರೆ	ಬೇವೂರ	ಬಾಗಲಕೋಟ
೧೫	ಐಹೊಳೆ ಕೆರೆ	ಐಹೊಳೆ	ಹುನಗುಂದ
೧೬	ಅರಸಿಬೀದಿ ಕೆರೆ	ಅರಸಿಬೀದಿ	ಹುನಗುಂದ
೧೭	ಕೇಸರಬಾವಿ	ಕೇಸರಬಾವಿ	ಹುನಗುಂದ
೧೮	ನಂದವಾಡಗಿ ಕೆರೆ	ನಂದವಾಡಗಿ	ಹುನಗುಂದ
೧೯	ಕೆಲೂರು ಕೆರೆ	ಕೆಲೂರು	ಹುನಗುಂದ
೨೦	ರಟ್ಟಸಮುದ್ರ ಕೆರೆ	ಮಂಟೂರ	ಮುಧೋಳ
೨೧	ಅರಕೇರಿ ಕೆರೆ	ಅರಕೇರಿ	ಬೀಳಗಿ
೨೨	ಜಾನಮಟ್ಟಿ ಕೆರೆ	ಜಾನಮಟ್ಟಿ	ಬೀಳಗಿ
೨೩	ತುಂಗಳ ಕೆರೆ	ತುಂಗಳ	ಜಮಖಂಡಿ
೨೪	ತೇರದಾಳ ಕೆರೆ	ತೇರದಾಳ	ಜಮಖಂಡಿ

೪.೨ ವಿಜಯನಗರ ಕಾಲದ ಕೆರೆಗಳು:

ದಕ್ಷಿಣ ಭಾರತದ ಐತಿಹಾಸಿಕ ಹಿಂದೂ ಸಾಮ್ರಾಜ್ಯವಾದ ವಿಜಯನಗರ ಅರಸು ವೈಭೋಗದ ರಾಜ್ಯಭಾರ ಮಾಡಿ ಪ್ರಜಾ ಕಲ್ಯಾಣಕ್ಕಾಗಿ ಹಾಗೂ ಪ್ರಜೆಗಳ ಸರ್ವತೋಮುಖ ಬೆಳವಣಿಗೆಗಾಗಿ ಮತ್ತು ರಾಜ್ಯದ ಕೃಷಿ, ನೀರಾವರಿ, ಆರ್ಥಿಕ ಸುಧಾರಣೆಗಾಗಿ ಇವರು ಸಾಮ್ರಾಜ್ಯದ ಉದ್ದಗಲಕ್ಕೂ ಹಲವಾರು ಬೃಹತ್ ಆಕಾರದ ಕೆರೆಗಳನ್ನು ನಿರ್ಮಾಣಮಾಡಿ ನೀರಿನ ಮಹತ್ವ ಸಾರುವುದರ ಮೂಲಕ ಕೃಷಿ ಭೂಮಿಗೆ ಹೆಚ್ಚು ನೀರು ಒದಗಿಸಿ ರಾಜ್ಯವನ್ನು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಸಮೃದ್ಧ ಆಡಳಿತ ನಡೆಸಿ ಇದರ ಮೂಲಕ ಕೆರೆಗಳ ನಿರ್ಮಾಣದ ಹಿರಿಮೆ–ಗರಿಮೆಯನ್ನು ಜಾಗತಿಕ ಮಟ್ಟಕ್ಕೆ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕರ್ನಾಟಕ ಚರಿತ್ರೆಯಲ್ಲಿಯೇ ಹೊಯ್ಸಳರ ತರುವಾಯ ಆಡಳಿತಕ್ಕೆ ಬಂದ ವಿಜಯನಗರ ಅರಸರು ಭಾರಿ ಆಣೆಕಟ್ಟು ಮತ್ತು ಕೆರೆಗಳನ್ನು ಕಟ್ಟುವ ಪರಿಣಿತಿಯನ್ನು ಎತ್ತರದ ಶಿಖರಕ್ಕೆ ಒಯ್ದಿದ್ದಾರೆ. ಹಂಪಿಗೆ ನೀರನ್ನು ಒದಗಿಸುವ ಕೆರೆ ಕಟ್ಟೆಗಳು ಇಂದಿಗೂ ನೀರನ್ನು ಒದಗಿಸುತ್ತಿವೆ.

ಬಾಗಲಕೋಟೆ ಜಿಲ್ಲೆಯ ಬಹುಭಾಗವು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿತ್ತು. ಇವರ ಕಾಲದಲ್ಲಿ ಜಿಲ್ಲೆಯ ನಾನಾ ಭಾಗಗಳಲ್ಲಿ ಹಲವಾರು ಪ್ರಾಚೀನ ಕಾಲದ ಕೆರೆಗಳ ದುರಸ್ತಿ ಮಾಡುವುದರ ಜೊತೆಗೆ ಹೆಚ್ಚು ನೀರು ನಿಲ್ಲುವ ದೊಡ್ಡ ದೊಡ್ಡ ಕೆರೆಗಳನ್ನು ನಿರ್ಮಿಸಿ ತಮ್ಮ ಸಾಮ್ರಾಜ್ಯದ ರಾಜಧಾನಿಯಂತೆ ಹಲವಾರು ಕರೆಗಳನ್ನು ನಿರ್ಮಿಸಿ ಕೆರೆಗಳ ಮಹತ್ವ ಸಾರಿದ್ದಾರೆ. ಅವರು ನಿರ್ಮಿಸಿದ ಕೆರೆಗಳ ವಿವರ ಈ ಕೆಳಗಿನಂತಿದೆ.

ವಿಜಯನಗರದ ಕಾಲದ ಕೆರೆಗಳು

ಕ್ರ. ಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು
೧	ಗದ್ದನಕೇರಿ ಕೆರೆ	ಗದ್ದನಕೇರಿ	ಬಾಗಲಕೋಟ
೨	ಭಗವತಿ ಕೆರೆ	ಭಗವತಿ	”
೩	ಜಲಗೇರಿ ಕೆರೆ	ಜಲಗೇರಿ	ಬಾದಾಮಿ
೪	ಮಂಗಳೂರು ಕೆರೆ	ಮಂಗಳೂರು	”
೫	ಚಿಕ್ಕಮಾಗಿ ಕೆರೆ	ಚಿಕ್ಕಮಾಗಿ	ಹುನಗುಂದ
೬	ಹಲಗಲಿ ಕೆರೆ	ಹಲಗಲಿ	ಮುಧೋಳ
೭	ಗದ್ಯಾಳ ಕೆರೆ	ಗದ್ಯಾಳ	ಜಮಖಂಡಿ

೪.೩ ವಿಜಯನಗರ ಕಾಲದ ನಂತರದ ಕೆರೆಗಳು

ಕನ್ನಡ ನಾಡಿನ ಹೆಮ್ಮೆಯ ಸಾಮ್ರಾಜ್ಯವಾದ ವಿಜಯನಗರ ಸಾಮ್ರಾಜ್ಯವು ತಾವು ಹಾಕಿಕೊಟ್ಟ ಕೆರೆಗಳ ನಿರ್ಮಾಣ ಶೈಲಿ ಮತ್ತು ತಂತ್ರಜ್ಞಾನವನ್ನು ಅವರ ನಂತರ ಅಧಿಕಾರಕ್ಕೆ

ಬಂದ ಸಾಮಂತ ಅರಸರು ಅದೇ ಮಾದರಿಯಲ್ಲಿ ಕೆರೆಯನ್ನು ಕಟ್ಟಿಸುವ ಕಲಾ, ಕೌಶಲ್ಯವನ್ನು ಮುಂದುವರೆಸಿಕೊಂಡು ಬಂದರು. ಅದರ ಅಂಗವಾಗಿ ಬಾಗಲಕೋಟ ಜಿಲ್ಲೆಯ ಹಲವಾರು ಭಾಗಗಳಲ್ಲಿ ವಿಜಯನಗರ ಸಾಮ್ರಾಜ್ಯದ ತರುವಾಯ ಅವರು ಸಾಮಂತರು ಕಟ್ಟಿದ ಕೆರೆಗಳು ಕಂಡು ಬರುತ್ತವೆ. ವಿಜಯನಗರ ಸಾಮ್ರಾಜ್ಯದ ಸಾಮಂತರು ಬಾಗಲಕೋಟ ಜಿಲ್ಲೆಯ ಪ್ರದೇಶದಲ್ಲಿ ಹಲವಾರು ಬೃಹತ್ ಆಕಾರದ ಕೆರೆಗಳನ್ನು ನಿರ್ಮಿಸಿ ಅದರ ಮೂಲಕ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಬೇರೆ ಬೇರೆ ಕೈಗಾರಿಕೆ ಪ್ರಗತಿಗೆ ಕಾರಣರಾದರು. ಅಂತಹ ಕೆರೆಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

ಕ್ರ.ಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು
೧	ಮುಚಖಂಡಿ ಕೆರೆ	ಮುಚಖಂಡಿ	ಬಾಗಲಕೋಟ
೨	ಹೊನ್ನಾಕಟ್ಟಿ ಕೆರೆ	ಹೊನ್ನಾಕಟ್ಟಿ	ಬಾಗಲಕೋಟ
೩	ಮನ್ನಿಕಟ್ಟಿ ಕೆರೆ	ಮನ್ನಿಕಟ್ಟಿ	ಬಾಗಲಕೋಟ
೪	ನೀರಬೂದಿಹಾಳ ಕೆರೆ	ನೀರಬೂದಿಹಾಳ	ಬಾದಾಮಿ
೫	ಕೆರೂರ ಕೆರೆ	ಕೆರೂರ	ಬಾದಾಮಿ
೬	ಅಮೀನಗಡ ಕೆರೆ	ಅಮೀನಗಡ	ಹುನಗುಂದ
೭	ದಮ್ಮೂರ ಕೆರೆ	ದಮ್ಮೂರು	ಹುನಗುಂದ
೮	ಕೆಲೂರ ಹೊಸ ಕೆರೆ	ಕೆಲೂರ	ಹುನಗುಂದ
೯	ಮಹಾರಾಣಿ ಕೆರೆ	ಮುಧೋಳ	ಮುಧೋಳ
೧೦	ಅಗಸರ ಕೆರೆ	ಮುಧೋಳ	ಮುಧೋಳ
೧೧	ದತ್ತಾತ್ರೇಯ ಕೆರೆ	ಮುಧೋಳ	ಮುಧೋಳ
೧೨	ರಾಮತೀರ್ಥ ಕೆರೆ	ಜಮಖಂಡಿ	ಜಮಖಂಡಿ
೧೩	ಕಟ್ಟಿ ಕೆರೆ	ಜಮಖಂಡಿ	ಜಮಖಂಡಿ

೪.೩. ಆರ್ಥಿಕ ನೀತಿ

ನಾಡಿನ ಸಾಂಸ್ಕೃತಿ ಅಭಿವೃದ್ಧಿಗೆ ಆರ್ಥಿಕ ವ್ಯವಸ್ಥೆ ಪ್ರಮುಖವಾದದ್ದು[೧] ಮಾನವ ಜನಾಂಗದ ಆರ್ಥಿಕ ಬದುಕು ವೈವಿಧ್ಯತೆಯಿಂದ ಕೂಡಿದೆ. ಇಂತಹ ಬದುಕನ್ನು ಹಲವಾರು ಆರ್ಥಿಕ ಅಂಶಗಳು ಹೇಗೆ ನಿರ್ಧರಿಸಿದವು ಎಂಬುದನ್ನು ಶಾಸನಗಳನ್ನು

ಆಧಾರವಾಗಿರಿಸಿಕೊಂಡು ಇಲ್ಲಿ ಗಮನಿಸಬಹುದು.

ಭೂ ಸಂಪತ್ತು:

ಸಮಾಜದ ಮಹತ್ವದ ಭಾಗವಾದ ಅರ್ಥವ್ಯವಸ್ಥೆಯಲ್ಲಿ ತನ್ನ ವಿಶಾಲ ವ್ಯಾಪ್ತಿ ಮತ್ತು ವೈದ್ಯತೆಯಿಂದಾಗಿ ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಒಂದು ನಾಡಿನ ಜನತೆ ತಮ್ಮ ಜೀವನ ನಿರ್ವಹಣೆ ಮತ್ತು ಆರ್ಥಿಕ ಬದ್ಧತೆಗೆ ಅಲ್ಲಿನ ನಿಸರ್ಗ ಸಂಪತ್ತಾದ ಭೂಮಿಯನ್ನು ಆಶ್ರಯಿಸುವುದು ಕಂಡುಬರುತ್ತದೆ. ಮಣ್ಣು, ನೀರು, ಕೆರೆ-ಕಟ್ಟೆ, ಖನಿಜ, ಅರಣ್ಯ ಸಂಪನ್ಮೂಲಗಳು ಭೂಮಿಯಲ್ಲಿ ಸಮಾವೇಶವಾಗುತ್ತವೆ.

ಭೂ ಪ್ರಕಾರಗಳು:

ವ್ಯವಸಾಯ ಯೋಗ್ಯ ಭೂಮಿಯನ್ನು 'ಕೆಯ್' ಎಂದು ಕರೆಯಲಾಗುತ್ತಿದ್ದರೂ ಮಳೆಯನ್ನು ಅವಲಂಬಿಸಿ ಸಾಗುವಳಿ ಮಾಡುವ ಭೂಮಿಯನ್ನು 'ದೇವ ಮಾತೃಕರೆಂದು' ನದಿ, ಕೆರೆ ಬಾವಿ ಮುಂತಾದವುಗಳನ್ನು ಅವಲಂಬಿಸಿರುವುದನ್ನು ನದಿಮಾತೃಕವೆಂದು ವಿಂಗಡಿಸಲಾಗಿದೆ.

ಮಣ್ಣಿನಗುಣ, ಸ್ವರೂಪ ಮತ್ತು ಭೂ ಲಕ್ಷಣಗಳನ್ನು ಅವಲಂಬಿಸಿ ಕೃಷಿ ಭೂಮಿಯಲ್ಲಿ ಯರಿ ನೆಲ, ಅನಿಗರ, ಕೋಸಗರ, ಹರಳೆಭೂಮಿ, ಡೋಣಿ ನೆಲ, ಮೊಗೆ, ಮೊರಡಿ, ಕೆಂಪುಮಿಶ್ರಿತ ಎಂಬ ಪ್ರಕಾರಗಳನ್ನು ಮಾಡಬಹುದು. ಇದರಲ್ಲಿ ಎರೆ ನೆಲೆ ಇಂದಿಗೂ ವಾಡಿಕೆಯಲ್ಲಿರುವ ಫಲವತ್ತಾದ ಕಪ್ಪು ಮಿಶ್ರಿತ ಹೊಂದಿರುವಂತಹದ್ದು. ಇದನ್ನು ಮಂಕಣಿ ಶಾಸನಲ್ಲಿ 'ಎರೆಯ ವಿಕಸ' ಎಂದು ಉಲ್ಲೇಖಿಸಿದರೆ, ಶಿರೂರಿನ ಶಾಸನವು ಬಾಚಿಶೆಟ್ಟಿ ಕೆರೆಯ ನಾಲ್ಕು ಮತ್ತರು ಕರಿಯ ಭೂಮಿಯನ್ನು ಬಿಟ್ಟುಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಹರಳು-ಮರಳು ಮಿಶ್ರಿತ ಭೂಮಿಯೆಂದು ಹೇಳಬಹುದಾದ ಹರಳೆ ಭೂಮಿಯನ್ನು ಮಂಕಣಿ ಶಾಸನದಲ್ಲಿ ಹರಳ ವಿಕಸ ಎಂದು ಉಲ್ಲೇಖಿಸಿದೆ.

ವ್ಯವಸಾಯ:

ಬಾಗಲಕೋಟ ಜಿಲ್ಲೆಯ ಹಲವಾರು ಶಾಸನಗಳಲ್ಲಿ ನೀರಾವರಿಗೆ ನೀಡಿದ ಆದ್ಯತೆಯನ್ನು ಗುರುತಿಸಲಾಗಿದೆ. ಲಭ್ಯವಾದ ಮಾಹಿತಿ ಪ್ರಕಾರ ಕೆರೆ ನೀರಾವರಿಗೆ ಪ್ರಥಮ ಆದ್ಯತೆ ನೀಡಲಾಗಿತ್ತು. ಗದ್ದನಕೇರಿ ಗ್ರಾಮದಲ್ಲಿ ೨, ಹೊನ್ನಾಕಟ್ಟಿಯಲ್ಲಿ ೧ ಹಾಗೂ ಶಿರೂರಿನ ಒಂದು ಕೆರೆಯನ್ನು ಕೇಸರಬಾವಿ ಮತ್ತು ಬಾದಾಮಿ ಕೆರೆಗೆ ಭೂಮಿಯನ್ನು ದಾನನೀಡಿದ ಉಲ್ಲೇಖಗಳು ಶಾಸನದಲ್ಲಿ ಕಂಡುಬರುತ್ತವೆ. ಶಿರೂರಿನಲ್ಲಿರುವ ಬಾಚಿಶೆಟ್ಟಿ ಕೆರೆಯು ಅತ್ಯಂತ ವಿಶಾಲವಾದ ಹಾಗೂ ನೀರಾವರಿಗೆ ಹೆಚ್ಚು ಅನುಕೂಲಕರವಾದ ಕೆರೆಯಾಗಿದೆ.

ಕೃಷ್ಣಾ ನದಿ ಬಲದಂಡೆಯಲ್ಲಿರುವ ಮಂಕಣಿ ಗ್ರಾಮದ ಕ್ರಿ.ಶ. ೧೨೦೬ರಲ್ಲಿನ ಶಾಸನದಲ್ಲಿ ಕೃಷ್ಣಾ ನದಿಯನ್ನು 'ಕೃಷ್ಣವೇಣ್ಣಾ', ಕೃಷ್ಣಾ ಹೊಳೆ ಎಂದು ಉಲ್ಲೇಖಿಸಲಾಗಿದೆ. ರೈತರು ತಮ್ಮ ಹೊಲ ಮಾರುವ, ದತ್ತಿಯಾಗಿ ನೀಡುವ ಸಂಪೂರ್ಣ ಸ್ವಾತಂತ್ರ್ಯವಿತ್ತು. ರೈತನು ರಾಜನಿಗೆ ವ್ಯಾಪಾರ ಸಾಮಗ್ರಿಗಳ ಹತ್ತನೇ ಒಂದು ಭಾಗವನ್ನು, ಹೊಲದಲ್ಲಿ ಬೆಳೆದ ಧಾನ್ಯಗಳ ಆರನೇ ಒಂದು ಭಾಗವನ್ನು ಭೂಕಂದಾಯರೂಪದಲ್ಲಿ ಸಲ್ಲಿಸುವ ನಿಬಂಧನೆ ಇದ್ದಿತೆಂದು ತಿಳಿದುಬರುತ್ತದೆ.

ಕೈಗಾರಿಕೆ:

ಅರ್ಥವ್ಯವಸ್ಥೆಯಲ್ಲಿ ಭೂಮಿಗಿರುವಷ್ಟು ಪ್ರಾಧಾನ್ಯತೆ ಕೈಗಾರಿಕೆಗಳಿಗಿದೆ. ವ್ಯವಸಾಯ ಹಾಗೂ ಭೂ ಮೂಲದ ಕಚ್ಚಾ ಪದಾರ್ಥಗಳೇ ಕೈಗಾರಿಕೆಗಳ ಮೂಲವಾಗಿದ್ದರಿಂದ ಅವು ಒಂದನ್ನುಬಿಟ್ಟು ಮತ್ತೊಂದಿಲ್ಲ. ಇದರಲ್ಲಿ ಎಣ್ಣೆ ತಯಾರಿಕೆ, ಸಕ್ಕರೆ-ಬೆಲ್ಲದ ತಯಾರಿಕೆ, ಉಪ್ಪು ತಯಾರಿಕೆ ಇಂದಿಗೂ ಉತ್ತರಕರ್ನಾಟಕದ ಹಳ್ಳಿಗಳಲ್ಲಿ ಜಯಪ್ರಿಯವಾಗಿದೆ.

ವ್ಯಾಪಾರ:

ವ್ಯಾಪಾರವು ವೃತ್ತಿ ಕೈಗಾರಿಕೆಗಳ ಉತ್ಪಾದನೆಯನ್ನು ವಿತರಿಸುವ ಪ್ರಮುಖ ಮಾಧ್ಯಮವಾಗಿದೆ. ಕರ್ನಾಟಕವು ತನ್ನ ಪ್ರದೇಶಗಳಲ್ಲಿ ಹಾಗೂ ಹೊರನಾಡುಗಳೊಂದಿಗೆ ವ್ಯಾಪಾರ ವಹಿವಾಟು ನಡೆಸಿದ ಬಗ್ಗೆ ಹಲವಾರು ಶಾಸನಗಳ ಮೂಲಕ ತಿಳಿದುಬರುತ್ತದೆ. ವ್ಯಾಪಾರ ಮತ್ತು ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡು ವರ್ತಕರು ಕರ್ನಾಟಕದಲ್ಲಿ ಇದರ ಉಲ್ಲೇಖ ೭-೮ ಶತಮಾನಗಳ ಶಾಸನಗಳಿಂದ ತಿಳಿದು ಬರುತ್ತದೆ.

ವ್ಯಾಪಾರ ವೃತ್ತಿಯನ್ನು ಜೀವನೋಪಾಯದ ಸಾಧನವಾಗಿಸಿಕೊಂಡವರು ಬಣಜಿಗ ಅಥವಾ ಶೆಟ್ಟಿ. ಇವರು ಸರಕುಗಳನ್ನು ಎತ್ತು, ಕತ್ತೆ, ಕೋಣಗಳ ಮೇಲೆ ಹೇರಿಕೊಂಡು, ತಲೆ ಮೇಲೆ ಹೊತ್ತುಕೊಂಡು ಹೋಗಿ ಸಂತೆ, ಪಟ್ಟಣಗಳಲ್ಲಿ ವ್ಯಾಪಾರ, ವ್ಯವಸಾಯ ಮಾಡುತ್ತಿದ್ದರು. 'ಶೆಟ್ಟಿಗುತ್ತಾ' ಎಂದರೆ ಹಿರಿಯ ವರ್ತಕ ಅಥವಾ ವರ್ತಕರಲ್ಲೇ ಶ್ರೇಷ್ಠ ಎಂದಾಗುತ್ತದೆ. ವರ್ತಕ ಸೂಚಿಯಾದ ಇವರಲ್ಲಿ ಸ್ಥಳೀಯರಾದವರನ್ನು ಸ್ಥಳ-ತಳದ ಶೆಟ್ಟಿಗುತ್ತರೆಂದು ಕರೆಯುತ್ತಾರೆ. ಶಿರೂರಿನ ಶಾಸನವೊಂದರಲ್ಲಿ ಬಾಚಿಶೆಟ್ಟಿ ಎಂಬ ಹೆಸರು ಉಲ್ಲೇಖವಾಗಿದೆ.

ಆರ್ಥಿಕ ಸೌಲಭ್ಯ:

ಹಣಕಾಸಿನ ವಹಿವಾಟಿನಲ್ಲಿ ವ್ಯವಹಾರ ಪ್ರಮುಖವಾಗಿದ್ದು, ಸಂಕೀರ್ಣತಮವಾದ ಸಾಲದ ವಿಷಯದಲ್ಲಿ ನಮ್ಮ ರಾಜರುಗಳು ಹೆಚ್ಚಿಗೆ ತಲೆ ಕೆಡಿಸಿಕೊಂಡಿಲ್ಲ. ಆದರೆ ಸಾಲ ನಾನಾ ಕಾರಣಗಳಿಗಾಗಿ ಅನಿವಾರ್ಯವಾದುದ್ದು. ಸಾಲವನ್ನು ಪಡೆಯುವಾಗ

ಯಾವುದಾದರೂ ವಸ್ತುವನ್ನು ಒತ್ತೆ ಇಡುತ್ತಿದ್ದರು.

ದೇವಸ್ಥಾನದ ನಂದಾದೀಪಕ್ಕೋ, ವಿದ್ಯಾಭ್ಯಾಸಕ್ಕೋ, ಸತ್ರಕ್ಕೋ, ಕರೆಯ ದುರಸ್ತಿಗೋ ಹಣವನ್ನು ಕೊಟ್ಟವನು ತನ್ನ ಹಣದ ಬಡ್ಡಿಯಿಂದ ಅವು ನಡೆಯಬೇಕೆಂದು ಇಚ್ಛಿಸಿ ದತ್ತಿಯನ್ನು ಬಿಟ್ಟುಕೊಡುತ್ತಿದ್ದನು. ಶಿರೂರಿನ ಶಾಸನದಲ್ಲಿ ಬಿಲ್ಲಹರಳಗಾವುಂಡನ ವ್ಮಡದರಿಯರಾದ ದೇಕಿ ಗಾವುಂಡಿ, ಸುಗ್ಗಿಗಾವುಂಡಿಯರು ಶ್ರೀಮೂಲಸ್ಥಾನ ದೇವರ ಮಠದಲ್ಲಿ ವರ್ಷಕ್ಕೊಂದುಬಾರಿ ತಪೋಧನರಿಗೆ ಎರಡು ಅಣೆ ಗದ್ಯಾಣದ ಬಡ್ಡಿಯಿಂದ ಭೋಜನ ಮಾಡಿಸಲು ದಾನಬಿಟ್ಟ ಸಂಗತಿ ಉಲ್ಲೇಖವಿದೆ.

ನಾಣ್ಯಗಳು:

ನಾಣ್ಯ ಚಲಾವಣೆ ಆರ್ಥಿಕ ಅಭಿವೃದ್ಧಿಯಲ್ಲಿ ಮನ್ವಂತರವನ್ನೇ ತೆರೆದಿದೆ. ಅರ್ಥವ್ಯವಸ್ಥೆ ಇನ್ನೂ ವಿಕಸಿತವಾಗದ ಸಮಯದಲ್ಲಿ ಕೊಡು-ಕೊಳ್ಳುವ ವ್ಯವಹಾರಕ್ಕೆ ವಸ್ತುಗಳನ್ನು ಬಳಸಲಾಗುತ್ತಿತ್ತು. ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು 'ಕಮ್ಮಟ'ಗಳೆಂದು, 'ಅಚ್ಚಿನ' ಟಂಕಶಾಲೆಗಳೆಂದು ಕರೆಯುತ್ತಿದ್ದರು. ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗರನ್ನು ರಾಜನು ಕಮ್ಮಟದಲ್ಲಿ ನೇಮಿಸುತ್ತಿದ್ದನು. ಅಂದರೆ ನಾಣ್ಯಗಳನ್ನು ಟಂಕಿಸಿವುದು ಮತ್ತು ಹೊರಡಿಸುವುದು ಸರಕಾರಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿಯೇ ಮಾಡಬೇಕಿತ್ತು. ಅಕ್ಕಸಾಲಿಗರು ತಾವು ಪಡೆದ ಪ್ರತಿಫಲದ ಸ್ವಲ್ಪ ಪ್ರಮಾಣವನ್ನು ದೇವಾಲಯಕ್ಕೆ ಕಾಣಿಕೆ ರೂಪದಲ್ಲಿ ನೀಡುತ್ತಿದ್ದರು.

ಇಲ್ಲಿ ಗದ್ಯಾಣ, ನಿಷ್ಕ, ಕರಂಜು, ವರಹ, ಪೊನ್ನು, ಪಣ ಮುಂತಾದ ಬಂಗಾರದ ನಾಣ್ಯಗಳಿದ್ದರೆ, ಪಣ, ಪಾಗ, ಕಾಣಿ, ತಾರಗಳೆಂಬ ಇತರ ಲೋಹಗಳ ನಾಣ್ಯಗಳಿದ್ದವು. ಬಾಗಲಕೋಟ ಜಿಲ್ಲೆಯ ಶಾಸನಗಳಿಂದ ಗದ್ಯಾಣ, ಅಣಿಗದ್ಯಾಣ, ಪಣ, ಸುವರ್ಣ ಎಂಬ ನಾಣ್ಯಗಳು ಇದ್ದವು ಎಂಬ ಉಲ್ಲೇಖವಿರುತ್ತದೆ.

ತೂಕ ಮತ್ತು ಅಳತೆ:

ಬಾಗಲಕೋಟ ಜಿಲ್ಲೆಯ ಶಾಸನಗಳಲ್ಲಿ ಹೊಲಗಳನ್ನು ಅಳೆಯುತ್ತಿದ್ದ ಮಾಪಗಳು ಕಂಡುಬರುತ್ತವೆ. ಶಿರೂರಿನ ಶಾಸನಗಳಲ್ಲಿ ಭೂಮಿಯನ್ನು ನಿರ್ವರ್ತನ, ಮತ್ತರು ಹಾಗೂ ಕೋಲುಗಳಲ್ಲಿ ಅಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಭೂಮಿಯನ್ನು ಮುಖ್ಯವಾಗಿ ಎರಡು ಅಳತೆಗೋಲುಗಳಿಂದ ಅಳೆಯುತ್ತಿದ್ದರು. ಒಂದು ಅದರಲ್ಲಿ ಬಿತ್ತಬಹುದಾದ ಬೀಜದ ಪ್ರಮಾಣದ ಮೇಲೆ ಉದಾ: ಎರಡು ಸಲಗೆ ಗದ್ದೆ ಎಂದರೆ, ಎರಡು ಸಲಿಗೆಯಷ್ಟು ಬೀಜವನ್ನು ಬಿತ್ತಬಹುದಾದ ಗದ್ದೆ ಎಂದರ್ಥ. ಇನ್ನೊಂದು ಅಳತೆಗೋಲುಗಳ ಸಹಾಯದಿಂದ ಅಳೆಯುತ್ತಿದ್ದ ವಿಧಾನ ದೇಶದ ಆಯಾ ಭಾಗಗಳಿಗೆ, ಆಯಾ ಊರುಗಳಿಗೆ ರಾಜನು ಅಳತೆಗೋಲುಗಳನ್ನು ನಿರ್ಧರಿಸುತ್ತಿದ್ದನು. ಕುರುಗೋಡು ಎಂಬ ಊರಿನಲ್ಲಿ ೧೮ ಗೇಣಿನ

ಕೋಲನ್ನು ಉಪಯೋಗಿಸಬೇಕೆಂದು ಹೇಳಿದನು. ಆಯಾ ಪ್ರದೇಶದ ಅಳತೆ ಗೋಲುಗಳು, ಅವುಗಳನ್ನಿಟ್ಟ ದೇವಸ್ಥಾನ, ಊರು, ಅವುಗಳನ್ನು ಹೊರಡಿಸಿದ ವ್ಯಕ್ತಿಯ ಬಿರುದು ಇಲ್ಲವೇ ಹೆಸರು, ಕೆಲವು ಕಡೆ ಲಾಂಛನ ಇತ್ಯಾದಿ ಹೆಸರುಗಳಿಂದ ಹೆಸರುಗೊಂಡಿರುವುದು ತಿಳಿದುಬರುತ್ತದೆ.

ತೆರಿಗೆ:

ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದ ಅಸಂಖ್ಯಾತ ತೆರಿಗೆ ಕುರಿತು ಒಂದು ಸಂಪ್ರಬಂಧವೇ ಸಿದ್ಧಗೊಂಡಿದೆ. ಆಸ್ತಿ ತೆರಿಗೆ, ವೃತ್ತಿಕೈಗಾರಿಕೆ ತೆರಿಗೆ, ವ್ಯಾಪಾರ ತೆರಿಗೆ, ಸಾಮಾಜಿಕ ಧಾರ್ಮಿಕ ತೆರಿಗೆ, ಧಾರ್ಮಿಕ ತೆರಿಗೆ ಎಂದು ವಿಭಾಗಿಸಬಹುದು.

೪.೪ ಸಾಮಾಜಿಕ ವ್ಯವಸ್ಥೆ

ಐತಿಹಾಸಿಕ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯು ಸರಿಯಾದ ಕ್ರಮದಲ್ಲಿರಬೇಕಾದರೆ, ಅದಕ್ಕೆ ಸಾಮಾಜಿಕ ಚಟುವಟಿಕೆಗಳು ಮುಖ್ಯವಾಗುತ್ತವೆ. ಸಾಮಾಜಿಕ ಸಂಘಟನೆ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಪ್ರಮುಖ ಕಾರಣವಾಗಿದೆ. ಜನತೆಯ ಸಂಬಂಧಗಳುಳ್ಳ ಸುವ್ಯವಸ್ಥೆಯ ಸಮೂಹವನ್ನು ಸಮಾಜ ಎನ್ನಬಹುದು. ಇದರಲ್ಲಿ ವರ್ಗ–ವರ್ಣ, ಕುಟುಂಬ, ಸಂಘ–ಸಂಸ್ಥೆ ಅವುಗಳ ಆಲೋಚನಾ ಕ್ರಮ ಚಟುವಟಿಕೆಗಳು ಇತ್ಯಾದಿ ಮುಖ್ಯ ಅಂಶಗಳು. ಇವು ಆಯಾ ಸಮಾಜದಲ್ಲಿನ ಒಪ್ಪಿತ ಮೌಲ್ಯಕ್ಕೆ ಬದ್ಧವಾಗಿರುತ್ತವೆ. ಈ ರೀತಿ ನಂಬಿಕೆ, ಸಂಪ್ರದಾಯಗಳು ಆಧುನಿಕ ಜಗತ್ತಿನಲ್ಲಿ ಅನೇಕ ವಿಮರ್ಶೆಗಳಿಗೆ ಕಾರಣವಾಗಿದ್ದರೂ ಆಗಿನ ಸರ್ವಾಧಿಕಾರ ಸಮಾಜದಲ್ಲಿ ಈ ಪದ್ಧತಿ ಅನಿವಾರ್ಯವಾಗಿದ್ದವು. ಪ್ರಾಚೀನ ಕರ್ನಾಟಕ ಸಾಮಾಜಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಬಾಗಲಕೋಟ ಜಿಲ್ಲಾ ಪರಿಸರವನ್ನು ಗಮನಸಬಹುದಾಗಿದೆ.

ಜಾತಿ ಪದ್ಧತಿ :

ಚಾತುರ್‌ವರ್ಣ ವ್ಯವಸ್ಥೆ ಮುಂದುವರೆದರೂ ವಾಸ್ತವಿಕವಾಗಿ ಅದು ಹೇಗೆ ಕಾರ್ಯಗತವಾಗಿತ್ತೆಂಬುದು ಲಭ್ಯವಿರುವ ಶಾಸನ ಮತ್ತು ಇತರ ಆಕರಗಳಿಂದ ಸ್ಪಷ್ಟವಾಗಿ ತಿಳಿಯುವುದಿಲ್ಲ. ವಿದ್ಯಾರ್ಜನೆ ಮತ್ತು ವಿದ್ಯಾದಾನದಲ್ಲಿ ವಿಶೇಷವಾಗಿ ನಿರತವಾಗಿದ್ದ ಬ್ರಾಹ್ಮಣ ವರ್ಗದವರು ಸಮಜದಲ್ಲಿ ಗೌರವ ಸ್ಥಾನದಲ್ಲಿದ್ದರು. ಶಿರೂರಿನ ಒಂದು ಶಾಸನದಲ್ಲಿ ಪಾಶುಪತಾಚಾರ್ಯರ ನೆಲೆ, ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡು ಮಠ ಎಂದು ಹೇಳಿದೆ ಅಲ್ಲದೆ, ತೇಜೋರಾಶಿ ಸಿದ್ದೇಶ್ವರ ದೇವಾಲಯದ ಸ್ಥಾನಾಚಾರ್ಯರಾಗಿದ್ದರು ಎಂಬ ಉಲ್ಲೇಖ ಇದೆ. ಇದು ಆಚಾರ್ಯರಿಗೆ ಸಮಾಜದಲ್ಲಿದ್ದ ಸ್ಥಾನವನ್ನು ಅರಿಯಲು ದಾರಿ ಮಾಡಿ ಕೊಡುತ್ತದೆ. ಕ್ರಿಶ ೧೧೦೦ ರಲ್ಲಿ ಆರನೆಯ ವಿಕ್ರಮಾದಿತ್ಯನ ಇನ್ನೊಂದು ಶಾಸನದಲ್ಲಿ ಸಿದ್ದೇಶ್ವರ ದೇವರ ಸ್ಥಾನಾಚಾರ್ಯ ಪ್ರಸನ್ನರಾಶಿ ಪಂಡಿತ ದೇವರಾಗಿದ್ದರೆಂದು

ತಿಳಿಸುತ್ತದೆ.೨

ರಾಜ್ಯಭಾರ ಕರ್ತವ್ಯಗಳನ್ನು ನೆರವೇರಿಸುವ ಕ್ಷತ್ರಿಯ. ಸಮಾಜದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ರಕ್ಷಿಸುವ ಮತ್ತು ಮುಂದುವರಿಸಿಕೊಂಡು ಹೋಗುವುದು ಇದರ ಜವಾಬ್ದಾರಿ. ಅರಸರು ಉತ್ತಮ ರೀತಿಯಲ್ಲಿ ಶಿಕ್ಷಣ ಪಡೆಯುತ್ತಿದ್ದರು. ವೈಶ್ಯರು ಕೃಷಿ, ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ನಿಸ್ಸೀಮರಾಗಿದ್ದರು. ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರರು ಸ್ಥಾನಮಾನ, ಸ್ಥಿತಿ–ಗತಿ ವ್ಯವಹಾರ ಕಸಬುಗಳ ಬಗ್ಗೆ ಏನೂ ತಿಳಿದು ಬರುವುದಿಲ್ಲ ಎಂದು ಹೇಳಬಹುದು.

ಚತುರ್ವರ್ಣರು ಅನೇಕ ಜಾತಿಗಳಾಗಿ ಪರಿವರ್ತನೆ ಅದದ್ದು ಸಾಮಾಜಿಕ ವ್ಯವಸ್ಥೆಯಲ್ಲಿ ಒಂದು ಐತಿಹಾಸಿಕ ಘಟ್ಟ. ಬಾಗಲಕೋಟ ತಾಲೂಕಿನ ಅನೇಕ ಶಾಸನಗಳು ಸಮಾಜದಲ್ಲಿದ್ದ ವಿವಿಧ ಜನಾಂಗದ ಬಗ್ಗೆ ತಿಳಿಸಿವೆ.

ಮಹಿಳೆಯರ ಸ್ಥಾನ: ಸಮಾಜಶಾಸ್ತ್ರಜ್ಞರು ಮಹಿಳೆಯರ ಸ್ಥಾನಮಾನವನ್ನು ಚರ್ಚೆಯ ವಿಷಯವನ್ನಾಗಿ ಮಾಡಿದ್ದಾರೆಯೇ ಹೊರತು ಪುರುಷ ಸ್ಥಾನಮಾನಗಳನ್ನಲ್ಲ. ಹಲವಾರು ಶಾಸನಗಳು ಮಹಿಳೆಯರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡುತ್ತವೆ. ರಾಜಮನೆತನದ ಸ್ತ್ರೀಯರು ಧಾರ್ಮಿಕ ಮತಗಳಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಒಂದು ವೇಳೆ ಆಡಳಿತದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು.

ಶಿರೂರಿನ ಶಾಸನದಲ್ಲಿ ಮಹಾ ಪ್ರಭುವಿನ ಲಕ್ಮಾದೇವಿಯಿಂದ ಮೂಲಸ್ಥಾನ ದೇವಾಲಯಕ್ಕೆ ಭೂದಾನ ಕೊಟ್ಟ ವಿಚಾರ ತಿಳಿಸುತ್ತದೆ. ಲಕ್ಮಾ ದೇವಿಯನ್ನು ಅನೇಕ ವಿಧವಾಗಿ ಬಣ್ಣಿಸಿದೆ.

ಬಾಗಲಕೋಟದ ಕ್ರಿ.ಶ. ೭೦೫ರ ಒಂದು ಶಾಸನದಲ್ಲಿ ಅರಸನು ಕುಂಕುಮ ಮಹಾದೇವಿಯ ವಿನಂತಿಯ ಮೇರೆಗೆ ಆರತಿ ಗೋತ್ರದ ಭೀಮಶರ್ಮನ ಮೊಮ್ಮಗನು ದೇವಶರ್ಮನ ಮಗನೂ ಆದ ಸೋಮ ಶರ್ಮನಿಗೆ ಮಲ್ಲಗ್ರಾಮ ೩೦ ರಲ್ಲಿನ ಲೋಹಂಜ ವಾಟಗ ಎಂಬ ಗ್ರಾಮವನ್ನು ದಾನ ನೀಡಿದ ಉಲ್ಲೇಖ ಇದೆ.

ವಿವಾಹ: ಭೈರಮಟ್ಟಿಯ ಒಂದು ಶಾಸನದಲ್ಲಿ ಒಂದು ಐಪತಿ ಭೂಲೋಕವನ್ನು ನೋಡಲೆಂದು ಪ್ರಿಯೆಯೊಡನೆ ಬಂದಾಗ ಆಕೆ ಸಿಂಧೂ ನದಿ ನಡುಗಡ್ಡೆಯನ್ನು ಅಹಿಚ್ಚತ್ರ ಎಂಬಲ್ಲಿ 'ಸಿಂಧ' ಎಂಬ ಮಗಳನ್ನು ಹೆತ್ತಳು. ಅವನನ್ನು ಹುಲಿ ಜೋಪಾನ ಮಾಡಿ ಬೆಳೆಸಿತು. ಅತನಿಗೆ ದೀರ್ಘಬಾಹು ಎಂಬ ಮಗನಾದ ಅವನು ಕದಂಬರ ಕನ್ಯೆಯನ್ನು ಮದುವೆಯಾಗಿ ಮೂವರು ಮಕ್ಕಳನ್ನು ಪಡೆದು ವಂಶವನ್ನು ವಿಸ್ತರಿಸಿದನೆಂದು ಉಲ್ಲೇಖಿಸುತ್ತದೆ. ಆದರೆ ಅದೇ ಶಾಸನವು ಸಿಂಧರ ನಾಗ ಜನಾಂಗಕ್ಕೆ ಸೇರಿದನೆಂದು ತಿಳಿಸಿದೆ. ಹಾಗಾದರೆ ನಾಗ ಜನಾಂಗದ ನೀಡದೋಳ ಸಿಂಧನಿಗೂ, ಬ್ರಾಹ್ಮಣನಾದ ಕದಂಬ ಮನೆತನದ ಸ್ತ್ರೀಗೂ ವಿವಾಹ ಅದದ್ದು ಅಂತರ್ಜಾತಿ ವಿವಾಹ ಒಂದು ಉತ್ತಮ ನಿದರ್ಶನ.

ಪ್ರಾಚೀನ ಕಾಲದ ಸಮಾಜ ಬಹುಪತ್ನಿತ್ವವನ್ನು ಒಪ್ಪಿತ್ತು. ಆ ಕಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುವ ಸಾಮಾನ್ಯರಲ್ಲಿ ಇಲ್ಲವೆನ್ನುವಷ್ಟು ವಿರಳವಾಗಿತ್ತು. ಕಲ್ಯಾಣಿ ಚಾಲುಕ್ಯರ ದೊರೆ ಒಂದನೇ ಸೋಮೇಶ್ವರನಿಗೆ ಎಂಟು ಜನ ಮಡದಿಯರು ಇದ್ದರು ಎಂದು ತಿಳಿದು ಬರುತ್ತದೆ. ಶಿರೂರಿನ ಒಂದು ಶಾಸನ ಸೋಮೇಶ್ವರನಿಗೆ ಲೀಲಾದೇವಿ ಎಂಬ ರಾಣಿ ಇದ್ದಳು ಎಂದು ಪ್ರಥಮ ಬಾರಿಗೆ ತಿಳಿಸುತ್ತದೆ. ಅಂದರೆ ಜನರು ಬಹುಪತ್ನಿತ್ವವನ್ನು ಅನುಸರಿಸುತ್ತಿದ್ದರು.

ಮದುವೆ ಹೆಣ್ಣನ್ನು ಗಂಡನ ಮನೆಗೆ ಕಳುಹಿಸುವ ಚಿತ್ರ ಕಾವ್ಯಗಳಲ್ಲಿ ದೊರಕುವಂತೆ ಶಾಸನಗಳಲ್ಲಿ ಕಾಣಬರುವುದಿಲ್ಲ. ಆದರೂ ಕ್ರಿ. ಶ. ೧೨೦೬ ರ ಮಂಕಣಿ ಶಾಸನ ಚಕ್ರವರ್ತಿ ಸಿಂಗ ದೇವದೇವ ಅರಸರು "ದಕ್ಷಿಣದ ದಿಶಾವರದ ದಿಗ್ವಿಜಯಕ್ಕಾಗಿ ನಡೆದು ಬರುತ್ತಾ ಕೃಷ್ಣಾ ವೇಣ್ಣಾ ನದಿ ತೀರದ ರಕ್ತ ಕೊಟ್ಟ ಭಾಗ್ಯ ಸ್ಥಳದಲ್ಲಿ ಬಂದು ಕೊಂಕಣ ಗೋವೆಯ ಶ್ರೀ ಜಯಕೇಶಿದೇವಅರಸರ ಕನ್ಯಾರತುನ-ಮಯಿಳಲ ಮಹಾದೇವಿಯನ್ನು ತರಲು ಪೋಪಲ್ಲಿ" ಎಂಬ ಉಲ್ಲೇಖ ಕದಂಬ ಮೂರನೇ ಜಯಕೇಶಿಯ ಮಗಳು ಮಯಿಳಲ ಮಹಾದೇವಿಯನ್ನು ಯಾದವ ಸಿಂಗ ಮದುವೆಯಾಗಿ ಕರೆ ತರುವುದನ್ನು ಸೂಚಿಸುತ್ತದೆ.

ಸತ್ರಗಳು

ಇವು ವಿಶ್ರಾಂತಿ ಧಾಮಗಳಾಗಿದ್ದವು. ಒಂದು ರೀತಿಯಲ್ಲಿ ಅತಿಥಿ ಸತ್ಕಾರದ ವಿಸ್ತೃತ ರೂಪವೇ ಸತ್ರ ಎನ್ನಬಹುದು. ರಾಜರು, ರಾಣಿಯರು, ಮಾಂಡಳಿಕರು, ಅಧಿಕಾರಿಗಳು, ಪ್ರವಾಸಿಗರು, ಸಾಮಾನ್ಯ ಜನರು, ವಿದ್ಯಾರ್ಥಿಗಳು ಮುಂತಾದವರ ತಂಗುದಾಣಗಳಾಗಿದ್ದವು. ಪ್ರವಾಸಿಗರಿಗೆ ಅರವಟ್ಟಿಗೆಗಳಲ್ಲಿ ನೀರು ಸಿಕ್ಕರೆ ಸತ್ರಗಳಲ್ಲಿ ಆಹಾರವು ವಿಶ್ರಾಂತಿ ತೆಗೆದುಕೊಳ್ಳಲು ವಸತಿ ಸೌಕರ್ಯ ದೊರೆಯುತ್ತಿತ್ತು. ಸತ್ರಗಳು ಬಹುಮಟ್ಟಿಗೆ ದೇವಸ್ಥಾನ ಅಥವಾ ಮಠಗಳಿಗೆ ಹೊಂದಿಕೊಂಡಿರುತ್ತಿದ್ದವು.

ಪ್ರಾಚೀನ ಕರ್ನಾಟಕದ ಜನ ಭೂದಾನ, ವಿದ್ಯಾದಾನಕ್ಕಿಂತ ಅನ್ನದಾನವೇ ಶ್ರೇಷ್ಠ ಎಂದು ನಂಬಿದ್ದರಿಂದ ಅನೇಕ ಸತ್ರಗಳಿಗೆ ದಾನ ದತ್ತಿಗಳನ್ನು ನೀಡಲಾಗುತ್ತಿತ್ತು. ಒಂದನೇ ಸೋಮೇಶ್ವರನ ಶಿರೂರಿನ ಶಾಸನದಲ್ಲಿ ಮಾರಸಿಂಗ ಪ್ರಭು ಸಿದ್ದೇಶ್ವರ ದೇವರ ಧೂಪ ದೀಪ ಗಂಧ, ನೈವೇದ್ಯ ಯತಿ ವಿದ್ಯಾರ್ಥಿಗಳ ಸತ್ರ ಮೊದಲಾದವುಗಳಿಗೆ ಎರಡುನೂರು ನೀವರ್ತನ ಭೂಮಿಯನ್ನು ದಾನ ನೀಡಿದ ಉಲ್ಲೇಖ ಇದೆ.

ಕೆರೆಗಳ ನಿರ್ಮಾಣ

ನಮ್ಮ ಪ್ರಾಚೀನರು ನೀರಿನ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಯಾವ ವ್ಯಕ್ತಿಯೂ ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು

ಕುಡಿದು ತೃಪ್ತರಾಗುವರೋ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ. ಬಾಗಲಕೋಟ ಜಿಲ್ಲೆಯ ಶಾಸನಗಳಲ್ಲಿ ಸುಮಾರು ಕೆರೆಗಳ ಪ್ರಸಾಪ ಬಂದಿದೆ.

ಗದ್ದನಕೇರಿಯಲ್ಲಿರುವ ಎರಡು ಶಾಸನಗಳು ಕೆರೆಗೆ ನೀಡಿದ ಭೂದಾನವನ್ನು ಕುರಿತು ಹೇಳುತ್ತವೆ. ೧೪ ನೇ ಶತಮಾನದ ಒಂದು ಶಾಸನವು ಕೆರೆಯನ್ನು ಕಟ್ಟಿಸಿದ ಮಾಳಿಗೆಪ್ಪನ ಮಗ ಮೋಹನಪತಯ್ಯನಿಗೆ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ. ೧೫ ನೇ ಶತಮಾನದ ಇನ್ನೊಂದು ಶಾಸನವು ರಾಘವ ಭೀಮಪ್ಪ ದೇಸಾಯಿ ಕಟ್ಟಿಸಿದ ಕೆರೆಗೆ ನೀಡಿದ ಭೂಮಿ ದಾನವನ್ನು ವಿವರಿಸುತ್ತದೆ.

ಕ್ರಿ.ಶ. ೧೧೦೦ ರಲ್ಲಿನ ಶಿರೂರಿನ ಒಂದು ಶಾಸನದಲ್ಲಿ ಸಿದ್ದೇಶ್ವರ ಆಚಾರ್ಯ ಪ್ರಸನ್ನರಾಶಿ ಪಂಡಿತರಿಂದ ಬಾಚಿಶೆಟ್ಟಿ ಕೆರೆಗೆ ಭೂ ದಾನ ನೀಡಿದ ಸಂಗತಿ ಉಲ್ಲೇಖವಾಗುತ್ತದೆ. ಇನ್ನೊಂದು ಶಾಸನದಲ್ಲಿ ಶಿರೂರಿನ ಕುಸುವಾಡಿ ಬೃಹತ್ ಹಾಗೂ ಗೌರ ತಟಾಕತ್ರಗಳನ್ನು ನಿರ್ಮಿಸಿದನೆಂಬ ಉಲ್ಲೇಖವಿದೆ. ಶಿರೂರಿನ ಗ್ರಾಮದಲ್ಲಿ ತಟಾಕ ನಿರ್ಮಿತಿಗೆ ನೀಡಿದ ಆದ್ಯತೆಯನ್ನು ಇದು ವ್ಯಕ್ತಪಡಿಸುತ್ತದೆ.

ಕೆರೆ ಕಟ್ಟಿಸಿದ ವ್ಯಕ್ತಿಯ ಹೆಸರಿನಲ್ಲಿ ಕೆರೆಗಳು ಇರುತ್ತಿದ್ದವು. ಶಿರೂರಿನ ಬಾಚಿಶೆಟ್ಟಿ ಕಟ್ಟಿಸಿದ ಕೆರೆಯನ್ನು ಬಾಚಿಶೆಟ್ಟಿ ಕೆರೆ ಎಂದ ಪ್ರಸಿದ್ಧಿಯಾಗಿತ್ತು. ಕೇವಲ ಕೆರೆಗಳ ನಿರ್ಮಾಣಕ್ಕೆ ಮಹತ್ವ ನೀಡದೆ ಅದರ ಉಸ್ತುವಾರಿಯೂ ಪ್ರಮುಖವಾಗಿತ್ತು. ಶಿರೂರಿನ ಕೆರೆಯ ಉಸ್ತುವಾರಿಗಾಗಿ ಶ್ರೀ ಸಿದ್ಧೇಶ್ವರ ದೇವರ ಸ್ಥಾನಾಚಾರ್ಯ ಪ್ರಸನ್ನರಾಸಿ ಪಂಡಿತ ದೇವರ ಹೊಲದಲ್ಲಿ ಬಾಚಿಶೆಟ್ಟಿ ಕೆರೆಗೆ ಕೆಳಗಿನ ನಾಲ್ಕು ಮತ್ತಲು ಕರಿಯ ಭೂಮಿಯನ್ನು ಬಿಟ್ಟು ಕೊಟ್ಟಿದ್ದರೆಂದು ಶಾಸನ ತಿಳಿಸುತ್ತದೆ. ಒಟ್ಟಿನಲ್ಲಿ ಕೆರೆ ಕಟ್ಟಿಸಿ ಬೇಸಾಯಕ್ಕೆ ಉತ್ತೇಜನ ನೀಡುತ್ತಿದ್ದರು.

೪.೫ ಕೆರೆಗಳ ಚಾರಿತ್ರಿಕ ಅಂಶಗಳು:

ರಾಷ್ಟ್ರ ಪ್ರಾದೇಶಿಕ ಮತ್ತು ಸ್ಥಳೀಯ ಚರಿತ್ರೆ ಅಧ್ಯಯನಗಳು ಇಂದು ವ್ಯಾಪಕವಾಗಿ ಕಂಡುಬರುತ್ತವೆ[೨]. ಕೆರೆಗಳ ಇತಿಹಾಸ ಕರ್ನಾಟಕದಲ್ಲಿ ಆದಿ ಕದಂಬರ ಕಾಲದಿಂದ ಆರಂಭವಾಗುತ್ತದೆ. ಈ ಕದಂಬರ ಮೂಲ ಪುರುಷ ಮಯೂರ ವರ್ಮ, ಈವನು ಚಿತ್ರದುರ್ಗದ ಹತ್ತಿರಯಿರುವ ಚಂದ್ರವಳ್ಳಿಯಲ್ಲಿ ಎರಡು ಗುಡ್ಡಗಳ ನಡುವೆ ಒಂದು ಕೆರೆಯನ್ನು ದೃಢವಾಗಿ ಕಟ್ಟಿದನು ಈ ಕೆರೆಯನ್ನು ದೃಢಪಡಿಸಿದ್ದು ಸುಮಾರು ಕ್ರಿ.ಶ. ೩೫೦ ರಲ್ಲಿ, ಮುಂದೆ ಈ ಕೆರೆ ಹಾಳಾಯಿತು. ಇತ್ತೀಚೆಗೆ ೨೫-೩೦ ವರ್ಷಗಳ ಕೆಳಗೆ ಕರ್ನಾಟಕ ಸರ್ಕಾರದವರು ಈ ಕೆರೆಯ ಒಡ್ಡನ್ನು ವಿಸ್ತರಿಸಿ ಪುನರುದ್ಧಾರ ಮಾಡಿದರು. ಈಗ ಅದು ಉಪಯುಕ್ತವಾಗಿರುವುದಲ್ಲದೇ ಸುಂದರ ತಾಣವಾಗಿದೆ. ಇದೇ ರೀತಿ

ಪುನರುದ್ಧಾರಕ್ಕೆ ಅನೇಕ ಹಾಳು ಬಿದ್ದ ಕೆರೆಗಳು ಕಾದಿವೆ. ಹೊಸ ಕೆರೆಗಳನ್ನು ಕಟ್ಟುವದಕ್ಕೆ ಮೊದಲು ಹಳೆ ಕೆರೆಗಳನ್ನು ದುರಸ್ಥಿ ಮಾಡುವುದು ಯೋಗ್ಯ. ನಮ್ಮ ಪೂರ್ವಜರು ಈ ಕ್ರಮವನ್ನು ಅನುಸರಿಸುತ್ತಿದ್ದರು. ಚರಿತ್ರೆ ಎಂದಾಕ್ಷಣ ಕೇವಲ ತೇದಿ, ಯುದ್ಧ ಅಥವಾ ಕಾಲಾನುಕ್ರಮದ ಘಟನಾವಳಿಗಳ ಸರಮಾಲೆಗಳೇ ಅಲ್ಲ ಎಂಬ ಎಚ್ಚರ ಇತ್ತೀಚೆಗೆ ಮೂಡತೊಡಗಿದೆ[5] ಹಾಗೆ ಮಾಡಿದ್ದರಿಂದಲೇ ನಮ್ಮಲ್ಲಿ ಸಾವಿರಾರು ಕೆರೆಗಳು ಇನ್ನೂ ಜೀವಂತವಾಗಿವೆ. ಇದಕ್ಕೆ ಒಂದು ನಿದರ್ಶನ ಬನವಾಸಿ ಹತ್ತಿರದ ಗುಡ್ನಾಪುರದ ಕೆರೆ. ಇದನ್ನು ಸುಮಾರು ಕದಂಬರ ರವಿವರ್ಮ ಕಟ್ಟಿಸಿದ. ಈ ಕೆರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿ ದೊಡ್ಡ ಕೆರೆ. ಇದನ್ನು ಕಟ್ಟಿ ೧೫೦೦ ವರ್ಷಗಳಾದವು. ಈ ಕೆರೆ ಇನ್ನೂ ನೀರನ್ನು ಒದಗಿಸುತ್ತದೆ. ಕದಂಬರ ನಂತರ ಬಾದಾಮಿ ಚಾಲುಕ್ಯರು ಧಾರವಾಡ ಜಿಲ್ಲೆಯ ಗುಡಗೇರಿಯಲ್ಲಿ ಏಳು–ಎಂಟು ಕೆರೆಗಳನ್ನು ಕಟ್ಟಿದರು. ಅವರ ನಂತರ ಬಂದ ರಾಷ್ಟ್ರಕೂಟರು ಈಗಲೂ ಉಪಯುಕ್ತವಾಗಿರುವ ಕೆರೆಗಳನ್ನು ಕಟ್ಟಿದರು. ನಂತರ ಬಂದ ಕಲ್ಯಾಣಿ ಚಾಲುಕ್ಯರು ಕರ್ನಾಟಕದ ತುಂಬಾ ಅನೇಕ ಕೆರೆಗಳನ್ನು ಕಟ್ಟಿದ್ದಾರೆ.

ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಮೊದಲು ಹಳೆಯ ಕೆರೆಗಳನ್ನು ದುರಸ್ತಿ ಮಾಡುವುದು ಯೋಗ್ಯ[6] ವಿಜಯನಗರದ ಅರಸರು ಭಾರಿ ಕೆರೆಗಳನ್ನು ಮತ್ತು ಅದ್ಭುತವಾದ ಆಣೆಕಟ್ಟುಗಳನ್ನು ಕಟ್ಟಿ ವಿಶಾಲವಾದ ಕೆರೆ ಕಟ್ಟೆಗಳ ನಿರ್ಮಾಣದ ಪರಿಣಿತಿಯಲ್ಲಿ ಪ್ರಸಿದ್ಧರಾಗಿದ್ದಾರೆ. ಇವರ ಕಾಲದಲ್ಲಿ ಬಾಗಲಕೋಟ ಜಿಲ್ಲೆಯಲ್ಲಿ ಗದ್ದನಕೇರಿ ಕೆರೆ, ಭಗವತಿ ಕೆರೆ, ಜಲಗೇರಿ ಕೆರೆ, ಮಂಗಳೂರು ಕೆರೆ, ಚಿಕ್ಕಮಾಗಿ ಕೆರೆ, ಹಲಗಲಿ ಕೆರೆ, ಗದ್ಯಾಳದ ಕೆರೆ ಈ ಮುಂತಾದ ದೊಡ್ಡ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ.

ಈ ಕಾಲದಲ್ಲಿ ಕೆರೆ ಕಟ್ಟುವ ವಿಧಾನದಲ್ಲಿ ಒಂದು ವಿಶೇಷ ಬದಲಾವಣೆಯಾಯಿತು. ಇದರ ಪ್ರಕಾರ ಒಂದರ ಕೆಳಗೆ ಇನ್ನೊಂದು ಕೆರೆಯನ್ನು ಕಟ್ಟುವುದು, ಅಕ್ಕಪಕ್ಕದಲ್ಲಿ ಕೆರೆಯನ್ನು ಕಟ್ಟುವುದು, ಒಂದರ ನೀರು ಇನ್ನೊಂದರಲ್ಲಿ ಶೇಖರಣೆಯಾಗುವಂತೆ ಒಂದು ಕೆರೆಯ ಯಾವುದೇ ಏರಿ ಒಡೆದರೆ, ಏರಿಯನ್ನು ಸರಿಪಡಿಸಿ ನೀರನ್ನು ಸಂರಕ್ಷಣೆ ಮಾಡುವ ವಿಧಾನಕ್ಕಾಗಿ ಇಂತಹ ಒಂದರ ಕೆಳಗೆ ಒಂದು ಕೆರೆಗಳನ್ನು ಕಟ್ಟಿದ್ದಾರೆ.

೪.೬ ಧಾರ್ಮಿಕ ವ್ಯವಸ್ಥೆ:

ಭರತ ಖಂಡದಲ್ಲಿ ಶೈವ ಧರ್ಮವು ಅತ್ಯಂತ ಪ್ರಾಚೀನವಾದ ಧರ್ಮದಲ್ಲೊಂದು. ಶಿವೋಪಾಸನೆ ಇತಿಹಾಸವು ವೇದಕ್ಕಿಂತಲೂ ಹಿಂದೆ ಹೋಗುತ್ತದೆ. ಹರಪ್ಪ–ಮಹೆಂಜದಾರೊ ಸಂಸ್ಕೃತಿಯಲ್ಲಿ ಕೊಂಬುಗಳಿರುವ ದೇವತೆ ಚಿತ್ರಗಳಿರುವ ಮುದ್ರಿಕೆಗಳು, ಲಿಂಗಗಳು ದೊರೆತಿವೆ. ಇದರಿಂದ ಶಿವನ ಆರಾಧನೆ ಸಿಂಧೂನಾಗರಿಕತೆಯಷ್ಟು ಪ್ರಾಚೀನ ಎಂಬುದು ಸ್ಪಷ್ಟವಾಗುತ್ತದೆ.

ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಯಾದವರು, ಹೊಯ್ಸಳರು ಹಾಗೂ ಎಲ್ಲ ಸಾಮಂತ ಅರಸು ಮನೆತನಗಳು, ಧಾರ್ಮಿಕ ಸಾಮರಸ್ಯ ಸಹಬಾಳ್ವೆಯ ಸಿದ್ಧಾಂತವನ್ನು ಮುಂದಿಟ್ಟುಕೊಂಡೇ ಆಳ್ವಿಕೆ ನಡೆಸಿದರೆ ಇದರ ಬಗ್ಗೆ ಸಾಕಷ್ಟು ಆಧಾರಗಳು ಲಭ್ಯವಾಗುತ್ತವೆ[೫] ಶಿವ ಆರ್ಯರ ರುದ್ರನಾಗಿ ವೇದಗಳಲ್ಲಿ ಸ್ಥಾನ ಪಡೆದು ಕ್ರಮೇಣ ಹಿಂದೂ ಸಂಸ್ಕೃತಿಯ ಪ್ರಧಾನ ದೈವಗಳಲ್ಲಿ ಒಬ್ಬನಾಗಿ ಪರಿಣಮಿಸಿದನು.

ಮಾನವನ, ಆಚರಣೆ ಮತ್ತು ಸಂಪ್ರದಾಯಗಳನ್ನು ಪ್ರಾಗೈತಿಹಾಸಿಕ ಕಾಲದಿಂದಲೇ ರೂಢಿಸಿಕೊಂಡು ಬಂದನು[೬]. ಕರ್ನಾಟಕದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಶಿವ ಮತ್ತು ಲಿಂಗಗಳ ಉಪಾಸನೆ ಕಂಡು ಬರುತ್ತದೆ. ಕದಂಬರ ಕಾಲದಲ್ಲಿ ಶೈವ ದೇವಾಲಯಗಳಿಗೆ ದಾನ-ದತ್ತಿಗಳನ್ನು ಕೊಟ್ಟಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಹೀಗೆ ವಿವಿಧ ಸಾಮ್ರಾಜ್ಯಗಳು ಧರ್ಮ ಸಹಿಷ್ಣುತೆ ನೀತಿಯನ್ನು ಪಾಲಿಸಿ ಶೈವ ಧರ್ಮದ ಬೆಳವಣಿಗೆಗೆ ಕಾರಣೀಭೂತವಾಗಿವೆ. ಶೈವ ದೇವಾಲಯಗಳ ಪೂಜೆ-ಪುನಸ್ಕಾರ, ದೇವರ ಅಂಗಭೋಗ, ಗೀತ ನೃತ್ಯೋಪಾಸನ, ತಪೋಧನ, ವಿದ್ಯಾರ್ಥಿಗಳ ಸತ್ರ, ಆಹಾರ, ಔಷಧ ಮೊದಲಾದುವುಗಳಿಗೆ ದಾನ ನೀಡುವ ಸುಮಾರು ಒಂಭತ್ತು ಶಾಸನಗಳು ಬಾಗಲಕೋಟ ಜಿಲ್ಲೆಯಲ್ಲಿ ದೊರೆತಿವೆ.

ಬಾಗಲಕೋಟ ಜಿಲ್ಲೆಯಲ್ಲಿ ಶೈವ ದೇವಾಲಯಗಳಿರುವುದನ್ನು ಶಾಸನಗಳು ಗುರುತಿಸಿವೆ. ತುಳಸಿಗೇರಿಯ ಕ್ರಿ.ಶ. ೧೧೮೫-೮೬ರಲ್ಲಿನ ಒಂದು ಶಾಸನ ಜಗದ್ದೇವ, ಜಗತಾಪ, ಅಮ್ಮೆ, ಸೋಮೆ ಸಾವಂತನು ಶಿವ ದೇವಾಲಯಕ್ಕೆ ಭೂ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಶಿರೂರಿನ ಸಿದ್ಧೇಶ್ವರ ದೇವಾಲಯಕ್ಕೆ ನೀಡಿದ ಹಲವಾರು ದಾನಗಳು ಶಾಸನಗಳ ಮೂಲಕ ತಿಳಿದುಬರುತ್ತದೆ.

ವೈಷ್ಣವ:

ಕ್ರಿ.ಶ. ಆರಂಭದ ಮೊದಲೇ ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮದ ಪ್ರಭಾವವು ಕಂಡುಬಂದಿದೆ[೭]. ಕ್ರಿ.ಶ.ಪೂರ್ವದಲ್ಲಿ ದಕ್ಷಿಣಭಾರತವನ್ನು ಪ್ರವೇಶಿಸಿದ ವೈಷ್ಣವ ಧರ್ಮ ಕ್ರಿ.ಶ. ೪ನೇ ಶತಮಾನದ ವೇಳೆಗೆ ಕರ್ನಾಟಕದಲ್ಲಿ ಜನಪ್ರಿಯವಾಗಿತ್ತು. ಕನ್ನಡ ಭಾಷೆ ಅತ್ಯಂತ ಪ್ರಾಚೀನ ಶಾಸನವಾದ ಹಲ್ಮಿಡಿ ಶಾಸನವು ವಿಷ್ಣುವಿನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. ೬ನೇ ಶತಮಾನದಲ್ಲಿ ಮಹಾಭಾಗವತನಾದ ಚಾಲುಕ್ಯರಾಜ ಮಂಗಳೇಶನು ಬಾದಾಮಿಯಲ್ಲಿ ಪ್ರಸಿದ್ಧವಾದ ವೈಷ್ಣವ ಗುಹಾ ದೇವಾಲಯವನ್ನು ನಿರ್ಮಿಸಿದನು.

ಬೇವೂರಿನಲ್ಲಿ ಕಂಡುಬರುವ ನಾರಾಯಣ ದೇವಾಲಯವು ಇನ್ನೊಂದು ತ್ರಿಕೂಟಾಚಾರ್ಯ ದೇವಾಲಯವೆಂದು ಕರೆಯುತ್ತಾರೆ. ಇದೇ ಗ್ರಾಮದಲ್ಲಿರುವ ರಾಮೇಶ್ವರ ದೇವಾಲಯದಲ್ಲಿನ ತ್ರಿಮೂರ್ತಿಗಳ ಶಿಲ್ಪ ಅದ್ಭುತವಾದ ಅದರಲ್ಲಿಯೂ ವಿಷ್ಣುವಿನ ಶಿಲ್ಪವನ್ನು

ಗಮನಿಸಿದಾಗ ಈ ಗ್ರಾಮವು ವೈಷ್ಣವರ ಕೇಂದ್ರವೇ ಎಂಬ ಅನುಮಾನ ಉಂಟಾಗುತ್ತದೆ.

ಜೈನ:

ಚಂದ್ರಗುಪ್ತ ಮೌರ್ಯ ಭದ್ರಭಾಹುವಿನೊಡನೆ ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದಾಗಿನಿಂದ ಇದರ ಪ್ರಾಚೀನತೆಯನ್ನು ಗುರುತಿಸಲಾಗಿದೆ[೬]. ಕ್ರಿ.ಶ. ಪೂರ್ವ ೩೦೦ ರಲ್ಲೇ ಭದ್ರಬಾಹು ಮತ್ತು ಚಂದ್ರಗುಪ್ತರಿಂದ ದಕ್ಷಿಣದ ಕಡೆಗೆ ಜೈನ ಧರ್ಮ ಕಾಲಿಟ್ಟಿತು. ಅಂದು ಕಲ್ವಪ್ಪು ಎಂದು ಪ್ರಸಿದ್ಧವಾಗಿದ್ದ ಶ್ರವಣಬೆಳಗೊಳದಲ್ಲಿ ನೆಲೆಸಿದರು. ನಂತರ ಜೈನ ಆಚಾರ್ಯರರ ಪ್ರಚಾರ ಕಾರ್ಯದಿಂದ ಕ್ರಿ.ಶ. ೪ನೇ ಶತಮಾನದ ವೇಳೆಗೆ ಪಾಂಡ್ಯ, ಚೋಳ, ಚೇರ ಮೊದಲಾದ ರಾಜ್ಯಗಳಲ್ಲಿ ಈ ಧರ್ಮ ಪ್ರಬಲವಾಯಿತು. ಕರ್ನಾಟಕವು ಜೈನಧರ್ಮದ ಪ್ರಮುಖ ಕೇಂದ್ರವೆಂದು ಖ್ಯಾತಿಗೊಳಗಾಯಿತು.

ಜೈನ ದೇವಾಲಯಗಳನ್ನು ಬಸದಿಗಳೆಂದು ಕರೆಯುತ್ತಾರೆ. ಹಳ್ಳೂರು ಬಸದಿ ನಿರ್ಮಾಣ ವಿಶಿಷ್ಟವಾಗಿದೆ. ಅದನ್ನು ಮೇಲ್ಗುಡಿ ಎಂತಲೂ ಕರೆಯುತ್ತಾರೆ. ಇದು ಚಾಲುಕ್ಯರ ಕಾಲದಲ್ಲಿ ಜೈನ ಧರ್ಮದ ಕೇಂದ್ರವಾಗಿತ್ತೆಂದು ಹೇಳುತ್ತಾರೆ. ಈ ಬಸದಿಯಲ್ಲಿ ತೀರ್ಥಂಕರರು ಹಾಗೂ ಬಾಹುಬಲಿಯ ಶಿಲ್ಪಗಳು ಗಮನಾರ್ಹವಾಗಿವೆ. ಅದೇ ರೀತಿ ಐಹೊಳೆ, ಬಾದಾಮಿಯಲ್ಲಿ ಕೂಡಾ ಜೈನಬಸದಿಗಳನ್ನು ಕಾಣಬಹುದು.

ಬಾಗಲಕೋಟ ನಗರದ ಜೈನಪೇಟೆಯಲ್ಲಿರುವ ಪಾರ್ಶ್ವನಾಥ ದೇವಾಲಯವು ವಿಶಿಷ್ಟವಾಗಿದೆ. ಬಾಗಲಕೋಟ ಪ್ರದೇಶದಲ್ಲಿ ಜೈನಧರ್ಮವು ಪ್ರಾಚೀನ ಕಾಲದಿಂದ ಬೆಳೆದು ಬಂದಿದೆ ಎಂದು ಹೇಳಬಹುದು. ಮುಂದೆ ೧೧-೧೨ನೇ ಶತಮಾನದಲ್ಲಿ ಜೈನಧರ್ಮವು ಕ್ಷೀಣಿಸುತ್ತಾ ಬಂದಿತು.

ಬೌದ್ಧಧರ್ಮ:

ಪ್ರಾಚೀನ ಕರ್ನಾಟದಲ್ಲಿ ಬೌದ್ಧ ಧರ್ಮದ ಪ್ರಸಾರ, ಪ್ರಭಾವ ಕುರಿತು ಹಲವಾರು ಸಂಗತಿಗಳು ತಿಳಿದುಬರುತ್ತವೆ. ಜಿಲ್ಲೆಯ ಪ್ರಮುಖ ಐತಿಹಾಸಿಕ ಪ್ರದೇಶವಾದ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಿಲ್‌ಕೇರಿ ಮುಂತಾದ ತಾಣಗಳು ಬೌದ್ಧ ಧರ್ಮದ ಧಾರ್ಮಿಕ ಕೇಂದ್ರವಾಗಿದ್ದವು ಎಂಬುದು ತಿಳಿದುಬರುತ್ತದೆ. ಚೀನಿ ಪ್ರವಾಸಿ ಹುಯನ್‌ತ್ಸಾಂಗ್ ಬಾದಾಮಿ ಚಾಲುಕ್ಯರ ಸಾಮ್ರಾಜ್ಯಕ್ಕೆ ಭೇಟಿ ಕೊಟ್ಟು ಅಲ್ಲಿರುವ ಬೌದ್ಧ ಧರ್ಮದ ಕೇಂದ್ರದ ಬಗ್ಗೆ ಮತ್ತು ಬಿಕ್ಷು, ಬಿಕ್ಷುಣಿಯರ ಮತ್ತು ಬೌದ್ಧ ಧರ್ಮಕ್ಕೆ ರಾಜಾಶ್ರಯ ನೀಡಿದ ಬಾದಾಮಿ ಚಾಲುಕ್ಯರನ್ನು ತನ್ನ ಕೃತಿ 'ಸಿಯುಕಿ' ಯಲ್ಲಿ ಉಲ್ಲೇಖಿಸಿದ್ದಾನೆ.

ಅಡಿಟಿಪ್ಪಣಿ

೧) ಡಾ. ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿ ಪರಂಪರೆ, ಪ್ರಸಾರಾಂಗ,

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೩೧,೨೦೦೧
೨) ವಿರುಪಾಕ್ಷ ಪೂಜಾರಳ್ಳಿ, ಚರಿತ್ರೆಯ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫, ೨೦೧೩
೩) ಗೋವಿಂದರಾಜು ಸಿ. ಆರ್., ನವ ಚಾರಿತ್ರಿಕವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೩೭, ೨೦೦೯
೪) ರಾಜಾರಾಮ ಹೆಗಡೆ, (ಸಂ.) ಕೆರೆ ನೀರಾವರಿ ನಿರ್ವಹಣೆಯ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು,೦೧, ೨೦೦೨
೫) ಮೋಹನಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು,೧೨೮, ೨೦೦೪.
೬) ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿ ಪರಂಪರೆ, ಪುರ್ವೋಕ್ತ.
೭) ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿ ಪರಂಪರೆ, ಪುರ್ವೋಕ್ತ
೮) ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿ ಪರಂಪರೆ, ಪುರ್ವೋಕ್ತ

ಅಧ್ಯಾಯ : ೨೮

ಕೆರೆಗಳ ವಿವಿಧ ಆಯಾಮಗಳು

ಅಧ್ಯಾಯ ೫
ಕೆರೆಗಳ ವಿವಿಧ ಆಯಾಮಗಳು

೫.೧ ಕೆರೆ ನೀರಾವರಿ ವ್ಯವಸ್ಥೆ:

ಕರ್ನಾಟಕದಲ್ಲಿ ಬಹಳಷ್ಟು ಕೆರೆಗಳನ್ನು ನಿರ್ಮಾಣಮಾಡಿ ನೀರಾವರಿ ಸೌಲಭ್ಯ ಒದಗಿಸುವ ಕಡೆಗೆ ಗಮನಹರಿಸಿದ್ದರು.[೨] ಬಾಗಲಕೋಟ ಜಿಲ್ಲಾ ಪ್ರದೇಶದವು ಕೆರೆ ನೀರಾವರಿಗೆ ವಿಶಿಷ್ಟ ಮಹತ್ವ ಪಡೆದಿದೆ. ಈ ಭಾಗವನ್ನು ಆಡಳಿತ ಮಾಡಿದ ರಾಜ, ಸಾಮ್ರಾಜ್ಯಗಳು ತಮ್ಮ ಕಾಲಾವಧಿಯಲ್ಲಿ ಸಾಮ್ರಾಜ್ಯದ ಉದ್ದಕ್ಕೂ ಕೆರೆ ಕಟ್ಟೆಗಳನ್ನು, ತಟಾಕಗಳನ್ನು ನಿರ್ಮಾಣ ಮಾಡಿ ಅದರ ಮೂಲಕ ಕೃಷಿ, ವ್ಯವಸಾಯ, ನೀರಾವರಿ, ಪೂಜಾ ಕಾರ್ಯಗಳಿಗೆ ಹಾಗೂ ವರ್ಷದುದ್ದಕ್ಕೂ ಕುಡಿಯುವ ನೀರಿಗಾಗಿ ಮಳೆಗಾಲದಲ್ಲಿ ಅಧಿಕ ಪ್ರಮಾಣದಿಂದ ಮಳೆಯಿಂದ ಬಿದ್ದ ನೀರನ್ನು ಹರಿದು ಹೋಗದಂತೆ ಒಂದು ನೈಸರ್ಗಿಕ ತಗ್ಗಾದ ಪ್ರದೇಶದಲ್ಲಿ ಅಥವಾ ಎರಡು ಗುಡ್ಡಗಳ ನಡುವೆ ತಡೆಗೋಡೆ ನಿರ್ಮಿಸಿ ಅದರೊಳಗೆ ನೀರು ನಿಲ್ಲಿಸಿ ಆ ನೀರನ್ನು ವಿವಿಧ ಕಾರ್ಯಗಳಿಗೆ ಬಳಕೆ ಮಾಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಈ ವ್ಯವಸ್ಥೆ ಮೌರ್ಯ ಸಾಮ್ರಾಜ್ಯದಿಂದ ಆರಂಭಗೊಂಡು ಐತಿಹಾಸಿಕ ಸಾಮ್ರಾಜ್ಯಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ವೆಂಗಿ ಚಾಲುಕ್ಯರು, ದೇವಗಿರಿಯ ಸೇವುಣರು, ವಿಜಯನಗರ ಸಾಮ್ರಾಜ್ಯ, ಬಿಜಾಪುರದ ಆದಿಲ್‌ಶಾಯಿಗಳು, ಹೈದರಾಲಿ, ಟಿಪ್ಪು, ಮರಾಠರು ಇತರೆ ಸಾಮಂತರು ಇತರೆ ಸಂಸ್ಥಾನಗಳು ಈ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ.

ಕೆರೆಯ ತೂಬುಗಳನ್ನು ಕಾಲಕಾಲಕ್ಕೆ ಪರೀಕ್ಷಿಸಿ ಅವುಗಳನ್ನು ಸುಸ್ಥಿತಿಯಲ್ಲಿಡುವುದು ಮತ್ತು ನೀರನ್ನು ಸಮರ್ಪಕವಾಗಿ ಹಂಚುವುದು ಹಾಗೂ ಇನ್ನಿತರ ಕರ್ತವ್ಯಗಳ ಬಗೆಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಿರುವುದು ಗಮನಾರ್ಹವಾದ ಅಂಶವಾಗಿದೆ.[೧]

ಕೃಷಿ ಭೂಮಿಯ ವಿಸ್ತರಣೆಯಿಂದಾಗಿ ನಿರ್ಮಾಣಗೊಂಡ ಹೊಸ ಜನವಸತಿಗಳಲ್ಲಿ ಕೆರೆ ಮತ್ತು ದೇವಾಲಯಗಳನ್ನು ನಿರ್ಮಿಸುತ್ತಿದ್ದರು.[೩] ಈ ಪ್ರದೇಶವು ಸತತವಾಗಿ ಬರಗಾಲಕ್ಕೆ ಹೆಸರುವಾಸಿಯಾಗಿದೆ. ಹಾಗಾಗಿ ಅಲ್ಪ-ಸ್ವಲ್ಪ ಮಳೆಗಾಲದಲ್ಲೇ ಬಿದ್ದ ನೀರನ್ನು ತಗ್ಗಾದ ಪ್ರದೇಶದಲ್ಲಿ ಎರಡು ಗುಡ್ಡಗಳ ನಡುವೆ ನಿಲ್ಲಿಸಿ ವ್ಯವಸಾಯಕ್ಕೆ ಬಳಕೆ ಮಾಡುತ್ತಾ ಬಂದಿದ್ದಾರೆ. ಇದರಲ್ಲಿ ಪ್ರಮುಖವಾಗಿ ಬಾಗಲಕೋಟ ತಾಲೂಕಿನ ಶಿರೂರ ಗ್ರಾಮದ ಬಾಚಿಶೆಟ್ಟಿ ಕೆರೆಯಿಂದ ೮೦೦ ಎಕರೆ ಭೂಮಿ ನೀರಾವರಿಗೆ ಒಳಪಡುತ್ತಿದೆ.[೪] ಕೆರೆಯ ಕೆಳಗಿರುವ ಕಪ್ಪು ಭೂಮಿ ಪೂರ್ವ ಮತ್ತು ದಕ್ಷಿಣ ಭಾಗದ ತೂಬಿನ ಮೂಲಕ ನೀರು ಕಾಲುವೆಗೆ ಹರಿದು ವ್ಯವಸಾಯಕ್ಕೆ ಬಳಕೆ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಈ ನೀರಿನಿಂದ ಹೆಚ್ಚು ಸಮೃದ್ಧಿಯ ಬೆಳೆಗಳನ್ನು ಬೆಳೆಯುತ್ತಾರೆಂದು ಹಿರಿಯರು ಹೇಳುತ್ತಾರೆ. ಇದಲ್ಲದೇ ಗ್ರಾಮದ ಹೆಸರಿನ

ಹಿನ್ನೆಲೆ ನೋಡಿದಾಗ, ಅದು ಕೆರೆ ನೀರಿನಿಂದ ಸಿರಿವಂತ ಫಸಲು ಬೆಳೆದಿದ್ದರಿಂದ ಅದಕ್ಕೆ ಶಿರಿಯೂರು ಬೆಳೆಯ ಶ್ರೀಮಂತ ಊರು ಕೊನೆಗೆ ಶಿರೂರು ಎಂದು ಬೆಳೆದು ಬಂದಿರಬಹುದೆಂದು ಸ್ಥಳೀಯರು ಹೇಳುತ್ತಾರೆ.

ಇದೇ ತಾಲೂಕಿನ ಮುಚಖಂಡಿ ಕೆರೆಯು ೨೪೦ ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ.[೫] ಇದರ ಮುಂದೆ ಬರುವ ನವನಗರ ಎಂಬ ಹೊಸ ನಗರದ ಪ್ರದೇಶದಲ್ಲಿ ನೀರಾವರಿಗೆ ಒಳಪಡುತ್ತಿತ್ತು. ಆದರೆ ನಗರೀಕರಣದ ಪರಿಣಾಮವಾಗಿ ಈಗ ಅಲ್ಲಿ ಎಲ್ಲಾ ರೀತಿಯ ಕೃಷಿ ಕಾರ್ಯಗಳು ನಿಂತುಹೋಗಿವೆ. ಇತ್ತೀಚಿನ ದಿನಮಾನಗಳಲ್ಲಿ ಅಕಾಲಿಕ ಮಳೆ, ಬರ ಸರ್ಕಾರದ ಅಲಕ್ಷ್ಯ, ಕೆರೆಯ ಆಕ್ರಮಣ ಮುಂತಾದ ಕಾರಣಗಳಿಂದ ಕೆರೆಗಳು ಮಾಯವಾಗುವ ಸಂದರ್ಭ ಬಂದೊದಗಿದೆ. ಅದೇ ರೀತಿ ಗದ್ದನಕೇರಿ ಕೆರೆಯು ನೂರಾರು ಎಕರೆಗೆ ನೀರು ಒದಗಿಸುತ್ತದೆ. ಇದು ತುಂಬಿದಾಗ ಸುತ್ತಲೂ ಇರುವ ತೋಟ, ಬಾವಿಗಳು ಮತ್ತು ಕೊಳವೆ ಬಾವಿಗಳ ಅಂತರ್‌ಜಲದ ಮಟ್ಟ ಹೆಚ್ಚಿಗೆ ಆಗುತ್ತಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಐತಿಹಾಸಿಕ ಪ್ರದೇಶವಾದ ಬಾದಾಮಿ ಚಾಲುಕ್ಯರಿಂದ ನಿರ್ಮಾಣಗೊಂಡ ಹಲವಾರು ಕೆರೆ ಕಟ್ಟೆಗಳು, ಪುಷ್ಕರಣಿಗಳಿಂದ ಬರುವ ನೀರು ಕೃಷಿಗೆ, ಕುಡಿಯಲು ಹಾಗೂ ದೇವಸ್ಥಾನದಲ್ಲಿ ತೀರ್ಥವಾಗಿ ಬಳಸಲ್ಪಡುತ್ತದೆ. ಇದರಲ್ಲಿ ಬಾದಾಮಿ ಅಗಸ್ತ್ಯತೀರ್ಥ ಕೆರೆಯು ತುಂಬಿದಾಗ ತೂಬಿನ ಮೂಲಕ ಹರಿದು ಕೃಷಿಗೆ ಬಳಕೆಯಾಗುತ್ತದೆ. ಇದರ ಹೆಚ್ಚುವರಿ ನೀರು ಬನಶಂಕರಿಯ ದೇವಸ್ಥಾನದ ಮುಂದೆ ಹರಿಯುವ ಸರಸ್ವತಿ ಹಳ್ಳಕ್ಕೆ ಬಂದು ಸೇರುತ್ತದೆ. ಈ ನೀರಿನಿಂದ ಸಮೃದ್ಧವಾದ, ಎಲೆ, ತೆಂಗು, ಬಾಳೆಗಳನ್ನು ಬೆಳೆಯುತ್ತಾರೆ. ಇದಲ್ಲದೇ ಬನಶಂಕರಿ ದೇವಾಲಯದ ಮುಂದೆ ಇರುವ ಪುಷ್ಕರಣಿ, ಮಹಾಕೂಟದ (ಹಳೆ ಮತ್ತು ಹೊಸ) ಪುಷ್ಕರಣಿಗಳು ಸದಾಕಾಲ ನೀರಿನಿಂದ ತುಂಬಿ ಹರಿಯುವದರಿಂದ ಈ ನೀರನ್ನು ಕೃಷಿಗೆ ಬಳಸುತ್ತಾರೆ. ಇದರ ಜೊತೆಗೆ ನೀರಬೂದಿಹಾಳ ಕೆರೆ ತುಂಬಿದಾಗ ಅದರ ಮುಂದೆ ಬರುವ ಪ್ರಮುಖ ಗ್ರಾಮಗಳಾದ ಕಲಾದಗಿ, ಕಳಸಕೊಪ್ಪ, ಕಜ್ಜಿಡೋಣಿ, ಹಿರೇಸಂಶಿ ಮತ್ತು ಕಿರಿಸಂಶಿ, ತುಳಸಿಗೇರಿ ಮುಂತಾದ ಹತ್ತಾರು ಹಳ್ಳಿಗಳ ಕೃಷಿಗೆ ನೀರು ಬಳಕೆಯಾಗುತ್ತದೆ. ಇದಲ್ಲದೇ ಕೆರೆ ಸುತ್ತಲೂ ೨೦ಕಿ.ಮೀ ಅಂತರ್ ಜಲಮಟ್ಟ ಇಮ್ಮಡಿಯಾಗುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

ಬಾದಾಮಿ ತಾಲೂಕಿನ ಕೆಲವಡಿ ಮತ್ತು ತಿಮ್ಮಸಾಗರದ ಬೃಹತ್ ಕೆರೆಗಳು ವಿಸ್ತೃತವಾದ ಕೃಷಿಗೆ ನೀರನ್ನು ಒದಗಿಸುತ್ತವೆ.[೬] ಇದರ ಕಾಲುವೆಗಳು ಸುಮಾರು ೧೦ ಕಿ.ಮೀ.ದೂರದವರೆಗೆ ಹಬ್ಬಿವೆ. ಇಲ್ಲಿ ಬರುವ ಗ್ರಾಮಗಳಾದ ತಿಮ್ಮಸಾಗರ, ಕೆಲವಡಿ, ಸಂಗಾಪೂರ, ಹಂಸನೂರ, ತೋಗುಣಶಿ, ಗುಳೇದಗುಡ್ಡದ ರೇಲ್ವೆ ನಿಲ್ದಾಣದ ಪ್ರದೇಶಗಳು

ಈ ನೀರನ್ನು ಕೃಷಿಗೆ ಬಳಕೆ ಮಾಡಿಕೊಳ್ಳುತ್ತವೆ. ಈ ಕೆರೆಗಳ ಇನ್ನೊಂದು ವೈಶಿಷ್ಟವೆಂದರೆ ತೂಬುಗಳಿಗೆ ಸೇರ್ಪಡೆಯಾಗುವ ಕಸಕಡ್ಡಿಗಳನ್ನು ತೆಗೆಯುವ ವೈಜ್ಞಾನಿಕ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರ ಮೂಲಕ ಏಕಕಾಲದಲ್ಲಿ ಎರಡು ಭೂಪ್ರದೇಶಗಳಿಗೆ ಕೃಷಿಗೆ ನೀರು ಒದಗಿಸುವ ವ್ಯವಸ್ಥೆ ಮಾಡಿದ್ದಾರೆ.

ಇಲ್ಲಿರುವ ಖಾನಾಪೂರ ಕೆರೆ, ಗಂಜಿಕೆರೆ ಮತ್ತು ಪರ್ವತಿ ಕೆರೆಗಳಿಂದ ವಿಶಾಲವಾದ ಭೂಪ್ರದೇಶ ನೀರಾವರಿಗೆ ಒಳಪಡುತ್ತದೆ. ಇದರಲ್ಲಿ ಗಂಜಿಕೆರೆಯು ೩೫೦ ಎಕರೆ ಕೆರೆ ಕೃಷಿಗೆ ನೀರು ಒದಗಿಸುತ್ತದೆ. ಕೆರೆಯ ಮುಂದೆ ನಿರ್ಮಾಣ ಮಾಡಿದ ಕಾಲುವೆ ಮೂಲಕ ನೀರು ಹರಿದು ವ್ಯವಸಾಯಕ್ಕೆ ಬಳಕೆಯಾಗುತ್ತಿದೆ. ಈ ಕೆರೆಯ ನೀರಿನಿಂದ ಗೋಧಿ ಮುಂತಾದ ದವಸ–ಧಾನ್ಯಗಳನ್ನು ಉತ್ತಮ ರೀತಿಯಲ್ಲಿ ಬೆಳೆಯುತ್ತಿವೆ ಎಂದು ಸ್ಥಳೀಯರು ಹೇಳುತ್ತಾರೆ.

ಇನ್ನೊಂದು ಕೆರೆಯಾದ ಪರ್ವತಿ ಕೆರೆ ನೀರು ೪೫೦ ಎಕರೆಗೆ ಕೃಷಿ ಕಾರ್ಯಕ್ಕೆ ನೀರು ಒದಗಿಸುತ್ತದೆ. ಈ ಕೆರೆಗೆ ಖಾನಾಪೂರದ ಕೆರೆ ನೀರು ಬಂದು ತಲುಪುತ್ತದೆ. ಇದರಿಂದ ಕೃಷಿಗೆ ಹೆಚ್ಚಿನ ನೀರು ದೊರೆಯುತ್ತದೆ. ಇದರ ಜೊತೆಗೆ ಖಾನಾಪೂರ ಕೆರೆ ಬತ್ತಿದಾಗ ಅದರ ಅಂಗಳದಲ್ಲಿ ಅಲ್ಲಿಯ ಸ್ಥಳೀಯ ಜನರು ಬಾವಿಗಳನ್ನು ತೋಡಿ ಆ ನೀರಿನಂದ ಸುಮಾರು ೨೦೦ ಎಕರೆ ಪ್ರದೇಶದಲ್ಲಿ ಶೇಂಗಾ ಮತ್ತು ಇತರ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಇದರ ಪಕ್ಕದಲ್ಲಿ ಬರುವ ಗಿಡಗಿನ ಬಸವೇಶ್ವರ ಕೆರೆಯು ಕೂಡಾ ೪೫೦ ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ.

೫.೨ ಭೂ ಹಿಡುವಳಿ ವ್ಯವಸ್ಥೆ

ಬಾಗಲಕೋಟ ಜಿಲ್ಲೆಯ ಪ್ರಮುಖವಾದ ಮತ್ತು ಐತಿಹಾಸಿಕವಾದ ೬೦ ಕೆರೆಗಳನ್ನು ಚಾರಿತ್ರಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಬಹುಜನಾಂಗೀಯವಾಗಿ ಅವಲೋಕನ ಮಾಡಿದ್ದೇನೆ. ಅದರಲ್ಲೂ ಕೆರೆಗಳು ಮತ್ತು ದಲಿತರು ಇರುವ ನಡುವೆ ಸಂಬಂಧಗಳನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ಕೆರೆಗಳು ಕೇವಲ ಒಂದೇ ಜನಾಂಗದ ಅಥವಾ ಉನ್ನತ ವರ್ಗದವರ ಸ್ವತ್ತಾಗದೇ ಅದು ಎಲ್ಲ ವರ್ಗದವರ ಆರ್ಥಿಕ ಅಭಿವೃದ್ಧಿ ಹಾಗೂ ಮಾನವನ ಸರ್ವಾಂಗೀಣ ಬೆಳವಣಿಗೆಗೆ ಸಹ ಕಾರಣವಾಗಬೇಕಾಗುತ್ತದೆ. ಆದರೆ ಇಂದು ಕೆರೆಗಳ ಅಂಚಿನಲ್ಲಿರುವ ಫಲವತ್ತಾದ ಭೂಮಿ ಅದಕ್ಕೆ ಬಳಕೆಯಾಗುವ ನೀರು ಮತ್ತು ಪ್ರದೇಶ ಉಳ್ಳವರ ಸ್ವತ್ತಾಗುತ್ತಿರುವುದು ವಿಪರ್ಯಾಸವಾಗಿದೆ. ಇದರ ಬಗ್ಗೆ ಈ ಕೆಳಗಿನಂತೆ ವಿವರಿಸಿದ್ದೇನೆ.

ಬಾಗಲಕೋಟ ತಾಲೂಕಿನ ಹಲವಾರು ಕೆರೆಗಳಿಂದ ಕೃಷಿಗೆ ನೀರು ಒದಗಿಸುವ ಭೂ ಒಡುವಳಿ ವ್ಯವಸ್ಥೆ ಉಳ್ಳವರ ಪಾಲಾಗಿದೆ. ಶಿರೂರಿನ ಕೆರೆಗಳ ನೀರು ಮತ್ತು ಕೆರೆಯ

ಪಕ್ಕದ ಭೂಮಿ ಅಲ್ಲಿನ ಬ್ರಾಹ್ಮಣರು, ದೇಸಾಯಿಗಳು, ಕುಲಕರ್ಣಿಗಳು, ನಾಡಗೌಡರು. ಪೂಜಾರಿಗಳು, ಗೌಡರು ಮುಂತಾದ ವರ್ಗದವರ ಪಾಲಾಗಿದೆ. ಅವರೇ ತಮ್ಮ ತೋಟ ಮತ್ತು ಗದ್ದೆಗಳಿಗೆ ನೀರು ಪೂರೈಕೆ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಅಪ್ಪಿ–ತಪ್ಪಿಯೂ ದಲಿತರು, ಹಿಂದುಳಿದವರು, ಕೃಷಿ ಕಾರ್ಮಿಕರಿಗೆ ಭೂ ಹಿಡುವಳಿಯ ಸ್ವಾತಂತ್ರ್ಯ ಇರುವುದಿಲ್ಲ. ಒಂದುವೇಳೆ ಅವರಿಗೆ ಭೂಮಿ ಇದ್ದರೂ ಕೂಡಾ ಉನ್ನತ ವರ್ಗದವರು ಅವರ ಭೂಮಿಯನ್ನು ಕಸಿದುಕೊಳ್ಳುತ್ತಾರೆ. ಇಲ್ಲವೇ ಅವರ ಭೂಮಿಗೆ ನೀರನ್ನು ಬಿಡುವುದಿಲ್ಲ. ಇಂತಹ ವ್ಯವಸ್ಥೆ ಮೂಡಿಬಂದಿದೆ. ಅದೇ ರೀತಿ ಮುಚಖಂಡಿ ಕೆರೆ ಮುಂದಿನ ಭೂಪ್ರದೇಶ ನಗರೀಕರಣಕ್ಕೆ ತುತ್ತಾಗಿದೆ. ಆದರೆ ಇಂದು ಕೆರೆಯು ನೀರಿನಿಂದ ತುಂಬಲಾಗದ ಕಾರಣ ಅದರ ಅಂಗಳದಲ್ಲಿ ಮುಚಖಂಡಿ ಗ್ರಾಮ, ನೀರಲಕೇರಿ, ಸೂಳಿಕೇರಿ, ಕಗಲಗೊಂಬ ಮುಂತಾದ ಗ್ರಾಮಗಳ ಉನ್ನತ ವರ್ಗಗಳ ಕುಟುಂಬಗಳು ಆ ಅಂಗಳವನ್ನು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹಂಚಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ.

ಬಾದಾಮಿ ತಾಲೂಕಿನ ಕೆರೆಗಳಾದ ಕೆಂದೂರು, ಅಗಸ್ತ್ಯತೀರ್ಥ, ಖಾನಾಪೂರ, ಗಂಜಿಕೆರೆ, ಮಂಗಳೂರು ಕೆರೆ, ನಂದಿಕೇಶ್ವರ ಕೆರೆ, ಇದರ ಜೊತೆಗೆ ಇಲ್ಲಿರುವ ಹಲವಾರು ಪುಷ್ಕರಣಿಗಳ ನೀರು ಉಳ್ಳವರ ಕೃಷಿಗೆ ಬಳಕೆಯಾಗುತ್ತಿದೆ.

೫.೩. ಸಾಂಸ್ಕೃತಿಕ ಆಚರಣೆಗಳು

ಕೆರೆಗಳ ಕುರಿತು ಹಲವು ನಂಬಿಕೆಗಳು, ಆಚರಣೆಗಳು ಅನಾದಿಕಾಲದಿಂದ ಬೆಳೆದು ಬಂದಿವೆ.[೭] ಸಾಂಸ್ಕೃತಿಕ ಆಚರಣೆಗಳಲ್ಲಿ ಮಾನವನ ಉಪಕಾರಿ ಪ್ರಾಣಿ, ಪಕ್ಷಿ, ಸಸ್ಯ ಹಾಗೂ ಪ್ರಾಕೃತಿಕ ವಸ್ತುಗಳನ್ನು ಪೂಜನೀಯವಾಗಿ ಕಾಣಲಾಗಿದೆ. ಅವುಗಳ ಸಂರಕ್ಷಣೆಗಾಗಿ ಹಲವು ಬಗೆಯ ನಂಬಿಕೆ ನಿಷೇಧಗಳನ್ನು ಹೆಣೆಯಲಾಗಿದೆ. ಅವುಗಳು ಆಚರಣೆಗಳ ಮುಖಾಂತರ ಮತ್ತೆ ಮತ್ತೆ ಜೀವಂತಗೊಳ್ಳುತ್ತಿರುತ್ತವೆ. ಈ ಜೀವಂತಗೊಳಿಸುವ ಕ್ರಿಯೆ ದೊಡ್ಡದು. ಇದರಲ್ಲಿ ಜೀವಮುಖಿಯಾದ ಯಾವ ವಸ್ತುವು ನಾಶವಾಗಲೇಬಾರದು ಎನ್ನುವ ಎಚ್ಚರಿಕೆಯಿದೆ. ಆದರೆ ಆಧುನಿಕ ವ್ಯವಸ್ಥೆ ನಮ್ಮ ಪಾರಂಪರಿಕ ಜ್ಞಾನವನ್ನು ಮರೆಯಿಸುವ ಕುತಂತ್ರ ಮಾಡುತ್ತಿದೆ. ಇದಕ್ಕಾಗಿ ನಾನಾ ರೀತಿಯ ನಾಜೂಕಿನ ವೇಷಗಳನ್ನು ಧರಿಸುತ್ತಿದೆ. ಅದರ ಹಿಂದೆ ತನ್ನದೇ ಸಾಮ್ರಾಜ್ಯವನ್ನು ಸ್ಥಾಪಿಸುವ ಹುನ್ನಾರವಿದೆ. ಆದರೆ ಈಗಿರುವ ಒಂದು ಸಂತೋಷದ ಸಂಗತಿ ಎಂದರೆ ಜನರು ಹಳೆಯದರತ್ತ ಅದರ ಆಚರಣೆ ಕಡೆಗೆ ಹೊರಟಿದ್ದಾರೆ. ಆದರೆ ಇದು ಬೆರಳಣಿಕೆಯಷ್ಟು ಮಾತ್ರ. ಆಚರಣೆಗಳಲ್ಲಿ ಹುದುಗಿರುವ ಜೀವಮುಖಿ ಅಂಶಗಳನ್ನು ಗಮನಿಸಬೇಕು. ಅವುಗಳು ಸಾರುವ ಸಂದೇಶವನ್ನು ಅರಿಯಬೇಕು. ಅವುಗಳಲ್ಲಿರುವ ಆರೋಗ್ಯಪೂರ್ಣ ಜೀವನ, ಪ್ರಕೃತಿ ಸಂರಕ್ಷಣೆ ಮುಂತಾದುವುಗಳ ಅರಿವಿನ ಸೂತ್ರಗಳನ್ನು, ನಂಬಿಕೆ, ನಿಷೇಧಗಳ ಮೂಲಕ ಅರ್ಥೈಸಿಕೊಳ್ಳಬೇಕಾಗಿದೆ. ನೆಲ,

ಜಲ, ಅಗ್ನಿ, ವಾಯು ಮತ್ತು ಆಕಾಶವನ್ನು ಪೂಜಿಸದ ಆಚರಣೆಗಳಿಲ್ಲ. ಮಣ್ಣು ಅಥವಾ ಸೆಗಣಿಯಿಂದ ಮಾಡಿದ ಗಣಪ ನೆಲವನ್ನು ಸಂಕೇತಿಸಿದರೆ, ಕಲಶದಲ್ಲಿರುವ ನೀರು ಜಲವನ್ನು ಸಂಕೇತಿಸುತ್ತದೆ. ದೀಪಗಳು ಅಗ್ನಿಯನ್ನು, ಸರ್ವವ್ಯಾಪಿಯಾಗಿದ್ದು, ಸ್ಪರ್ಶ ಗುಣವನ್ನು ಹೊಂದಿರುವ ಗಾಳಿ, ವಾಯುವನ್ನು, ಆಳ ಅಗಲಗಳಿಲ್ಲದ ನಿರ್ವಾತ ಪ್ರದೇಶವು ಆಕಾಶವನ್ನು ಸಾಂಕೇತಿಸಿವೆ. ಪಂಚಭೂತಗಳ ಸಮಪ್ರಮಾಣದ ಮಿಲನದಿಂದ ಜೀವನವು ಜೀವೋತ್ಪತ್ತಿಯಾಗುವುದು. ಮತ್ತೆ ಜೀವ ಲಯವಾಗಿ ಅಲ್ಲಿಯೇ ಸೇರುವುದು. ಇವು ಜನಪದ ಸಂಸ್ಕೃತಿಯ ಜ್ಞಾನ ವಿಶಾಲತೆಗೆ ಸಾಕ್ಷಿ ನೀಡಿವೆ. ಆಚರಣೆಗಳಲ್ಲಿ ನಿಸರ್ಗದ ಯಾವುದೇ ವಸ್ತು, ಪ್ರಾಣಿ, ಪಕ್ಷಿ, ಮರ, ಗಿಡ, ಕಲ್ಲು ಇತ್ಯಾದಿಗಳು ಸಮಯಾನುಸಾರ, ಸಂದರ್ಭಾನುಸಾರ ಪೂಜನೀಯವಾಗಿರುತ್ತವೆ. ವಿಜ್ಞಾನ ಹಾಗೂ ಮಾನವಿಕಗಳ ಜ್ಞಾನಪಾಕವಾಗಿದ್ದು, ಕಾಲಕಾಲಕ್ಕೆ ಅಗತ್ಯವಿರುವ ವಸ್ತು–ವಿಚಾರಗಳ ಬಗೆಗೆ ಗಮನಹರಿಸುವಂತೆ ಒತ್ತಾಯಿಸುತ್ತವೆ.

ನೀರು, ನೆಲ, ದೀಪ ಮತ್ತು ಸಸ್ಯವಿಲ್ಲದ ಪೂಜೆ–ಪುನಸ್ಕಾರಗಳು ಇಲ್ಲವೆಂದೇ ಹೇಳಬೇಕು. ಕಲಶದಲ್ಲಿ ಮಣ್ಣಿನ ಮಡಕೆ, ಅದರಲ್ಲಿ ತುಂಬಿದ ನೀರು, ಅದರ ಕಂಠದಲ್ಲಿ ಸಿಂಗರಿಸಿದ ಎಲೆ, ಕಾಯಿ, ಹೂ ಹಾಗೂ ಕಲಶದ ತಳದಲ್ಲಿರುವ ಅಕ್ಕಿ ಇತ್ಯಾದಿಗಳು ಜೀವಮುಖಿ ವಸ್ತುಗಳಾಗಿವೆ. ಕಲಶ ಒಂದು ರೀತಿಯಲ್ಲಿ ಪಂಚಭೂತಗಳ ಸಂಕೀರ್ಣದ ಸಂಕೇತವಾಗಿ ಕಾಣುವುದು. ಅದರಲ್ಲಿ ನೀರು ಜೀವಸೃಷ್ಟಿ ಮತ್ತು ಪುಷ್ಟಿಗಳಿಗೆ ಪ್ರಾಣಾಧಾರ. ಆ ಕಾರಣಗಳಿಂದಾಗಿಯೇ ಜಗತ್ತಿನ ಎಲ್ಲಾ ಆಚರಣೆಗಳು ಜಲಕೇಂದ್ರಿತವೇ ಆಗಿವೆ. ದೈನಂದಿನ ಚಟುವಟಿಕೆಗಳಾದ ಶುಚಿತ್ವ, ಅಡುಗೆ, ಪಶುಪಾಲನೆ, ಔಷಧಿ, ಮಾಟ–ಮಂತ್ರ, ನಿಷೇಧ, ಕೆಡಕು, ನಿವಾರಣೆ ಮತ್ತು ಜೈವಿಕ ಅಗತ್ಯತೆಯಲ್ಲಿ ಹಾಗೂ ಸಕಲ ಜೀವರಾಶಿಗಳಿಗೆ ಬಳಕೆಯಾಗುವ ವಸ್ತುವಾಗಿದೆ. ಎಲ್ಲ ಬಗೆಯ ಜೀವಾಧಾರವಾಗಿರುವ ನೀರು, ಗಂಗೆಯಾಗಿ, ಮಳೆಯಾಗಿ, ನದಿಯಾಗಿ, ಅತಿ ಅವಶ್ಯ ತೀರ್ಥವಾಗಿ ಪೂಜನೀಯವಾಗಿದೆ. ನೀರನ್ನು ವಿವೇಚನೆಯಿಂದ ಬಳಸಬೇಕೆಂಬ ಸಂದೇಶವಿರುವುದು ಗಮನಾರ್ಹ ಸಂಗತಿ. ವಿಗ್ರಹದ ನೀರು, ತೆಂಗಿನಕಾಯಿ ನೀರು, ಬಾವಿ ಮತ್ತು ನದಿಗಳಿಂದ ಸಂಗ್ರಹಿಸಿದ ನೀರು ದೈವೀಶಕ್ತಿಯಿಂದ ಕೂಡಿದ್ದು, ತೀರ್ಥದ ರೂಪದಲ್ಲಿ ಸ್ವೀಕರಿಸಿದರೆ ಪಾಪ ಪರಿಹಾರವಾಗುತ್ತದೆನ್ನುವ ನಂಬಿಕೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಇದರ ಮೂಲಕ ನೀರಿನ ಮಹತ್ವ ಹಾಗೂ ಅದರ ಮಿತ ಬಳಕೆಯ ಬಗೆಗೆ ಮಾರ್ಗದರ್ಶನವಿದೆ.

ನದಿ, ಕೆರೆ, ತಟಾಕ, ಸರೋವರಗಳು, ಕಲ್ಯಾಣಿಗಳ ದಡದಲ್ಲಿನ ದೈವಗಳ ಗುಡಿಗಳು, ದೇವಾಲಯಗಳು ಹಾಗೂ ನದಿ ದಡದಲ್ಲಿನ ತೀರ್ಥಕೊಳಗಳು ನೀರಿನ ಜೀವಮುಖಿ ಅಂಶಗಳನ್ನು ಸದಾ ನಾಮಫಲಕದಂತೆ ಪ್ರತಿಫಲಿಸಿ, ಶುಚಿತ್ವಕ್ಕೆ ಒತ್ತಾಯಿಸುತ್ತವೆ. ಶುದ್ಧ

ನೀರಿಗೆ ಔಷಧಿ ಗುಣವಿದೆ. ಮಾಟ–ಮಂತ್ರ ತಂತ್ರಾಚರಣೆಗಳಿಗೆ ಬಳಸುವ ನೀರಿಗೆ ಕ್ಷುದ್ರ ಶಕ್ತಿಯನ್ನು ಬಿಡಿಸುವ ಮತ್ತು ರೋಗ ಗುಣಪಡಿಸುವ ಶಕ್ತಿ ಇದೆ ಎಂಬ ನಂಬಿಕೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಶುದ್ಧವಾದ ನೀರನ್ನು ಕುಡಿಯುವುದರಿಂದ ನೂರಾರು ಕಾಯಿಲೆಗಳನ್ನು ತಡೆಗಟ್ಟಬಹುದೆಂದು ಭಾರತೀಯ 'ಯೋಗ ವಿಜ್ಞಾನ' ಸಂಶೋಧನಾ ಸಂಸ್ಥೆ ಖಚಿತಪಡಿಸಿದೆ. ಈ ಎಲ್ಲ ಜೀವಪರ ವಿಚಾರಗಳನ್ನು ಅನುಭವದಿಂದ ಅರಿತ ಜನಪದರ ಮನಸ್ಸು ನೀರನ್ನು ದೈವವಾಗಿಸಿ, ಆಚರಣೆಯ ಸಿಹಿಲೇಪನದೊಂದಿಗೆ ಇಂದಿಗೂ ವ್ಯವಸ್ಥಿತವಾಗಿ ನಡೆಯುವಂತೆ ಮಾಡುತ್ತದೆ.

ಜೀವನಾವರ್ತನ ಹಾಗೂ ವಾರ್ಷಿಕ ವರ್ತನದ ಆಚರಣೆಗಳು ಜಲಕೇಂದ್ರೀತವಾಗಿರುವುದನ್ನು ಗಮನಿಸಬಹುದು. ಮನುವಿನ ನಾಮಕರಣದಂದು ಐದು ಜನ ಮುತ್ತೈದೆಯರು ಬಾವಿಯಿಂದ ಹೊತ್ತು ತಂದ ತುಂಬಿದ ಕೊಡಗಳ ಸಾಕ್ಷಿಯಲ್ಲಿಯೇ ಮಗುವಿನ ಹೆಸರನ್ನು ಅಧಿಕೃತಗೊಳಿಸುತ್ತಾರೆ. ತುಂಬಿದ ಕೊಡ ತುಂಬು ಜೀವನದ ಸಂಕೇತವಾಗುತ್ತದೆ. ಋತುಮತಿಯಾದ ಸಂದರ್ಭದ ನೀರೆರೆಯುವ ಶಾಸ್ತ್ರ, ಮದುವೆಯಲ್ಲಿ ಜರುಗುವ ಗಂಗಮ್ಮನ ಅಥವಾ ಗಂಗಾಪೂಜೆ, ನದಿ ಕೆರೆಗಳು ತುಂಬಿದಾಗ ಅರ್ಪಿಸುವ ಬಾಗಿನ, ಸಮುದಾಯಗಳಿಂದ ಬಹಿಷ್ಕಾರಗೊಂಡ ವ್ಯಕ್ತಿಗಳಿಗೆ ಬೆಂಕಿ ಮತ್ತು ನೀರನ್ನು ನೀಡದಿರುವುದು. ವ್ಯಕ್ತಿಯ ಸಾವಿನ ಕ್ಷಣದಲ್ಲಿ ಬಾಯಿಗೆ ನೀರು ಹಾಕುವುದು, ಅಂತಿಮ ಸಂಸ್ಕಾರದಲ್ಲಿ ತುಂಬಿದ ಕೊಡವೊಂದನ್ನು ಹೊತ್ತು ಮೂರು ಸುತ್ತು ಬಂದು ನೆಲಕ್ಕೆ ಜರಿಯುವುದು. ಪ್ರಾಣ ಬಿಟ್ಟ ಸ್ಥಳದಲ್ಲಿ ಮಣೆಯ ಮೇಲೆ ತುಂಬಿದ ಕೊಡವನ್ನು ಇಡುವುದು, ಸತ್ತ ವ್ಯಕ್ತಿಯನ್ನು ದೈವವಾಗಿಸುವುದು ಇತ್ಯಾದಿ ಆಚರಣೆಗಳಲ್ಲಿ ನೀರು ಮತ್ತು ಮನುಷ್ಯನ ಸಂಬಂಧವನ್ನು ಸಾಂಕೇತಿಕವಾಗಿ ಕಾಣಬಹುದು.

ಜಾತ್ರೆ ಹಬ್ಬಗಳಲ್ಲಿ ದೇವರ ವಿಗ್ರಹಗಳನ್ನು ಮೆರವಣಿಗೆಯಲ್ಲಿ ಸಾಗಿ 'ಹೊಳೆಸ್ನಾನ' ಮಾಡಿಸಿ ನೀರಿಗೆ ಪೂಜೆ ಸಲ್ಲಿಸುವುದು, ಅಲ್ಲಿಯೇ ಕೊಡವೊಂದನ್ನು ತುಂಬಿಸಿಕೊಂಡು ಮೆರವಣಿಗೆಯಲ್ಲಿ ಬಂದು ಕಲಶ ಪ್ರತಿಷ್ಠಾಪನೆ ಮಾಡುವುದು. ಜಾತ್ರೆ ಮುಗಿದ ಬಳಿಕ ಕಲಶದ ನೀರನ್ನು ಅದೇ ಜಲ ಮೂಲಕ್ಕೆ ವಿಸರ್ಜಿಸುವುದು, ದೇವರುಗಳ 'ದೀಪೋತ್ಸವ' ಆಚರಣೆ ಇನ್ನು ಮುಂತಾದ ಆಚರಣೆಗಳಲ್ಲಿ ನೀರಿನ ಮೂಲಗಳು ದೈವ ಸನ್ನಿಧಿಗಳಾಗಿ ಸ್ವೀಕಾರವಾಗಿರುವ ಅಂಶ ಕಂಡುಬರುತ್ತದೆ.[೮]

ಸುಮಾರು ಹಬ್ಬದ ಆಚರಣೆ ಮಾಡುವವರು ಬಡವರ್ಗದವರೆ ಹೆಚ್ಚು. ಗೌಡರ ಜಮೀನಿಗೆ ಕೆಲಸಕ್ಕೆ ಹೋದಾಗ ಹಬ್ಬದ ತಯಾರಿಗಾಗಿ ಬೇಗ ಬಿಡಿ ಎಂದು ಗೌಡರನ್ನು ಕೇಳುವ ಹಾಡುಗಳು ಇಲ್ಲಿವೆ. ಹತ್ತಾಳ ಕಟ್ಕೊಂಡು, ಹಿತ್ತಾಳೆ ಕಾಸ್ಕೊಂಡು, ಹೊತ್ತಾಗಿ ನಮ್ಮ ಗೇಯ್ಯುವ ಗೌಡ್ರು, ಹೊತ್ತಾಯ್ತು ನಮ್ಮ ಬಿಡಿ ಬನ್ನಿ.

ನಾಟಿ ಹಬ್ಬದಲ್ಲಿ ಆಯಾಯ ಗ್ರಾಮದ ಹೆಣ್ಣುಮಕ್ಕಳು ಅಲ್ಲಿನ ಗ್ರಾಮದೇವತೆಯ ಗುಡಿಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಬಾಳೆ ಎಲೆ, ಬುತ್ತಿ, ಸಕ್ಕರೆ, ಕಾಯಿ ಪ್ರಸಾದ ಹೊತ್ತು ತಮಟೆ ವಾಲಗದೊಂದಿಗೆ ದೇವರ ಗುಡಿಗೆ ಹೋಗುವುದು ಪದ್ಧತಿ.

ನೀರಿಗೆ ಹಾಲು ತುಪ್ಪದ ತರ್ಪಣ :

ಬಾದಾಮಿ ತಾಲೂಕಿನ ನೀರಬೂದಿಹಾಳ ಕೆರೆ ತುಂಬಿದಾಗ ಅಲ್ಲಿಯ ರೈತರು ನೀರಿಗೆ ಮಾಡುವ ಪೂಜೆ, ಕೆರೆ ತುಂಬಿದಾಗ ಸಂಪ್ರದಾಯವಾಗಿ ಬೇವಿನ ಮರಕ್ಕೆ ಪೂಜೆ ಸಲ್ಲಿಸಿ, ಕೆರೆಗೆ ಹಾಲು ತುಪ್ಪವನ್ನು ತರ್ಪಣ ನೀಡುತ್ತಾರೆ. ಅಂದು ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ಆ ವರ್ಷ ಬೆಳೆಯುವ ಬೆಳೆಯ ಬಗ್ಗೆ ಚರ್ಚಿಸುತ್ತಾರೆ. ಕೆರೆಯ ನೀರಿನ ಪೂಜೆ ಮುಂದಿನ ಕೃಷಿಯ ಆಗುಹೋಗುಗಳನ್ನು ಚರ್ಚಿಸುವ ವೇದಿಕೆಯಾಗುತ್ತದೆ.[6] ಕೆರೆಯಲ್ಲಿ ನೀರು ತುಂಬಿದಾಗ ದೇಸಾಯಿಯ ಆದೇಶದಂತೆ ಗುರಿಕಾರನು ತಳವಾರನಿಗೆ ವಿಷಯ ತಿಳಿಸುತ್ತಾನೆ. ತಳವಾರನು ಪ್ರತಿ ಹಳ್ಳಿಯಲ್ಲಿ ಡಂಗುರ ಸಾರಿ, ಎಲ್ಲ ಅಚ್ಚುಕಟ್ಟುದಾರರನ್ನು ನೀರಬೂದಿಹಾಳ ಗ್ರಾಮದೇವತೆಯಾದ ಮಾರಮ್ಮನ ದೇವಸ್ಥಾನದ ಬಳಿ ಸೇರಲು ತಿಳಿಸುತ್ತಾನೆ. ಅಲ್ಲಿಯ ವಿಶೇಷವೆಂದರೆ ಆ ಊರಿನ ಮುನ್ನೂರು ಜನ ರೈತರೂ ಸೇರುವುದು. ನೀರುಗಂಟಿ ಗ್ರಾಮದ ರೈತರ ಲೆಕ್ಕಾಚಾರದಂತೆ ಕೆರೆಯ ನೀರಿನ ಮಟ್ಟ ನೋಡಿಕೊಂಡು ಬೆಳೆ ಪದ್ಧತಿಯನ್ನು ಚರ್ಚಿಸುತ್ತಾರೆ. ಕೆರೆ ಪೂರ್ಣ ತುಂಬಿದರೆ ಆ ವರ್ಷ ಕಬ್ಬು ಬೆಳೆಯಲು ತೀರ್ಮಾನಿಸುತ್ತಾರೆ. ಅಲ್ಲದೇ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ಇತರೆ ಫಸಲನ್ನು ಬೆಳೆಯಲು ನಿರ್ಧರಿಸುತ್ತಾರೆ. ಅಲ್ಪಸ್ವಲ್ಪ ತುಂಬಿದಾಗ ಕಡ್ಡಾಯವಾಗಿ ಎಲ್ಲಾ ರೈತರು ಇತರೆ ಸಣ್ಣ ಪುಟ್ಟ ಫಸಲನ್ನು ಬೆಳೆಯಲು ಮಾತ್ರ ಒಪ್ಪಿಗೆ ಕೊಡುತ್ತಾರೆ.

ಕೆರೆಗಳಿಗೆ ಸಂಬಂಧಿಸಿದ ದೇವತೆಗಳು :

ಜಿಲ್ಲೆಯ ಹಲವಾರು ಕೆರೆಗಳು ವಿವಿಧ ದೇವತೆಗಳ ಮೂರ್ತಿಪೂಜೆಗಳಿಂದ ವಿಶೇಷವಾಗಿ ಗಮನಸೆಳೆಯುತ್ತವೆ. ಇಲ್ಲಿನ ಕೆಲವು ತೂಬಿನ ಮೇಲೆ ಗಜಲಕ್ಷ್ಮಿ, ಉಬ್ಬುಫಲಕ, ಶಿಲ್ಪಗಳು, ಮೂರ್ತಿಗಳು ಕೆರೆಯಲ್ಲಿ ಪೂರ್ವದಿಕ್ಕಿನಲ್ಲಿರುವ ದೇವಿ ಮಂದಿರ, ದೇವಾಲಯಗಳ ಮೂರ್ತಿಗಳು, ಇತರೆ ಸ್ಮಾರಕಗಳು, ಅವಶೇಷಗಳು ಇವುಗಳ ಆಧಾರಗಳ ಮೇಲೆ ಕೆರೆಗಳ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ನಾನಾ ಕೆರೆಗಳಲ್ಲಿ ಬೇರೆ ಬೇರೆ ತರಹದ ಉಬ್ಬು ಶಿಲ್ಪಗಳನ್ನು ಕಾಣುತ್ತೇವೆ. ೬ನೇ ಶತಮಾನದಿಂದ ೧೮ನೇ ಶತಮಾನದ ವರೆಗೆ ಬರುವ ಕೆರೆಗಳ ಫಲಕಗಳಲ್ಲಿ ಕಂಡು ಬರುತ್ತದೆ. ಬಾದಾಮಿ, ಶಿರೂರು, ಮಹಾಕೂಟ, ಬನಶಂಕರಿ, ಕೆಲವಡಿ, ತಿಮ್ಮಸಾಗರ, ಗದ್ದನಕೇರಿ, ತುಳಸಿಗೇರಿ, ಕೇಸರಬಾವಿ, ಜಲಗೇರಿ, ಅರಸಿಬೀದಿ ಇನ್ನೂ ಮುಂತಾದೆಡೆ ಇಂತಹ ಶಿಲ್ಪಗಳನ್ನು ಕೆರೆಯ ತೂಬಿನ ಪಕ್ಕದಲ್ಲಿ ಜಿಡಿಸಲಾಗಿದೆ. ಅಷ್ಟೇಅಲ್ಲದೆ ಕೆರೆಯಲ್ಲಿರುವ ಹಲವಾರು ಪ್ರಾಚೀನ ಅವಶೇಷಗಳ ಮತ್ತು

ಸ್ಮಾರಕಗಳ ಮೇಲೆಯೂ ಇಂತಹ ಚಿತ್ರಗಳನ್ನು ಕಾಣುತ್ತೇವೆ. ಕೆರೆಯನ್ನೇ ನೋಡುವ ರೈತ ತನ್ನ ಸಮೃದ್ಧಿಗೆ ಸಂಕೇತವಾದ ಗಜಲಕ್ಷ್ಮಿಯನ್ನು ಕೆತ್ತಿದ್ದಾರೆ. ಹಲವಾರು ಜನ ನಾನಾ ಸಂಕೇತಗಳಿಗಾಗಿ ಆಕೆಯನ್ನು ಆರಾಧಿಸುತ್ತಾರೆ. ಅದೇ ರೀತಿ ಬಾದಾಮಿ ತಾಲೂಕಿನ ಕೆರೆಗಳಲ್ಲಿ ಹೆಚ್ಚು ಮೂರ್ತಿ ಶಿಲ್ಪಗಳು ಕಂಡುಬರುತ್ತವೆ. ಅವು ಸುಮಾರು ೨-೩ ಅಡಿ ಎತ್ತರವಿದ್ದು ನಾನಾ ಭಂಗಿಗಳಲ್ಲಿ ಕೆತ್ತಿದ್ದಾರೆ. ಸೂಳಿಭಾವಿಯ ಕೆರೆಯ ತೂಬಿನಲ್ಲಿ ಶಿಲ್ಪಗಳು ಕಂಡುಬರುತ್ತವೆ. ಶಿರೂರಿನ ಕೆರೆಯಲ್ಲಿ ದೇವಾಲಯದ ಕಂಬಗಳ ಅವಶೇಷಗಳು ಕಂಡು ಬರುತ್ತವೆ. ಅದೇ ರೀತಿ ಕೆರೂರಿನ ಕೆರೆಯ ದಂಡೆಯಲ್ಲಿ ಹಲವಾರು ಮೂರ್ತಿಗಳನ್ನು ಕಾಣುತ್ತೇವೆ. ನೀರಲಕೇರಿ ಗ್ರಾಮದಲ್ಲಿ ಪ್ರಾಚೀನ ಕಾಲದ ದೇವಾಲಯವು ಕಂಡು ಬರುತ್ತದೆ. ಅದೇ ರೀತಿ ಬ್ರಿಟಿಷರ ಕಾಲದ ನಾಮಫಲಕಗಳು ಹಳ್ಳೂರಿನಲ್ಲಿ ಕಂಡುಬರುತ್ತವೆ.

ಇದಲ್ಲದೇ ಕೆರೆಗೆ ಸಂಬಂಧಿಸಿದ ಹಲವಾರು ಆಚರಣೆಗಳು, ಹಬ್ಬ-ಹರಿದಿನಗಳು, ಮೂರ್ತಿ, ಪಲ್ಲಕ್ಕಿ ಉತ್ಸವಗಳು, ಪೂಜಾ ಕಾರ್ಯಗಳು, ಗಂಗಾಪೂಜೆಗಳು ನಡೆಯುತ್ತವೆ.[೧೦] ಈ ಆಚರಣೆಗಳನ್ನು, ವಿಧಿಗಳನ್ನು, ಸಂಪ್ರದಾಯಗಳನ್ನು, ನೀತಿಕತೆಗಳನ್ನು, ತಲೆತಲಾಂತರದಿಂದ ಚಾಚೂ ತಪ್ಪದೇ ಅಲ್ಲಿಯ ಜನತೆ ಆಚರಣೆಗಳನ್ನು ಮಾಡುತ್ತ ಬಂದಿದ್ದಾರೆ. ಕೆರೆಯನ್ನು ದುರಸ್ತಿ ಮಾಡುವ ಸಂದರ್ಭದಲ್ಲಿ ತೂಬನ್ನು ತೆಗೆಯುವ ಸಮಯದಲ್ಲಿ ಬೆಸ ಸಂಖ್ಯೆಯ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಜಾರಿಯಲ್ಲಿದೆ. ಬಾದಾಮಿ ತಾಲೂಕು ಜಲಗೇರಿಯಲ್ಲಿ ಕೆರೆಯಲ್ಲಿ ದುರಸ್ಥಿಮಾಡುವ ಸಂದರ್ಭದಲ್ಲಿ ಬೆಸ ಸಂಕೆಯ (೩, ೫,೭, ೯, ೧೧....) ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಇವತ್ತಿಗೂ ಜಾರಿಯಲ್ಲಿದೆ.

ಕೆರೆ ತುಂಬಿದಾಗ ಗಂಗಾಮಾತೆಯನ್ನು ಬಿಡುತ್ತಾರೆ. ಕೆಲವರು ಕೆಲವು ಸಂದರ್ಭಗಳಲ್ಲಿ ಕೆರೆಗೆ ಬಂದು ಗಂಗಾಪೂಜೆಯನ್ನು ಮಾಡುತ್ತಾರೆ. ಮಣ್ಣೆತ್ತಿನ ಅಮವಾಸ್ಯೆಯ ಸಂದರ್ಭದಲ್ಲಿ ಗುಳ್ಳವ್ವನ ಪೂಜೆ, ಬಸವನ ಪೂಜೆ ಮಾಡಿ ಕೆರೆಗೆ ಅರ್ಪಿಸುತ್ತಾರೆ. ಕೊನೆಯ ಗುಳ್ಳವ್ವನ ನಂತರ ಬರುವ ಬುಧವಾರದಂದು ಊರಿನ ಜನರು ಕೂಡಿ ಕೆರೆಗೆ ಪೂಜೆ ಸಲ್ಲಿಸಿದ ನಂತರ ಎಲ್ಲರೂ ಅಲ್ಲಿಯೇ ಊಟ ಮಾಡುವರು. ಗೌರಿ ಮತ್ತು ಸೀಗಿ ಹುಣ್ಣಿಮೆಗಳಲ್ಲಿ ಕೆರೆಗೆ ಬಂದು ಗೌರಿ ಸೀಗವ್ವನನ್ನು ಅರ್ಪಿಸಿ ಪೂಜೆ ಸಲ್ಲಿಸುವರು.

ಪ್ರತಿ ಗ್ರಾಮದ ಉತ್ಸವಗಳು, ಹಬ್ಬ ಹರಿದಿನಗಳು, ಪಲ್ಲಕ್ಕಿ, ಮೂರ್ತಿ ಪೂಜೆ, ಗೃಹಪೂಜೆಗೆ ಕೆರೆಗೆ ಪೂಜೆ ಸಲ್ಲಿಸುವರು. ಗೃಹ ಪೂಜೆಗೆ ಕೆರೆಯ ನೀರನ್ನು ತಂದು ನಂತರ ಪೂಜೆ ಸಲ್ಲಿಸುವರು. ಗ್ರಾಮ ದೇವತೆಗೆ ಊರು ತುಂಬ ೫ ವಾರಗಳ ಕಾಲ ಗ್ರಾಮದ ಜನತೆ ಕೆರೆಯ ನೀರನ್ನು ಅರ್ಪಿಸುವರು.

೩) ಅಶ್ವತ್ಥಾಮ ತೀರ್ಥದ ಮಹಿಮೆ :

ಲೋಪಾಮುದ್ರೆಯು ಅಗಸ್ತ್ಯ ಮುನಿಯನ್ನು ಕುರಿತು ಈ ತಿಲಕವನದಲ್ಲಿ ಬೇರೆ

ಮಹತ್ವದ ತೀರ್ಥಗಳ ಬಗೆಗೆ ಹೇಳಬೇಕೆಂದು ಕೇಳುವಳು. ಆಗ ಅಗಸ್ತ್ಯರು "ಪ್ರಿಯೆ ! ನಿನ್ನದು ಉತ್ತಮ ಪ್ರಶ್ನೆ. ಅಂಥದೊಂದು ತೀರ್ಥವು ಬಾದಾಮಿ ಪರ್ವತದ ಮೇಲ್ಭಾಗದಲ್ಲಿದೆ. ಅದಕ್ಕೆ ಅಶ್ವತ್ಥಾಮ ತೀರ್ಥ" ಎಂದು ಹೆಸರು. ಅದರ ಮಹತ್ವವನ್ನು ಹೇಳುತ್ತೇನೆ ಕೇಳು ಎಂದರು.[೧೧]

ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನು ತೀರ್ಥಯಾತ್ರೆ ಮಾಡುತ್ತ ಶ್ರೀ ಬನಶಂಕರಿ ಕ್ಷೇತ್ರಕ್ಕೆ ಬಂದನು. ಅಲ್ಲಿಯ ಹರಿದ್ರಾತೀರ್ಥ (ದೊಡ್ಡ ಹೊಂಡ) ಸರಸ್ವತಿ (ಹಳ್ಳ) ತೀರ್ಥದಲ್ಲಿ ಸ್ನಾನ ಮಾಡಿ ಆದಿಶಕ್ತಿಯ ದರ್ಶನ ಪಡೆದನು. ನಂತರ ಬನಶಂಕರಿ ದೇವಿಯನ್ನು ಭಕ್ತಿಯಿಂದ ಪೂಜಿಸಿ ಮಹಾಕೂಟ ಕ್ಷೇತ್ರದ ಕಡೆಗೆ ನಡೆದನು. ಅಲ್ಲಿ ಶಿವಪುಷ್ಕರಣೆ ಇನ್ನೂ ಮುಂತಾದ ತೀರ್ಥಗಳಲ್ಲಿ ಮಿಂದು ಶ್ರೀ ಮಹಾಕೂಟೇಶ್ವರನನ್ನು ಭಕ್ತಿಯಿಂದ ಪೂಜಿಸಿದನು. ನಂತರ ಪರ್ವತದ ಮೇಲ್ಭಾಗಕ್ಕೆ ಬಂದಾಗ ಅಲ್ಲಿಯ ಪ್ರಶಾಂತವಾದ ಸ್ಥಳ ನೋಡಿ ಅತೀವ ಸಂತೋಷ ಭರಿತನಾಗಿ ಅಲ್ಲಿಯೇ ಆರು ತಿಂಗಳ ಕಾಲ ನೀರು ಮತ್ತು ಹಣ್ಣುಗಳನ್ನು ಮಾತ್ರ ಸೇವಿಸಿ ಶ್ರೀ ಬನಶಂಕರಿಯನ್ನು ಕುರಿತು ಘೋರ ತಪಸ್ಸನ್ನಾಚರಿಸಿದನು. ಅಶ್ವತ್ಥಾಮನ ತಪಸ್ಸಿಗೆ ಮೆಚ್ಚಿ ಬನಶಂಕರಿಯು ಪ್ರತ್ಯಕ್ಷಳಾದಳು. ಎದುರಿಗೆ ನಿಂತ ದೇವಿಯನ್ನು ನೋಡಿ ಅಶ್ವತ್ಥಾಮನು ಭಕ್ತಿ ಭಾವಾವೇಶಗಳಿಂದ "ಮಹಾದೇವಿ ! ಜಗತ್ ಸೃಷ್ಟಿಕರ್ತಳಾದ ನಿರಂಜನ ಸ್ವರೂಪ ಪರಮೇಶ್ವರಿಯೇ ಸರ್ವೇಶ್ವರಿಯೇ, ಶರ್ವಾಣಿಯೆ, ಸಕಲ ಸುರಗುಣ ವಂದಿತಳಾದ ದೇವಿಯೇ ನಿನಗೆ ವಂದನೆಗಳು" ಎಂದು ಸ್ತೋತ್ರ ಮಾಡುತ್ತ ದೇವಿಯ ಪಾದಗಳಲ್ಲಿ ಬಿದ್ದನು. ಆಗ ದೇವಿಯು ಸಂತುಷ್ಟಳಾಗಿ ಪ್ರಸನ್ನವದನದಿಂದ "ವತ್ಸಾ ! ನಿನ್ನ ತಪಸ್ಸಿಗೆ ಮೆಚ್ಚಿದೆ. ನಿನಗೆ ಬೇಕಾದ ವರವನ್ನು ಬೇಡು ಎಂದಳು. ಅಶ್ವತ್ಥಾಮನು ದೇವಿಯ ಮಾತುಗಳನ್ನು ಕೇಳಿ ಎದ್ದು ನಿಂತು ಕೈ ಮುಗಿದು ಬೇಡಿಕೊಂಡನು. ತಾಯಿ ! ಜಗಜ್ಜನನಿ ನಿನ್ನಿಂದ ನಿರ್ಮಿಸಲ್ಪಟ್ಟ ಈ ತೀರ್ಥವು ನನ್ನ ಹೆಸರಿನಿಂದ ಪ್ರಸಿದ್ಧವಾಗಲಿ. ಈ ತೀರ್ಥದಲ್ಲಿ ಸ್ನಾನ ಮಾಡುವವರು ಪಾಪ ಮುಕ್ತರಾಗಲಿ. ಈ ತೀರ್ಥದ ತೀರದಲ್ಲಿ ಲಿಂಗರೂಪದಲ್ಲಿ ನೀನು ನೆಲೆಸಿ ಭಕ್ತರ ಇಷ್ಟಾರ್ಥಗಳನ್ನು ಪೂರೈಸು, ಅಶ್ವತ್ಥಾಮನ ಪ್ರಾರ್ಥನೆಯನ್ನು ಕೇಳಿ ದೇವಿಯು ಅವನ ತಲೆಯ ಮೇಲೆ ಅಭಯ ಹಸ್ತವನ್ನಿಟ್ಟು "ತಥಾಸ್ತು" ಎಂದು ಹೇಳಿ ಅದೃಶ್ಯಳಾದಳು. ನಂತರ ಅಶ್ವತ್ಥಾಮನು ಅಲ್ಲಿಯೇ ಕೆಲ ಕಾಲದವರೆಗೆ ವಾಸವಾಗಿದ್ದು, ತಪ್ಪನ್ನಾಚರಿಸಹತ್ತಿದನು. ಹೀಗಿರುವಾಗ ಒಂದು ದಿನ ರಾಕ್ಷಸನೊಬ್ಬನು ಅದೇ ಅಶ್ವತ್ಥಾಮ ತೀರ್ಥದಲ್ಲಿ ಸ್ನಾನ ಮಾಡಿ ಪಾಪ ಮುಕ್ತನಾಗಿ ದಿವ್ಯರೂಪ ಧರಿಸಿ ಸ್ವರ್ಗಕ್ಕೆ ಹೋದದ್ದನ್ನು ಅಶ್ವತ್ಥಾಮನು ಪ್ರತ್ಯಕ್ಷ ಕಂಡನು.[೧೨]

ಕಥೆ ಕೇಳುತ್ತಿದ್ದ ಲೋಪಾಮುದ್ರೆಯು ಕುತೂಹಲದಿಂದ, ಮುನಿಶ್ರೇಷ್ಠ ! ಈ ರಾಕ್ಷಸನು ಯಾರು ? ಅವನಿಗೇಕೆ ಈ ಜನ್ಮ ಪ್ರಾಪ್ತವಾಯಿತು ? ಅವನು ದಿವ್ಯರೂಪ

ಧರಿಸಲು ಕಾರಣವೇನು ? ಎಂದು ಅಗಸ್ತ್ಯರನ್ನು ಪ್ರಶ್ನಿಸಿದಳು. ಆಗ ಅಗಸ್ತ್ಯರು ಆ ರಾಕ್ಷಸನನ್ನು ಕುರಿತು ಹೇಳುವರು.[೧೩]

ಹಿಂದೆ ಗೌಡ ಎಂಬ ರಾಜ್ಯವನ್ನು ವೀರಭದ್ರ ಎಂಬ ಮಹಾರಾಜನು ಆಳುತ್ತಿದ್ದನು. ಅಲ್ಲಿ ಸಕಲ ವೇದಶಾಸ್ತ್ರ ನಿಪುಣನಾದ ಒಬ್ಬ ಬ್ರಾಹ್ಮಣನಿದ್ದನು. ಆತನು ಯಾವಾಗಲೂ ಜನರನ್ನು ತುಚ್ಛವಾಗಿ ಕಾಣುವುದು, ಹೀಯಾಳಿಸಿ ಮಾತನಾಡುವುದು ಅಥವಾ ಗೊಳ್ಳನೆ ನಕ್ಕು ಬಿಡುವುದು ಹೀಗೆ ಮಾಡುತ್ತಿದ್ದನು. ಈ ಬ್ರಾಹ್ಮಣನನ್ನು ನೋಡಿ ಒಮ್ಮೆ ನೀತಿಶಾಸ್ತ್ರ ತಿಳಿದ ಮುನಿಗಳು "ಎಲಾ ಗರ್ವಾಂಧನಾದ ಬ್ರಾಹ್ಮಣ ! ನೀನು ಸಕಲ ವೇದಶಾಸ್ತ್ರ ಪಾರಂಗತನೆಂಬ ಅಹಂಕಾರದಿಂದ ನಿಷ್ಕಾರಣವಾಗಿ ಎಲ್ಲರನ್ನೂ ದ್ವೇಷಿಸುತ್ತಿರುವಿ. ನೀನು ಬ್ರಾಹ್ಮಣನಾಗಿರಲು ಯೋಗ್ಯನಲ್ಲ. ಆದ ಕಾರಣ ನೀನು ನೀರಿಲ್ಲದ ಪ್ರದೇಶದಲ್ಲಿ ಬ್ರಹ್ಮರಾಕ್ಷಸನಾಗಿ ಜನ್ಮತಾಳು" ಎಂದು ಶಾಪಕೊಟ್ಟರು. ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಮುನಿಗಳ ಶಾಪವನ್ನು ಕೇಳಿದ ಬ್ರಾಹ್ಮಣನು ಪಶ್ಚಾತ್ತಾಪದಿಂದ ದುಃಖಿತನಾಗಿ ಈ ಶಾಪದಿಂದ ಮುಕ್ತಿ ನೀಡಿ ನನ್ನನ್ನು ಅನುಗ್ರಹಿಸಬೇಕೆಂದು ಪರಿಪರಿಯಾಗಿ ಬೇಡಿಕೊಂಡನು. ಆಗ ಮುನಿಗಳಿಗೆ ಕರುಣೆ ಹುಟ್ಟಿ "ನಮ್ಮ ಶಾಪ ಎಂದೂ ಸುಳ್ಳಾಗಲಾರದು. ನೀನು ಬ್ರಹ್ಮರಾಕ್ಷಸನಾಗಿ ಜನ್ಮತಾಳಲೇ ಬೇಕು. ನಂತರದಲ್ಲಿ ನೀನು ಅನೇಕ ಅರಣ್ಯ ಪರ್ವತಗಳಲ್ಲಿ ಸಂಚರಿಸುತ್ತಾ ವಾತಾಪಿ (ಬಾದಾಮಿ) ಪರ್ವತದ ಹತ್ತಿರವಿರುವ ತಿಲಕಾರಣ್ಯಕ್ಕೆ ಹೋಗುವೆ. ಅಲ್ಲಿ "ಅಶ್ವತ್ಥಾಮ ತೀರ್ಥ"ವೆಂಬ ಹೆಸರಿನ ತೀರ್ಥವಿದೆ. ಅದರ ದಡದಲ್ಲಿ ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನು ತಪಸ್ಸು ಮಾಡುತ್ತ ಕುಳಿತಿರುತ್ತಾನೆ. ನೀನು ಅವನಿಗೆ ತೊಂದರೆ ಕೊಡುವೆ. ಆಗ ಅವನು ತನ್ನ ಕಮಂಡಲದಲ್ಲಿಯ ಜಲವನ್ನು ನಿನ್ನ ಮೇಲೆ ಪ್ರೋಕ್ಷಿಸಲು (ಸಿಂಪಡಿಸಲು) ಆ ಪವಿತ್ರವಾದ ಜಲ ಸಂಪರ್ಕದಿಂದ ನೀನು ಈ ನೀಚ ಜನ್ಮದಿಂದ ಮುಕ್ತನಾಗುವಿ ಅಲ್ಲಿಯವರೆಗೆ ನಿನಗೆ ರಾಕ್ಷಸ ಜನ್ಮ ತಪ್ಪದು ಎಂದು ಹೇಳುವರು.

ಮುನಿಗಳ ಶಾಪದಂತೆ ಆ ಬ್ರಾಹ್ಮಣನು ಬ್ರಹ್ಮರಾಕ್ಷಸನಾಗಿ ಭೂಮಿಯನ್ನು ಸಂಚರಿಸಹತ್ತಿದನು. ಕೆಲವು ಕಾಲದ ನಂತರ ಅವನು ತಿಲಕಾರಣ್ಯಕ್ಕೆ ಬಂದನು. ಅಲ್ಲಿ ತಪೋಮಗ್ನನಾದ ಅಶ್ವತ್ಥಾಮನನ್ನು ನೋಡಿ ಭಯಂಕರ ರೂಪತಾಳಿ ಕ್ರೂರವಾಗಿ ಚೀರ ಹತ್ತಿದನು. ರಾಕ್ಷಸನ ಚೀರಾಟದಿಂದ ಅಶ್ವತ್ಥಾಮನ ತಪೋ ಭಂಗವಾಯಿತು. ತನ್ನ ತಪ್ಪಸ್ಸಿಗೆ ಭಂಗ ತಂದ ರಾಕ್ಷಸನ ಮೇಲೆ ಕೋಪ ಬಂದರೂ ಅದನ್ನು ಸಹಿಸಿಕೊಂಡು ಅಶ್ವತ್ಥಾಮನು ಶಾಂತವಾದ ಮನಸ್ಸಿನಿಂದ ಯೋಚಿಸಿದನು. "ಈ ದುಷ್ಟನಿಗೆ ಶಾಪಕೊಟ್ಟು ತಪ್ಪಸ್ಸಿನ ಶಕ್ತಿಯನ್ನು ಹಾಳು ಮಾಡಿಕೊಳ್ಳುವುದಕ್ಕಿಂತ ತಪಃ ಪ್ರಭಾವದಿಂದಲೇ ನಿಗ್ರಹಿಸುವುದು ಲೇಸು ಎಂದು ಯೋಚಿಸಿ ತನ್ನ ಶರೀರದಿಂದ ತೇಜಸ್ಸನ್ನು ಉತ್ಪನ್ನ ಮಾಡಿದನು.

ಪ್ರಭಾವದಿಂದ ರಾಕ್ಷಸನು ಭಯಭೀತನಾಗಿ ಓಡಿ ಹೋದನು. ಆ ನಂತರ ಒಂದು ದಿವಸ ಅಶ್ವತ್ಥಾಮನು ಸ್ನಾನ, ತಪ ಅನುಷ್ಠಾನಗಳನ್ನು ಮುಗಿಸಿಕೊಂಡು ಶ್ರೀದೇವಿಯ ಪೂಜೆಗಾಗಿ ಹೊರಟಿದ್ದನು. ಆಗ ಮಾರ್ಗದ ಮಧ್ಯದಲ್ಲಿ ಬ್ರಹ್ಮರಾಕ್ಷಸನು ಭಯಂಕರ ರೂಪತಾಳಿ ಭೀಬತ್ಸವಾಗಿ (ಹೆದರುವಂತೆ) ಗರ್ಜಿಸುತ್ತ ಅಶ್ವತ್ಥಾಮನನ್ನು ನುಂಗಲು ಬಂದನು. ಆಗ ಅಶ್ವತ್ಥಾಮ ತನ್ನ ಜಲ ಕಮಂಡಲದಲ್ಲಿದ್ದ ತೀರ್ಥದ ನೀರನ್ನು ರಾಕ್ಷಸನ ಮೇಲೆ ಪ್ರೋಕ್ಷಿಸಿದನು. ಆಗ ಜಲ ಸಂಪರ್ಕದಿಂದ ತಕ್ಷಣದಲ್ಲಿಯೇ ರಾಕ್ಷಸನು ರಾಕ್ಷಸ ಜನ್ಮದಿಂದ ಮುಕ್ತನಾಗಿ ದಿವ್ಯ ದೇಹಧರಿಸಿ ಸ್ವರ್ಗಕ್ಕೆ ಹೊರಟು ಹೋದನು. ದೃಶ್ಯವನ್ನು ಕಣ್ಣಾರೆ ಕಂಡೂ ಅಶ್ವತ್ಥಾಮನಿಗೆ ಆಶ್ಚರ್ಯವೂ ಆನಂದವೂ ಉಂಟಾಯಿತು. ಇದುವೇ ಅಶ್ವತ್ಥಾಮ ತೀರ್ಥದ ಮಹಿಮೆ. ಅತ್ಯಂತ ಪುಣ್ಯಕರವಾದ ತೀರ್ಥದ ಸ್ಮರಣ ಮಾತ್ರದಿಂದಲೇ ಎಲ್ಲ ಪಾಪಗಳು ದೂರವಾಗುವವು ಎಂದು ಅಗಸ್ತ್ಯರು ಲೋಪಾಮುದ್ರೆಗೆ ಹೇಳಿದರು. [೧೪]

ನಮ್ಮೂರ ಕೆರೆ

ಸುತ್ತ ಹತ್ತೂರಲ್ಲಿ ಮುತ್ತಿನಂತೆ ನಮ್ಮ ಕೆರೆ
ಅದರ ಉಳಿವಿನ ಕಥೆಯಲ್ಲಿ ಕೇಳಿರೆಲ್ಲ ।ಪ।

ಕೆರೆಯ ದಾರಿಯಲ್ಲೆಲ್ಲ ತಂಪು ತಂಬೆಲರು
ಏರಿಯ ಸುತ್ತೆಲ್ಲ ಕಾವಲಗಿನ ಮರಸಾಲು
ಒಂದೊಂದು ಮರದಲ್ಲಿ ಹತ್ತಾರು ಟೊಂಗೆಗಳು
ಹತ್ತಾರು ಟೊಂಗೆಯಲಿ ನೂರಾರು ಹಕ್ಕಿಗಳು ।ಸುತ್ತ।

ಬೆಳ್ಳಿ ತಟ್ಟೆಯ ಹಾಗೆ ಹೊಳೆ ಹೊಳೆವ ನೀರು
ಮಿಂಚುಬಳ್ಳಿಯ ಹಾಗೆ ಥಳ ಥಳಿಪ ಮೀನು
ಕಪ್ಪೆಗಳ ವಟವಟರು, ಸುತ್ತ ಮೇಯುವ ಟಗರು
ದನಗಾಹಿಯ ಹಾಡಿಗೆ ತಲೆದೂಗುವಾ ಪೈರು ।ಸುತ್ತ।

ಕಾರ್ಖಾನೆಗಳು ಬಂದು, ಜನಸಂಖ್ಯೆ ಬೆಳೆದು
ಗಟಾರದ ಕೊಳೆಯೆಲ್ಲ ಕೆರೆಯೊಳಗೆ ಬೆರೆತು
ಭೂತಾಯ ಎದೆ ತುಂಬ ಕೊಳವೆಬಾವಿಯ ಕೊರೆದು
ನೀರಸೆಲೆಯೂ ಬತ್ತಿಹುದು, ಕೆರೆ ಒಡಲು ಬಿರಿದು ।ಸುತ್ತ।

ಊರ ಜನರು ಸಭೆಯ ಸೇರಿ ಒಮ್ಮತಕೆ ಬರಲು
ಹೊಗೆ ಬೆಂಕಿ ಕಾರ್ಖಾನೆಯ ಊರಾಚೆ ಇಡಲು
ಮನೆಗೆರಡು ಮರ, ಕೆರೆ ಸುತ್ತ ಬನ ನೆಡಲು

ಪ್ಲಾಸ್ಟಿಕಿನ ಬಳಕೆಗೆ ವಿದಾಯವ ಹೇಳಲು ।ಸುತ್ತ।

ನಮ್ಮೂರ ನೆಲವೀಗ ಜಲನಿಧಿಯ ಆಗರವು
ಮರಗಳಲಿ ಮತೀಗ ಹಸಿರು ಹಕ್ಕಿಯ ಹಾಡು
ಉಪ್ಪು ತಿಂದವ ನೀರು ಕುಡಿಯಲೇ ಬೇಕಲ್ಲ
ತಪ್ಪು ಮಾಡಿ ನಾವೇ ಸರಿಪಡಿಸಬೇಕಲ್ಲ [೧೫] ।ಸುತ್ತ।

ಅ) ವಚನಗಳಲ್ಲಿ ಕೆರೆಗಳು

ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೋರಜ ಚಿಪ್ಪು ಕಾಣಬಹುದು
ವಾರುಧಿ ಮೈದೆಗೆದಡೆ
ರತ್ನಮುತ್ತುಗಳು ಕಾಣಬಹುದು
ಕೂಡಲಸಂಗನ ಶರಣರು ಮನದೆರೆದು
ಮಾತನಾಡಿದಡೆ ಲಿಂಗವ ಕಾಣಬಹುದು

ಕ್ರಿ.ಶ.೧೨ ನೇ ಶತಮಾನದ ಸಾಮಾಜಿಕ ಸುಧಾರಕರಾದ ಮತ್ತು ಮಾನವ ತತ್ವ ಸುಧಾರಕರಾದ ಕ್ರಾಂತಿವೀರ ಬಸವಣ್ಣವರು ಕೆರೆಗಳು ಬರಿದಾರೆ ಜನಾಂಗದ ನರನಾಡಿ, ಎಲುಬುಗಳು ಕಾಣುತ್ತವೆ ಎಂದು ನಿರೂಪಿಸಿದ್ದಾರೆ.[೧೬]

ಆ) ಜನಪದ ಕವಿಗಳ ದೃಷ್ಟಿಯಲ್ಲಿ ಕೆರೆಗಳು

ನಾನು ಯಾರೋ ನೀನು ಯಾರೂ ಬರಗಾಲದಲ್ಲಿ
ದೂರದ ಊರಾಗ ನಮಗ ಯಾರೋ ॥ ಪ॥
ದೂರದ ಊರಿನ ದರ್ಶನ ನಮಗ್ಯಾಕೊ
ನಮ್ಮ ಬದುಕಿನ ಚಿಂತಿ ದೂರದ ದೊರೆಗ್ಯಾಕೋ
ಸರ್ವರ ಬದುಕಿಗೆ ಕೆರೆಕಾಯಕ ಬೇಕೋ
ಆಲಕಾಯಕೆ ನಮ್ಮೂರ ಕೆರೆ ನಮಗೆ ಬೇಕೋ ॥೧॥

ಕರೆ–ಹಳ್ಳಕೊಳ್ಳಕೆ ಕಲ್ಲೊಡ್ಡ ಕಟ್ಟಿ ಸಸಿಗಳನ್ನು ಹಚ್ಚಿ
ಮಲ್ನಾಡ ಮಳೆರಾಯನ ನೆನೆಯೋಣ ಬಾರೋ।
ಆಷಾಢ ಮಾರುತ ಬಲುಜೋರ ಬೀಸೂತ
ಮಲ್ಲಾಡ ಮಳೆರಾಯ ಘಳಿಗಾಗ ಬಂದಾನೋ
ಅನಂದ ಪಡಿಸ್ಯಾನೋ ॥೨॥

ಜಗವೆಲ್ಲ ಜಲವಾಗಿ ಹಳ್ಳಕೊಳ್ಳ ಹರಿದಾಡಿ
ಧರ್ಮರಾಯನ ಕೆರೆತುಂಬಿ ಹರಿಯಲು
ಉಲ್ಲಾಸದಿಂದಲ್ಲಿ ಬಾಗೀನ ಅರ್ಪಿಸೋಣ ಬಾರೋ।
ದೇವಿಯ ಉಡಿತುಂಬಿ ಅಡಿ ಪೂಜೆ ಮಾಡೋಣ॥೩॥

ಅಖಂಡ ಬಿಜಾಪೂರ ಜಿಲ್ಲೆಯು ಸದಾಕಾಲ ಬರಗಾಲಕ್ಕೆ ಹೆಸರುವಾಸಿಯಾಗಿದೆ. ಇದು ಜನರ ನರನಾಡಿಯಲ್ಲಿ ಬೆರೆತು ಹೋಗಿದೆ. ಇಂತಹ ಪ್ರಕೃತಿ ವಿಕೋಪದ ಬಗ್ಗೆ ಸರ್ಕಾರದಿಂದ ಯಾವುದೇ ಪರಿಹಾರ ಕಾಣದ ಪರಿಸ್ಥಿತಿಯಲ್ಲಿ ಒಬ್ಬ ಸಾಮಾನ್ಯ ಕವಿ ಬರಗಾಲ ಅಳಿಯಲು ಕೆರೆ–ಹಳ್ಳ–ಕೊಳ್ಳಕ್ಕೆ ಒಡ್ಡು ಹಾಕಿ ಸುತ್ತಲೂ ಬಿಡಮರಗಳ ನೆಟ್ಟು, ಅದರ ಮೂಲಕ ಮಳೆರಾಯನ ಬರಮಾಡಿಕೊಂಡು ಕೆರೆ–ಕಟ್ಟೆ ತಟಾಕ ತುಂಬಿಸಿ ಬಾಗೀನ ಬಿಟ್ಟು ದೇವರಿಗೆ ನಮಿಸಿ ಕೆರೆ ಪೂಜೆಯ ಸಮೃದ್ಧಿಯ ಬೆಳೆ ತೆಗೆಯುವೆನು ಎಂದು ಹಾಡಿದ್ದಾನೆ. ಈ ಹಾಡನ್ನು ಬಾಗಲಕೋಟ ತಾಲೂಕಿನ ಬೆನಕಟ್ಟಿ ತಾಲೂಕಿನ ಪ್ರಗತಿಪರ ರೈತ ಹಾಗೂ ಕಲ್ಲೊಡ್ಡಿಯ ತಮ್ಮಣ್ಣ ಎಂದು ಹೆಸರುವಾಸಿಯಾದ ತಮ್ಮಣ್ಣ ಬೆಣ್ಣೂರ ಅವರು ಬರೆದಿದ್ದಾರೆ.[೧೨]

ವಾತಾಪಿ –ಇಲ್ವಲ

ಅಟ್ಟಾನಾಣ್ಯದಾಗ ವಾತಾಪಿ–ಇಲ್ವಳ
ಮೆಟ್ಟಾಗಿ ಮಂದಿ ತಿನತಿದ್ರು ರಾಕ್ಷಸ್ರು
ಕೆಟ್ಟ ಬುದ್ದಿಯ ಕಲಿತಿದ್ರು
ತಪವಾಚರಿಸುವ ಋಷಿಗಳ ಕಾಡಾಗ
ಜಪ ಮಾಡುವಾಗ ರಾಕ್ಷಸ್ರು, ಬರಕೋಂತ
ತಪಕೆಲ್ಲ ತ್ರಾಸ ಕೊಟ್ಟಾರ.
ಬಕ್ಷರ ಕಾಟಾನ ಲಕ್ಷಿಸಿ ಋಷಿಗಳು
ಶಿಕ್ಷಾ ಕೊಡಿಸಲು ಕೂಡ್ಯಾರ, ಜನರನ್ನ
ಬಕ್ಷ ಮಾಡೂದ ತಡಿಯಾಕ.
ಪಾಪಿಗಳುಪದ್ರ ಯಾಪರಿಯಿತ್ತವ್ವ
ತಾಪದಿ ಕಾಶಿ ಋಷಿಗಳ, ಮನದಾಗ
ಜ್ಞಾಪಿಸಿಕೊಂಡು ನೆನದಾರ.
ಋಷಿಗಳ ಋಷಿಯಾದ ಅಗಸ್ತ್ಯ
ಋಷಿಗಳು
ಋಷಿಗಳ ಕಷ್ಟ ತಿಳಿದಾರ, ತಡವಿಲ್ದ

ಕಾಶಿಯ ಬಿಟ್ಟು ಬಂದಾರ.
ಬಂಡ ರಾಕ್ಷಸಗಳ ಪುಂಡಾಟ ತಡಿಯಾಕ
ಹೆಂಡತಿ ಲೋಪಾಮುದ್ರಿಯ, ಕರಕೊಂಡು
ಕೆಂಡ ಕಾರೂತ ಬಂದಾರ
ಉತ್ತರದೆಸೆಯಿಂದ ಇತ್ತಾಗ ಬರುವೂದ
ಮತ್ತ ರಾಕ್ಷಸರು ತಿಳಿದಾರ, ತಡವಿಲ್ದ
ನಿತ್ಯದ ಆಟ ಹೂಡ್ಯಾರ.
ಬರುವೂದ ಕಾಣೂತ ದಾರಿಕಾರರ ಮಾಡಿ
ನರರೂಪ ತಾಳಿ ನಿಂತಾರ, ರಾಕ್ಷಸ್ರು
ಪರಿಪರಿಯಾಟಾ ಆಡಾಕ.
ಅತಿಪಕ್ವ, ಆಹಾರ ವಾತಾಪಿಯಾಗ್ಯಾನ
ಅತಿಥಿ ಸತ್ಕಾರ ನೆವ ಮಾಡಿ, ಇಲ್ವಳ
ಅತಿನಯದಿಂದ ಕರದಾನ.
ಜನರನ್ನ ತಿಂದ್ಹಾಗ ಮುನಿಗಳ ತಿನ್ನಾಕ
ಮನಸ ಮಾಡ್ಯಾರ ನೋಡವ್ವ, ಜ್ಞಾನಿಯ ಗುಣವೇನು
ಗೊತ್ತು ಬಕ್ಷರಿಗೆ.
ಮಾಯಾದ ಆಟಾನ ಮನದಾಗ ತಿಳಕೊಂಡು
ಪಾಯ ಮಾಡೂತ ಬಂದಾರ, ಊಟಕ್ಕ
ಬಾಯಿ ಬಿಡದನ ಉಂಡಾರ.
ಉಂಡನ್ನ ಜೀರ್ಣಿಸಿ ಕೊಳ್ಳದ ಇಲ್ವಳ
ಕಂಡಾನ ನೋಡ ಮಾಶಕ್ತಿ, ಆಗವರ ಪುಂಡಾಟ ನಿಂತು ಹೋಗೈತಿ.
ಕಾದಿದ್ದ ಇಲ್ವಳ ಆದನೋಡಿ ಬೆರಗಾಗಿ
ಪದಕ್ಕ ಬಿದ್ದು ಬೇಡ್ಯಾನ, ಜೀವಾನ
ಆದ ತಪ್ಪುಗಳ ಕ್ಷಮಿಸೆಂದ.
ಇಲ್ವಳ ಬೇಡೂತ ಗೆಲುವಾಗಿ ಋಷಿಗಳು
ಒಲದಾರ ನೋಡ ಮನ್ನಿಸಿ, ರಾಕ್ಷಸ್ರು
ಸಲವಾಕ ಮನಸು ಮಾಡ್ಯಾರ
ಮತ್ತ ಜೀವವ ಹೊಂದಿ ವಾತಾಪಿ-ಇಲ್ವಳ
ಸತ್ಯದಿ ನಡೆವೆಂದಾರ, ಋಷಿಗಳ
ಮತ್ತ ಪಾದಕ ಬಿದ್ದಾರ.
ನರ ಭಕ್ಷರಾಗಿದ್ದ ಪರದೇಶಿ ರಾಕ್ಷಸ್ರು
ಗುರುವಿನ ದಯದಿ ಮರುಜನ್ಮ ಪಡದಾರ

ನರಜನ್ಮ ತಾಳಿ ಬಾಳ್ಯಾರ.
ಜೀವದಾನವ ಮಾಡಿ ಪಾವನ ಮಾಡಿದ
ದೇವ ಅಗಸ್ತ್ಯ ಋಷಿಗಳು, ಭೂಮ್ಯಾಗ ಸಾವವರ್ಹೆಸರು ಉಳಿಸಿದ
ನರಜನ್ಮ ತಾಳಿದ ವಾತಾಪಿಲ್ವಳರನ್ನು
ಗುರುತ ಉಳಿಸಿದ ನೋಡವ್ವ, ಮಾಋಷಿ
ಪುರಕವರ ಹೆಸರಿಟ್ಟಾನ.
ಮೂಡಣಕಿಲ್ವಳ ಪಡುವಣ್ಕ ವಾತಾಪಿ
ಮಾಡ್ಯಾನ ಊರ ಮಾಋಷಿ, ಕೇಳವ್ವ ಕಾಡ ರಾಕ್ಷಸರ ಹೆಸರಿಟ್ಟು.
ಇಂದಿನ ಐಹೊಳಿ ಇಂದಿನ ಇಲ್ವಳ
ಎಂದು ಹೇಳುವರು ಕೇಳವ್ವ, ಗೆಳತಿ ನೀ
ಮುಂದ ನೋಡವಿ ಐಹೊಳಿ
ಇಂದಿನ ಬಾದಾಮಿ ಹಿಂದಿನ ವಾತಾಪಿ
ಎಂದು ಹೇಳುವರು ಕೇಳವ್ವ, ನಾವೀಗ
ಬಂದೇವ ಬಾರ ನೋಡಾಕ.
ನೋಡವ್ವ ಗೆಳೆತೆವ್ವ ಕಾಡಿನ ರಾಕ್ಷಸ್ರು
ನಾಡಿಗೆ ಹೆಸರು ಆಗ್ಯಾರ, ಆ ಮ್ಯಾಗ
ನಡ ಕಟ್ಟ್ಯಾರ ಅರಸರು.[೧೮]

ಹೋಳಿಹುಣ್ಣಿಮೆ ಪದಗಳಲ್ಲಿ ಕೆರೆಗಳ ಉಲ್ಲೇಖ :

ಕೆಂಧೂರ ಕೆರೆಯಾಗ

ನಂದಿಕೋಲಾಟ ನವುಲಾಟ

ನಮ್ಮ ಬಸವ ಬಂಡಿ ಕಂಡರಲ್ಲಿ ಚೆಲ್ಲಾಟ ॥೧೯

ಎಂಬ ಹೋಳಿಹುಣ್ಣಿಮೆಯ ಹಾಡುಗಳಲ್ಲಿ ಕೆಂಧೂರ ಕೆರೆಯ ವರ್ಣನೆಯು ಬರುತ್ತದೆ. ಅಂದರೆ ಇಷ್ಟೇ ಈ ಭಾಗದ ಪ್ರಾಚೀನ ಕೆರೆಗಳಲ್ಲಿ ಒಂದಾದ ಕೆಂದೂರ ಕೆರೆ ಸದಾ ಕಾಲ ನೀರು ತುಂಬಿರುತ್ತದೆ. ಸಾವಿರಾರು ಜಲಚರ ಜೀವರಾಶಿಗಳು ಅದರ ಪಕ್ಕದಲ್ಲಿ ಗೂಡುಕಟ್ಟಿ ತಮ್ಮ ಸಂತತಿಯನ್ನು ವೃದ್ಧಿಸಿಕೊಳ್ಳುತ್ತವೆ. ಬೇಸಿಗೆಯಲ್ಲಿ ಆನಂದದ ಚಿಲಿಪಿಲಿ ಕಲರವ ಆರಂಭವಾಗುತ್ತದೆ. ಶಿವನ ವಾಹನವಾದ ನಂದಿಯು ಬಿಸಿಲಿನ ತಾಪ ತಾಳಲಾರದೆ ಆ ಕೆರೆಯ ನೀರಿನಲ್ಲಿ ನವಿಲಿನತರಹ ಆಟವಾಡುತ್ತದೆ. ಅದರ ಮೂಲಕ ಸಂತೋಷ ಪಡುತ್ತದೆ.

೫.೪ ಕೆರೆಗಳು ಮತ್ತು ದಲಿತರ ನಡುವಿನ ಸಂಬಂಧಗಳು

ಪ್ರಾಚೀನ ಮಾನವ ತನ್ನ ಅವಶ್ಯಕತೆಗಾಗಿ ನೀರು ಸ್ವಾಭಾವಿಕವಾಗಿ ನಿಲ್ಲುವ ಜಾಗಗಳಲ್ಲಿ ಅಥವಾ ಒಂದು ತಗ್ಗಾದ ಪ್ರದೇಶದಲ್ಲಿ ಮಳೆ ನೀರನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ವರ್ಷದುದ್ದಕ್ಕೂ ಕುಡಿಯಲು ಬಳಸುತ್ತಿದ್ದರು. ಈ ವ್ಯವಸ್ಥೆಯು ಅನಾದಿ ಕಾಲದಿಂದಲೂ ಬೆಳೆದು ಬಂದಿದೆ. ಆದಿ ಮಾನವನಿಗೆ ಯಾವುದೇ ರೀತಿಯ ಮತ ಎಂಬ ಬೇಧ-ಭಾವ ಎಂಬ ನೀತಿ ಬೆಳೆದು ಬಂದಿದ್ದಿಲ್ಲ. ಎಲ್ಲರೂ ಒಟ್ಟಿಗೆ ಕೂಡಿ ಕೆರೆಯನ್ನು ನಿರ್ಮಿಸಿ, ಮಳೆ ನೀರನ್ನು ಸಂಗ್ರಹಿಸಿ, ಅದರ ಪಕ್ಕದಲ್ಲೇ ತಮ್ಮ ತಮ್ಮ ವಸತಿ ನಿಲಯಗಳನ್ನು ಕಟ್ಟಿ ಬದುಕುತ್ತಿದ್ದರು. ಆರಂಭದಲ್ಲಿ ಕೆರೆ ನೀರು ಬಳಕೆಗಾಗಿ ಮೇಲು ಕೀಳು ಎಂಬ ಲೆಕ್ಕಾಚಾರ ಇರಲಿಲ್ಲ. ಕೆರೆಗಳು ಮೇಲ್ಜಾತಿಯವರಿಗೆ ಸಂಬಂಧಪಟ್ಟಿದ್ದವು ಹಾಗೂ ಅದರ ನೀರಿನ ಬಳಕೆ ಸಂಪೂರ್ಣ ಇವರೆಗೆ ಮಾತ್ರ ಮೀಸಲು ಎಂಬ ಸಿದ್ಧಾಂತ ಬೆಳೆದು ಬಂದಿದ್ದಿಲ್ಲ. ಹಾಗಾಗಿ ಆದಿ ಮಾನವರೆಲ್ಲಾ ಕೂಡಿ ಕೆರೆ ನೀರನ್ನು ಸಮಾನವಾಗಿ ಬಳಕೆ ಮಾಡುತ್ತಿದ್ದರು.

ಕಾಲಾಂತರದಲ್ಲಿ ಮಾನವನ ವೃತ್ತಿಗೆ ಅನುಗುಣವಾಗಿ ಜಾತಿ ಪದ್ಧತಿ ಬೆಳೆದು ಬಂದು, ಕಾಲಕ್ರಮೇಣ ಅವುಗಳಲ್ಲೇ ಮೇಲು ಕೀಳು ಎಂಬ ತಾರತಮ್ಯ ನೀತಿ ಬೆಳೆದು ಬಂದವು. ನಂತರದಲ್ಲಿ ಮೇಲು ವರ್ಗದವರು ಸಮಾಜದ ಉನ್ನತ ವರ್ಗವಾಗಿ ಪರಿವರ್ತನೆಗೊಂಡು ಸಮಾಜದ ಕೆಳ ಮಟ್ಟದ ಕೆಲಸ ಮಾಡುವ ಮಾನವರು ಕೆಳ ಜಾತಿಗಳಾಗಿ ಪರಿವರ್ತನೆಗೊಂಡು ಹಾಗೂ ಉತ್ತರ ವೈದಿಕ ಕಾಲದ ನಂತರ ಮೇಲು ಮತ್ತು ಕೀಳು ಜಾತಿ ಎಂಬ ಸ್ಪಷ್ಟ ನಿಲುವು ಬೆಳೆದು ಬಂದಿದ್ದರಿಂದ ಕೆಳ ಜಾತಿಯವರು

ಮೇಲು ಜಾತಿಯವರ ಗುಲಾಮರಾಗುವ ವ್ಯವಸ್ಥೆ ಪ್ರಾಚೀನ ಕಾಲದಿಂದ ಬೆಳೆದು ಬಂದಿದೆ. ಈ ಜಾತಿ ಎಂಬ ಅನಿಷ್ಠ ಪದ್ಧತಿ ಬೆಳೆದು ಬಂದಿದ್ದರಿಂದ ಕೆಳ ಜಾತಿ ಮತ್ತು ದಲಿತರು ಕೆರೆ ನೀರನ್ನು ಮುಟ್ಟಿದರೆ ನೀರು ಮಲಿನವಾಗುವುದೆಂಬ ಭಾವನೆ ಉನ್ನತ ವರ್ಗದವರದ್ದಾಗಿತ್ತು. ಹಾಗಾಗಿ ಭೂ ಒಡೆಯರು ಶ್ರೀಮಂತರು, ಮೇಲ ವರ್ಗದ, ಪುರೋಹಿತರು, ಶಾನುಭೋಗರು ದಲಿತರನ್ನು ಸಮಾಜದ ಅನಿಷ್ಠ ಪದ್ಧತಿಯ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಅದು ಅಲ್ಲದೇ ಕೆರೆಯ ಸಂರಕ್ಷಣಾ ಕಾರ್ಯಗಳಿಗೆ ಅವರ ಶ್ರಮವನ್ನು ಬಳಸಿಕೊಳ್ಳುತ್ತಿದ್ದರು. ಅಂದರೆ ಕೆರೆ ಹೂಳನ್ನು ತೆಗೆಸುವ, ತೂಬನ್ನು ದುರಸ್ಥಿ ಮಾಡುವ, ಏರಿಯನ್ನು ನಿರ್ಮಾಣ ಮಾಡುವ, ಕಾಲುವೆಗಳಿಗೆ ನೀರು ಹರಿಸುವ ಮತ್ತು ಕೆರೆಗಳನ್ನು ಪ್ರತಿ ವರ್ಷ ಕಾಯಲು ಅವರನ್ನು ನೇಮಿಸಿಕೊಳ್ಳುವ ಪದ್ಧತಿ ಜಾರಿಯಲ್ಲಿತ್ತು. ಈ ಮೇಲಿನ ಎಲ್ಲ ಕಾರ್ಯಗಳನ್ನು ಅವರಿಂದ ಮಾಡಿಸಿಕೊಂಡು ಅವರನ್ನು ಕೆರೆಯ ಸಮೀಪ ಬಿಡುತ್ತಿರಲಿಲ್ಲ. ಅವರು ಕೆರೆಗೆ ನೀರನ್ನು ತುಂಬಲು ಬಂದಾಗ ಮೇಲ್ವರ್ಗದ ಜನರು ಅವರನ್ನು ಕೆರೆಯ ದಂಡೆಯ ಮೇಲೆ ನಿಲ್ಲಿಸಿ ಅವರಿಗೆ ನೀರನ್ನು ತಮ್ಮ ಕೊಡದ ಮೂಲಕ ಎತ್ತಿ ಹಾಕುತ್ತಿದ್ದರು. ಇಲ್ಲವೇ ಒಂದು ಮೂಲೆಯಲ್ಲಿ ಅವರು ಮೇಲು ಜಾತಿಯವರು ಮತ್ತು ಪೂಜಾರಿಗಳು ಇಲ್ಲದ ಅವಧಿಯಲ್ಲಿ ಕೆರೆಯಲ್ಲಿ ಇಳಿದು ನೀರನ್ನು ತುಂಬಿಕೊಂಡು ಬರುವ ಅನಿಷ್ಠ ಪದ್ಧತಿ ಜಾರಿಯಲ್ಲಿತ್ತು. ಇದು ಅಲ್ಲದೇ ಕೆರೆಯು ತುಂಬಿದಾಗ ಬೆಸ ಸಂಖ್ಯೆಯ ಪ್ರಾಣಿಗಳನ್ನು ಬಲಿ ನೀಡುವದರಲ್ಲಿ ಇವರೇ ಮೊದಲಿಗರಾಗಿದ್ದರು.

ಅಡಿ ಟಿಪ್ಪಣಿಗಳು:

೧. ವಾಸುದೇವನ್ ಸಿ.ಎಸ್. ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೮

೨. ಮೋಹನಕೃಷ್ಣರೈ ಕೆ, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು. ೧೮

೩. ಅದೇ, ಪು

೪. ನೀರಾವರಿ ಇಲಾಖೆ ವರದಿ, ೨೦೧೧-೧೨

೫. ಅದೇ, ಪು

೬. ಅದೇ, ಪು

೭.	ವಾಸುದೇವನ್ ಸಿ.ಎಸ್. ಪೂರ್ವೋಕ್ತ, ಪು.೯೩

೮.	ಗದಗಿಮಠ ಬಿ.ಎಸ್, ಕನ್ನಡ ಜಾನಪದ ಗೀತೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೩ , ಪು.೧೯೬

೯.	ಅದೇ, ಪು ೯೭

೧೦.	ಅದೇ, ಪು, ೨೧೪

೧೧.	ತೊಂಡಿಹಾಳ ಎಸ್.ಬಿ, ಶ್ರೀ ಬನಶಂಕರಿದೇವಿ ಮಹಾತ್ಮೆ ,ಪಾರುಪ್ರಕಾಶನ ಗದಗ, ೨೦೧೨, ಪು.೩೭

೧೨.	ಅದೇ, ಪು, ೩೯

೧೩.	ಅದೇ, ಪು

೧೪.	ಅದೇ, ಪು, ೪೦

೧೫.	ಜಾನಪದ ಕಲಾವಿದ, ಯಲ್ಲಪ್ಪ ತಳವಾರ ಹೇಳಿದ ಹಾಡು

೧೬.	ಮಡಿವಾಳರ ಎಸ್.ಆರ್ , ಬಸವಣ್ಣನ ವಚನಗಳು, ವಿದ್ಯಾನಿಧಿ ಪ್ರಕಾಶನ, ಗದಗ , ೨೦೧೦, ಪು ,೩೧

೧೭.	ತಮ್ಮಣ್ಣ ಬೆಣ್ಣೂರ ಅವರ ಹಾಡು

೧೮.	ತೊಂಡಿಹಾಳ ಎಸ್.ಬಿ. ಪುರ್ವೋಕ್ತ,

೧೯.	ರಂಗಪ್ಪ ಸುನಗದ , ಹೋಳಿಹುಣ್ಣಿಮೆ ಹಾಡುಗಾರ

ಅಧ್ಯಾಯ : ೬

ಉಪ ಸಂಹಾರ

ಅಧ್ಯಾಯ-೬

ಉಪಸಂಹಾರ

ನೀರು ವಿಶ್ವದಲ್ಲಿರುವ ಕೋಟ್ಯಾಂತರ ಜೀವರಾಶಿಗಳಿಗೆ ಅತ್ಯಂತ ಅವಶ್ಯವಾಗಿದೆ. ನೀರು ಎಲ್ಲ ಜೀವರಾಶಿಗಳಿಗೆ ಜೀವಾಧಾರ. ಇಂತಹ ವಸ್ತುವು ದೈನಂದಿನ ಚಟುವಟಿಕೆಗಳಲ್ಲಿ ಅತೀ ಮುಖ್ಯ. ಮಾನವನು ಮೊಟ್ಟಮೊದಲಿಗೆ ಈ ಭುವಿಯಲ್ಲಿ ಕಾಣಿಸಿಕೊಂಡಂದಿನಿಂದ ಕೆರೆ ನದಿಗಳ ವಾಸಮಾಡಿಕೊಂಡು ನಿಕಟ ಸಂಬಂಧವನ್ನು ಹೊಂದಿದ್ದಾನೆ. ಅಂದಿನಿಂದ ಇಂದಿನವರೆಗೂ ಮಾನವನ ಎಲ್ಲಾ ಚಟುವಟಿಕೆಗಳು ನೀರಿನ ಸಮೀಪವೇ ಕೇಂದ್ರೀಕೃತವಾಗಿರುವುದನ್ನು ನಾನು ನೋಡಬಹುದು. ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವ ಶಿಲಾಯುಧಗಳನ್ನು ತಯಾರಿಸುವ ಕಾರ್ಯವನ್ನು ನದಿಯ ಹಾಗೂ ತಟಾಕ ಕೆರೆ ಸೆಲೆಯ ಹತ್ತಿರವೇ ಮಾಡಿರುವುದನ್ನು ಅನೇಕ ಪ್ರಾಕ್ತನ ಸಂಶೋಧನೆಗಳಿಂದ ದೃಢಪಟ್ಟಿದೆ. ಮಾನವನು ಒಂದೆಡೆ ನೆಲೆಯಾಗಿ ನಿಂತು ಕೃಷಿಕ ಜೀವನವನ್ನು ಪ್ರಾರಂಭಿಸಿರುವುದು ನೀರಿನ ಆಶ್ರಯವಿರುವಲ್ಲಿಯೇ ಎಂಬುವುದು ಪ್ರಾಚೀನ ನಾಗರಿಕ ನೆಲೆಗಳಿಂದ ತಿಳಿದುಬರುತ್ತದೆ. ವ್ಯವಸಾಯವನ್ನು ಪ್ರಾರಂಭಿಸಿದ ದಿನಗಳಿಂದ ಮಾನವನ ಜೀವನದಲ್ಲಿ ಒಂದು ಕ್ರಮಬದ್ಧತೆಯು ಬಂದಿದೆ. ವ್ಯವಸಾಯಕ್ಕೆ ನೀರು ಬೇಕಾದ್ದರಿಂದ ನೀರಿಗೆ, ಮಾನವನು ಮಳೆ ಮತ್ತು ನದಿಯನ್ನು ಆಶ್ರಯಿಸಿದ್ದನೆಂಬುದು ತಿಳಿದುಬರುತ್ತದೆ. ಮಳೆಯ ವೈಫಲ್ಯತೆಯು ಮಾನವನಿಗೆ ಕೃತಕ ಜಲ ಸಂಗ್ರಾಹಕಗಳನ್ನು ಕೆರೆ, ತಟಾಕ ನಿರ್ಮಾಣ ಮಾಡಲು ಪ್ರಚೋದಿಸಿದವು. ಇದರಿಂದ ನೀರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಬೇಕೆಂದಾಗ ಬೇಸಾಯ ಮಾಡಿ ಫಸಲನ್ನು ತೆಗೆಯಲು ಪ್ರಾರಂಭಿಸಿದ. ಮಾನವ ಮೊಟ್ಟಮೊದಲ ಪ್ರಯತ್ನವು ನಿಸರ್ಗವು ನಿರ್ಮಿಸಿದಂತಹ ಅನೇಕಾನೇಕ ಸ್ವಾಭಾವಿಕ ಕೆರೆಗಳ ಸಮೀಪದಲ್ಲಿಯೇ ಇರುವುದು ಗಮನಿಸತಕ್ಕ ವಿಷಯ. ಸಣ್ಣ ಕೆರೆ-ಕಟ್ಟೆಗಳನ್ನು ಅಂತಹ ಜಾಗಗಳಲ್ಲಿ ನಿರ್ಮಿಸಿ, ಮಳೆಯ ಅಥವಾ ನದಿಯ ನೀರನ್ನು ಸಂಗ್ರಹಿಸತೊಡಗಿದ. ಇವುಗಳ ಜೊತೆಯಲ್ಲಿ ಮಾನವನ ಸಂತತಿಯು ಬೆಳೆಯತೊಡಗಿತು. ಆದುದರಿಂದ ಕೃತಕ ಜಲಸಂಗ್ರಹಕಾರಗಳಾದ ಕೆರೆ ಮತ್ತು ತಟಾಕಗಳ ಅವಶ್ಯಕತೆ ಇದ್ದಿತು.

ಆದಿಶಿಲಾಯುಗ ಕಾಲಕ್ಕಿಂತಲೂ ನವಶಿಲಾಯುಗ ಹಾಗೂ ಚಾರಿತ್ರಿಕಯುಗದಲ್ಲಿ ಜನಸಂಖ್ಯೆಯು ಗಣನೀಯವಾಗಿ ಹೆಚ್ಚಾಗಿದ್ದಿತು ಇದರಿಂದ ನೀರಿನ ಅಭಾವ ತಲೆದೋರಿತು.

ಭಾರತವು ಅತ್ಯಂತ ಪ್ರಾಚೀನತೆಯನ್ನು ಹೊಂದಿರುವ ದೇಶ. ಭಾರತದಲ್ಲಿ ಇಲ್ಲಿಯವರೆಗೆ ದೊರಕಿರುವ ಪ್ರಾಕ್ತನ ನೆಲೆಗಳೆಲ್ಲವೂ ನದಿ, ಕೆರೆ, ತಟಾಕಗಳು ಅಥವಾ ನೀರಿನ ಆಶ್ರಯವಿರುವಂತಹ ಜಾಗಗಳಲ್ಲಿಯೇ ದೊರೆತಿದ್ದು ಈ ವಾದವನ್ನು ಸಮರ್ಥಿಸುತ್ತದೆ. ಆದಿ ಇತಿಹಾಸ ಕಾಲದ ಪ್ರಾಚೀನ ನೆಲೆಗಳಾದ ಶೃಂಗವೇರ್‌ಪುರ, ಬೆಸನಗರ, ಕುಮ್ರಹಾರ್,

ಮಥುರಾ, ನಾಗಾರ್ಜುನಕೊಂಡ, ಮುಂತಾದ ನೆಲೆಗಳು ನದಿಯ ಪಕ್ಕದಲ್ಲಿಯೇ ಬೆಳೆದು ಬಂದಂತಹವುಗಳೇ ಆಗಿವೆ. ಅಂದಿನಿಂದ ಸಮಕಾಲೀನ ಸಾಹಿತ್ಯಗಳಲ್ಲಿಯೂ ಸಹ ಕೆರೆ ತಟಾಕಗಳ ವ್ಯವಸ್ಥೆಯ ಚಿತ್ರಣವು ನಮಗೆ ಹೇರಳವಾಗಿ ದೊರೆಯುತ್ತವೆ. ವೇದಗಳಾದ ಋಗ್ವೇದ, ಅಥರ್ವಣ ವೇದಗಳು, ಕೆರೆ ನಿರ್ಮಾಣ ಪದ್ಧತಿಯನ್ನು ಕುರಿತು ಉಲ್ಲೇಖಿಸುತ್ತವೆ. ಧರ್ಮಸೂತ್ರ, ಪುರಾಣಗಳು, ಮಹಾಭಾರತ, ರಾಮಾಯಣ, ಅರ್ಥಶಾಸ್ತ್ರಗಳು ಸಹ ಕೆರೆ ನೀರಾವರಿ ಪದ್ಧತಿಯನ್ನು ಕುರಿತು ವಿಶದವಾಗಿ ತಿಳಿಸುತ್ತವೆ.

ಆದಿ ಇತಿಹಾಸ ಕಾಲದಿಂದ ಶಾಸನಗಳು ನಮಗೆ ದೊರೆಯುತ್ತವೆ. ಈ ಶಾಸನಗಳು ಸಹ ಕೃಷಿ, ನಿರ್ಮಾಣ ಪದ್ಧತಿಗಳನ್ನು ಕುರಿತ ಅನೇಕ ಮಾಹಿತಿಗಳನ್ನು ನೀಡುವುದು ಗಮನಾರ್ಹ. ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನ ಕಾಲದಿಂದಲೂ ಸಹ ಕೆರೆಗಳ ನಿರ್ಮಾಣ ಕಾರ್ಯವು ಇತ್ತೆಂದು ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ. ಕ್ರಿಸ್ತಪೂರ್ವದಲ್ಲಿ ಪ್ರಾರಂಭವಾದ ಈ ಪ್ರಕ್ರಿಯೆ ಅವ್ಯಾಹತವಾಗಿ ಸಾಗುತ್ತಲೇ ಬಂದಿದೆ. ಸುಮಾರು ಎರಡು ಸಾವಿರ ವರ್ಷಗಳಲ್ಲಿ ಈ ಪ್ರಕ್ರಿಯೆಯನ್ನು ಅನೇಕ ಅರಸು ಮನೆತನಗಳವರು ಸಾಗಿಸುತ್ತಾ ಬಂದಿದ್ದು, ವಿಜಯನಗರ ಅರಸರ ಕಾಲದಲ್ಲಿ ಒಂದು ಹಂತವನ್ನು ತಲುಪಿತು. ವಿಜಯನಗರ ಅರಸರ ಕಾಲದಲ್ಲಿ ಕೆರೆಗಳಿಗೆ ಮತ್ತು ನೀರಾವರಿಗೆ ಬಹಳ ಮಹತ್ವವನ್ನು ನೀಡಿದ್ದರೆಂಬುದಕ್ಕೆ ಸಾಕ್ಷಿಯಾಗಿ ಅವರು ನಿರ್ಮಿಸಿದ ಅನೇಕ ನೀರಾವರಿ ರಚನೆಗಳು ದೊರೆಕಿವೆ. ಇದರೊಂದಿಗೆ ಅವರ ಕಾಲದ ಶಾಸನಗಳು ಕೆರೆಗಳ ಕುರಿತು ಉಲ್ಲೇಖಿಸುತ್ತವೆ. ಕೆರೆಗಳನ್ನು ಕಟ್ಟುವುದಕ್ಕೆ ಇದ್ದ ಇನ್ನೊಂದು ಪ್ರಮುಖ ಕಾರಣ ಸುಮಾರು ಎರಡು ಸಾವಿರ ವರ್ಷಗಳಿಂದಲೂ ಬದಲಾಗುತ್ತಿರುವ ಹವಾಮಾನ. ಮತ್ತೊಂದು ಕಾರಣ ಜನರಲ್ಲಿ ಬೆಳೆದ ಹಾಗೂ ಬೆಳೆಯುತ್ತಿರುವ ಧಾರ್ಮಿಕ, ಸಾಮಾಜಿಕ ನಂಬಿಕೆಗಳು ಎನ್ನುವದನ್ನು ಎಲ್ಲರೂ ಗಮನಿಸಬಹುದು. ಕರ್ನಾಟಕದಲ್ಲಿ ಮಿಕ್ಕೆಲ್ಲಾ ರಾಜ್ಯಗಳಿಗಿಂತ ಅತ್ಯಧಿಕವಾದ ಕೆರೆಗಳು, ತಟಾಕಗಳು, ಪುಷ್ಕರಣಿಗಳು ರಚನೆಗಳಾಗಿರುವುದು ಮತ್ತೊಂದು ವಿಶೇಷವಾದ ಸಂಗತಿ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಆಡಳಿತವನ್ನು ವಿಕೇಂದ್ರಿಕೃತಗೊಳಿಸಿ ಕೆರೆಗಳ ನಿರ್ಮಾಣಕ್ಕೆ ಮತ್ತಷ್ಟು ಪ್ರೋತ್ಸಾಹವನ್ನು ನೀಡಿದರೆಂದು ಅಧ್ಯಯನದಿಂದ ತಿಳಿದುಬರುತ್ತದೆ. ಇವರ ಕಾಲದಲ್ಲಿ ಅವರ ನಾಯಕರ ಸಾಮಂತರ ಪದ್ಧತಿಯು ಬಳಕೆಗೆ ಬಂದಿದ್ದು, ಸ್ಥಳೀಯ ಅಧಿಕಾರಿಗಳು (ನಾಯಕರು ಅಥವಾ ಅಮರನಾಯಕರು) ಹಲವಾರು ಕೆರೆಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ಇವರೊಂದಿಗೆ ಶ್ರೀಸಾಮಾನ್ಯರು ಮತ್ತು ಸಾಮಂತರೂ, ರಾಜರು, ರಾಣಿಯರು, ಅರಸರು, ವೈಶ್ಯರು, ಕೆರೆಗಳ ನಿರ್ಮಾಣಕ್ಕೆ ಗಣನೀಯವಾಗಿ ತಮ್ಮ ಕೊಡುಗೆಯನ್ನು ನೀಡಿರುವುದು, ಬಾಗಲಕೋಟೆ ಪ್ರದೇಶ ಆಳ್ವಿಕೆ ಮಾಡಿದ ವಿವಿಧ

ಸಾಮ್ರಾಟರು ವಿಜಯನಗರ ಕಾಲದ ಶಾಸನಗಳಿಂದ ವ್ಯಕ್ತವಾಗಿರುವ ಅಂಶ. ಇವರ ಕಾಲದ ಶಾಸನಗಳು ಕೆರೆಗಳನ್ನು ಹೇಗೆ ಕಟ್ಟಬೇಕು, ಯಾವ ಸ್ಥಳವನ್ನು ಆಯ್ಕೆ ಮಾಡಬೇಕು, ಏನೆಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸುವುದರೊಂದಿಗೆ, ಕೆರೆಗೆ ಯಾವ ಸಾಮಗ್ರಿಗಳನ್ನು ಬಳಸಲಾಗಿತ್ತು ಎಂಬುದರ ವಿವರಗಳು ಸಹ ನೀಡುತ್ತವೆ. ಇವರ ಕಾಲದಲ್ಲಿ ಹಿಂದೆ ಇದ್ದಂತೆಯೇ,ಕೆರೆ ಕಟ್ಟುವ ನಿಪುಣರುಗಳು ಇದ್ದರೆಂಬುದು ತಿಳಿದುಬರುತ್ತದೆ.

